₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 31.12.2024 ಸಂಪುಟ: 10 ಸಂಚಿಕೆ:07 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಪರೀಕ್ಷೆ ನಡೆಸುವ ಆಯೋಗದ ಮೌಲ್ಯ ಹೆಚ್ಚಲಿ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

ಸಂ.ಪುಟ | 6

ಬದಲಾದ ಮೌಲ್ಯ, ಬದಲಾದ ಶಿಕ್ಷಣ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

ಸಂ.ಗಮ | 7

ಮಾತಂದ್ರೆ ಮಾತು

ಕೇರಳ ಮಿನಿ ಪಾಕಿಸ್ತಾನ. ಅದಕ್ಕಾಗಿಯೇ ರಾಹುಲ್ ಗಾಂಧಿ ಹಾಗೂ ಅವರ ಸಹೋದರಿ ಅಲ್ಲಿಂದ ಗೆಲುವು ಸಾಧಿಸಿದ್ದಾರೆ. ಎಲ್ಲ ಭಯೋತ್ಪಾದಕರು ಅವರಿಗೆ ಮತ ಹಾಕುತ್ತಾರೆ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಇವರೆಲ್ಲಾ ಭಯೋತ್ಪಾದಕರ ನೆರವಿನಿಂದ ಸಂಸದರಾಗುತ್ತಿದ್ದಾರೆ.

-ನಿತೇಶ್ ರಾಣೆ
ಮೀನುಗಾರಿಕಾ ಸಚಿವ, ಮಹಾರಾಷ್ಟ್ರ

ದಾರಿದೀಪೋಕ್ತಿ

ಯಾವತ್ತೂ ನಾಳೆ ಮಾಡುತ್ತೇನೆ ಎಂದು ಹೇಳಬಾರದು. ಈ ದಿನವೇ ಮಾಡುತ್ತೇನೆ, ಈಗಲೇ ಮಾಡುತ್ತೇನೆ ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ಅದೆಷ್ಟೋ ದಿನಗಳಿಂದ ನೀವು ಇವತ್ತಿನ ಆಗಮನಕ್ಕೆ ಕನವರಿಸುತ್ತಿರಬಹುದು. ನಾಳೆ ಬರುವುದೋ, ಇಲ್ಲವೋ ಯಾರಿಗೆ ಗೊತ್ತು?

ವಕ್ರತುಂಡೋಕ್ತಿ

ಎಲ್ಲರಿಗೂ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದು ಗೊತ್ತು, ಹೆತ್ತವರ ಹೊರತಾಗಿ.

ಕೆಎಎಸ್ ಪೂರ್ವಭಾವಿ ಮರು ಪರೀಕ್ಷೆ; ಶೇ.50 ಅಭ್ಯರ್ಥಿಗಳು ಗೈರು

ಬೆಂಗಳೂರು: ಡಿ.29 ರಂದು ನಡೆದ ಕೆಎಎಸ್ ಪೂರ್ವಭಾವಿ ಮರು ಪರೀಕ್ಷೆಗೆ ಅರ್ಧದಷ್ಟು ಅಭ್ಯರ್ಥಿಗಳು ಗೈರಾಗಿದ್ದಾರೆ. ಒಟ್ಟು 2,10,916 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಆ ಪೈಕಿ 1,01,237 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, 1,09,673 ಗೈರು ಹಾಜರಾಗಿದ್ದಾರೆ.

ಮಲೆಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿರುವ ಮಲೆಮಹದೇಶ್ವರ ಬೆಟ್ಟದಲ್ಲಿ ಜನವರಿ ಮೂರನೇ ವಾರ ಸಚಿವ ಸಂಪುಟ ಸಭೆ ನಡೆಸಲು ಸರಕಾರ ತೀರ್ಮಾನಿಸಿದ್ದು, ಈಗಾಗಲೇ ಅಗತ್ಯ ಸಿದ್ಧತೆ ಆರಂಭಿಸಿದೆ. 2002ರಲ್ಲಿ ಎಸ್.ಎಂ.ಕೃಷ್ಣ ಅವರು ಬಿಳಿಗಿರಿ ರಂಗನ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದರು. ಬಳಿಕ ಜಿಲ್ಲೆಯಲ್ಲಿ ನಡೆಯುತ್ತಿರುವ ಎರಡನೇ ಸಚಿವ ಸಂಪುಟ ಸಭೆ ಇದಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಜನವರಿ 5ಕ್ಕೆ ರಾಜ್ಯಮಟ್ಟದ ಯುವಜನೋತ್ಸವ, ಊಟಕ್ಕೆ 'ಮಾಂಸಾಹಾರ' ಸುದ್ದಿ



ಪ್ರಿಯಾಂಕ್ ಖರ್ಗೆ ಮನವಿ ಬೆನ್ನಲ್ಲೇ ಸಿಎಂ ಆದೇಶ

ಸಚಿನ್ ಆತ್ಮಹತ್ಯೆ ಸಿಐಡಿ ತನಿಖೆಗೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಸಿಐಡಿಗೆ ವಹಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಕೇಳಿಬಂದಿದೆ. ಡೆತ್‌ನೋಟ್‌ನಲ್ಲಿ ಖರ್ಗೆ ಆಪ್ತ ರಾಜು ಎನ್ನುವವರ ಹೆಸರು ಬರೆದು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ಸಚಿವ ಸ್ಥಾನಕ್ಕೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸುತ್ತಿದೆ. ಈ ಪ್ರಕರಣದಲ್ಲಿ ತಮ್ಮ ಪಾತ್ರವಿಲ್ಲವೆಂದು ಈಗಾಗಲೇ ಸ್ಪಷ್ಟಪಡಿಸಿರುವ ಪ್ರಿಯಾಂಕ್ ಖರ್ಗೆ, ಇದೀಗ ಇಡೀ ಪ್ರಕರಣದ ಸಮಗ್ರ ತನಿಖೆಯನ್ನು ಸಿಐಡಿಯಿಂದ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದರು. ಇದರ ಬೆನ್ನಲ್ಲೇ ಪ್ರಕರಣವನ್ನು ಸಿಐಡಿಗೆ ವಹಿಸಲು ಸರಕಾರ ಮುಂದಾಗಿದೆ.

ಸಿಬಿಐಗೆ ವಹಿಸಲು ಬಿಜೆಪಿ ಆಗ್ರಹ: ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ, ಈ ಹಿಂದೆ ಈ ರೀತಿಯ ಆರೋಪ ಕೇಳಿಬಂದಾಗ ಸಚಿವರ ರಾಜೀನಾಮೆ ಪಡೆದಿರುವ ಉದಾಹರಣೆ ಇದೆ. ಬಿಜೆಪಿಯ ಈಶ್ವರಪ್ಪ ಅವರೂ ರಾಜೀನಾಮೆ ನೀಡಿದ್ದರು. ಆದ್ದರಿಂದ ಪ್ರಿಯಾಂಕ್ ವಿರುದ್ಧ ಕೇಳಿಬಂದಿರುವ ಆರೋಪದ ತನಿಖೆ ಮುಗಿಯುವ ತನಕ ಅವರು ರಾಜೀನಾಮೆ ನೀಡಬೇಕು. ಪ್ರಕರಣವನ್ನು ಸಿಐಡಿಯಿಂದ ತನಿಖೆ ನಡೆಸಿದರೆ ನ್ಯಾಯ ಸಿಗುವುದಿಲ್ಲವೆಂದು ಈಗಾಗಲೇ ಕುಟುಂಬಸ್ಥರು ಹೇಳಿರುವುದರಿಂದ, ಇಡೀ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಬಿಜೆಪಿಗರು ಆಗ್ರಹಿಸಿದ್ದಾರೆ.

ಸಚಿನ್ ದುಡ್ಡು ಕೊಡಬೇಕಿತ್ತು

ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಆತಹತ್ಯೆ ಪ್ರಕರಣಕ್ಕೆ ತಿರುವು ದೊರೆತಿದ್ದು, ಆರೋಪಿ ರಾಜ ಕಪನೂರು ಅವರ ಸಹೋದರ ಪ್ರಕಾಶ್ ಕಪನೂರು ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ರಾಜು ಕಪನೂರು ಅವರಿಗೆ ಸಚಿನ್ 60 ಲಕ್ಷ ನೀಡಬೇಕಿತ್ತು ಎನ್ನುವ ಮಾಹಿತಿಯಿದೆ.

ಫೋಟೋ ಬಿಡುಗಡೆ ಮಾಡಿದ ವಿಜಯೇಂದ್ರ

ಗುತ್ತಿಗೆದಾರ ಸಚಿನ್ ಡೆತ್‌ನೋಟ್‌ನಲ್ಲಿ ಪ್ರಸ್ತಾಪಿಸಿರುವ ರಾಜು ಎನ್ನುವ ವ್ಯಕ್ತಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರೊಂದಿಗೆ ಇರುವ ಫೋಟೋಗಳನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಿಡುಗಡೆಗೊಳಿಸಿದ್ದಾರೆ.

ಬಿಜೆಪಿ ಆಗ್ರಹವೇನು?

- ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವರ ಪಿಎ ಹೆಸರಿದೆ
- ಆದ್ದರಿಂದ ಈ ಕೂಡಲೇ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಲಿ
- ಪ್ರಕರಣವನ್ನು ಸಿಐಡಿ ಬದಲಿಗೆ ಸಿಬಿಐನಿಂದ ತನಿಖೆಯಾಗಬೇಕು
- ಈಶ್ವರಪ್ಪ ವಿರುದ್ಧ ದೂರು ಬಂದಾಗ ರಾಜೀನಾಮೆ ನೀಡಿದಂತೆ ಪ್ರಿಯಾಂಕ್ ನೀಡಲಿ

ಕಾಂಗ್ರೆಸ್ ವಾದವೇನು?

- ಗುತ್ತಿಗೆದಾರ ಸಚಿವ ಪ್ರಕರಣಕ್ಕೂ ಪ್ರಿಯಾಂಕ್ ಖರ್ಗೆಗೂ ಸಂಬಂಧವಿಲ್ಲ
- ಹೆಚ್ಚುವರಿ ತನಿಖೆ ನಡೆಯಬೇಕು ಎನ್ನುವ ಕಾರಣಕ್ಕೆ ಸಿಐಡಿಗೆ ವರ್ಗಾವಣೆ
- ಬಿಜೆಪಿ ಹೇಳಿದ ಮಾತ್ರಕ್ಕೆ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ
- ಡೆತ್‌ನೋಟ್‌ನಲ್ಲಿ ಪ್ರಿಯಾಂಕ್ ಹೆಸರಿಲ್ಲ. ಆದ್ದರಿಂದ ರಾಜೀನಾಮೆ ಅಗತ್ಯವಿಲ್ಲ

ಸಿಬಿಐ ತನಿಖೆಗೆ ಸಚಿನ್ ಕುಟುಂಬವೂ ಒತ್ತಾಯಿಸಿದೆ. ಈ ಹಿಂದೆ ಸಚಿವ ನಾಗೇಂದ್ರ ಅವರು ವಾಲ್ಮೀಕಿ ನಿಗಮದ ಹಗರಣದಲ್ಲಿ ಸಿಲುಕಿ ರಾಜೀನಾಮೆ ಕೊಟ್ಟಿದ್ದಾರೆ. ಆದ್ದರಿಂದ ಒಂದು ಕ್ಷಣವೂ ತಡ ಮಾಡದೆ ಪ್ರಿಯಾಂಕ್ ಖರ್ಗೆಯವರ ರಾಜೀನಾಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪಡೆದುಕೊಳ್ಳಬೇಕು.

- ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಮೊದಲು ದಾಖಲೆ ತೋರಿಸಿ ರಾಜೀನಾಮೆ ಕೇಳಲಿ. ಅದು ಬಿಟ್ಟು ಆರೋಪ ಮಾಡಿದಾಕ್ಷಣ ರಾಜೀನಾಮೆ ಕೊಡಬೇಕೆ? ನಮ್ಮ ಮನೆಗೆ ಮುತ್ತಿಗೆ ಹಾಕಲಿ, ಬೇಡ ಅಂದವರು ಯಾರು? ಜನರು ನಗುತ್ತಿದ್ದಾರೆ, ದಾಖಲೆ ಇಲ್ಲದೆ ಯಾಕೆ ಪ್ರತಿಭಟನೆ ಮಾಡುತ್ತಾರೆ? ಏನಂಥ ಮುತ್ತಿಗೆ ಹಾಕುತ್ತೀರಿ? ನಿಮಗೆ ನಾಚಿಕೆ ಆಗಬೇಕು.

- ಪ್ರಿಯಾಂಕ್ ಖರ್ಗೆ ಸಚಿವ

ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಪಾತ್ರವಿಲ್ಲ. ಆತ್ಮಹತ್ಯೆ ಪತ್ರದಲ್ಲಿ ಅವರ ವಿರುದ್ಧ ನೇರ ಆರೋಪವಿಲ್ಲ. ಬೇರೆಯವರ ಮೇಲೆ ಆರೋಪ ಮಾಡಿದಾಕ್ಷಣ ಇವರು ರಾಜೀನಾಮೆ ನೀಡಲು ಸಾಧ್ಯ ವಿಲ್ಲ. ಪ್ರಿಯಾಂಕ್ ಖರ್ಗೆ ಪ್ರಾಮಾಣಿಕತೆ ಬಗ್ಗೆ ನಮಗೆ ಗೊತ್ತಿದೆ. ಗುತ್ತಿಗೆದಾರನ ಸಾವಿನ ಬಗ್ಗೆ ಕಾನೂನು ಪ್ರಕಾರ ತನಿಖೆ ನಡೆಯುತ್ತದೆ.

- ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಸೂರ್ಯನ ಕೈಹಿಡಿಯಲಿರುವ

ಚಂದ್ರ ಚಕೋರಿ

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯಗೆ ಕಂಕಣ ಭಾಗ್ಯ
ಚೆನ್ನೈ ಮೂಲದ ಗಾಯಕಿ ಸಿವಶ್ರೀ ಜತೆ ಮಾರ್ಚ್ 4ಕ್ಕೆ ವಿವಾಹ

ವಿಶ್ವವಾಣಿ ವಿಶೇಷ

ಬೆಂಗಳೂರು: 'ಯಂಗ್ ಆ್ಯಂಡ್ ಡೈನಾಮಿಕ್' ಮತ್ತು 'ಮೋಸ್ಟ್ ಎಲಿಜಿಬಲ್ ಬ್ಯಾಚುಲರ್' ಸಂಸದ ಎಂದೇ ಕರೆಯಿಸಿಕೊಂಡಿರುವ ತೇಜಸ್ವಿ ಸೂರ್ಯ ಅವರ ವಿವಾಹ ಯಾವಾಗ ಎನ್ನುವ ಪ್ರಶ್ನೆ ಪದೇ ಪದೆ ಚರ್ಚೆಗೆ ಬರುವ ವಿಷಯ. ಹಲವು ಸಂದರ್ಭಗಳಲ್ಲಿ ಈ ಬಗ್ಗೆ ತೇಜಸ್ವಿ ಸೂರ್ಯ ಅವರನ್ನೇ ಕೇಳಿದ್ದರೂ ಅವರು ಗುಟ್ಟನ್ನು ರಟ್ಟು ಮಾಡಿರಲಿಲ್ಲ. ಆದರೀಗ ಹೆಚ್ಚು ಸದ್ದಿಲ್ಲದೇ, ಸೂರ್ಯ 'ಚಂದ್ರ' ಚಕೋರಿಯನ್ನು ವರಿಸಲು ಸಿದ್ಧತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರು ಇದೀಗ ಗಾಯಕಿ, ಭರತನಾಟ್ಯ ಕಲಾವಿದೆಯಾಗಿರುವ ಚೆನ್ನೈ ಮೂಲದ ಸಿವಶ್ರೀ ಸ್ಕಂದಕುಮಾರ್ ಎನ್ನುವವರನ್ನು ವರಿಸಲು ಸಜ್ಜಾಗಿದ್ದಾರೆ. ಈಗಾಗಲೇ ಎರಡು ಕುಟುಂಬಗಳೂ ಈ ವಿವಾಹಕ್ಕೆ ಒಪ್ಪಿಗೆಯ ಮುದ್ರೆ ಹಾಕಿದ್ದು, 2025ರ ಮಾರ್ಚ್‌ನಲ್ಲಿ ವಿವಾಹ ನಡೆಯಲಿದೆ ಎಂದು ಆಪ್ತ ಮೂಲಗಳು ತಿಳಿಸಿವೆ.
ಈ ಮೂಲಕ ಬಹಳ ದಿನಗಳಿಂದ ಅಸಂಖ್ಯ ಯುವತಿಯರ 'ನಿದ್ದೆ ಕದ್ದ' ಸಂಸದನಿಗೆ ಕೊನೆಗೂ ಕಂಕಣ ಭಾಗ್ಯ ಕೂಡಿ ಬಂದಿದೆ.

ತೇಜಸ್ವಿ ಸೂರ್ಯ ಅವರ ವಿವಾಹ ಮಾರ್ಚ್ 4ಕ್ಕೆ ನಿಗದಿಯಾಗಿದೆ ಎಂದು ಮೂಲಗಳು ತಿಳಿಸಿದ್ದರೂ ಈ ಬಗ್ಗೆ ತೇಜಸ್ವಿ ಸೂರ್ಯ ಅಥವಾ ಸಿವಶ್ರೀ ಸ್ಕಂದಪ್ರಸಾದ್ ಅವರು ಬಹಿರಂಗವಾಗಿ ಎಲ್ಲಿಯೂ ಹೇಳಿಕೊಂಡಿಲ್ಲ. ವಿವಾಹ ನಡೆಯುವ ಸ್ಥಳ ಸೇರಿದಂತೆ ಹಲವು ಅಂಶಗಳು ಇನ್ನಷ್ಟೇ ಬಹಿರಂಗವಾಗಬೇಕಿದೆ.

29 ವರ್ಷಕ್ಕೆ ಬೆಂಗಳೂರು ಸಂಸದನಾಗಿ ಲೋಕಸಭೆಗೆ ಆಯ್ಕೆಯಾಗಿದ್ದ ತೇಜಸ್ವಿ ಸೂರ್ಯ ಅವರು ತಮ್ಮ 34ನೇ ವಯಸ್ಸಿಗೆ ಎರಡನೇ ಬಾರಿಗೆ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಸಂಸದರಾಗಿದ್ದರೂ, ತೇಜಸ್ವಿ ಸೂರ್ಯ ಅವರು ಸೈಕ್ಲಿಂಗ್, ವಾಕಥಾನ್ ಸೇರಿದಂತೆ ವಿವಿಧ ಕ್ರೀಡಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗೆಲುವು ಸಾಧಿಸಿದ್ದಾರೆ. ಇತ್ತೀಚೆಗೆ ಗೋವಾದಲ್ಲಿ ನಡೆದ ಐರನ್ ಮ್ಯಾನ್ ಮ್ಯಾರಥಾನ್‌ನಲ್ಲಿ ಗೆಲ್ಲುವ ಮೂಲಕ ಈ ಸ್ಪರ್ಧೆಯಲ್ಲಿ ಗೆಲುವು ಸಾಧಿಸಿದ ಮೊದಲ ಸಂಸದ ಎನಿಸಿಕೊಂಡಿದ್ದಾರೆ. ಈ ಸ್ಪರ್ಧೆಯಲ್ಲಿ ಸಿವಶ್ರೀ ಅವರೂ ಭಾಗವಹಿಸಿದ್ದರೆನ್ನುವುದು ವಿಶೇಷ.

ವಿವರಪುಟ → 5

ಯಾರೀಕೆ ಸಿವಶ್ರೀ ಸ್ಕಂದಪ್ರಸಾದ್?

ಸಿವಶ್ರೀ ಸ್ಕಂದಪ್ರಸಾದ್ ಅವರು ಶಾಸ್ತ್ರೀಯ ಸಂಗೀತ ಗಾಯಕಿ ಹಾಗೂ ಭರತನಾಟ್ಯ ಕಲಾವಿದೆ. ಶಾಸ್ತ್ರ ವಿಶ್ವವಿದ್ಯಾಲಯದಲ್ಲಿ ಬಯೋ ಎಂಜಿನಿಯರಿಂಗ್ ವಿಷಯದಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. ಇದರೊಂದಿಗೆ ಮದ್ರಾಸ್ ವಿಶ್ವವಿದ್ಯಾಲಯದಿಂದ ಭರತನಾಟ್ಯದಲ್ಲಿ ಎಂಎ ಪದವಿ, ಮದ್ರಾಸ್ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಎಂಎ ಪದವಿ ಪಡೆದು ಕೊಂಡಿದ್ದಾರೆ. ಇದರೊಂದಿಗೆ ಸೈಕ್ಲಿಂಗ್, ಟ್ರೆಕ್ಕಿಂಗ್ ವಾಕಥಾನ್‌ಗಳಲ್ಲಿಯೂ ಆಸಕ್ತಿ ಹೊಂದಿದ್ದಾರೆ. ಸಿವಶ್ರೀ ಅವರ ಯೂಟ್ಯೂಬ್ ಚಾನೆಲ್‌ಗೆ ಸುಮಾರು ಎರಡು ಲಕ್ಷ ಫಾಲೋವರ್ಸ್ ಇದ್ದಾರೆ.

ಕೆಎಸ್‌ಡಿಎಲ್ ಅಧಿಕಾರಿ ಆತ್ಮಹತ್ಯೆ

ಬೆಂಗಳೂರು: ಕರ್ನಾಟಕ ಸಾಬೂನು ಹಾಗೂ ಮಾರ್ಜಕ ನಿಯಮಿತ (ಕೆಎಸ್‌ಡಿಎಲ್) ಖರೀದಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಅಮೃತ್ ಶಿರೂರು (42) ಆತ್ಮಹತ್ಯೆಗೆ ಶರಣಾದ ಅಧಿಕಾರಿ. ಅಮೃತ್ ಅವರು ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಸವಾಗಿದ್ದರು. ಡಿ.28ರ ಸಂಜೆ 5ಗಂಟೆ ಸುಮಾರಿಗೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಘಟನೆ ಸಂಬಂಧ ಪರಿಶೀಲನೆ ನಡೆಸಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸುಚಿರ್ ಸಾವಿನ ಬಗ್ಗೆ ಮಸ್ಕ್ ಶಂಕೆ

ವಾಷಿಂಗ್ಟನ್: ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದ ಒಪನ್ ಎಐ ಕಂಪನಿ ಉದ್ಯೋಗಿ ಹಾಗೂ ಅನ್ಯಾಯಗಳ ವಿರುದ್ಧ ಸದಾ ಧ್ವನಿ ಎತ್ತುತ್ತಿದ್ದ ಸುಚಿರ್ ಬಾಲಾಜಿ ಅವರ ಸಾವು ಆತ್ಮಹತ್ಯೆಯಂತೆ ಕಾಣುತ್ತಿಲ್ಲ ಎಂದು ಸ್ಪೇಸ್ ಎಕ್ಸ್‌ನ ಮುಖ್ಯಸ್ಥ ಇಲಾನ್ ಮಸ್ಕ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಸುಚಿರ್ ಅವರ ತಾಯಿ ಪೂರ್ಣಿಮಾ ರಾಮರಾವ್ ಅವರೂ, ಇದೊಂದು ವ್ಯವಸ್ಥಿತ ಸಂಚು ರೂಪಿಸಿದ ಕೊಲೆಯಾಗಿದ್ದು, ಈ ಕುರಿತು ಎಫ್‌ಬಿಐ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಪೂರ್ಣಿಮಾ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಮಸ್ಕ್, 'ಇದು ಆತ್ಮಹತ್ಯೆಯಂತೆ ಕಾಣಿಸುತ್ತಿಲ್ಲ' ಎಂದಿದ್ದಾರೆ.

ಅಮೆರಿಕ ಮಾಜಿ ಅಧ್ಯಕ್ಷ ಜಿಮ್ಮಿ ಕಾರ್ಟರ್ ನಿಧನ

ವಾಷಿಂಗ್ಟನ್: ಅಮೆರಿಕದ 39ನೇ ಅಧ್ಯಕ್ಷರಾಗಿದ್ದ ಜಿಮ್ಮಿ ಕಾರ್ಟರ್ (100) ಜಾರ್ಜಿಯಾದ ಪ್ಲೇನ್ಸ್‌ನಲ್ಲಿರುವ ಅವರ ಮನೆಯಲ್ಲಿ ನಿಧನರಾಗಿದ್ದಾರೆ. ಜಾಕ್, ಚಿಪ್, ಜೆಫ್, ಆ್ಯಮಿ ಎಂಬ ನಾಲ್ವರು ಮಕ್ಕಳನ್ನು ಅಗಲಿರುವ ಜಿಮ್ಮಿ ಅವರಿಗೆ 11 ಮಂದಿ ಮೊಮ್ಮಕ್ಕಳು, 14 ಮಂದಿ ಮರಿಮೊಮ್ಮಕ್ಕಳಿದ್ದಾರೆ. 1977ರಿಮದ 1981ರವರೆಗೆ ಅವರು ಅಮೆರಿಕ ಅಧ್ಯಕ್ಷರಾಗಿದ್ದರು. 1777ರಲ್ಲಿ ತುರ್ತು ಪರಿಸ್ಥಿತಿ ತೆರವಾದ ಬಳಿಕ ಭಾರತಕ್ಕೆ ಭೇಟಿ ನೀಡಿದ್ದರು. ಅದರ ಗೌರವಾರ್ಥವಾಗಿ ಹರಿಯಾಣದ ಗ್ರಾಮಕ್ಕೆ ಕಾರ್ಟರ್‌ಪುರಿ ಎಂದು ಹೆಸರಿಡಲಾಗಿತ್ತು. ಅಮೆರಿಕ ಅಧ್ಯಕ್ಷ ಜೋ ಬೈಡನ್, ಪ್ರಧಾನಿ ನರೇಂದ್ರ ಮೋದಿ ಸೇರಿ ಹಲವು ದೇಶಗಳ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಪ್ರಕರಣದ ದಿಕ್ಕು ತಪ್ಪಿಸುತ್ತಿರುವ ಪೊಲೀಸರ ವಿರುದ್ಧ ಕ್ರಮಕ್ಕೆ ಆಗ್ರಹ

ರಾಜಭವನ ಮೆಟ್ಟಿಲೇರಿದ ಲಕ್ಷ್ಮೀ-ರವಿ ಗದ್ದಲ

ಬೆಂಗಳೂರು: ರಾಜ್ಯದಲ್ಲಿ ಸಾಕಷ್ಟು ವಿವಾದಕ್ಕೆ ಕಾರಣವಾದ 'ಆ' ಪದ ಬಳಕೆಯ ಪ್ರಕರಣ ರಾಜಭವನದ ಮೆಟ್ಟಿಲೇರಿದೆ.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಬಿಜೆಪಿ ಮುಖಂಡರು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಸೋಮವಾರ ದೂರು ನೀಡಿದ್ದು, ಬೆಳಗಾವಿಯಲ್ಲಿ ನಡೆದ ಘಟನಾವಳಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಪ್ರಕರಣದ ದಿಕ್ಕು ತಪ್ಪಿಸುತ್ತಿರುವ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಇತ್ತೀಚೆಗೆ ಬಿಜೆಪಿ ನಿಯೋಗ ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ದೂರು ನೀಡಿತ್ತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಟಿ.ರವಿ, ಕಾಂಗ್ರೆಸ್ ಸರಕಾರ ಹತೆ, ಆತ್ಮಹತ್ಯೆಗಳ ರಾಜ್ಯವನ್ನಾಗಿ ಮಾಡಿದೆ. ಜತೆಗೆ ಇಬ್ಬಗೆ ನೀತಿ ಅನುಸರಿಸುತ್ತಿದೆ. ನನ್ನ ವಿರುದ್ಧ ದೂರು ದಾಖಲಾದ ತಕ್ಷಣ ಬಂಧಿಸಲಾಯಿತು. ಇಡೀ ರಾತ್ರಿ ಓಡಾಡಿಸಿ ನಿರ್ಜನ ಪ್ರದೇಶದಲ್ಲಿ ಎನ್‌ಕೌಂಟರ್ ಮಾಡಿ ಮುಗಿಸುವ ದುರುದ್ದೇಶವೂ ಸರಕಾರಕ್ಕಿತ್ತು.



ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಬಿಜೆಪಿ ಮುಖಂಡರು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಸೋಮವಾರ ಭೇಟಿಯಾಗಿ ದೂರು ನೀಡಿದರು.

ಆದರೆ, ಪೊಲೀಸ್ ವ್ಯಾನ್‌ಗಳನ್ನು ಮಾಧ್ಯಮಗಳ ವಾಹನಗಳು ಹಿಂಬಾಲಿಸುತ್ತಿದ್ದ ಕಾರಣ ಸಫಲವಾಗಲಿಲ್ಲ ಎಂದು ಆರೋಪಿಸಿದರು.

→ 4

ಐಶ್ವರ್ಯಾ ಗೌಡ ವಿರುದ್ಧ ಡಿಕೆಸು ದೂರು ದಾಖಲು

ಬೆಂಗಳೂರು: ತಮ್ಮ ಹೆಸರು ದುರುಪಯೋಗ ಮಾಡಿಕೊಂಡು ವಂಚನೆ ಮಾಡಿದ ಆರೋಪದ ಹಿನ್ನೆಲೆ ಐಶ್ವರ್ಯಾ ಗೌಡ ವಿರುದ್ಧ ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ. ಐಶ್ವರ್ಯ ಗೌಡ ಎಂಬುವವರು ನನ್ನ ಹೆಸರು ದುರುಪಯೋಗ ಮಾಡಿಕೊಂಡು ಹಲವರಿಗೆ ಚಿನ್ನಾಭರಣ ಹಾಗೂ ಹಣ ವಂಚನೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗುತ್ತಿವೆ. ಹೀಗಾಗಿ, ನನ್ನ ಹೆಸರು ಬಳಸಿಕೊಂಡು ವಂಚನೆ ನಡೆಸಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಜನರಿಗೆ ಇಂತಹ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಭಾರತದ್ದೇ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಯತ್ತ ಹೆಜ್ಜೆ
ಮಹತ್ವಾಕಾಂಕ್ಷಿ ಸ್ಪೇಸ್ ಡಾಕಿಂಗ್ ಯೋಜನೆ ಯಶಸ್ವಿ

ಇಸ್ರೋ ಹೊಸ ಮೈಲಿಗಲ್ಲು

ಆಂಧ್ರಪ್ರದೇಶ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ 'ಸ್ಪೇಸ್ ಡಾಕಿಂಗ್ ಎಕ್ಸ್‌ಪಿರಿಮೆಂಟ್' (ಸ್ಪಾಡೆಕ್)ನ್ನು ಸೋಮವಾರ ರಾತ್ರಿ 10 ಗಂಟೆಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಈ ಮೂಲಕ ವರ್ಷದ ಕೊನೆಯಲ್ಲಿ ಇಸ್ರೋ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ.

ಕೆಳ ಕಕ್ಷೆಯಲ್ಲಿ ಎರಡು ಬಾಹ್ಯಾಕಾಶ ನೌಕೆಗಳ ಸಂಧಿಸುವಿಕೆಗೆ ಮತ್ತು ಬೇರ್ಪಡಿಸುವಿಕೆಗೆ ಅಗತ್ಯವಾದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಪ್ರಾಯೋಗಿಕ ಉಡಾವಣೆ ನಡೆಯಲಿದೆ. ಇದು ಸಂಕೀರ್ಣ ಬಾಹ್ಯಾಕಾಶ ಕಾರ್ಯಾಚರಣೆಗಳಿಗೆ ನಿರ್ಣಾಯಕವಾದ ತಂತ್ರಜ್ಞಾನವಾಗಿದೆ. ದೊಡ್ಡ ಗಾತ್ರದ ಬಾಹ್ಯಾಕಾಶ ನೌಕೆಗಳಿಗೆ ಹೋಲಿಸಿದರೆ ಸಣ್ಣ ನೌಕೆಗಳನ್ನು ಸೇರಿಸುವುದು ಕ್ಲಿಷ್ಟಕರ ಕಾರ್ಯ ಎಂದು ಇಸ್ರೋ ಹೇಳಿದೆ. ಮುಂದಿನ ಚಂದ್ರಯಾನ-4 ಯೋಜನೆಗೆ ಈ ಪ್ರಯೋಗದ ಯಶಸ್ಸು ಮುಖ್ಯವಾದುದಾಗಿದೆ ಎಂದು ಸಂಸ್ಥೆ ತಿಳಿಸಿದೆ.



ಏನಿದು ಯೋಜನೆ?: ಇಸ್ರೋದ ಸ್ಪೇಸ್ ಡಾಕಿಂಗ್ ಪ್ರಯೋಗ (ಸ್ಪೆಡೆಕ್ಸ್) ಎಂಬ ವಿನೂತನ ಪ್ರಯೋಗದಲ್ಲಿ ನಭಕ್ಕೆ ಚಿಮ್ಮುವ ರಾಕೆಟ್‌ನಿಂದ ನಿಗದಿತ ಕಕ್ಷೆಯನ್ನು ತಲುಪುವ ಎರಡು ಅವಳಿ ಉಪಗ್ರಹಗಳು ಮೊದಲು ದೂರವಾಗಿ, ನಂತರ ಕ್ರಮವಾಗಿ ಹತ್ತಿರ ಸೇರುತ್ತ, ಆನಂತರ ಒಂದೇ ಆಗಿ ಕಾರ್ಯಾಚರಣೆ ನಡೆಸುವ ಯೋಜನೆ ಇದಾಗಿದೆ. ಈ ಯೋಜನೆ ಯಶಸ್ವಿಯಾದರೆ, ಭಾರತದ್ದೇ ಆದ ಬಾಹ್ಯಾಕಾಶ ನಿಲ್ದಾಣ ಸ್ಥಾಪನೆಗೆ ಈ ಪ್ರಯೋಗ ದಾರಿ ಮಾಡಿಕೊಡಲಿದೆ. ಆ ಮೂಲಕ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸಿರುವ ಜಗತ್ತಿನ 4ನೇ ರಾಷ್ಟ್ರವಾಗಿ ಭಾರತ ಇತಿಹಾಸ ಸೇರದಲಿದೆ.

ಭಾರತದ ಮಹಿಳೆಯರಲ್ಲಿದೆ 24 ಸಾವಿರ ಟನ್ ಚಿನ್ನ!

ವಿಶ್ವದ ಶೇಕಡಾ 11ರಷ್ಟು ಚಿನ್ನ ಭಾರತೀಯರ ಮನೆಗಳಲ್ಲಿದೆ: ವರ್ಲ್ಡ್ ಗೋಲ್ಡ್ ಕೌನ್ಸಿಲ್ ಮಾಹಿತಿ

ಅಮೆರಿಕ, ಜರ್ಮನಿ, ಇಟಲಿ, ಫ್ರಾನ್ಸ್, ರಷ್ಯಾಗಳ ಒಟ್ಟು ಚಿನ್ನದ ಮೀಸಲಿಗಿಂತ ಹೆಚ್ಚು ಚಿನ್ನ ಭಾರತದಲ್ಲಿ

ಬೆಂಗಳೂರು: ಭಾರತೀಯರ ಪಾಲಿಗೆ ಚಿನ್ನ ಬದುಕಿನ ಭಾಗ. ಬಡವರಿರಲಿ, ಶ್ರೀಮಂತರಿರಲಿ ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಚಿನ್ನ ಧರಿಸದವರಿಲ್ಲ. ಒಂದು ಗ್ರಾಂ ಚಿನ್ನವಾದರೂ ಪೆಟ್ಟಿಗೆಯಲ್ಲಿಟ್ಟು ಕಾಪಿಡದ ಮನೆಗಳು ವಿರಳಾತಿ ವಿರಳ. ಇದು ಕೇವಲ ಶ್ರೀಮಂತಿಕೆಯ ಸಂಕೇತವಲ್ಲ, ದೇಶವಾಸಿಗಳ ಸಂಪ್ರದಾಯ, ಸಾಂಸ್ಕೃತಿಕ ಮೌಲ್ಯದಲ್ಲಿ ಚಿನ್ನಕ್ಕೆ ಮಹತ್ವದ ಸ್ಥಾನವಿದೆ.

ಇದೀಗ ಭಾರತದ ಮಹಿಳೆಯರ ಚಿನ್ನದ ದಾಸ್ತಾನಿನ ಬಗ್ಗೆ ಸ್ವತ: ವರ್ಲ್ಡ್ ಗೋಲ್ಡ್ ಕೌನ್ಸಿಲ್ ಅಚ್ಚರಿ ವ್ಯಕ್ತಪಡಿಸಿದೆ. ಭಾರತದ ಮಹಿಳೆಯರಲ್ಲಿ ಕನಿಷ್ಠವೆಂದರೂ 24 ಸಾವಿರ ಟನ್ ಚಿನ್ನವಿದೆ. ಚಿನ್ನದ ಮಾಲೀಕತ್ವದಲ್ಲಿ ಇಂದು ಭಾರತವೇ ಜಾಗತಿಕ ನಾಯಕ ಎನಿಸಿದೆ. ವಿಶ್ವದ ಯಾವುದೇ ದೇಶಕ್ಕಿಂತ ಹೆಚ್ಚಿನ ಚಿನ್ನದ ನಿಧಿ (ಗೋಲ್ಡ್ ರಿಸರ್ವ್) ಭಾರತದ ಮಹಿಳೆಯರ ಬಳಿ ಇದೆ. ಇದು ಆಭರಣದ ಮಾದರಿಯಲ್ಲಿರುವ ಚಿನ್ನದ ಪೈಕಿ ವಿಶ್ವದ ಶೇ. 11ರಷ್ಟು ಎಂದು ಡಬ್ಲ್ಯುಜಿಸಿ ತಿಳಿಸಿದೆ.

ದಕ್ಷಿಣದಲ್ಲೇ ಹೆಚ್ಚು

ಭಾರತದಲ್ಲಿ ಚಿನ್ನ ಹೊಂದಿರುವವರ ಪೈಕಿ ದಕ್ಷಿಣ ಭಾರತದ ಮಹಿಳೆಯರೇ ಮುಂಚೂಣಿಯಲ್ಲಿದ್ದಾರೆ. ಭಾರತದ ಒಟ್ಟಾರೆ ಚಿನ್ನದಲ್ಲಿ ಶೇ.40ರಷ್ಟು ಚಿನ್ನ ದಕ್ಷಿಣ ಭಾರತದಲ್ಲಿದೆ. ಈ ಪೈಕಿ ತಮಿಳುನಾಡು ರಾಜ್ಯವೊಂದರಲ್ಲೇ ಶೇ.28ರಷ್ಟು ಚಿನ್ನವಿದೆ. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳಲ್ಲೂ ಮಹಿಳೆಯರಲ್ಲಿ ಚಿನ್ನದ ಬಗ್ಗೆ ವಿಪರೀತ ವ್ಯಾಮೋಹವಿದೆ. ಭಾರತದ ಆರ್ಥಿಕತೆಗೆ ಈ ಚಿನ್ನದ ಮೀಸಲು ಕೂಡ ಅಪಾರ ಕೊಡುಗೆ ನೀಡಿದೆ. ದೇಶದ ಜಿಡಿಪಿಗೆ ಹೋಲಿಸಿದರೆ ಶೇ.40ರಷ್ಟಾಗುತ್ತದೆ. ಈ ಮಾನದಂಡದಿಂದ ಅಳೆದರೆ ಭಾರತ ವಿಶ್ವದ ಅತಿ ಶ್ರೀಮಂತ ರಾಷ್ಟ್ರ ಎನಿಸಿಕೊಳ್ಳಲಿದೆ.

ಭಾರತೀಯರ ಕೈಯಲ್ಲಿರುವ ಆಭರಣ ಚಿನ್ನದ ಸಂಗ್ರಹ, ಅಮೆರಿಕ, ರಷ್ಯಾ ಸೇರಿದಂತೆ ವಿಶ್ವದ ಪ್ರಮುಖ 5 ರಾಷ್ಟ್ರಗಳ ಒಟ್ಟು ಚಿನ್ನದ ಮೀಸಲಿಗಿಂತ ಹೆಚ್ಚಾಗಿದೆ. ಪ್ರಸ್ತುತ, ಅಮೆರಿಕ 8 ಸಾವಿರ ಟನ್ ಚಿನ್ನದ ದಾಸ್ತಾನು ಹೊಂದಿದ್ದರೆ, 2ನೇ ಸ್ಥಾನದಲ್ಲಿರುವ ಜರ್ಮನಿ ಬಳಿ 3300 ಟನ್ ಚಿನ್ನವಿದೆ. ಇಟಲಿ ಬಳಿ 2450 ಟನ್ ಚಿನ್ನವಿದ್ದರೆ, ಫ್ರಾನ್ಸ್ ದೇಶದ ಬಳಿ 2400 ಟನ್ ಹಾಗೂ ರಷ್ಯಾದ ಬಳಿ 1900 ಟನ್ ಚಿನ್ನದ ರಿಸರ್ವ್ ಇದೆ. ಈ ಐದೂ ದೇಶಗಳ ಚಿನ್ನದ ದಾಸ್ತಾನನ್ನು ಒಟ್ಟುಗೂಡಿಸಿದರೂ ಸಹ, ಭಾರತದ ಮಹಿಳೆಯರ ಬಳಿ ಇರುವ ಚಿನ್ನಕ್ಕೆ ಸರಿಸಮವಾಗುವುದಿಲ್ಲ ಎಂದು ಡಬ್ಲ್ಯುಜಿಸಿ ತಿಳಿಸಿದೆ.

ಆಕ್ಸ್‌ಫರ್ಡ್ ಗೋಲ್ಡ್ ಗ್ರೂಪ್ ಪ್ರಕಾರ, ಭಾರತದ ಮನೆಗಳಲ್ಲಿ ಇರುವ ಚಿನ್ನದ ಪ್ರಮಾಣ ವಿಶ್ವದ ಶೇ. 11ರಷ್ಟಾಗಿದೆ. ಇದು ಅಮೆರಿಕ, ಅಂತಾರಾಷ್ಟ್ರೀಯ ಹಣಕಾಸು ನಿಧಿ, ಸ್ವಿಜರ್ಲೆಂಡ್ ಹಾಗೂ ಜರ್ಮನಿ ದೇಶದ ಬಳಿ ಇರುವ ಚಿನ್ನದ ಮೀಸಲು ಪ್ರಮಾಣಕ್ಕಿಂತ ಭಾರೀ ಪ್ರಮಾಣದಲ್ಲಿ ಹೆಚ್ಚು.

ಏನಿದೆ ನಿಯಮ: ಭಾರತದ ಆದಾಯ ತೆರಿಗೆ ಇಲಾಖೆಯ ನಿಯಮದ ಪ್ರಕಾರ, ವಿವಾಹಿತ ಮಹಿಳೆ ತನ್ನ ಬಳಿ 500 ಗ್ರಾಂ ಅಂದರೆ ಅರ್ಧ ಕಿಲೋ ಚಿನ್ನವನ್ನು ಹೊಂದಿರಲು ಅವಕಾಶವಿದೆ. ಅವಿವಾಹಿತ ಮಹಿಳೆ 250 ಗ್ರಾಂ ಚಿನ್ನವನ್ನು ತನ್ನ ಬಳಿ ಹೊಂದಿರಬಹುದು. ಆದರೆ, ಭಾರತದಲ್ಲಿ ಪುರುಷರು ಕೇವಲ 100 ಗ್ರಾಂ ಚಿನ್ನವನ್ನು ಮಾತ್ರವೇ ಹೊಂದಬಹುದು.

ಸಮಾಚಾರ ಸಣ್ಣದಲ್ಲ

ಪಿಸಿಎಲ್‌ಡಿ ಬ್ಯಾಂಕ್‌ಗೆ ನಿರ್ದೇಶಕರ ಆಯ್ಕೆ

ಚಿಕ್ಕಮಗಳೂರು: ಪಿಸಿಎಲ್‌ಡಿ ಬ್ಯಾಂಕ್‌ಗೆ ನೂತನವಾಗಿ ಬಿಜೆಪಿ ಬೆಂಬಲಿತ ನಿರ್ದೇಶಕರು ಆಯ್ಕೆಯಾದ ಹಿನ್ನೆಲೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನಿವಾಸದಲ್ಲಿ ಪಕ್ಷದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರುಗಳಾದ ಕೋಟೆ ರಂಗನಾಥ್, ಈಶ್ವರಹಳ್ಳಿ, ಕೆ.ಆರ್.ಅನಿಲ್ ಕುಮಾರ್, ಹೆಚ್.ಕೆ. ಕೇಶವಮೂರ್ತಿ, ರವೀಂದ್ರ ಬೆಳವಾಡಿ ಮತ್ತಿತರರಿದ್ದರು.

ಅಕ್ರಮ ಮದ್ಯ ಮಾರಾಟ : ಬಂಧನ

ಕಡೂರು: ಬೀರೂರಿನಿಂದ ಅಜ್ಜಂಪುರಕ್ಕೆ ಹೋಗುವ ಬೈ ಪಾಸ್ ರಸ್ತೆಯ ಫ್ಲೈ ಓವರ್ ಬ್ರಿಡ್ಜ್ ಬಳಿ ಅಕ್ರಮವಾಗಿ ಮದ್ಯ ಮಾರುತ್ತಿದ್ದ ಆರೋಪಿಯನ್ನು ಬೀರೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಸೀಗೆಹಡ್ಲು ಗ್ರಾಮದ ನಿವಾಸಿ ಕುಮಾರ ಎಸ್. ಜಿ. ಈತ ಬ್ರಿಡ್ಜ್ ಬಳಿ ಅಕ್ರಮವಾಗಿ ಮದ್ಯ ಮಾರುತ್ತಿದ್ದಾಗ ಪೊಲೀಸರು ಬಂಧಿಸಿ ಬಂಧಿತನಿಂದ 2000 ರೂ ಬೆಲೆಯ 5. 408 ಲೀ ಮದ್ಯ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಸ್ಪೀಟ್ ಜೂಜಾಟ : ಆರೋಪಿಗಳ ಬಂಧನ

ಅಜ್ಜಂಪುರ: ಗೌರಪುರ ಗ್ರಾಮದಲ್ಲಿ ಇಸ್ಪೀಟ್ ಜೂಜಾಟ ಆಡುತ್ತಿದ್ದ 4 ಆರೋಪಿಗಳನ್ನು ಅಜ್ಜಂಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಗ್ರಾಮದಲ್ಲಿ ಜೂಜಾಟ ವಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದು, ಜೂಜಾಟವಾಡುತ್ತಿದ್ದ ನಾಲ್ವರನ್ನು ಬಂಧಿಸಿದ್ದು, ಬಂಧಿತರಿಂದ 4670 ರೂ. ನಗದು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

171 ಜತೆ ಕೋಣಗಳ ರೋಚಕ ಓಟ

8ನೇ ವರ್ಷದ ಕಂಬಳ ಕೂಟ ಸಮಾರೋಪ | ಸತೀಶ್ ಶೆಟ್ಟಿಯ ಬಿ ತಂಡ ಪ್ರಥಮ

ಮಂಗಳೂರು: ಮಂಗಳೂರು ಕಂಬಳ ಸಮಿತಿ ಅಧ್ಯಕ್ಷ, ಸಂಸದ ಬ್ರಿಜೇಶ್ ಚೌಟ ನೇತೃತ್ವದಲ್ಲಿ ಬಂಗ್ರ ಕೂಳೂರಿನ ಗೋಲ್ಡ್ ಫಿಂಚ್ ಸಿಟಿಯ ರಾಮ-ಲಕ್ಷ್ಮಣ ಜೋಡು ಕರೆಯಲ್ಲಿ 8ನೇ ವರ್ಷದ ಕಂಬಳಕೂಟ ದಲ್ಲಿ171 ಜೊತೆ ಓಟದ ಕೋಣಗಳು ಎರಡು ದಿನಗಳಲ್ಲಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿವೆ. ಕಂಬಳದಲ್ಲಿ ನೇಗಿಲು ಹಿರಿಯ ವಿಭಾಗದಲ್ಲಿ ಬೋಳದ ಗುತ್ತು ಸತೀಶ್ ಶೆಟ್ಟಿಯ ಬಿ ತಂಡ ಪ್ರಥಮ (11.53) ಓಡಿಸಿದವರು: ಬೈಂದೂರು ವಿಶ್ವನಾಥ ದೇವಾಡಿಗ,

ದ್ವಿತೀಯ: ಮಂಗಳೂರು ಬಜಾಲ್ ಶೈಲೇಶ್ ಶೆಟ್ಟಿ (11.59) ಓಡಿಸಿದವರು: ಕಕ್ಕೆಪದವು ಪೆಂರ್ಗಾಲು ಕೃತಿಕ್ ಗೌಡ, ನೇಗಿಲು ಕಿರಿಯ: ಪ್ರಥಮ: ಎರ್ಮಾಳ್ ಪುಚ್ಚೊಟ್ಟು ಬೀಡು ಬಾಲಚಂದ್ರ ಲೋಕಯ್ಯ ಶೆಟ್ಟಿ ಎ (11.80) ಓಡಿಸಿದವರು: ಪಟ್ಟೆ ಗುರು ಚರಣ್, ದ್ವಿತೀಯ: ಮುನಿಯಾಲು ಉದಯ ಕುಮಾರ್ ಶೆಟ್ಟಿ ಎ (12.46) ಓಡಿಸಿದವರು: ಮಾಸ್ತಿ ಕಟ್ಟೆ ಸ್ವರೂಪ್.

ಕನೆ ಹಲಗೆ ವಿಭಾಗದಲ್ಲಿ ಭಾಗವಹಿಸಿದ 7 ಜೊತೆ ಕೋಣಗಳು ನಿಶಾನೆಗೆ ನೀರು ಹಾಯಿಸಿ ಉತ್ತಮ ಸಾಧನೆ ಮಾಡಿದ ಕಾರಣ ಸಮಾನ ಬಹುಮಾನ ಪಡೆದುಕೊಂಡಿದೆ. ಬೊಳ್ಳಂಬಳ್ಳಿ ಶ್ರೀರಾಮ ಚೈತ್ರ ಪರಮೇಶ್ವರ ಭಟ್, ಹಲಗೆ ಮುಟ್ಟಿದವರು: ಭಟ್ಕಳ ಪಾಂಡು ಕಾಂತಾವರ ಬೇಲಾಡಿ ಬಾವ ಅಶೋಕ್ ಶೆಟ್ಟಿ ಹಲಗೆ ಮುಟ್ಟಿದವರು: ತೆಕ್ಕಟ್ಟೆ ಸುಧೀರ್ ದೇವಾಡಿಗ, ಹಂಕರಜಾಲು ಶ್ರೀನಿವಾಸ ಭಿರ್ಮಣ್ಣ ಶೆಟ್ಟಿ, ಹಲಗೆ ಮುಟ್ಟಿದವರು: ಭಟ್ಕಳ ಪಾಂಡು, ವಾಮಂಜೂರು **ತಿರುವೈಲುಗುತ್ತು ಅಭಿಷೇಕ್ ನವೀನ್ಚಂದ್ರ ಆಳ್ವ,ಹಲಗೆ ಮುಟ್ಟಿದವರು:** ಬೈಂದೂರು ಭಾಸ್ಕರ ದೇವಾಡಿಗ, ಬೋಳಾರ ತ್ರಿಶಾಲ್ ಕೆ ಪೂಜಾರಿ,ಹಲಗೆ ಮುಟ್ಟಿದವರು: ಮಂದಾರ್ತಿ ಶಿರೂರು ಮುದ್ದುಮನೆ ಭರತ್ ನಾಯ್ಕ್, ಬಾರ್ಕೂರು ಶಾಂತಾರಾಮ ಶೆಟ್ಟಿ, ಹಲಗೆ ಮುಟ್ಟಿದವರು: ಬೈಂದೂರು ಭಾಸ್ಕರ ದೇವಾಡಿಗ, ನಿಡ್ಡೋಡಿ ಕಾನ ರಾಮ ಸುವರ್ಣ, ಹಲಗೆ ಮುಟ್ಟಿದವರು ಕೊಕ್ಕರ್ಣೆ ವಡಾಪಿ ಸುರೇಶ್ ನಾಯ್ಕ್.

ಕಂಬಳದಲ್ಲಿ ಓಡುತ್ತಿರುವ ಕೋಣಗಳ ಜೋಡಿ.

ಅಡ್ಡ ಹಲಗೆ:
ಪ್ರಥಮ: ನಾರಾವಿ ಯುವರಾಜ್ ಜೈನ್ ಕಂಬಳಾಭಿಮಾನಿ ವಕೀಲರ ವೃಂದ ಮಂಗಳೂರು ಎ ಹಲಗೆ ಮುಟ್ಟಿದವರು: ಭಟ್ಕಳ ಹರೀಶ್,
ದ್ವಿತೀಯ: ನಾರಾವಿ ಯುವರಾಜ್ ಜೈನ್ ಕಂಬಳಾಭಿಮಾನಿ ವಕೀಲರ ವೃಂದ ಮಂಗಳೂರು ಬಿ,ಹಲಗೆ ಮುಟ್ಟಿದವರು: ಭಟ್ಕಳ ಹರೀಶ್,
ಹಗ್ಗ ಹಿರಿಯ:
ಪ್ರಥಮ: ನಂದಳಿಕೆ ಶ್ರೀಕಾಂತ್ ಭಟ್ ಎ , ಓಡಿಸಿದವರು: ಬಂಬ್ರಾಣಬೈಲು ವಂದಿತ್ ಶೆಟ್ಟಿ,
ದ್ವಿತೀಯ: ಕೊಳಕೆ ಇರ್ವತ್ತೂರು ಭಾಸ್ಕರ ಎಸ್ ಕೋಟ್ಯಾನ್ ಬಿ, **ಓಡಿಸಿದವರು:** ಕಕ್ಕೆಪದವು ಪೆಂರ್ಗಾಲು ಕೃತಿಕ್ ಗೌಡ.
ಹಗ್ಗ ಕಿರಿಯ:ಪ್ರಥಮ: ಮಾಳ ಕಲ್ಲೇರಿ ಭರತ್ ಶರತ್ ಶೆಟ್ಟಿ (11.72) ಓಡಿಸಿದವರು: ಬಜಗೋಳಿ ಜೋಗಿಬೆಟ್ಟು ನಿಶಾಂತ್ ಶೆಟ್ಟಿ,
ದ್ವಿತೀಯ: 80 ಬಡಗ ಬೆಟ್ಟು ಕಲ್ಲಪಾವು ಶ್ರೀಕ ಸಂದೀಪ್ ಶೆಟ್ಟಿ ಬಿ (11.90),ಓಡಿಸಿದವರು: ಬೈಂದೂರು ವಿಶ್ವನಾಥ ದೇವಾಡಿಗ ಬಹುಮಾನ ಗಳಿಸಿದ್ದಾರೆ. ಮಂಗಳೂರು ಕಂಬಳದಲ್ಲಿ ಈ ಬಾರಿ ಕನೆಹಲಗೆ ವಿಭಾಗದಲ್ಲಿ 07 ಜೊತೆ ಅಡ್ಡಹಲಗೆ 08 ಜೊತೆ ,ಹಗ್ಗ ಹಿರಿಯ 20 ಜೊತೆ, ನೇಗಿಲು ಹಿರಿಯ 32 ಜೊತೆ, ಹಗ್ಗ ಕಿರಿಯ 23 ಜೊತೆ ,ನೇಗಿಲು ಕಿರಿಯ 81 ಜೊತೆ ಸೇರಿ ಒಟ್ಟು 171 ಜೊತೆ ಕೋಣ ಗಳು ದಕ್ಷಿಣ ಕನ್ನಡ, ಉಡುಪಿ,ಕಾಸರಗೋಡು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿ ಸ್ಪರ್ಧಾ ಕಣದಲ್ಲಿದ್ದವು.

ಆಳ್ವಾಸ್ ವಿದ್ಯಾರ್ಥಿಗಳಿಗೆ ಸ್ಟಾರ್ ಇಂಡಿಯಾ ಪ್ರಶಸ್ತಿ

ವಿದ್ಯಾಗಿರಿ: ಮಹಾರಾಷ್ಟ್ರದ ರಾಯಘಢ ಜಿಲ್ಲೆಯ ಕಾಮೋತೆಯಲ್ಲಿ ನಡೆದ 70 ನೇ ರಾಷ್ಟ್ರೀಯ ಸೀನಿಯರ್ ಮಹಿಳಾ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್‌ನಲ್ಲಿ ಕರ್ನಾಟಕ ಚಾಂಪಿಯನ್ ಆಗಿದ್ದು, ಆಳ್ವಾಸ್ (ಸ್ವಾಯತ್ತ) ಕಾಲೇಜಿನ ಆರು ವಿದ್ಯಾರ್ಥಿಗಳು ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ವಿಜೇತ ತಂಡದಲ್ಲಿ ಆಳ್ವಾಸ್ (ಸ್ವಾಯತ್ತ) ಕಾಲೇಜಿನ ಆರು ಮಂದಿ ಆಟಗಾರರು ಭಾಗವಹಿಸಿದ್ದರು. ರಾಜ್ಯ ತಂಡದ ನಾಯಕಿ ಮೇಘನಾ ಎಚ್. ಎಂ., ಪಲ್ಲವಿ ಬಿ. ಎಸ್., ಸಹನಾ ಎಚ್. ವೈ, ಲಕ್ಷ್ಮಿ ದೇವಿ, ತನುಶ್ರೀ, ಗೀತಾ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.

ರಾಜ್ಯ ತಂಡದ ಪರವಾಗಿ ಅತ್ಯುತ್ತಮ ಪ್ರದರ್ಶನ ನೀಡಿದ ಆಳ್ವಾಸ್‌ನ ಪಲ್ಲವಿ ಬಿ.ಎಸ್. ಹಾಗೂ ಸಹನಾ ಎಚ್. ವೈ. ಅವರು ಅಖಿಲ ಭಾರತ ಬಾಲ್‌ಬ್ಯಾಡ್ಮಿಂಟನ್ ಫೆಡರೇಶನ್ ನೀಡುವ ಸ್ಟಾರ್ ಆಫ್ ಇಂಡಿಯಾ ಪ್ರಶಸ್ತಿಗೆ ಭಾಜನರಾದರು.

ಲೀಗ್ ಹಂತದಲ್ಲಿ ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಆಂಧ್ರಪ್ರದೇಶ ತಂಡವನ್ನು ನೇರ ಸೆಟ್‌ಗಳಿಂದ ಸೋಲಿಸಿದ ಕರ್ನಾಟಕ ನಾಕ್‌ಔಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿತ್ತು. ಚಾಂಪಿಯನ್ ಶಿಪ್‌ನಲ್ಲಿ 28 ರಾಜ್ಯ ತಂಡಗಳು ಭಾಗವಹಿಸಿದ್ದವು. ವಿಜೇತ ಕ್ರೀಡಾಪಟುಗಳಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ ಅಭಿನಂದಿಸಿದ್ದಾರೆ.

ನಾಟಕ ಕಲಾವಿದ ಆತ್ಮಹತ್ಯೆ

ವಿಟ್ಲ: ವಿಟ್ಲ ಸಮೀಪದ ಅತಿ ಕಾರಬೈಲು ಬಳಿ ನಾಟಕ ಕಲಾ ವಿದರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಠಲ ಪೂಜಾರಿ (49) ಆತ್ಮಹತ್ಯೆಗೆ ಶರಣಾದವರು. ಯುವಕೇಸರಿ ಅತಿಕಾರಬೈಲು ಸಂಘ ಟನೆಯ ಅಧ್ಯಕ್ಷರಾಗಿ, ನಾಟಕ ಕಲಾವಿದರು, ಬಿಲ್ಲವ ಸಂಘದಲ್ಲಿ ತೊಡಗಿಸಿ ಕೊಂಡಿ ದ್ದರು. ಚಂದಳಿಕೆ ಶಾಲೆಯ ಎಸ್‌ಡಿಎಂಸಿ ಅಧ್ಯ ಕ್ಷರಾಗಿ, ಊರಿನ ಧಾರ್ಮಿಕ ಮತ್ತು ಸಾಮಾಜಿಕ ಕಾ ರ್ಯದಲ್ಲಿ ತನ್ನನು ತಾನು ತೊಡಗಿ ಸಿಕೊಂಡಿ ದ್ದರು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಕಲೆ, ಸಾಹಿತ್ಯ, ಸಂಗೀತ ಕಾಲಾತೀತ

ಚಿಕ್ಕಮಗಳೂರು: ಜಗತ್ತಿನಲ್ಲಿ ಜಾತ್ಯತೀತ, ಧರ್ಮಾತೀತ ಹಾಗೂ ಕಾಲಾತೀತವಾಗಿರುವ ಪ್ರಕಾರವಿದ್ದರೆ ಅದು ಕಲೆ, ಸಾಹಿತ್ಯ, ಸಂಗೀತ ಮಾತ್ರಎಂದು ಸಾಹಿತಿ ಬಿ.ಎನ್.ರಮೇಶ್ ಬೊಂಗಾಳೆ ಅಭಿಪ್ರಾಯ ವ್ಯಕ್ತಪಡಿಸಿದರು.

ಪೂರ್ವಿ ಸುಗಮ ಸಂಗೀತಅಕಾಡೆಮಿಟ್ರಸ್ಟ್, ಯುರೇಕಾ ಅಕಾಡೆಮಿ ಹಾಗೂ ಮಲೆನಾಡು ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಗರದ ಎಂ.ಇ.ಎಸ್. ಸಭಾಂಗಣದಲ್ಲಿ ನಡೆದ ಸ್ವರ ಮಾಂತ್ರಿಕ ಡಾ.ಸಿ.ಅಶ್ವತ್ಥ್‌ವರ ಜನ್ಮ ದಿನಾಚರಣೆಯ 'ಅವತರಿಸು ಬಾ' 103ರ ಸರಣಿಯ ಕಾವ್ಯಗಾಯನದಲ್ಲಿ ನುಡಿನಮನ ಸಲ್ಲಿಸಿದರು.

ಸಂಗೀತಕಲೆಯನ್ನುತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿ ಭಾವಗೀತೆಯ ಕವಿಗಳನ್ನು ಅಮರರನ್ನಾಗಿ ಮಾಡಿದ ದಿಗ್ಗಜರಲ್ಲಿ ಡಾ.ಸಿ.ಅಶ್ವತ್ಥ್ ಕೂಡ ಒಬ್ಬರು. ಅಶ್ವತ್ಥ್ ಗಾಯಕರು ಮಾತ್ರಆಗಿರಲಿಲ್ಲ, ರಾಗ ಸಂಯೋಜಕ, ಸಂಗೀತ ನಿರ್ದೇಶಕ, ಮೇಲಾಗಿ ಸರಳ, ಸಜ್ಜನಿಕೆಯ ವ್ಯಕ್ತಿ ಕೂಡ ಆಗಿದ್ದರು. 1939ರಲ್ಲಿ ಚೆನ್ನರಾಯಪಟ್ಟಣದ ದೇವನಹಳ್ಳಿ ಯಲ್ಲಿ ಜನಿಸಿದರು. ಅವರಿಗೂ ಒಂಭತ್ತು ಸಂಖ್ಯೆಗೂ ಕಾಕತಾಳೀಯ ಸಂಬಂಧವಿದೆ. 1939 ಅವರು ಹುಟ್ಟಿದ ಇಸವಿ. 1969 ರಿಂದ 1999 ವೃತ್ತಿ ಬದುಕು. ಅವರ ಅಂತ್ಯ 2009. ಹೀಗೆ ಕೆಲವೇ ಕೆಲವು ವ್ಯಕ್ತಿಗಳಿಗೆ ಮಾತ್ರ ಇದು ಸಿಗಲಿದೆ ಎಂದರು.

ಮಲೆನಾಡು ವಿದ್ಯಾಸಂಸ್ಥೆಯಉಪಾಧ್ಯಕ್ಷೆ ರಾಧ ಸುಂದರೇಶ್ ಮಾತನಾಡಿ, ಸಂಗೀತದಲ್ಲಿ ಸಾಧನೆ ಮಾಡಿದ ಮಹನೀಯರು ಅವುಗಳನ್ನು ಪೀಳಿಗೆಗೆ ಉಳಿಸಿ ಹೋಗಿದ್ದಾರೆ. ಅದನ್ನು ಉಳಿಸಿಕೊಂಡು ಹೋಗುವ ಕಾರ್ಯ ನಡೆಯಬೇಕಿದೆಎಂದರು. ಯುರೇಕಾ ಅಕಾಡೆಮಿ ಸಂಸ್ಥಾಪಕ ದೀಪಕ್‌ದೊಡ್ಡಯ್ಯ ಮಾತನಾಡಿದರು. ಪೂರ್ವಿ ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಎಂ.ಎಸ್.ಸುಧೀರ್ ಇದ್ದರು. ಅನಂತರಗಾಯಕ ಎಂ.ಎಸ್.ಸುಧೀರ್ ಸಾರಥ್ಯದಲ್ಲಿ ನಡೆದಗಾಯನದಲ್ಲಿ ಗಾಯಕರಾದ ರೂಪಾ ಅಶ್ವಿನ್, ಚೇತನ್ ರಾಮ್, ಪ್ರಣಮ್ಯಕಶ್ಯಪ್, ಪೃಥ್ವಿ, ಡಾ.ಶಿಲಾಲಿ, ಮಾನ್ಯಭಟ್, ಚಿನ್ಮಯಿಕೆ.ಎಸ್., ಮಾನ್ಯತಎಸ್.ಬಾಗಮನೆ, ಸ್ವೇಚಿತ್ ಸಿ.ಅಶ್ವತ್ಥ್ ಗೀತೆಗಳಿಗೆ ಧ್ವನಿಯಾಗಿ ರಂಜಿಸಿದರು.

ಉಚಿತ ಚಲನ ಚಿತ್ರ ಪ್ರದರ್ಶನ

ಮಂಗಳೂರು: ಕರಾವಳಿ ಉತ್ಸವದ ಅಂಗವಾಗಿ ಭಾರತ್ ಸಿನಿಮಾ ಮಾಲ್ ನಲ್ಲಿ ಜ.1ರಂದು ಫಿಲ್ಮ್ ಫೆಸ್ಟಿವಲ್ ನಿಮಿತ್ತ ಉಚಿತ ಚಲನ ಚಿತ್ರ ಪ್ರದರ್ಶನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಮುಲ್ಲೈಮುಗಿಲನ್ ತಿಳಿಸಿದ್ದಾರೆ. ಬೆಳಗ್ಗೆ 10 ಗಂಟೆಗೆ ಆರಿ ಷಡ್ವರ್ಗ ಚಿತ್ರ ಪ್ರದರ್ಶನವಾಗಲಿದ್ದು ಬಳಿಕ 12.30 ಕ್ಕೆ 19.29.21 ,3.30 ಕ್ಕೆ ರಾಜ್ ಸೌಂಡ್ ಅಂಡ್ ಲೌಟ್ (ತುಳು ಚಿತ್ರ) 6.30 ಕ್ಕೆ ಮಧ್ಯಾಂತರ (ಕನ್ನಡ ಚಿತ್ರ) 8 .ಗಂಟೆಗೆ ಕಾಂತಾರ ಚಿತ್ರ ಪ್ರದರ್ಶನವಾಗಲಿದೆ. ಮರುದಿನ ಜ. 3 ರಂದು ಬೆಳಗ್ಗೆ 10 ಗಂಟೆಗೆ ಕನ್ನಡ ಚಲನ ಚಿತ್ರ ಸಾರಾಂಶ ಪ್ರದರ್ಶನ ನಡೆಯಲಿದ್ದು 12.45 ಕ್ಕೆ ಕೊಂಕಣಿ ಡ್ರಾಮ ತರ್ಪಣ ,3.15 ಕ್ಕೆ ಶುದ್ಧಿ ಕನ್ನಡ ತ್ರಿಲ್ಲರ್ ಚಿತ್ರ ,5.45 ಕ್ಕೆ ಕೂಬಿ ಮತ್ತು ಇಲಯಾ ಕನ್ನಡ ಡ್ರಾಮಾ ಬಳಿಕ 8.00 ಗಂಟೆಗೆ ಕನ್ನಡ ಚಲನಚಿತ್ರ, ಗರುಡ ಗಮನ ವೃಷಭ ವಾಹನ ಚಿತ್ರ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದ್ದಾರೆ. ಜನವರಿ 4 ರಂದು ಆಟೋಮೊಬೈಲ್ ವಸ್ತು ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದ್ದಾರೆ.

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಶಾಖೆ: ಭದ್ರಾವತಿ
ಪ್ರಧಾನ ಕಚೇರಿ:ಹೊಸದುರ್ಗ-577 527. ಚಿತ್ರದುರ್ಗ ಜಿಲ್ಲೆ, ಕರ್ನಾಟಕ. ಫೋನ್ : 08199-230447, 231405

ಸಾರ್ವಜನಿಕ ಹರಾಜು ಪ್ರಕಟಣೆ

ಸೆಕ್ಯುರಿಟೈಸೇಷನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002, ಸೆಕ್ಷನ್ 13(4)ರ ಪ್ರಕಾರ ಕೆಳಗೆ ತಿಳಿಸಿರುವ ಸಾಲಗಾರರುಗಳಿಂದ ಬರಬೇಕಾಗಿರುವ ಬ್ಯಾಂಕಿನ ಸಾಲಗಳ ಬಾಕಿ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002ರ ನಿಯಮ 8(1)(6) ರ ಅನ್ವಯ ಕೆಳಗೆ ನಮೂದಿಸಿರುವ ಸ್ಥಿರಾಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಇರುವ ಯಥಾ ಸ್ಥಿತಿಯಲ್ಲಿ ಮಾರಾಟ ಮಾಡಲಿದ್ದು, ಸದರಿ ಸ್ವತ್ತಿನ ಖರೀದಿಗೆ ಆಸಕ್ತಿಯುಳ್ಳ ಸಮಸ್ತ ಸಾರ್ವಜನಿಕರಿಂದ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಕಂ ಹರಾಜು ಆಫರ್‌ಗಳನ್ನು / ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಸಾಲಗಾರರ ಹೆಸರು ಮತ್ತು ವಿಳಾಸ : ಮಹಮದ್ ಆರಿಫ್ ಬಿನ್ ಅಬ್ದುಲ್ ಜಬ್ಬರ್ ಪಶು ವೈದ್ಯಾಧಿಕಾರಿಗಳು, ಮನೆ ನಂ.2 ಈದ್ಗಾ ನಗರ, ಹಳೇ ಟೌನ್, ಭದ್ರಾವತಿ. ಬರಬೇಕಾದ ಬಾಕಿ ದಿನಾಂಕ: 31.10.2024ಕ್ಕೆ ಇದ್ದಂತೆ ರೂ. 64,60,980-00 ಮತ್ತು ಮುಂದೆ ತಗಲಬಹುದಾದ ಬಡ್ಡಿ, ಸುಸ್ತಿಬಡ್ಡಿ, ಜಾಹೀರಾತು ಖರ್ಚು ಮತ್ತು ಇತರೆ. ಜಾಮೀನುದಾರರ ಹೆಸರು ಮತ್ತು ವಿಳಾಸ : 1. ಸೈಯದ್ ಅಹಮದ್ ಇಮ್ರಾನ್ ಬಿನ್ ಸೈಯದ್ ಸುಬಾನ್. 2. ಶಿವಕುಮಾರ್ ಬಿನ್ ದೇವರಾಜ್. ಮೀಸಲು ಬೆಲೆ: 54,00,000.00 ಇ.ಎಂ.ಡಿ. (ಹಿಂತಿರುಗಿಸಲಾಗುವುದು) : 5,40,000.00 ಕನಿಷ್ಟ ಬಿಡ್ ಹೆಚ್ಚಿಸುವ ಮೊಬಲಗು: 1.00 ಲಕ್ಷ ಒಟ್ಟು ಬರಬೇಕಾದ ಮೊತ್ತ ದಿನಾಂಕ: 31.10.2024 ಕ್ಕೆ ಇದ್ದಂತೆ ರೂ. 64,60,980.00 (ಅರವತ್ನಾಲ್ಕು ಲಕ್ಷದ ಅರವತ್ತು ಸಾವಿರದ ಒಂಭೈನೂರಾ ಎಂಭತ್ತು ರೂಪಾಯಿಗಳು ಮಾತ್ರ) + ಮುಂದೆ ತಗಲಬಹುದಾದ ಬಡ್ಡಿ, ಸುಸ್ತಿಬಡ್ಡಿ, ಜಾಹೀರಾತು ಖರ್ಚು ಮತ್ತು ಇತರೆ.
ಹರಾಜಿನ ದಿನಾಂಕ : 08.01.2025 ರ ಮಧ್ಯಾಹ್ನ 1.00 ಗಂಟೆಯ ನಂತರ ಹರಾಜು ನಡೆಯುವ ಸ್ಥಳ : ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ, ಹೊಸದುರ್ಗ. ಸ್ವತ್ತಿನ ವೀಕ್ಷಣೆ: 01.01.2025 ರಿಂದ 07.01.2025 ರವರೆಗೆ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ : 01.01.2025 ರ ಮಧ್ಯಾಹ್ನ 12 ಗಂಟೆಯ ಒಳಗೆ.
ಬ್ಯಾಂಕಿನ ಸಾಲದ ಭದ್ರತೆಗಾಗಿ ನೀಡಿರುವ ಸ್ವತ್ತಿನ ವಿವರ.
1. ಭದ್ರಾವತಿ ಟೌನ್ ನಗರಸಭಾ ವ್ಯಾಪ್ತಿಗೊಳಪಟ್ಟ ವಾರ್ಡ್ ನಂ 05ಕನಕನಗರ ಬಡಾಣೆಯ ಸೈಟ್ ನಂ 10(ಭದ್ರಾವತಿ ಗ್ರಾಮದ ಸರ್ವೆ ನಂ 18/2ರಲ್ಲಿ ವಿಂಗಡಿಸಿರುವಂತೆ ಸೈಟ್ ನಂ 10) ಹಳೇ ಖಾತೆ ನಂ 1259, ಅಸೆಸ್ಮೆಂಟ್ ನಂ- 1389, ಪಿಐಡಿ ನಂ 5-3-526-15, ಸ್ವತ್ತಿನ ಹಳೇ ಸಂಖ್ಯೆ787-841-ಔಂ-1389, ಚಾಲ್ತಿ ಖಾತೆ ನಂ/ಅಸೆಸ್ಮೆಂಟ್ ನಂ/ನಿರ್ಧರಣಾ ಸಂಖ್ಯೆ.787-841-ಔಂ-1389, ರ ಬಾಬ್ತು ಪೂರ್ವ-ಪಶ್ಚಿಮ 9.144018 ಮೀ ಘ ಉತ್ತರ -ದಕ್ಷಿಣ15.240030 ಮೀ ಅಳತೆಯ ಅಂದರೆ ಒಟ್ಟು 139.3545 ಚದರ ಮೀಟರ್ ವಿಸ್ತೀರ್ಣವುಳ್ಳ ನಿವೇಶನ ಹಾಗೂ ಈ ನಿವೇಶನದಲ್ಲಿರುವ 92.9030ಚದರ ಮೀಟರ್ ವಿಸ್ತೀರ್ಣವುಳ್ಳ ಮೊಸಾಯಿಕ್ ನೆಲಹಾಸು ಇರುವ ಆರ್.ಸಿ.ಸಿ ಮನೆ ಸೇರಿದ ಪೂರಾ ಸ್ವತ್ತು ಇದಕ್ಕೆ ಚಕ್ಕುಬಂದಿ:-ಪೂರ್ವಕ್ಕೆ: ಬೇರೆಯವರ ಸ್ವತ್ತು, ಉತ್ತರಕ್ಕೆ: ನಗರಸಭೆ ರಸ್ತೆ, ಪಶ್ಚಿಮಕ್ಕೆ:-ಕೆ. ಶಿವಲಿಂಗಪ್ಪ ರವರ 9ನೇ ನಂಬರ್ ಸೈಟ್, ದಕ್ಷಿಣಕ್ಕೆ:-ಸರ್ವೆ ನಂ 18/2ರ ಪ್ರದೇಶ.

ಮಾರಾಟದ ನಿಯಮಗಳು ಮತ್ತು ನಿಬಂಧನೆಗಳು:
1. ಈ ಹರಾಜು ಮಾರಾಟವನ್ನು ಸಾರ್ವಜನಿಕರಿಂದ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಕಂ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಆಸ್ತಿಗಳನ್ನು ಒಟ್ಟಾಗಿ ಅಥವಾ ಬಿಡಿಬಿಡಿಯಾಗಿ ಮಾರಾಟ ಮಾಡಲು ಅಧಿಕೃತ ಅಧಿಕಾರಿಗಳು ಅಧಿಕಾರವುಳ್ಳವರಾಗಿರುತ್ತಾರೆ. **2.** ಮಾರಾಟವನ್ನು "ಹೇಗಿದೆಯೋ ಎಲ್ಲಿದೆಯೋ ಅದೇ ಸ್ಥಿತಿಯಲ್ಲಿ" ಆಸ್ತಿಗಳನ್ನು ಮಾರಾಟ ಮಾಡಲಾಗುವುದು. **3.** ಸ್ವತ್ತನ್ನು "ಮೀಸಲು ಬೆಲೆಗಿಂತ ಕಡಿಮೆ" ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. **4.** ಸ್ವತ್ತು ಮತ್ತು ಇತರೆ ವಿವರಗಳನ್ನು ಪರಿಶೀಲಿಸಲು ಆಸಕ್ತಿಯುಳ್ಳ ಬಿಡ್‌ದಾರರು ಸ್ವತ್ತಿನ ಬಗ್ಗೆ ಸ್ವಂತ ಪರಿಶೀಲನೆ/ ಅಸೆಸ್‌ಮೆಂಟ್ /ವಿಚಾರಣೆ ಮಾಡಲು ಸ್ವತಂತ್ರರಾಗಿರುತ್ತಾರೆ. ಅಥವಾ ಬ್ಯಾಂಕಿನ ಅಧಿಕೃತ ಅಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಸಂಪರ್ಕಿಸುವುದು. ಮುಚ್ಚಿದ ಟೆಂಡರ್ ಕಂ ಹರಾಜು ಬಿಡ್ ಸಲ್ಲಿಸುವ ಮೊದಲು ಸ್ವತ್ತಿನ ಬಗ್ಗೆ ವಿವರಣೆಗಳನ್ನು ಬಿಡ್ಡರ್‌ಗಳು ಪರಿಶೀಲಿಸಿ, ತೃಪ್ತಿಕರವಾಗಿದೆ ಎಂಬುದನ್ನು ಖಾತರಿ ಪಡಿಸಿಕೊಳ್ಳಬೇಕು. ಇತರೆ ಯಾವುದೇ ರೀತಿಯ ತಕರಾರು/ಹಕ್ಕು /ಬಾಕಿ/ ಋಣಭಾರಗಳಿಗೆ ಬ್ಯಾಂಕು (ಭದ್ರತಾ ಸಾಲಗಾರರು)/ ಅಧಿಕಾರಿಯವರು ಜವಾಬ್ದಾರರಲ್ಲ. **5.** ಆಸಕ್ತ ಬಿಡ್ಡರ್‌ಗಳು ತಮ್ಮ ಆಫರುಗಳ ಜೊತೆಗೆ ಅರ್ನೆಸ್ಟ್ (EARNEST MONEY) ಡಿಪಾಸಿಟ್‌ನ್ನು ಬ್ಯಾಂಕಿನಲ್ಲಿ ನಗದು ಪಾವತಿ / ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ನಿಗದಿತ ಟೆಂಡರ್ ಫಾರಂನೊಂದಿಗೆ ಅಧಿಕೃತ ಅಧಿಕಾರಿಯವರಲ್ಲಿ ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಭದ್ರಾವತಿ ಶಾಖಯ ಸಾಲಕ್ಕೆ ಆಧಾರವಾಗಿರುವ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ : 08.01.2025 ರಂದು 12.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಇದರೊಂದಿಗೆ ಕೆ.ವೈ.ಸಿ. (KYC) ದಾಖಲಾತಿಗಳನ್ನು ಅಂದರೆ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಪ್ರತಿಯನ್ನು ಲಗತ್ತಿಸಬೇಕು. **6.** ಒಂದು ವೇಳೆ ಬಿಡ್‌ದಾರರು ಕಂಪನಿಯಾಗಿದ್ದಲ್ಲಿ ಬಿಡ್ ನಡೆಯುವ ಸಮಯದಲ್ಲಿ ಕಂಪನಿಯ ಪರವಾಗಿ ಪ್ರತಿನಿಧಿಸುವ ವ್ಯಕ್ತಿಗೆ ಆ ಕಂಪನಿಯು ಬೋರ್ಡ್ ಆಫ್ ಡೈರೆಕ್ಟರ್‌ರವರು ನೀಡಿರುವ ಪ್ರತಿನಿಧಿಸುವ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ನಿಗದಿತ ಟೆಂಡರ್ ಫಾರಂ ಜೊತೆಯಲ್ಲಿ ಲಗತ್ತಿಸಿ ಸಲ್ಲಿಸಬೇಕು. **7.** ಯಶಸ್ವಿಯಾಗದ ಬಿಡ್‌ದಾರರ ಇ.ಎಂ.ಡಿ. ಹಣವನ್ನು ಹರಾಜು ಪ್ರಕ್ರಿಯೆ ಮುಕ್ತಾಯವಾದ 24 ಗಂಟೆಗಳಲ್ಲಿ ಹಿಂತಿರುಗಿಸಲಾಗುವುದು. ಅಥವಾ ಬ್ಯಾಂಕಿನ ಮುಂದಿನ ದಿನದ ಕೆಲಸ ಮುಕ್ತಾಯವಾಗುವುದರೊಳಗೆ ಹಿಂತಿರುಗಿಸಲಾಗುವುದು. **8.** ಬ್ಯಾಂಕಿನ ಅಧಿಕೃತ ಅಧಿಕಾರಿಯವರ ಮಾಹಿತಿ/ ವಿವೇಚನೆಯಂತೆ ಮೇಲೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಎಲ್ಲಾ ವಿವರಗಳು ಸರಿಯಾಗಿದೆ. **9.** ಯಶಸ್ವಿಯಾದ ಬಿಡ್‌ದಾರರು ಬಿಡ್ ಮೊತ್ತದ ಶೇ.25 ರಷ್ಟು ಹಣವನ್ನು (ಇ.ಎಂ.ಡಿ.ಸೇರಿ) 24 ಗಂಟೆಗಳೊಳಗಾಗಿ ಪಾವತಿಸಬೇಕು. ಉಳಿದ ಶೇ.75 ರಷ್ಟು ಬಿಡ್ ಹಣವನ್ನು 30 ದಿನಗಳೊಳಗಾಗಿ ಪಾವತಿಸಬೇಕು. ಶೇ.25 ರಷ್ಟು ಹಣವನ್ನು ಪಾವತಿ ಮಾಡದಿದ್ದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಬಾಕಿ ಶೇ. 75 ರಷ್ಟು ಹಣವನ್ನು 30 ದಿನಗಳಲ್ಲಿ ಅಥವಾ ಅಧಿಕೃತ ಅಧಿಕಾರಿಯವರು ತಿಳಿಸುವ ದಿನಾಂಕದೊಳಗಾಗಿ ಪಾವತಿಸತಕ್ಕದ್ದು. ಹಣ ಪಾವತಿಸಲು ವಿಫಲರಾದರೆ ಶೇ. 25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಈ ರೀತಿ ಮುಟ್ಟುಗೋಲು ಹಾಕಿಕೊಂಡ ಮೊತ್ತದ ಬಗ್ಗೆಯಾಗಲಿ ಅಥವಾ ತದನಂತರ ಮಾರಾಟ ಮಾಡಲ್ಪಟ್ಟ ಸ್ವತ್ತಿನ ಬಗ್ಗೆಯಾಗಲಿ ಆತ / ಆಕೆಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. **10.** ಯಶಸ್ವಿಯಾದ ಬಿಡ್‌ದಾರರು ಎಲ್ಲಾ ಕಾನೂನು ಬದ್ಧ ಪ್ರಾಸಂಗಿಕ ಖರ್ಚುಗಳಾದ ಮುದ್ರಾಂಕ ಶುಲ್ಕ, ನೊಂದಣಿ ಶುಲ್ಕ, ತೆರಿಗೆ ಬಾಕಿ, ಶಾಸನಬದ್ಧ ಬಾಕಿಗಳು ಹಾಗೂ ಬಿಡ್ ಮೊತ್ತ 50.00 ಲಕ್ಷ ಮೀರಿದ ಪಕ್ಷದಲ್ಲಿ ಸರ್ಕಾರವು ವಿಧಿಸುವ ತೆರಿಗೆ (ಟಿ.ಡಿ.ಎಸ್.) ಯನ್ನು ಬಿಡ್‌ದಾರರೇ ಭರಿಸತಕ್ಕದ್ದು. **11.** ಮಾರಾಟವನ್ನು ಸಕ್ಷಮ ಅಧಿಕೃತ ಅಧಿಕಾರಿಯವರು ದೃಢೀಕರಿಸಿದ ಮೇಲೆ ಮತ್ತು ಪಾವತಿ ನಿಯಮಗಳನ್ನು ಪರಿಪಾಲಿಸಿದ ನಂತರ ಮಾರಾಟದ ಅಧಿಕಾರವನ್ನು ಚಲಾಯಿಸುವ ಅಧಿಕೃತ ಅಧಿಕಾರಿಯವರು ಭದ್ರತಾ ಆಸಕ್ತಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು - 2002ರ ಅನುಬಂಧ 5ರಲ್ಲಿ ಕೊಟ್ಟಿರುವ ನಮೂನೆಯಲ್ಲಿ ಖರೀದಿದಾರರ ಪರವಾಗಿ ಸ್ಥಿರಾಸ್ತಿ ಮಾರಾಟದ ಪ್ರಮಾಣ ಪತ್ರ ನೀಡುವರು. 2. ಮಾರಾಟವನ್ನು "ಹೇಗಿದೆಯೋ ಎಲ್ಲಿದೆಯೋ ಅದೇ ಸ್ಥಿತಿಯಲ್ಲಿ" ಆಸ್ತಿಗಳನ್ನು ಮಾರಾಟ ಮಾಡಲಾಗುವುದು. **12.** ಯಶಸ್ವಿಯಾದ ಬಿಡ್‌ದಾರರ ಹೆಸರಿಗೆ ಮಾತ್ರ ನೊಂದಾಯಿತ / ಮಾರಾಟ ಪ್ರಮಾಣ ಪತ್ರವನ್ನು ನೀಡಲಾಗುವುದು. ಯಶಸ್ವಿಯಾದ ಬಿಡ್‌ದಾರರು ತಮ್ಮ ಭಾವಚಿತ್ರ, ಪ್ಯಾನ್ ಕಾರ್ಡ್ / ಐ.ಡಿ. ಕಾರ್ಡ್ / ಆಧಾರ್ ಕಾರ್ಡ್‌ನ ನಕಲು ಮತ್ತು ಅಗತ್ಯ ದಾಖಲಾತಿಗಳನ್ನು ನೊಂದಣಿಗೆ ಒಂದು ದಿನ ಮುಂಚಿತವಾಗಿ ನೀಡಬೇಕು. **13.** ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಮುಚ್ಚಿದ ಟೆಂಡರ್ ಕಂ ಹರಾಜು ಆಫರ್‌ಗಳನ್ನು ತಿರಸ್ಕರಿಸುವ ಅಥವಾ ಟೆಂಡರ್ ತೆರೆಯುವುದನ್ನು ಮುಂದೂಡುವ ಅಥವಾ ರದ್ದುಪಡಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿರುವರು. ಮುಂಚಿತವಾಗಿ ಸೂಚನೆ ನೀಡದೆ ತನ್ನ ತೀರ್ಮಾನದಂತೆ ಜಾಹೀರಾತಿನ / ಮಾರಾಟದ ಯಾವುದೇ ನಿಯಮಗಳು ಮತ್ತು ನಿಬಂಧನೆಗಳನ್ನು ಮಾರ್ಪಾಡು ಮಾಡುವ ಹಕ್ಕನ್ನು ಸಹ ಅಧಿಕೃತ ಅಧಿಕಾರಿಯವರು ಕಾಯ್ದಿರಿಸಿಕೊಂಡಿರುತ್ತಾರೆ. **14.** ಇತರೆ ಯಾವುದೇ ತೆರಿಗೆ ಸೇರಿದಂತೆ ಸ್ವತ್ತಿನ ಮೇಲೆ ಬಾಕಿ ಇರುವ ತೆರಿಗೆಗಳು / ಶಾಸನಬದ್ಧ ಬಾಕಿಗಳು, ಖರ್ಚು-ವೆಚ್ಚಗಳಾದ ವರ್ಗಾವಣೆ ಬಾಕಿಗಳು, ಮುದ್ರಾಂಕ ನೊಂದಣಿ ಶುಲ್ಕಗಳು ಇತ್ಯಾದಿಯನ್ನು ಖರೀದಿದಾರರೆ ಭರಿಸಬೇಕು. **15.** ಹರಾಜಿನ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವೆಚ್ಚಗಳು, ಆಧಾರ ಋಣಭಾರಗಳು, ಸ್ವತ್ತಿನ ಕರಗಳು, ಸ್ವತ್ತಿನ ಅಳತೆ ಮತ್ತು ಚಕ್ಕುಬಂದಿ, ಸರ್ಕಾರದ ಯಾವುದೇ ಬಾಕಿಗಳು ಅಥವಾ ಇತರೆ ಯಾವುದೇ ವ್ಯಕ್ತಿಗಳ ಬಾಕಿಗಳಿಗೆ ಬ್ಯಾಂಕು ಅಥವಾ ಅಧಿಕೃತ ಅಧಿಕಾರಿಗಳು ಜವಾಬ್ದಾರರಲ್ಲ. **16.** ಸ್ವತ್ತಿನ ಪರಿಶೀಲನೆಗೆ ಮತ್ತು ಯಾವುದೇ ಮಾಹಿತಿಗಾಗಿ ಆಸಕ್ತಿಯುಳ್ಳ ಬಿಡ್‌ದಾರರು ಬ್ಯಾಂಕಿನ ಅಧಿಕೃತ ಅಧಿಕಾರಿಯವರನ್ನು/ ಆಯಾ ಶಾಖೆಯ ವ್ಯವಸ್ಥಾಪಕರನ್ನು ಶಾಖೆಯ ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. **17.** ಮೇಲ್ಕಂಡ ಸ್ಥಿರಾಸ್ತಿಗಳನ್ನು ಬಿಡಿಬಿಡಿಯಾಗಿ ಅಥವಾ ಒಟ್ಟಾಗಿ ಮಾರಾಟ ಮಾಡುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ.

ಸಹಿ/-
ಅಧಿಕೃತ ಅಧಿಕಾರಿ /ಪ್ರಧಾನ ವ್ಯವಸ್ಥಾಪಕರು,
ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.,
ಹೊಸದುರ್ಗ. ಶಾಖೆ: ಭದ್ರಾವತಿ.

ಸ್ಥಳ: ಹೊಸದುರ್ಗ.
ದಿನಾಂಕ: 30.12.2024

ಸ್ಥಳೀಯರಿಗೆ ಸುಂಕ ವಿನಾಯಿತಿ: ಸಂಸದ ಕೋಟಾ

ಉಡುಪಿ: ಉಡುಪಿ ಜಿಲ್ಲೆಯ ರಾ.ಹೆದ್ದಾರಿ ಸಾಸ್ತಾನ ಸುಂಕ ವಸೂಲಾತಿ ಕೇಂದ್ರದ ಸ್ಥಳೀಯ ಜನರ ವಾಹನಗಳಿಗೆ ಈ ಹಿಂದೆ ನೀಡುತ್ತಿದ್ದ ಹಾಗೆ ರಿಯಾಯಿತಿಯಲ್ಲಿ ಕಲ್ಪಿಸಬೇಕೆಂದು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಗುತ್ತಿಗೆದಾರರಿಗೆ ತಿಳಿಸಿದರು.

ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಹೆದ್ದಾರಿ ಟೋಲ್ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ಟೋಲ್ ಗಳಲ್ಲಿ ಸ್ಥಳೀಯ ವಾಹನಗಳಿಗೆ ವಿನಾಯಿತಿ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸಾಸ್ತಾನ ಹೆದ್ದಾರಿ ಸುಂಕ ವಸೂಲಾತಿ ಕೇಂದ್ರವು ಸಾಲಿಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇದ್ದು, ಸ್ಥಳೀಯ ಜನರ ಸುಂಕ ವಸೂಲಾತಿ ಕೇಂದ್ರದ ಸುತ್ತಮುತ್ತ ವಾಸವಿದ್ದು, ದೈನಂದಿನ ಪ್ರತಿಯೊಂದು ಕಾರ್ಯಕ್ಕೂ ಟೋಲ್ ದಾಟುವ ಪ್ರಸಂಗ ಒದಗಿ ಬರಲಿದ್ದು, ಪ್ರತಿ ಬಾರಿಯೂ ಶುಲ್ಕ ಪಾವತಿ ಮಾಡಲು ಕಷ್ಟಸಾಧ್ಯವಾಗಿರುತ್ತದೆ. ಕೋಟ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸ್ಥಳೀಯ ಖಾಸಗಿ ಹಾಗೂ ಸಣ್ಣ ವಾಣಿಜ್ಯ ವಾಹನಗಳಿಗೆ ಟೋಲ್ ಶುಲ್ಕ ವಿನಾಯಿತಿ ನೀಡಬೇಕೆಂದು ತಿಳಿಸಿದರು.

ಅಂಡರ್ ಪಾಸ್ ರಸ್ತೆ ಕಾಮಗಾರಿಯನ್ನು ಜನವರಿ 7 ಒಳಗಾಗಿ ಪೂರ್ಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದರು.

ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಲ್ಲಿ ರಸ್ತೆ ಅಪಘಾತಗಳು ಹೆಚ್ಚಾಗಿ ಸಂಭವಿಸುತ್ತಿರುವುದು ಕೇಳಿಬರುತ್ತಿವೆ. ಇವುಗಳಿಗೆ ಕಾರಣ ರಸ್ತೆಯಲ್ಲಿನ ಅವೈಜ್ಞಾನಿಕ ಕೆಲಸ ಕಾರ್ಯಗಳು. ಇವುಗಳಿಗೆ ಕಡಿವಾಣ ಹಾಕಲು ಸರ್ವೀಸ್ ರಸ್ತೆ, ದಾರಿದೀಪ ಅಳವಡಿಕೆ, ರಸ್ತೆಯಲ್ಲಿ ಹೊಂಡ ದುರಸ್ಥಿ, ಜಂಕ್ಷನ್‌ಗಳಲ್ಲಿ ಸೂಚನಾ ಫಲಕ ಅಳವಡಿಸುವುದು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದು

.ಜಿಲ್ಲಾಧಿಕಾರಿ ವಿದ್ಯಾ ಕುಮಾರಿ ಮಾತನಾಡಿ, ಸಾಸ್ತಾನು ಟೋಲ್ ನಲ್ಲಿ ಸುಂಕ ವಿನಾಯಿತಿ ನೀಡಬೇಕೆಂದು ಸ್ಥಳೀಯ ಜನರ ಬೇಡಿಕೆ ಇದೆ. ಈ ವ್ಯಾಪ್ತಿಯ ಸ್ಥಳೀಯ ಸ್ವಂತ ಖಾಸಗಿ ವಾಹನಗಳಿಗೆ ಹಾಗೂ ಸಣ್ಣ ವಾಣಿಜ್ಯ ವಾಹನಗಳಿಗೆ ವಿನಾಯಿತಿ ಕೊಡಲಾಗುವುದು ಲಾರಿ ,ಬಸ್ಸು, ಟಿಪ್ಪರ್‌ಗಳು ರಿಯಾಯಿತಿ ಪಾಸ್ ಪಡೆದು ಸಂಚರಿಸಬಹುದಾಗಿದೆ ಎಂದರು.

ಸಭೆಯಲ್ಲಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಅರುಣ್ ಕೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ತಹಶೀಲ್ದಾರರುಗಳಾದ ಪ್ರತಿಭಾ ಹಾಗೂ ಶ್ರೀಕಾಂತ್ ಉಪಸ್ಥಿತರಿದ್ದರು.

ಮೊಬೈಲ್ ಮಾಲಿಕರಿಗೆ ಹಸ್ತಾಂತರ

ಉಡುಪಿ: ಉಡುಪಿ ನಗರ ಠಾಣಾ ವ್ಯಾಪ್ತಿಯಲ್ಲಿ ಕಳೆದೆರಡು ತಿಂಗಳಲ್ಲಿ ಕಳವಾದ ಮೊಬೈಲ್ ಗಳನ್ನು ಪತ್ತೆಹಚ್ಚಿದ ಪೊಲೀಸರು ಸೋಮವಾರ ನಗರ ಠಾಣೆಯಲ್ಲಿ ವಾರುಸುದಾರರಿಗೆ ಹಸ್ತಾಂತರಿಸಿದರು. ಡಿವೈಎಸ್ಪಿ ಪ್ರಭು ಡಿ.ಟಿ. ಸುಮಾರು 3,53,400 ರೂ. ಮೌಲ್ಯದ 18 ಸ್ಮಾರ್ಟ್ ಮೊಬೈಲ್‌ಗಳನ್ನು ಅದರ ಮಾಲಿಕರಿಗೆ ಹಸ್ತಾಂತರಿಸಿದರು.ಬಳಿಕ ಮಾತನಾಡಿದ ಅವರು, ಮೊಬೈಲ್ ಕಳವಾದ ತಕ್ಷಣ ಇ ಲಾಸ್ಟ್ ಆಪ್ ಅಥವಾ ಸಿಇಐಆರ್ ಪೋರ್ಟಲ್‌ಗೆ ಮೊಬೈಲ್ ನ ಬಗ್ಗೆ ಸರಿಯಾದ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕು. ಅಲ್ಲಿಂದ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಕಳವಾದ ಮೊಬೈಲ್ ಬಗ್ಗೆ ಮಾಹಿತಿ ರವಾನೆಯಾಗಲಿದೆ. ಅಲ್ಲಿ ತಜ್ಞರು ಕಳವಾದ ಮೊಬೈಲ್ ಗಳನ್ನು ಟ್ರಾಕ್ ಮಾಡಿ ಪತ್ತೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ನಗರಠಾಣೆಯ ಇನ್ಸ್‌ಪೆಕ್ಟರ್ ರಾಮಚಂದ್ರ ನಾಯಕ್, ಎಸ್ಸೈಗಳಾದ ಪುನೀತ್ ಕುಮಾರ್ ಬಿ.ಇ., ವೀರಣ್ಣ ಶಿರಗುಂಪಿ, ಭರತೇಶ್, ಗೋಪಾಲಕೃಷ್ಣ ಜೋಗಿ ಮತ್ತು ತಾಂತ್ರಿಕ ಸಿಬ್ಬಂದಿ ವಿನಯಕುಮಾರ್ ಉಪಸ್ಥಿತರಿದ್ದರು.

ಸೈಬರ್ ವಂಚಕರ ವಿರುದ್ಧ ಎಚ್ಚರ ವಹಿಸಿ

ಮಂಗಳೂರು: ಸೈಬರ್ ವಂಚಕರು ಹೊಸ ವರ್ಷದ ಸಂದರ್ಭ ಬಳಸಿಕೊಂಡು ವಂಚಿಸುವ ಸಾಧ್ಯತೆ ಇದೆ. ಹಾಗಾಗಿ ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಮಂಗ ಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗ ರ್ವಾಲ್ ಮನವಿ ಮಾಡಿ ದ್ದಾರೆ. ಹೊಸ ವರ್ಷಕ್ಕೆ ಶುಭಾಶಯವನ್ನು ಕೋರುವ ಲಿಂಕ್‌ಗಳನ್ನು ಮೊಬೈಲ್‌ಗೆ ಕಳುಹಿಸಿ ಮೊಬೈಲ್‌ನ್ನು ಹ್ಯಾಕ್ ಮಾಡುವ ಸಾಧ್ಯತೆ ಇದೆ. ಮೊಬೈಲ್ ಹ್ಯಾಕ್ ಮಾಡಿದ ಅನಂತರ ಆ ಮೊಬೈಲ್‌ನಿಂದ ಸಾಮಾಜಿಕ ಜಾಲತಾಣಗಳ ಮೂಲಕ ಹಾನಿಕಾರಕ ಲಿಂಕ್ ಮತ್ತು ಎಪಿಕೆ ಫೈಲ್‌ಗಳನ್ನು ದೊಡ್ಡ ಮಟ್ಟದಲ್ಲಿ ಶೇರ್ ಮಾಡುವ ಸಾಧ್ಯತೆ ಇರುತ್ತದೆ. ಸಾರ್ವಜನಿಕರು ಈ ರೀತಿಯ ಹೊಸ ವರ್ಷದ ಶುಭಾ ಶಯ ಕೋರುವ ಯಾವುದೇ ಸಂದೇಶ ಸ್ವೀಕರಿಸಿ ಕೊಂಡರೆ ಅದನ್ನು ಕೂಡಲೇ ಡಿಲೀಟ್ ಮಾಡಬೇಕು. ಒಂದು ವೇಳೆ ಗ್ರೂಪ್‌ಗಳಿಗೆ ಪೋಸ್ಟ್ ಮಾಡಿದ್ದರೆ ಅಡ್ಮಿನ್‌ಗಳು ಫೈಲ್ ಗಳನ್ನು ಡಿಲೀಟ್ ಮಾಡಬೇಕು. ಯಾವುದೇ ಸೈಬರ್ ಅಪರಾಧಕ್ಕೆ ಒಳಗಾದರೆ ಕೂಡಲೇ 1930ಗೆ ಕರೆ ಮಾಡಬೇಕು ಎಂದು ಸೂಚಿಸಿದ್ದಾರೆ.

ಇಬ್ಬರು ಯುವಕರು ನೀರು ಪಾಲು

ಮುಲ್ಕಿ: ಸಮುದ್ರ ಸ್ನಾನಕ್ಕೆ ತೆರಳಿದ್ದ ಇಬ್ಬರು ಯುವಕರು ನೀರು ಪಾಲಾದ ಘಟನೆ ಮುಲ್ಕಿ ಹೆಜಮಾಡಿ ಸಮುದ್ರ ತೀರದಲ್ಲಿ ಬೆಳಿಗ್ಗೆ ನಡೆದಿದೆ. ಹೆಜ ಮಾಡಿಯ ಅಕ್ಷಯ್ ಮತ್ತು ಅಮನ್ ಮೃತಪಟ್ಟವರು. ಹೆಜಮಾಡಿ ಸಮು ದ್ರಕ್ಕೆ ಸ್ನಾನಕ್ಕೆಂದು ತೆರಳಿದ್ದರು. ಈ ವೇಳೆ ಸಮುದ್ರದಲೆಗಳ ಸೆಳೆತಕ್ಕೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಆ ಪೈಕಿ ನಾಲ್ವರನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಆದರೆ ಇನ್ನುಳಿದ ಇಬ್ಬರನ್ನು ಜೀವ ಉಳಿಸಲು ಸಾಧ್ಯವಾಗಿಲ್ಲ.

ಪರಿಶಿಷ್ಟರಿಗೆ ಅರಣ್ಯ ಹಕ್ಕು ಪತ್ರ: ದಸಂಸ

ಚಿಕ್ಕಮಗಳೂರು: ಕಳೆದ ಎರಡು ದಶಕಗಳಿಂದ ಪರಿಶಿಷ್ಟರಿಗೆ ಮೂಲ ಅರಣ್ಯ ಹಕ್ಕುಪತ್ರ ವಿತರಿಸಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಮುಖಂಡರು ಸೋಮವಾರ ಜಿಲ್ಲಾಧಿಕಾರಿ ಸಿ.ಎನ್.ಮೀನಾ ನಾಗರಾಜ್ ರಿಗೆ ಮನವಿ ಸಲ್ಲಿಸಿದರು.

ಈ ಕುರಿತು ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ಬಿಳೇಕಲ್ಲು ಬಾಲಕೃಷ್ಣ ಕಳಸ ತಾಲ್ಲೂಕಿನ ತನು ಡಿ ಗ್ರಾಮದಲ್ಲಿ 34 ಪರಿಶಿಷ್ಟ ಕುಟುಂಬಗಳು ಅರ್ಜಿ ಸಲ್ಲಿಸಿದ ಬಳಿಕ ಹಕ್ಕುಪತ್ರ ವಿತರಿಸದಿರುವ ಕಾರಣ ನಿವಾಸಿಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದರು. ಅರಣ್ಯ ಹಕ್ಕುಪತ್ರಕ್ಕಾಗಿ ಕಳೆದ 2001 ಇಸವಿಯಲ್ಲಿ ಫಾರಂ.53/57 ಹಾಗೂ 94ಸಿ ನಲ್ಲಿ ಅರ್ಜಿ ಸಲ್ಲಿಸ ಲಾಗಿದೆ. ಈ ನಡುವೆಯು 34 ಕುಟುಂಬಕ್ಕೆ ಯಾವುದೇ ತರಹದ ಹಕ್ಕುಪತ್ರ ವಿತರಿಸಿಲ್ಲ. ಈ ಬಗ್ಗೆ ಅಧಿಕಾರಿಗಳು ಅನೇಕ ಬಾರಿ ಅರ್ಜಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.ಹೀಗಾಗಿ ಜಿಲ್ಲಾಧಿಕಾರಿ ಉಳಿದ 34 ಕುಟುಂಬಗಳಿಗೆ ಕೂಡಲೇ ಅರಣ್ಯ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು. ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಪ್ರಸನ್ನ, ಕಳಸ ಸಂಚಾಲಕ ವಸಂತ್, ಮುಖಂಡರಾದ ರಘು, ಸೀನಾ, ಲಕ್ಷ್ಮಣ್ ಮತ್ತಿತರರಿದ್ದರು.

ಬಸವಣ್ಣ ತತ್ವ ಹೊಸ ಪೀಳಿಗೆಗೆ ಪರಿಚಯಿಸಿ

ಚಿಕ್ಕಮಗಳೂರು: ವಿಶ್ವಗುರು ಬಸವಣ್ಣ ಹಾಗೂ ಸ್ವಾಮಿ ವಿವೇಕಾನಂದರ ವಿಚಾಧಾರೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಿದಾಗ ಅವರ ಭವಿಷ್ಯ ಉಜ್ವಲಗೊಳ್ಳುತ್ತದೆ ಎಂದು ಶಾಸಕ ಎಚ್.ಡಿ ತಮ್ಮಯ್ಯ ಅಭಿಪ್ರಾಯಿಸಿದರು.

ಅವರು ಕಲ್ಯಾಣ ನಗರದ ಬಸವಮಂದಿರ ಬಸವತತ್ವ ಪೀಠದಲ್ಲಿ ಶಿವಾನುಭವ ಗೋಷ್ಠಿ-41 ಶಿವಶರಣ ಚನ್ನಯ್ಯನವರ ಸ್ಮರಣೆ ಕಾರ್ಯಕ್ರಮದಲ್ಲಿ ಕಲ್ಯಾಣ ದಿನದರ್ಶಿನಿ ಬಿಡುಗಡೆ ಮಾಡಿ ಮಾತನಾಡಿದರು. ಯುವಪೀಳಿಗೆ ಈ ಇಬ್ಬರು ದಾರ್ಶನಿಕರ ವಿಚಾರ ಧಾರೆ ದಿನಕ್ಕೊಂಡು ಪುಟ ಓದಿದರೆ ಸಾಕು ಉತ್ತಮ ಪ್ರಜೆಯಾಗಿ ರೂಪುಗೊಳ್ಳುತ್ತಾರೆ. 12ನೇ ಶತಮಾನದಲ್ಲಿ ಬಸವಣ್ಣ ಹೇಳಿದ ಕಾಯಕವೇ ಕೈಲಾಸ ಎಂಬ ನುಡಿ ಅಂದಿಗೂ ಇಂದಿಗೂ ಪ್ರಸ್ತುತ ಎಂದರು. ಮಾರ್ಚ್ 1 ರಂದು ಬಸವ ಮಂದಿರದ ನೂತನ ಕಟ್ಟಡ 5 ಜಗದ್ಗುರುಗಳಿಂದ ಉದ್ಘಾಟನೆಯಾಗುತ್ತಿದ್ದು, ಈ ಸಂದರ್ಭದಲ್ಲಿ ಮಠದ ಸದ್ಭಕ್ತರು ಫೆ.28 ರಿಂದಲೇ ಮಠದ ಎಲ್ಲಾ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಯಾವುದೇ ಧಾರ್ಮಿಕ-ಸಾಮಾಜಿಕ ಕೇಂದ್ರಗಳಲ್ಲಿ ಅನ್ನ, ಅಕ್ಷರ, ವಸತಿ ಉಚಿತವಾಗಿ ಅಬಲರಿಗೆ ನೀಡುತ್ತಿದ್ದಾರೆಂದರೆ ಶರಣ ಪರಂಪರೆಯ ಈ ಮೌಲ್ಯಗಳ ಪ್ರೇರಣೆಯೇ ಅದಕ್ಕೆ ಕಾರಣವೆಂದರೆ ಅತಿಶಯೋಕ್ತಿಯೇನಲ್ಲ ಎಂದು ಹೇಳಿದರು.

ಬಸವತತ್ವ ಪೀಠದ ಡಾ. ಬಸವ ಮರುಳಸಿದ್ಧ ಸ್ವಾಮೀಜಿ ಆಶೀರ್ವಚನ ನೀಡಿದರು. ಕನ್ನಡದ ಪೂಜಾರಿ ಹಿರೇಮಗಳೂರು ಕಣ್ಣನ್, ಬಿ.ಬಿ. ಚನ್ನಬಸವೇಗೌಡ, ಎಂ.ಎಸ್. ನಿರಂಜನ್, ನಿವೃತ್ತ ಆಯುಕ್ತ ನಾಗಭೂಷಣ್ ಮತ್ತಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಕಮಲ ತೊರೆದು ಕೈ ಹಿಡಿದ ಗ್ರಾಪಂ ಸದಸ್ಯ

ಭದ್ರಾವತಿ: ಕೂಡ್ಲಿಗೆರೆ ಗ್ರಾ ಪಂ ಸದಸ್ಯರು ಹಾಗೂ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ರುದ್ರೇಶ ಆರ್.ಎನ್ ಸ್ನೇಹಿತರ ಹಾಗೂ ಹಿತೈಷಿಗಳ ಕೋರಿಕೆ ಮೇರೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿವುದಾಗಿ ತಿಳಿಸಿದ್ದಾರೆ. ಶಾಸಕ ಬಿ.ಕೆ. ಸಂಗಮೇಶ್ವರ್ ನೇತೃತ್ವದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಗೊಂಡರು. ಈ ಸಂದರ್ಭದಲ್ಲಿ ಬಗರ್ ಹುಕ್ಕುಂ ಸಮಿತಿ ಅಧ್ಯಕ್ಷ ಎಸ್ ಮಣಿಶೇಖರ್ ಸೇರಿದಂತೆ ಮುಖಂಡರಿದ್ದು ಪಕ್ಷಕ್ಕೆ ಬರಮಾಡಿಕೊಂಡರು.

ಅಕ್ರಮ: 1.36 ಲಕ್ಷರು. ಮದ್ಯದ ಬಾಟಲಿ ವಶ

ಶಿವಮೊಗ್ಗ: ಅಕ್ರಮವಾಗಿ ಸಾಗಿಸುತ್ತಿದ್ದ 30.6 ಲೀಟರ್ (170 ಬಾಟಲ್) ಮದ್ಯವನ್ನು ಶಿವಮೊಗ್ಗ ಅಬಕಾರಿ ಉಪ ಆಯುಕ್ತರ ತಂಡ ವಶಕ್ಕೆ ಪಡೆದಿದೆ. ಸವಳಂಗ ರಸ್ತೆಯ ಫ್ಲೈಓವರ್ ಬಳಿ ದೊಡ್ಡ ಸೂಟ್‌ಕೇಸ್ ಒಂದರಲ್ಲಿ ಚನ್ನಗಿರಿ ತಾಲೂಕಿನ ನಲ್ಲೂರು ಅಸ್ತಾಪಾನ ಹಳ್ಳಿಯ ಹರೀಶ್ ಮತ್ತು ಶಿವು ಎಂಬ ಯುವಕರು ಅಕ್ರಮವಾಗಿ ಸ್ಪ್ಲೆಂಡರ್ ಬೈಕ್‌ಲ್ಲಿ (ಕೆಎ 17, 0728) ಮದ್ಯ ಸಾಗಿಸುತ್ತಿರು ವಾಗ ಖಚಿತ ಮಾಹಿತಿ ಮೇರೆಗೆ ಅಬಕಾರಿ ನಿರೀ ಕ್ಷಕರಾದ ಹನುಮಂತಪ್ಪನವರ ತಂಡ ಅವರನ್ನು ಬಂಧಿಸಿ ಮದ್ಯದ ಬಾಟಲಿಗಳನ್ನು ವಶಕ್ಕೆ ಪಡೆದಿದೆ. ಇದರ ಮೌಲ್ಯ ಸುಮಾರು 1.36 ಲಕ್ಷ ರು.ಗಳು ಎಂದು ಅಬಕಾರಿ ಉಪಾಯುಕ್ತರಾದ ಸುಮಿತಾ ಮಾಹಿತಿ ನೀಡಿದ್ದಾರೆ.

26ನೇ ವರ್ಷದ ಶಕ್ತಿ ದೇವತೆಗಳ ಸಮಾಗಮ

ಶಿವಮೊಗ್ಗ : ವಿಶ್ವಹಿಂದೂ ಪರಿಷತ್, ಶಕ್ತಿ ದೇವತೆಗಳ ಸಮಾಗಮ ಸಮಿತಿ ಶಿವಮೊಗ್ಗ ವತಿಯಿಂದ 26ನೇ ವರ್ಷದ ಶಕ್ತಿ ದೇವತೆಗಳ ಸಮಾಗಮ ಕೋಟೆ ರಸ್ತೆಯ ಶ್ರೀಸೀತಾರಾಮಾಂಜನೇಯರ ದೇವಸ್ಥಾನದಲ್ಲಿ ನಡೆಯಿತು.ಪ್ರತಿ ದೇವತೆಯ ಭಕ್ತಾದಿಗಳು ಹಬ್ಬದ ರೀತಿ ಯಲ್ಲಿ ಸಡಗರ ಸಂಭ್ರಮದಿಂದ ಮೆರವಣಿಗೆ ಯಲ್ಲಿ ತಮ್ಮ ದೇವರುಗಳೊಂದಿಗೆ ಕೋಟೆ ಸೀತಾರಾ ಮಂಜ ನೆಯ ದೇವಸ್ಥಾನಕ್ಕೆ ಆಗಮಿಸಿದರು. ಭಕ್ತಾದಿಗಳು ಸಾಲುಗಟ್ಟಿ ಮಡಲಕ್ಕಿ ಸಮರ್ಪಿಸಿ ದೇವರ ದರ್ಶನ ಪಡೆದರು.ಸಮಾಗಮ ಪೂಜೆ, ಭಜನೆ ಹಾಗೂ ಅನ್ನ ಪೂರ್ಣೇಶ್ವರಿ ಆರಾಧನೆ, ಮಡಿಲಕ್ಕಿ ಸಮರ್ಪಣೆ ಮಹಾ ಮಂಗಳರಾತಿ ದೀಪ ರಾಧನೆ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ವಿಶ್ವಹಿಂದೂ ಪರಿಷತ್ ಜಿಲ್ಲಾ ಧ್ಯಕ್ಷರಾದ ಜೆ. ಆರ್.ವಾಸುದೇವ್, ಸಮಿತಿಯ ಪ್ರಮು ಖರಾದ ನಾರಾಯಣ ವರ್ಣೇಕರ್, ಆನಂದರಾವ್ ಜಾಧವ್, ಅರವಿಂದರಾವ್ ಜಾಧವ್, ಉಚ್ಚಂಗಪ್ಪ, ಅಚರ್ಕರಾದ ರಾಮಪ್ರಸಾದ್, ಮತ್ತಿತರರು ಇದ್ದರು.

ಸಹಕಾರ ಸಂಘಕ್ಕೆ 13 ನಿರ್ದೇಶಕರ ಆಯ್ಕೆ

ಸೊರಬ:ಪಟ್ಟಣದಲ್ಲಿ ಶತಮಾನ ಕಂಡಿರುವ ಶ್ರೀರಂಗನಾಥ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ 13 ನಿರ್ದೇಶಕರ ಆಯ್ಕೆ ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು. ಸಂಘದ ಬಿಸಿಎಂ ಎ ಕ್ಷೇತ್ರದಿಂದ ಡಿ. ಎಸ್. ಪ್ರಸನ್ನಕುಮಾರ್ ದೊಡ್ಮನೆ, ಮಹಿಳಾ ಮೀಸಲು ಕ್ಷೇತ್ರದಿಂದ ಸುಜಾತಾ ಜೋತಾಡಿ, ಸರಸ್ವತಿ ನಾವುಡಾ ಹಾಗೂ ಎಸ್‌ಟಿ ಕ್ಷೇತ್ರದಿಂದ ಎನ್. ಬಸವಂತಪ್ಪ ಸೇರಿ ನಾಲ್ವರು ಅವಿ ರೋಧವಾಗಿ ಆಯ್ಕೆಯಾಗಿದ್ದರು. ಉಳಿದ 9 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಕೃಷ್ಣಮೂ ರ್ತಿ ಭಾವೆ, ಎಲ್. ಗಿರೀಶ್, ಜೆ.ಎಸ್. ನಾಗರಾಜ ಜೈನ್, ಎಲ್. ವೆಂಕಟೇಶ್, ಡಿ.ಎಸ್. ಶಂಕರ್ ಶೇಟ್, ಶ್ರೀಧರ್ ವಿ. ಶೇಟ್, ಎಚ್.ಆರ್. ಶ್ರೀಹರ್ಷ, ಎಸ್ಸಿ ಮೀಸಲು ಕ್ಷೇತ್ರದಿಂದ ಕೆ.ಪಿ. ಶ್ರೀಧರ ನೆಮ್ಮದಿ, ಬಿಸಿಎಂ ಬಿ ಕ್ಷೇತ್ರದಿಂದ ಸಿ. ರಾಜಶೇಖರ ಚುನಾಯಿತರಾದರು. ಚುನಾವಣಾಧಿಕಾರಿಯಾಗಿ ಎನ್. ಷಣ್ಮುಖಾಚಾರ್, ಸಹಾಯಕ ಚುನಾವಣಾಧಿಗಳಾ ಗಿರತ್ನಾ, ರಮೇಶ್, ಬಸವಂತಪ್ಪ ಗುರ್ಕಿ ಕಾರ್ಯ ನಿರ್ವಹಿಸಿದರು.

{ ಪ್ರಕಾಶ್ ರೈ } ಹಿರಿಯ ಚಿತ್ರ ನಟ

ಇದು ಕೇವಲ 23 ಹಳ್ಳಿಗಳ ಭೂ ಸ್ವಾಧೀನ ಸಮಸ್ಯೆ ಅಲ್ಲ. ಈ ಹೋರಾಟದ ಗೆಲುವು ಇಡೀ ಸ್ವಾಧೀನ ಪ್ರತಿಕ್ರಿಯೆಯನ್ನೇ ಬದಲಿಸಬೇಕು. ಸ್ವಾಧೀನ ಮಾಡಿ ನೀವು ಭೂಮಿ ಕೊಡುತ್ತಿರುವುದು ಭವಿಷ್ಯದ ಬಂಡವಾಳಶಾಹಿಗಳಿಗೆ. ಅವರು ಮರ ನೋಡದೆ ತೆಂಗಿನ ಕಾಯಿ ಕೀಳುತ್ತಾರೆ, ಗಿಡ ನೋಡದೇ ದೇವರಿಗೆ ಹೂವು ಮುಡಿಸುತ್ತಾರೆ. ಭತ್ತ ನೋಡದೆ ಅನ್ನ ಉಂಡು, ರಾಗಿ ನೋಡದೆ ಮುದ್ದೆ ಹಿಚುಕುತ್ತಾರೆ.

ಸರ್ವಾಧ್ಯಕ್ಷರಾಗಿ ಸಾಹಿತಿ ಡಾ.ಜೆ.ಕೆ. ರಮೇಶ್ | ಕಸಾಪ ಕಾರ್ಯಕಾರಿ ಸಮಿತಿ ಆಯ್ಕೆ

ಜಿಲ್ಲಾ ಸಾಹಿತ್ಯ ಸಮ್ಮೇಳನ ಫೆ.6ರಿಂದ

ಶಿವಮೊಗ್ಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಫೆ.6,7 ರಂದು 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಡಿಸಲಾಗುತ್ತಿದ್ದು, ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿ ಡಾ.ಜೆ.ಕೆ.ರಮೇಶ್ ಅವರನ್ನು ಆಯ್ಕೆ ಮಾಡಲಾಗಿದೆ.

ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಹಿರಿತನ, ಸಾಹಿತ್ಯ ಸಾಧನೆ, ಕಸಾಪ ಸಂಘಟನೆಗೆ ಅವರ ಸೇವೆ ಎಲ್ಲವನ್ನೂ ಅವಲೋಕಿಸಿ ಡಾ. ಜೆ.ಕೆ.ರಮೇಶ್ ಹೆಸರು ಅಂತಿಮ ಗೊಳಿಸಲಾಯಿತು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಡಿ. ಮಂಜುನಾಥ ತಿಳಿಸಿ ದ್ದಾರೆ.

ಸಮ್ಮೇಳನದಲ್ಲಿ ಏರ್ಪಡಿಸುವ ಗೋಷ್ಠಿಗಳು, ತಾಲೂಕು, ಹೋಬಳಿ ಸಮಿತಿಗಳು ತಮ್ಮ ವ್ಯಾಪ್ತಿಯ ಸಾಹಿತ್ಯ, ಸಾಂಸ್ಕೃತಿಕ ಪ್ರತಿಭೆಗಳ ಮಾಹಿತಿ ನೀಡಲು ಕೇಳಲಾಗಿತ್ತು. ಮಾಹಿತಿ ಕುರಿತು ಪರಿಶೀಲನೆ ಮಾಡಿ ಅವಕಾಶ ಕಲ್ಪಿಸುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ನೋಂದಣಿ ಆರಂಭ:
ಸಮ್ಮೇಳನಕ್ಕೆ ನಾಲ್ಕು ಸಾವಿರ ಪ್ರತಿನಿಧಿಗಳ ನೋಂದಣಿ ಕಾರ್ಯ ಮಾಡಬೇಕು. ಪ್ರತಿ ನಿಧಿ ಶುಲ್ಕ ರು. ಎರಡು ನೂರು ನಿಗದಿ ಮಾಡಲಾಗಿದ್ದು. ಹೋಬಳಿ, ತಾಲೂಕು, ಜಿಲ್ಲಾ ಸಮಿತಿ ಪದಾಧಿಕಾರಿಗಳು ಪ್ರತಿನಿಧಿ ನೋಂದಣಿಗೆ ಸಹಕರಿಸಲು ಕೋರಲಾಯಿತು. ಪ್ರತಿನಿಧಿಗಳಿಗೆ ಎರಡು ದಿನ ಊಟ, ತಿಂಡಿ, ಕಾಫಿ, ಟೀ ಜತೆಯಲ್ಲಿ ಉತ್ತಮ ಕಾರ್ಯಕ್ರಮ ವ್ಯವಸ್ಥೆ ಮಾಡಲಾಗುವುದು. ಸಾವಿರಾರು ಸಂಖ್ಯೆಯಲ್ಲಿರುವ ಕಸಾಪ ಸದಸ್ಯರು, ಅಭಿಮಾನಿಗಳು, ಕನ್ನಡದ ಮನಸ್ಸುಗಳನ್ನು ಸಂಪರ್ಕ ಮಾಡಿ ಪ್ರತಿನಿಧಿ ಗಳನ್ನು ನೋಂದಾಯಿಸಿಕೊಳ್ಳಲು ತೀರ್ಮಾನ ಮಾಡಲಾಯಿತು. ನೋಂದಣಿಗೆ ರಶೀದಿ, ವಿತರಿಸಲಾಯಿತು.

ಪುನರ್ ರಚನೆ :
ಎಲ್ಲಾ ತಾಲೂಕುಗಳು ತಮ್ಮ ವ್ಯಾಪ್ತಿಗೆ ಬರುವ ದತ್ತಿ ಕಾರ್ಯಕ್ರಮ ಮಾಡುವುದು. ಕೆಲಸ ಮಾಡದ ನಿರ್ಲಕ್ಷ್ಯ ಮಾಡುವ ಎಲ್ಲಾ ಸಮಿತಿಗಳನ್ನು ಪುನರ್ ರಚಿಸಲಾಗುವುದು ಎಂದು ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ ಎಂದರು.

ಲೆಕ್ಕದ ಸಮಸ್ಯೆ ಚರ್ಚೆ: ಹೊಸನಗರ ತಾಲೂಕಿನ ನೂತನ ಅಧ್ಯಕ್ಷರಾದ ಗಣೇಶ್ ಮೂರ್ತಿ ನಾಗರಕೊಡಿಗೆ ಮತ್ತು ಸೊರಬ ತಾಲೂಕು ಸಮಿತಿ ಅಧ್ಯಕ್ಷರಾದ ಷಣ್ಮುಖಾಚಾರ್ ಮತ್ತು ಪದಾಧಿ ಕಾರಿಗಳನ್ನು ಸ್ವಾಗತಿಸಲಾಯಿತು. ವಿವಿಧ ತಾಲೂಕು ಪರಿಷತ್ತು ಭವನಗಳ ಪ್ರಗತಿ ಕುರಿತು ಚರ್ಚೆ ಮಾಡಲಾಯಿತು. ಮೂರು ವರ್ಷದ ಆಡಿಟ್ ವರದಿ, ಕಾರ್ಯಕ್ರಮ ವರದಿ ಕೇಳಲಾಗಿದೆ. ನಮ್ಮ ನಿಕಟಪೂರ್ವ ಜಿಲ್ಲಾ, ತಾಲ್ಲೂಕು ಅಧ್ಯಕ್ಷರುಗಳು ಲೆಕ್ಕ, ಪತ್ರ ನಿರ್ವಹಿಸದೆ ಬೇಕಾ ಬಿಟ್ಟಿ ಮಾಡಿರುವ ಪರಿಣಾಮ, ಚುನಾವಣೆಯಲ್ಲಿ ನಾವು ವಿಜೇತ ರಾದ ತಕ್ಷಣ ಹಿಂದೆ ಮುಂದೆ ಖಾತೆಯಲ್ಲಿರುವ ಹಣ ಅಕ್ರಮವಾಗಿ ಬಿಡಿಸಿಕೊಂಡು ಲೆಕ್ಕ ನೀಡದೇ ಇರು ವುದು. ಆಡಿಟ್ ಮಾಡಿಸದೇ ಇರುವುದು ಶಿಕಾರಿಪುರ, ಭದ್ರಾವತಿ, ತೀರ್ಥಹಳ್ಳಿ, ಸಾಗರ, ಸೊರಬ ಸೇರಿದಂತೆ ಎಲ್ಲಾ ತಾಲೂಕು ಗಳಲ್ಲಿ ಸಮಸ್ಯೆ ಆಗಿರುವುದನ್ನು ಚರ್ಚೆ ಮಾಡಲಾಯಿತು.

ತಾಲೂಕು ಸಮ್ಮೇಳನ :
ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ನೇತ್ರತ್ವದಲ್ಲಿ ಪ್ರತಿ ತಾಲೂಕು ಸಮ್ಮೇಳನ ಜನವರಿ 14 ರೊಳಗೆ ಮುಗಿಸಿ ಜಿಲ್ಲಾ ಸಮಿತಿಗೆ ಮಾಹಿತಿ ನೀಡಲು ತೀರ್ಮಾನ ಮಾಡಲಾಯಿತು. ಜಿಲ್ಲಾ ಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ಜನವರಿ 17 ರೊಳಗೆ ಏರ್ಪಡಿಸಲು ತೀರ್ಮಾನ ಮಾಡಲಾಯಿತು. ಎಂ. ಎಂ. ಸ್ವಾಮಿ ಹಿಂದಿನ ಸಭೆ ನಡಾವಳಿಗಳನ್ನು ವಾಚಿಸಿ ದರು. ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಗಲಿಕೆಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸ ಲಾಯಿತು. ಸಭೆಯಲ್ಲಿ ಸೊರಬ ನೇಕಾರ ಪ್ರಕಾಶನದ ರಾಮಕೃಷ್ಣ, ಹೊಸನಗರದ ನಟರಾಜ ಶೆಟ್ಟರು, ಕೆ. ಎಸ್. ಮಂಜಪ್ಪ ಇದ್ದರು.

ಜಡ್ಡಿನಗದ್ದೆ ರಮೇಶ ಪರಿಚಯ

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಜಿ.ಕೆ. ರಮೇಶ ಅವರು ಮೂಲತಃ ತೀರ್ಥಹಳ್ಳಿ ತಾಲೂಕು ಜಡ್ಡಿನಗದ್ದೆ ಗ್ರಾಮದವರು. ತೀರ್ಥಹಳ್ಳಿ ಪಟ್ಟಣದ ತುಂಗಾ ಕಾಲೇಜಿನಲ್ಲಿ 35 ವರ್ಷಗಳ ಕಾಲ ಕನ್ನಡ ಪ್ರಾಧ್ಯಾ ಪಕರಾಗಿ ಕಾರ್ಯನಿರ್ವಹಿಸಿರುವ ರಮೇಶ ಎಲೆಮರೆಕಾಯಿ ಸಾಹಿತಿ. ಶಿಷ್ಟ ಹಾಗೂ ಜಾನಪದ ಸಾಹಿತ್ಯದ ಕೃಷಿಯಲ್ಲಿ ಪಳಗಿರುವ ರಮೇಶ ಅವರು 25 ಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದ್ದಾರೆ. ಯಾವುದೇ ಪ್ರಚಾರ ಬಯಸದ ಗುಣದಿಂದಾಗಿಯೇ ಸಾಹಿತ್ಯ ವಲಯದಲ್ಲಿ ಅವರ ಅಪರಿಚಿತರಾಗಿ ಉಳಿಯುವಂತೆ ಮಾಡಿದೆ. ಆದರೆ, ಅವರ ವಿದ್ಯಾ ರ್ಥಿಗಳು ಹಾಗೂ ಮಲೆನಾಡಿನ ಹಿರಿಯ ಸಾಹಿತಿ ಗಳಿಗೆ ರಮೇಶ ಅಚ್ಚುಮೆಚ್ಚಿನ ಮೇಸ್ಟ್ರು ಎಂಬು ದರಲ್ಲಿ ಎರಡು ಮಾತಿಲ್ಲ. ತೀರ್ಥಹಳ್ಳಿ ತಾಲ್ಲುಕು ಕನ್ನಡ ಸಾಹಿತ್ಯ ಪರಿಷ ತ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ದ ರಮೇಶ ಸಾಹಿತ್ಯ ವಲಯದಿಂದ ದೂರ ವಿರವ ಕಾರಣ ಹೆಚ್ಚಿನ ಜನಕ್ಕೆ ಪರಿಚ ಯವಾಗಿಲ್ಲ.
ನಿವೃತ್ತಿಯ ಅನಂತರದಲ್ಲಿ ಜಡ್ಡಿನ ಗದ್ದೆಯಲ್ಲಿ ಕೃಷಿಯಲ್ಲಿ ನಿರತರಾಗಿದ್ದೂ ಸಾಹಿತ್ಯದ ನಂಟನ್ನು ಬಿಟ್ಟಿಲ್ಲ. ಅವರಿಗೆ ಇಬ್ಬರು ಪುತ್ರರು. ಒಬ್ಬ ಪುತ್ರ ಐಎಫ್‌ಎಸ್ ಅಧಿಕಾರಿಯಾಗಿದ್ದಾರೆ.

ಪತ್ರಿಕೋದ್ಯಮದ ಹೃದಯ ಪತ್ರಿಕಾ ವಿತರಕ: ಅರುಣ್

ಪತ್ರಿಕಾ ವಿತರಕರ ಉತ್ಸವ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಡಿ.ಎಸ್.ಅರುಣ್ ಮಾತನಾಡಿದರು.

ಶಿವಮೊಗ್ಗ : ಮಳೆ ಗಾಳಿ, ಚಳಿ ಎನ್ನದೇ ಪ್ರತಿದಿನ ಬೆಳಿಗ್ಗೆ ಪತ್ರಿಕೆಗಳನ್ನು ಓದುಗರ ಮನೆಗೆ ತಲುಪಿಸುವ ಇವರ ವೃತ್ತಿ ಪತ್ರಿಕಾ ರಂಗದ ಹೃದಯ ಎಂದರು ತಪ್ಪಗಲಾರದು ಎಂದು ವಿಧಾನ ಪರಿಷತ್ ಸದಸ್ಯರಾದ ಡಿ.ಎಸ್. ಅರುಣ್ ತಿಳಿಸಿದರು.

ನಗರದ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಶಿವಮೊಗ್ಗ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಪತ್ರಿಕಾ ವಿತರಕರ ಉತ್ಸವ ಮತ್ತು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪತ್ರಿಕಾ ವಿತರಕರ ಒಕ್ಕೂಟದ ಕ್ಯಾಲೆಂಡರ್ ಬಿಡುಗಡೆ ಗೊಳಿಸಿ ಮಾತನಾಡಿದರು.

ಪತ್ರಿಕಾ ವಿತರಕರಿಗೆ ರಾಜ್ಯ ಸರಕಾರ ಪ್ರತ್ಯೇಕವಾಗಿ ಎರಡು ಕೋಟಿ ರು. ಅನುದಾನ ಮೀಸಲಿಟ್ಟಿದೆ. ಅದನ್ನು ವಿತರಕರು ಮತ್ತು ಅವರ ಕುಟುಂಬದವರಿಗೆ ಸದ್ಬಳಕೆ ಆಗಬೇಕಿದೆ. ಆ ನಿಟ್ಟಿನಲ್ಲಿ ವಿತರಕರು ಮತ್ತು ಸರಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಕ್ಷಣಾರ್ಧದಲ್ಲಿ ದೇಶ, ವಿದೇಶಗಳ ಮಾಹಿತಿಗಳು ಲಭಿಸಿದರೂ ನಾವು ಪ್ರತಿಕೆಗಳಲ್ಲಿ ದಿನ ನಿತ್ಯದ ಸುದ್ದಿ ಓದುವುದು ಅವಶ್ಯಕ. ವಿತರಕರು ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆರೋಗ್ಯ ಸಮಸ್ಯೆ ಉಂಟಾದಾಗ ಮಾನಸಿಕವಾಗಿ ಕುಗ್ಗುವ ಸಾಧ್ಯತೆ ಹೆಚ್ಚಿರುತ್ತದೆ. ಚಿಕಿತ್ಸೆ ಗೂ ಹಣಕಾಸಿನ ತೊಂದರೆಗಳನ್ನು ಎದುರಿಸುವರು. ಹಾಗಾಗಿ ವಿತರಕರನ್ನು ಆರೋಗ್ಯ ವಿಮೆ ವ್ಯಾಪ್ತಿಗೆ ಸರಕಾರ ತರಬೇಕು ಎಂದು ಒತ್ತಾಯಿಸಿದರು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾ ಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂ ಟದ ಜಿಲ್ಲಾ ಘಟಕದ ಜಿಲ್ಲಾಧ್ಯಕ್ಷರಾದ ಎನ್.ಮಾಲತೇಶ್ ವಹಿಸಿದ್ದರು.

ಹಿರಿಯ ಪತ್ರಕರ್ತರಿಗೆ ಸನ್ಮಾನ :
ಹಿರಿಯ ಪತ್ರಿಕರ್ತರಾದ ನ.ರಾ.ವೆಂಕಟೇಶ್, ವಿಜಯವಾಣಿ ಸ್ಥಾನಿಕ ಸಂಪಾದಕರ ಚಂದ್ರಶೇಖರ್, ಭಂಡಿಗಡಿ ನಂಜುಂಡಪ್ಪ, ರವೀಂದ್ರನಾಥ್‌ನವರಿಗೆ ಸನ್ಮಾನಿಸಿ ಸಲಾಯಿತು.

ಹಿರಿಯ ಪತ್ರಿಕಾ ವಿತರಕರಿಗೆ ಸನ್ಮಾನ :
ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುಖಾರ್ ಅಹಮದ್(ನಜೀರ್), ಸೀತಾರಾಮ್ ದೇವರಾಜ್ ಶೆಟ್ಟಿ, ತೀರ್ಥಹಳ್ಳಿಯ ನಾಗಭೂಷಣ್, ಶಿಕಾರಿಪುರದ ಹುಲಿಗಿ ಕೃಷ್ಣ, ಭದ್ರಾವತಿ ಜಿ.ಐ.ಮಲ್ಲಿಕಾರ್ಜುನ, ಸೋಮಶೇಖರ್ ಅರಳಿಹಳ್ಳಿ, ವಿನಯ್ ಕುಮಾರ್ ಎಸ್. ವಾಲಿ, ಶಿರಾಳಕೊಪ್ಪದ ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು.
ಸಂದರ್ಭದಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ಶಂಭುಲಿಂಗ, ಸ್ವಾಭಿಮಾನ ಬಣದ ಜಿಲ್ಲಾಧ್ಯಕ್ಷರಾದಕಿರಣ್‌ಕುಮಾರ್,ಒಕ್ಕೂಟದ ಉಪಾಧ್ಯಕ್ಷ ಜಿ.ರಾಮು, ಮತ್ತಿತರರಿದ್ದರು

ಖಾಸಗಿ ಫೈನಾನ್ಸ್‌ನಿಂದ ಮನೆ ಕಳೆದುಕೊಂಡ ಗ್ರಾಪಂ ಸದಸ್ಯೆ

ಭದ್ರಾವತಿ: ಸಾಲದ ಅವಧಿಯಲ್ಲಿ ಗೊಂದಲ ಮೂಡಿದ ಕಾರಣ ಖಾಸಗಿ ಫೈನಾನ್ಸ್ ವೊಂದು ಗ್ರಾಪಂ ಸದಸ್ಯೆಯ ಮನೆಯನ್ನೇ ಲಾಕ್ ಮಾಡಿಕೊಂಡು ಹೋಗಿ ಸದಸ್ಯೆಯ ಕುಟುಂಬವನ್ನ ಬೀದಿಗೆ ತಳ್ಳಿದೆ.

ತಾಲೂಕಿನ ಮೈದೊಳಲು ಗ್ರಾಪಂ ಸದಸ್ಯೆ ಅರ್ಪಿತಾ 2016 ತಮ್ಮ ವಾಸದ ಮನೆ ಮೇಲೆ ಖಾಸಗಿ ಫೈನಾನ್ಸ್ ಬ್ಯಾಂಕ್‌ನಲ್ಲಿ 5 ಲಕ್ಷ ಸಾಲ ಪಡೆದಿದರು. ಫೈನಾನ್ಸ್ ಕಂಪನಿಯವರು ನೀಡಿದ ಗಡುವಿನಂತೆ 5 ವರ್ಷ ಲೋನ್ ಪಾವತಿ ಮಾಡಿದ್ದಾರೆ. ಮನೆ ಸಾಲ ಮುಕ್ತಾಯ ವಾಗುತ್ತಿದೆ ಮತ್ತೇ ಸಾಲ ನೀಡುವುದಾಗಿ ಕೇಳಿದ್ದಾರೆ.

ಅದೇ ಮನೆ ಮೇಲೆ ಹೊಸದಾಗಿ ಲೋನ್ ಕೇಳಲೆಂದು ಬ್ಯಾಂಕಿಗೆ ಹೋದಾಗಿ ಬ್ಯಾಂಕ್ ಸಿಬ್ಬಂದಿ 7 ವರ್ಷಕ್ಕೆ ಲೋನ್ ನೀಡಿರುವುದು ಇನ್ನೂ ಎರಡು ವರ್ಷ ಲೋನ್ ಪಾವತಿ ಮಾಡಬೇಕು ಎಂದಿದ್ದಾರೆ.

ಬೀದಿಗೆ ಬಿದ್ದ ಗ್ರಾಪಂ ಸದಸ್ಯೆ:

ಬ್ಯಾಂಕ್ ಸಿಬ್ಬಂದಿ ಅರ್ಪಿತಳನ್ನು ಮನೆಯಿಂದ ಹೊರ ಕಳಿಸಿ ಗೃಹ ಬಳಕೆಯ ಸಾಮಾನು ಗಳನ್ನು ಹೊರ ಹಾಕಿ ಮನೆ ಬಾಗಿಲಿಗೆ ಸೀಲ್ ಮಾಡಿಕೊಂಡು ಹೋಗಿದ್ದಾರೆ. ಅರ್ಪಿತಾಳ ಅತ್ತೆಯು ಪತಿ ರಾಜಪ್ಪನೊಂದಿಗೆ ದೇವಸ್ಥಾನದಲ್ಲಿದ್ದಾರೆ. ಮನೆಗೆ ಬೀಗಾ ಹಾಕಿದರಿಂದ ದಿಕ್ಕು ಕಾಣದಾದ ಗ್ರಾಪಂ ಸದಸ್ಯೆ ಅಪಿರ್ತಾ ಮನೆ ಮುಂಭಾಗದಲ್ಲೆ ವಾಸ್ತವ್ಯ ಆರಂಭಿಸಿದ್ದಾರೆ.

ದಿಕ್ಕು ಕಾಣದಾದ ಗ್ರಾಪಂ ಸದಸ್ಯೆ ಅಪಿರ್ತಾ ಮನೆ ಮುಂಭಾಗದಲ್ಲೆ ವಾಸ್ತವ್ಯ ಆರಂಭಿಸಿದ್ದಾರೆ.

ಅರ್ಪಿತಾಗೆ ಸಾಲ ಮಂಜೂರು ಮಾಡಿದ ಸಿಬ್ಬಂದಿ ಯನ್ನು ವಿಚಾರಿಸಿದ್ದಾಗ ಸಿಬ್ಬಂದಿಯೂ 5 ವರ್ಷಕ್ಕೆ ಲೋನ್ ನೀಡಿದ್ದಾಗಿ ಹೇಳಿದ್ದಾರೆ. ತಾಂತ್ರೀಕ ಸಮಸ್ಯೆಯಿಂದ ಅವಧಿಯಲ್ಲಿ ವ್ಯತ್ಯಾಸ ವಾಗಿದೆ ಕೆಲ ದಿನಗಳ ನಂತರ ಬಂದು ಕ್ಲಿಯರೆನ್ಸ್ ತೆಗೆದುಕೊಂಡು ಹೊಸದಾಗಿ ಲೋನ್ ಮಾಡಿಸಿ ಕೊಳ್ಳುವಂತೆ ಹೇಳಿ ಕಳಿಸಿದ್ದಾರೆ.

ಇದಾದ ಕೆಲ ದಿನಗಳಲ್ಲೆ ಗ್ರಾಪಂ ಸದಸ್ಯೆ ಅರ್ಪಿತಾಳ ಪತಿ ರಾಜಪ್ಪನಿಗೆ ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ. ದೈವದ ಮೊರೆ ಹೋದ ರಾಜಪ್ಪ ದೇವಸ್ಥಾನವೊಂದರಲ್ಲಿ ವಾಸ್ತವ್ಯ ಹೂಡಿ ಪೂಜಾ ಕೈ ಕಾರ್ಯಗಳನ್ನು ನೆರವೇರಿಸುತ್ತಿದ್ದಾರೆ.

ಕಳೂರು ಕೃಷಿ ಪತ್ತಿನ ಸೊಸೈಟಿ ಚುನಾವಣೆ: ವಿನಯ್‌ಕುಮಾರ್ ತಂಡಕ್ಕೆ ಭಾರಿ ಗೆಲುವು

ಹೊಸನಗರ: ನಗರದ ಪ್ರತಿಷ್ಠಿತ ಸಂಘಗಳಲ್ಲಿ ಒಂದಾಗಿರುವ ಕಳೂರು ಶ್ರೀ ರಾಮೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಮೂರು ಸ್ಥಾನಗಳಿಗೆ ಚುನಾವಣೆ ನಡೆದಿದ್ದು ಮಾಜಿ ಅಧ್ಯಕ್ಷ ದುಮ್ಮ ವಿನಯ್ ಕುಮಾರ್ ತಂಡಕ್ಕೆ ಭರ್ಜರಿ ಜಯ ಲಬೀಸಿದ್ದು ಮುಂದಿನ ಅಧ್ಯಕ್ಷ ಆಯ್ಕೆಗೆ ಸಂಪೂರ್ಣ ಬೆಂಬಲ ಸಿಕ್ಕಿದಂತಾಗಿದೆ.

ಹೊಸನಗರ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ 2025ರಿಂದ 2029ರವರೆಗೆ ಆಡಳಿತ ಚುಕ್ಕಾಣಿ ಹಿಡಿಯಲು ಡಿಸೆಂಬರ್ 29ರಂದು ಚುನಾವಣೆ ನಡೆಸಲಾಗಿದ್ದು 9ಜನ ಸದಸ್ಯರು ಅವಿರೋಧ ಆಯ್ಕೆಯಾಗಿದ್ದರು.

ಕಳೂರು ಸೊಸೈಟಿಗೆ ನಿರ್ದೇಶಕರಾಗಿ ಆಯ್ಕೆಯಾದ ನಿರ್ದೇಶಕರಾದ ಪರಿಶಿಷ್ಟ ಪಂಗಡದಲ್ಲಿ ಈರಮ್ಮ, ಮಹಿಳಾ ಕ್ಷೇತ್ರದಿಂದ ವೇದಾವತಿ, ಹಿಂದುಳಿದ ಪ್ರವರ್ಗದಿಂದ ಹೂವಪ್ಪ, ಸಾಮಾನ್ಯ ಕ್ಷೇತ್ರದಿಂದ ಚಿನ್ನಪ್ಪ, ಸಾಮಾನ್ಯ ಕ್ಷೇತ್ರದಿಂದ ಮಹೇಶ್ವರಪ್ಪ, ಪರಿಶಿಷ್ಟ ಜಾತಿ ಶ್ರೀನಿವಾಸ್ ರೆಡ್ಡಿ, ಹಿಂದುಳಿದ ಪ್ರವರ್ಗ ಬಿಯಿಂದ ವಿರೂಪಾಕ್ಷಪ್ಪ ಮಹಿಳ ಕ್ಷೇತ್ರದಿಂದ ವನಮಾಲ,

ಪ್ರತಿಸ್ಪರ್ಧಿ ವಿರುದ್ಧ ಭರ್ಜರಿ ಗೆಲುವು

ಸಾಮಾನ್ಯ ಕ್ಷೇತ್ರದಿಂದ ವಿನಯ್ ಕುಮಾರ್ ಸಾಲಗಾರ ಕ್ಷೇತ್ರದಲ್ಲಿ ಒಟ್ಟು 313 ಮತವಿದ್ದು 284 ಮತಗಳು ಗುಬ್ಬಿಗಾರವಿಯವರು 239 ಮತಗಳಿಸುವ ಮೂಲಕ ಪ್ರತಿಸ್ಪರ್ಧಿ ಈಶ್ವರಪ್ಪ ವಿರುದ್ಧ ಭರ್ಜರಿ ಗೆಲುವು ಸಾಧಿಸಿದರು. ಸಾಲಗಾರರಲ್ಲದ ಕ್ಷೇತ್ರದಿಂದ ನಿವೃತ್ತ ಸೊಸೈಟಿ ಕಾರ್ಯದರ್ಶಿ ಹೆಚ್ ಶ್ರೀನಿವಾಸ್ ವಿರುದ್ಧ ಕಾಂಗ್ರೇಸ್ ಪಕ್ಷದ ಮಾಜೀ ಬ್ಲಾಕ್ ಅಧ್ಯಕ್ಷ ಬಿ.ಜಿ.ನಾಗರಾಜ್ ರವರು ಸ್ವರ್ಧಿಸಿದ್ದು ಶ್ರೀನಿವಾಸ್‌ರವರಿಗೆ 371 ಹಾಗೂ ನಾಗರಾಜ್‌ರವರಿಗೆ 364 ಮತಗಳು ಬಂದಿದ್ದು 10ಮತಗಳ ಅಂತರದಿಂದ ಹೆಚ್. ಶ್ರೀನಿವಾಸ್‌ರವರು ಜಯಶಾಲಿಯಾಗಿದ್ದಾರೆ.

ಹೆಚ್. ಶ್ರೀನಿವಾಸ್ 10 ಮತಗಳ ಅಂತರದಿಂದ ಜಯಶಾಲಿಯಾಗಿದ್ದು ಚುನಾವಣೆ ಅಧಿಕಾರಿ ವಿನಾಯಕ ನಾವುಡ'ಪತ್ರ ನೀಡುತ್ತಿ ರುವುದು.

ಸಾಮಾನ್ಯ ಕ್ಷೇತ್ರದಿಂದ ಮುರುಳೀದರ ಕೆ.ಆರ್ ಇವ ರೆಲ್ಲರೂ ಅವಿರೋಧ ಆಯ್ಕೆಯಾಗಿದ್ದು ಚುನಾವಣೆ ಮೂಲಕ ವಿನಯ್‌ಕುಮಾರ್ ದುಮ್ಮ, ರವಿ.ಜಿ.ಎಸ್ ಹಾಗೂ ಶ್ರೀನಿವಾಸ್ ಹೆಚ್‌ರವರು ಆಯ್ಕೆಯಾಗಿದ್ದಾರೆ.ಈ ಚುನಾವಣೆಯನ್ನು ಸೊನಲೆ ಶಿಕ್ಷಕರಾದ ವಿನಾಯಕ ನಾವುಡರವರು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ವಿಧಾನ ಪರಿಷತ್ ವ್ಯಾಪ್ತಿಯ ಶಿಕ್ಷಕರ ಸಂಘ ಶೀಘ್ರ:ಹೆಬ್ಬೂರು

ಶಿವಮೊಗ್ಗ: ಕರ್ನಾಟಕ ರಾಜ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ವ್ಯಾಪ್ತಿಯ ಶಿಕ್ಷಕರ ಸಂಘವನ್ನು ನೂತನವಾಗಿ ರಚನೆ ಮಾಡಲು ನಿರ್ಧರಿಸಲಾಗಿದ್ದು, ಇದು ರಾಜ್ಯಮಟ್ಟದಲ್ಲಿ ಸ್ಥಾಪನೆಯಾಗಲಿದೆ ಎಂದು ನಿವೃತ್ತ ಪ್ರಾಂಶುಪಾಲ ಡಾ.ಜಿ.ಆರ್.ಹೆಬ್ಬೂರು ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ರಾಜ್ಯದಲ್ಲಿ ವಿಧಾನ ಪರಿಷತ್‌ನಲ್ಲಿ ಶಿಕ್ಷಕರ ಕ್ಷೇತ್ರಕ್ಕೆ ಆಯ್ಕೆಯಾಗುವವರು ಶಿಕ್ಷಕರಲ್ಲದವರೇ ಇರುತ್ತಾರೆ. ಅವರಿಗೆ ಶಿಕ್ಷಕರ ಸಮಸ್ಯೆಗಳು ಗೊತ್ತಾಗುವುದಾದರು ಹೇಗೆ ಆದ್ದರಿಂದ ಶಿಕ್ಷಕರೇ ಈ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ನಿಯಮವನ್ನು ರೂಪಿಸಬೇಕು. ಇದನ್ನು ಕಾಯ್ದೆಯನ್ನಾಗಿಯೂ ಮಾಡಬೇಕು ಎಂಬ ಹಿನ್ನಲೆಯಲ್ಲಿ ಈ ಸಂಘ ಅಸ್ತಿತ್ವಕ್ಕೆ ಬರಲಿದೆ ಎಂದರು.

2025ರ ಫೆಬ್ರವರಿ ತಿಂಗಳಿನಲ್ಲಿ ಸಂಘ ರಚನೆಗೊಂಡು ನೊಂದಾವಣೆಯಾಗಲಿದ್ದು, ಆಸಕ್ತ ಸರಕಾರಿ, ಅನುದಾನಿತ, ಅನುದಾನಿತ ಶಿಕ್ಷಕ ಬಂಧುಗಳು, ಸಂಘದ ನಿಬಂಧನೆಗಳಿಗೆ ಒಳಪಟ್ಟು ಸ್ಥಾಪನೆಯಾಗಲಿರುವ 2025ರ ಜ.30ರೊಳಗೆ ಮನವಿ ಸಲ್ಲಿಸಿ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು ಎಂದರು.

ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀ ಕರಣ ಮಾಡಿಸುವುದು, ಶಿಕ್ಷಕರ ಕ್ಷೇತ್ರಕ್ಕೆ ನೀಡಿರುವ ಕರ್ನಾಟಕ ರಾಜ್ಯದ ಶಿಕ್ಷಕರ ವಿಧಾನಪರಿಷತ್ ಸದಸ್ಯತ್ವದ ಮಹತ್ವವನ್ನು ಶಿಕ್ಷಕರಿಗೆ ಮನವರಿಕೆ ಮಾಡುವುದು. ಪಿಂಚಣಿರಹಿತ ಶಿಕ್ಷಕರಿಗೆ ಪಿಂಚಣಿ ಕೊಡಿಸುವುದು, ಇತರ ಸೌಲಭ್ಯಗಳನ್ನು ನೀಡುವುದು, 25 ವರ್ಷ ಅನುಭವ ಹೊಂದಿದ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್‌ಗೆ ಶಿಕ್ಷಕರೇ ಒತ್ತಾಯಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಚಂದ್ರಮತಿ, ಮೀನಾಕ್ಷಿ, ಶ್ರೀಧರ್‌ರಾವ್, ಎಂ.ರಂಗನಾಥ್, ಪ್ರವೀಣ್ ಭಂಡಾರಿ, ಆನಂದ್ ಪೂಜಾರಿ, ವಾಣಿಶ್ರೀ, ಡಾ. ರವೀಂದ್ರ ಇದ್ದರು.

ರಾಜ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ವ್ಯಾಪ್ತಿಯ ಶಿಕ್ಷಕರ ಸಂಘವನ್ನು ನೂತ ನವಾಗಿ ರಚನೆ ಮಾಡಲು ನಿರ್ಧರಿಸಿ ಪತ್ರಿಕಾಗೋಷ್ಠಿಯಲ್ಲಿ ನಿವೃತ್ತ ಪ್ರಾಂಶುಪಾ ಲ ಡಾ.ಜಿ.ಆರ್.ಹೆಬ್ಬೂರು ಮಾತನಾಡಿದರು.

7 ವಿಭಾಗಗಳಲ್ಲಿ ಮೀಸಲಿಡಿಸಿ

ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರದವರೆಗೆ ತಾಂತ್ರಿಕ ಪದವಿಯೂ ಸೇರಿದಂತೆ 7 ವಿಭಾಗಗಳಲ್ಲಿ ಮೀಸಲಿಡಿಸಿ ಸದರಿ ಸ್ಥಾನಗಳಿಂದ ಶಿಕ್ಷಕರಿಂದ ಆಯ್ಕೆಯಾಗಿ ಬರುವಂತೆ ಮಾಡುವುದು ಸೇರಿದಂತೆ ಹಲವು ಉದ್ದೇಶಗಳನ್ನು ನಾವು ಹೊಂದಿದ್ದೇವೆ. ಆಸಕ್ತ ಶಿಕ್ಷಕರು 94480 42883ಯನ್ನು ಸಂಪರ್ಕಿಸಬಹುದು.

ಶಿಕ್ಷಕರ ವಿಧಾನಪರಿಷತ್ ವ್ಯಾಪ್ತಿಯಲ್ಲಿ ಶಿಕ್ಷಕರ ಸಂಘವನ್ನು ರಚಿಸಲಾಗುತ್ತದೆ. ಇದರಲ್ಲಿ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದಲ್ಲಿ ಪದಾಧಿಕಾರಿಗಳನ್ನು ನೇಮಕ ಮಾಡಲಾಗುತ್ತದೆ. ರಾಜ್ಯದಲ್ಲಿ 25, ಜಿಲ್ಲೆಯಲ್ಲಿ ಮತ್ತು ತಾಲೂಕಿನಲ್ಲಿ ತಲಾ 11 ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು ಎಂದರು.
ಡಾ.ಜಿ.ಆರ್.ಹೆಬ್ಬೂರು ನಿವೃತ್ತ ಪ್ರಾಂಶುಪಾಲ

ತೀರ್ಥಸ್ನಾನಕ್ಕೆ ಹರಿದು ಬಂದ ಜನಸಾಗರ

ತೀರ್ಥಹಳ್ಳಿಯಲ್ಲಿ ಎಳ್ಳು ಅಮಾವಾಸ್ಯೆ ತೀರ್ಥ ಸ್ನಾನಕ್ಕೆ ಹರಿದುಬಂದ ಜನಸಾಗರ.

ತೀರ್ಥಹಳ್ಳಿ: ಎಳ್ಳು ಅಮಾವಾಸ್ಯೆ ತೀರ್ಥ ಸ್ನಾನಕ್ಕೆ ಹರಿದು ಬಂದ ಜನಸಾಗರ. ತೀರ್ಥಹಳ್ಳಿಯ ಪ್ರಮುಖ ಜಾತ್ರೆಯ ವಿಶೇಷ ತೀರ್ಥ ಸ್ನಾನ ವಾಗಿದ್ದು, ಈ ಬಾರಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಭಕ್ತರು ಪವಿತ್ರ ಸ್ನಾನದಲ್ಲಿ ಭಾಗಿಯಾದರು.

ಬೆಳ್ಳಂಬೆಳಗ್ಗೆ ಶ್ರೀರಾಮೇಶ್ವರ ದೇವರ ಉತ್ಸವ ಮೂರ್ತಿಯನ್ನು ತುಂಗಾ ನದಿ ಮಧ್ಯದಲ್ಲಿರುವ ರಾಮಮಂಟಪಕ್ಕೆ ಪಲ್ಲಕ್ಕಿಯಲ್ಲಿ ತರಲಾಯಿತು. ಮೊದಲು ರಾಮಕೊಂಡದಲ್ಲಿ ತೀರ್ಥಪೂಜೆ, ನಂತರ ಶ್ರೀ ದೇವರಿಗೆ ತೀರ್ಥಾಭಿಷೇಕ ಪುರೋಹಿತರ ಮಾರ್ಗ ದರ್ಶನದಲ್ಲಿ ನೆರವೇರಿತು. ಇದಾದ ನಂತರ ಭಕ್ತರಿಗೆ ಸ್ನಾನ ಮಾಡಲು ಅವಕಾಶ ನೀಡಲಾಯಿತು.

ಈ ಸಂದರ್ಭದಲ್ಲಿ ಕಟ್ಟುನಿಟ್ಟಿನ ಪೊಲೀಸ್ ವ್ಯವಸ್ಥೆ ಮಾಡಲಾಗಿತ್ತು. ಜಾತ್ರೆಗೆ ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಮಾಜಿ ಸಚಿವ, ಶಾಸಕ ಆರಗ ಜ್ಞಾನೇಂದ್ರ ಈ ಸಂದರ್ಭದಲ್ಲಿ ಹಾಜರಿದ್ದು, ನೈವೇದ್ಯ ಸಂದರ್ಭದಲ್ಲಿ ರಾಶಿ ಪೂಜೆ ಮಾಡಿದರು.

ನಿರೀಕ್ಷೆಗೂ ಮೀರಿ ಭಕ್ತರು ಬಂದಿದ್ದು, ಗಂಟೆಗಟ್ಟಲೆ ಕ್ಯೂ ನಿಂತು ತಮ್ಮ ಸರದಿಗಾಗಿ ಕಾಯುತ್ತಿದ್ದ ದೃಶ್ಯ ಹುಬ್ಬೇರಿಸುವಂತೆ ಮಾಡಿತು. ದೂರದ ಊರುಗಳಿಂದಲೂ ತುಂಗಾತೀರ್ಥಸ್ನಾನಕ್ಕೆ ಭಕ್ತರು ಬಂದಿದ್ದರು. ಬೆಂಗಳೂರು, ಮಂಗಳೂರು, ಮಂಡ್ಯ ಮುಂತಾದ ಸ್ಥಳಗಳಿಂದಲೂ ಬಂದಿದ್ದ ಭಕ್ತರು ತೀರ್ಥ ಸ್ನಾನದಲ್ಲಿ ಪಾಲ್ಗೊಂಡು ಪುನೀತರಾದರು.

ನೂತನ ಅಧ್ಯಕ್ಷರಾಗಿ ಎನ್.ಕುಮಾರ್‌ಆಯ್ಕೆ

ಹೊಸನಗರ: ತಾಲೂಕಿನ ಮುಂಬಾರು ಗ್ರಾಮ ಪಂಚಾಯಿತಿಗೆ ಎನ್.ಕುಮಾರ್ ನೂತನ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ. ಪಂಚಾಯಿತಿ ಕಛೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅವಿರೋಧ ಅವರ ಆಯ್ಕೆ ನಡೆಯಿತು. ಹಿಂದಿನ ಅವಧಿಯ ಅಧ್ಯಕ್ಷರು ರಾಜೀನಾಮೆ ಸಲ್ಲಿಸಿದ್ದರಿಂದ ಸ್ಥಾನ ತೆರವಾಗಿತ್ತು.ಚುನಾವಣೆ ಪ್ರಕ್ರಿಯೆ ಬಳಿಕ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ.ಚಂದ್ರಮೌಳಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಕೇವಲ ಪ್ರತಿಷ್ಠೆಯ ಸ್ಥಾನವಲ್ಲ. ಗ್ರಾಮದ ಶ್ರೇಯೋ ಭಿವೃದ್ಧಿಗೆ ಶ್ರಮಿಸುವ ಜವಾಬ್ದಾರಿ ಎನ್ನುವುದನ್ನು ಚುನಾಯಿತ ಪ್ರತಿನಿಧಿಗಳು ಸದಾ ನೆನಪಿನಲ್ಲಿಡಬೇಕು ಮಾಡುವ ಕೆಲಸ ಗ್ರಾಮಸ್ಥರ ಅನುಕೂಲಕರವಾಗಿ ಮಾಡಿದರೇ ಮುಂದೆಯು ಸಹ ಚುನಾವಣೆಯಲ್ಲಿ ಇರಬಹುದು ಮುಂದಿನ ಚುನಾವಣೆಯಲ್ಲಿ 8ಸ್ಥಾನಗಳನ್ನು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲುವ ರೀತಿಯಲ್ಲಿ ಸೇವೆ ಮಾಡಿ ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಥಳೀಯ ಜನಪ್ರತಿನಿಧಿಗಳು ಕಿವಿಯಾಗಬೇಕು. ಜನಪರ ಕೆಲಸಗಳಿಗೆ ಆಧ್ಯತೆ ನೀಡುವ ಮೂಲಕ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದರು. ನೂತನ ಅಧ್ಯಕ್ಷ ಕುಮಾರ್ ಮಾತನಾಡಿ, ಗ್ರಾಮದ ಹಿರಿಯರ ಆಶಯದಂತೆ ಊರಿನ ಸಮಗ್ರ ಅಭಿವೃದ್ಧಿಯ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ನಿರ್ವಹಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಉಪಾಧ್ಯಕ್ಷೆ ಅಶ್ವಿನಿ ಶ್ರೀಕಾಂತ್, ಸದಸ್ಯರಾದ ಸುವರ್ಣ, ಮಾಲತಿ, ಅನ್ನಪೂರ್ಣ, ಕೃಷ್ಣಮೂರ್ತಿ, ಶೇಖರಪ್ಪ, ಪ್ರಮುಖರಾದ ತಿಮ್ಮಪ್ಪ, ಚಂದ್ರಶೇಖರ, ಇದ್ದರು.

ಯೋಗದಿಂದ ಕ್ಯಾನ್ಸರ್ ತಡೆಗಟ್ಟಲು ಸಾಧ್ಯ

ಶಿವಮೊಗ್ಗ: ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಆತಂಕದ ವಿಷಯವಾಗಿದ್ದು, ಜನಜಾಗೃತಿ ಮೂಲಕ ಕ್ಯಾನ್ಸರ್ ತಡೆಯಲು ಸಾಧ್ಯ ಎಂದು ಸಾಲೂರಿನ ಸರಕಾರಿ ಆಯುರ್ವೇದ ಚಿಕಿತ್ಸಾಲಯದ ಹಿರಿಯ ವೈದ್ಯಾಧಿಕಾರಿ ಡಾ. ರವಿಶಂಕರ ಉಡುಪ ಹೇಳಿದರು.

ತೀರ್ಥಹಳ್ಳಿಯ ಪ್ರೇರಣಾ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಮಾನ್ಯ ಆರೋಗ್ಯ ಹಾಗೂ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಕ್ಯಾನ್ಸರ್ ಸಾಂಕ್ರಮಿಕ ರೋಗವಲ್ಲದಿದ್ದರೂ ಅದಕ್ಕಿಂತ ವೇಗವಾಗಿ ಕಾಣಿಸುತ್ತಿದೆ. ಇದಕ್ಕೆ ಆಧುನಿಕ ಜೀವನ ಶೈಲಿ ಕಾರಣವಾಗಿದೆ. ವ್ಯಸನ ಗಳು ಇದರ ರೂವಾರಿಗಳಾಗಿವೆ. ಕೆಟ್ಟಚಟ ಗಳಿಂದ ದೂರವಿದ್ದು, ಉತ್ತಮ ಜೀವನ ಶೈಲಿಯನ್ನು ರೂಪಿಸುವುದೊಂದೇ ಈ ಕಾಯಿಲೆ ಬರದಂತೆ ತಡೆಯಲು ಸಾಧ್ಯ ಎಂದರು.ಶಿಬಿರದ ಸಂಚಾಲಕ ಅ.ನಾ. ವಿಜಯೇಂ ದ್ರರಾವ್ ಮಾತನಾಡಿ, ಆಸ್ಪತ್ರೆಗಳು ಹೆಚ್ಚುತ್ತಿ ರುವುದು ಸ್ವಾಗತಾರ್ಹ. ಆದರೆ, ಅಲ್ಲಿಗೆ ಬರುವವರ ಸಂಖ್ಯೆ ಕಡಿಮೆಯಗಬೇಕು. ನಮ್ಮ ಸಂಸ್ಥೆಯು ಜಿಲ್ಲೆಯ 7 ತಾಲೂಕು ಕೇಂದ್ರಗಳಲ್ಲಿ ಮತ್ತು ಹೊನ್ನಾಳಿ ಸೇರಿದಂತೆ 8 ಕಡೆ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಕಾರ್ಯಕ್ರ ಮಗಳನ್ನು ಹಮ್ಮಿ ಕೊಂಡಿದೆ. ಸಾರ್ವಜ ನಿಕರು ಇದರ ಪ್ರಯೋ ಜನ ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಎಂಐಒ ಆಸ್ಪತ್ರೆಯ ತಜ್ಞರಾದ ಡಾ. ದಿವ್ಯಜ್ಯೋತಿ, ಡಾ. ಭಾಗ್ಯಲಕ್ಷ್ಮಿ ಪ್ರಾತ್ಯಕ್ಷತೆ ಮೂಲಕ ಕ್ಯಾನ್ಸರ್ ರೋಗದ ಬಗ್ಗೆ ತಿಳಿವಳಿಕೆ ಮೂಡಿಸಿದರು. ಸೇವಾ ಭಾರತಿ ಟ್ರಸ್ಟ್ ನ ಟ್ರಸ್ಟಿ ವೆಂಕಟೇಶ್ ಪಟವರ್ಧನ್ ಅಧ್ಯಕ್ಷತೆ ವಹಿಸಿದ್ದರು. ಶಿವಮೊಗ್ಗದ ಅಧ್ಯಕ್ಷ ಎನ್. ಗೋಪಿನಾಥ್, ಇತರರಿದ್ದರು.

ಆಲೋಚನೆಯಿಂದ ಕಾಯಿಲೆ ತಡೆಯಲು ಸಾಧ್ಯ

ಕ್ಯಾನ್ಸರ್ ಕಾಯಿಲೆ ಯೋಗದಿಂದ ತಡೆಗಟ್ಟಲು ಸಾಧ್ಯ. ಯೋಗದ ಮೂಲಕ ಮಾನಸಿಕ ಶಾಂತಿ ತಂದುಕೊಂಡು ಕಾಯಿಲೆಯನ್ನು ಎದುರಿಸಬಹುದಾಗಿದೆ. ಆದರೆ ಇದನ್ನು ಮೊದಲ ಮತ್ತು ಎರಡನೇ ಹಂತದಲ್ಲೇ ಗುರುತಿಸಿದರೇ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯ. ಏಕಾಗ್ರತೆ, ಇಂದ್ರೀಯಗಳ ಮೇಲಿನ ಹಿಡಿತ, ಮಾದಕ ವ್ಯಸನಗಳಿಂದ ದೂರವಿದ್ದು, ಒಳ್ಳೆಯ ಆಲೋಚನೆಯಿಂದ ಕ್ಯಾನ್ಸರ್ ಕಾಯಿಲೆ ಮಾತ್ರವಲ್ಲದೇ ಯಾವುದೇ ಕಾಯಿಲೆಗಳು ಹತ್ತಿರ ಬರದಂತೆ ತಡೆಯಲು ಸಾಧ್ಯ, ಎಂದರು.

ಜಿಲ್ಲಾ ಕೊರಚರ ಸಂಘದಿಂದ ಪ್ರತಿಭಟನೆ

ಶಿವಮೊಗ್ಗ: ಪರಿಶಿಷ್ಟ ಜಾತಿ ಅಲೆಮಾರಿ ಪಟ್ಟಿಯಲ್ಲಿರುವ ಅಧಿಕೃತ ಪಟ್ಟಿಯಿಂದ ಕೊರಚ–ಕೊರಮ ಸಮುದಾಯವನ್ನು ಹೊರಗಿಡುವಂತೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ನೀಡಿರುವ ಹೇಳಿಕೆ ವಿರೋಧಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಜಿಲ್ಲಾ ಕೊರಚರ ಮಹಾಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಲಾಯಿತು.ಕಳೆದ 18ರಂದು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಅನಧಿಕೃತ ಸ್ವಯಂಪ್ರೇರಿತ ತತಕ್ಷಣಕ್ಕೆ 49 ಸಮುದಾಯಗಳ ಸಂಘಟನೆಗಳ ಹೆಸರಿನಲ್ಲಿ ಸುವರ್ಣಸೌಧದ ಹೊರಗೆ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲು ಕುಮ್ಮಕ್ಕು ನೀಡಿದ ಕೆಲವು ನಾಯಕರು ಅಲೆಮಾರಿ ಸಮುದಾಯಗಳಲ್ಲಿ ಒಡಕು ತರುವಂತಹ ಪ್ರಯತ್ನ ನಡೆಸಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಚೆಲುವಾದಿ ನಾರಾಯಣ ಸ್ವಾಮಿ ಅವರ ಹೇಳಿಕೆಯಲ್ಲಿ ಕೊರಚ ಸಮಾಜದಿಂದ ಖಂಡಿಸುತ್ತೇವೆ. ಹಾಗೂ ರಾಜ್ಯ ಸರಕಾರ ಈ ಜನಾಂಗವನ್ನು ಅಲೆಮಾರಿ ಪಟ್ಟಿಯಲ್ಲಿ ಉಳಿಸಿ ಈಗಿರುವ ಯಥಾಸ್ಥಿತಿಯಲ್ಲಿ ಮುಂದುವರೆಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಪತ್ರಿಭಟನೆಯಲ್ಲಿ ರಾಜ್ಯ ಕೊರಚ ಮಹಾಸಂಘದ ಪ್ರಧನ ಕಾರ್ಯದರ್ಶಿ ಕೆ.ಎನ್. ಪ್ರಭು, ಜಿಲ್ಲಾಧ್ಯ ಕ್ಷ ಶ್ರೀ ನಿವಾಸ್ ಜೆ. ಪ್ರಮುಖರಾದ ಬಿ.ಎನ್.ಸುರೇಶ್, ಮುಂತಾದವರು ಇದ್ದರು.

ಸಮಾಚಾರ ಸಣ್ಣದಲ್ಲ

ರಾಯರ ಮಠಕ್ಕೆ ಹರಿದುಬಂದ ಭಕ್ತಸಾಗರ

ರಾಯಚೂರು: ಸಾಲುಸಾಲು ರಜೆಗಳಿಂದಾಗಿ ಮಂತ್ರಾಲಯದ ಗುರು ರಾಘವೇಂದ್ರ ಸ್ವಾಮಿ ಮಠಕ್ಕೆ ಭಕ್ತಸಾಗರ ಹರಿದುಬಂದಿದೆ. ಕ್ರಿಸ್‌ಮಸ್ ರಜೆ, ಹೊಸ ವರ್ಷಾಚರಣೆಗೆ ದಿನಗಣನೆ, ಅಮಾವಾಸ್ಯೆ ಹಿನ್ನೆಲೆಯಲ್ಲಿ ರಾಯರ ಮಠದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಸಾವಿರಾರು ಭಕ್ತರ ಭೇಟಿಯಿಂದ ರಾಯರ ಮಠ ತುಂಬಿ ತುಳುಕುತ್ತಿದ್ದು, ಮಠದ ವಸತಿಗೃಹಗಳಿಗೆ ಆನ್ ಲೈನ್ ಬುಕಿಂಗ್ ಸ್ಥಗಿತಗೊಳಿಸಲಾಗಿದೆ. ಕೇವಲ ಆಫ್‌ಲೈನ್ ಬುಕಿಂಗ್‌ಗೆ ಮಾತ್ರ ಅವಕಾಶ ನೀಡಲಾಗಿದ್ದು, ಭಕ್ತರು ಕೋಣೆಗಳಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ನಾಟಕ ಕಲಾವಿದ ನೇಣು ಬಿಗಿದು ಆತ್ಮಹತ್ಯೆ

ವಿಟ್ಲ: ವಿಟ್ಲ ಸಮೀಪದ ಅತಿಕಾರಬೈಲಿನ ನಾಟಕ ಕಲಾವಿದರೊಬ್ಬರು ಹಟ್ಟಿಯ ಪಕ್ಕಾಸಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

49 ವರ್ಷದ ವಿಠಲ ಪೂಜಾರಿ ಆತ್ಮಹತ್ಯೆಗೆ ಶರಣಾದವರು. ಯುವ ಕೇಸರಿ ಅತಿಕಾರಬೈಲು ಸಂಘಟನೆಯ ಅಧ್ಯಕ್ಷರಾಗಿ, ನಾಟಕ ಕಲಾವಿದರು ಮತ್ತು ಬಿಲ್ಲವ ಸಂಘದಲ್ಲಿ ತೊಡಗಿಸಿ ಕೊಂಡಿದ್ದ ಪೂಜಾರಿ, ಚಂದಳಿಕೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರಾಗಿ, ಊರಿನ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ವಿಠಲ ಪೂಜಾರಿ ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಮೃತರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸಂಪುಟ ಸಭೆಗೆ ಸಜ್ಜಾದ ಮಹದೇಶ್ವರ ಬೆಟ್ಟ

ಜನವರಿ 3ನೇ ವಾರದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆ । ಚಾಮರಾಜನಗರಕ್ಕೆ ವಿಶೇಷ ಪ್ಯಾಕೇಜ್ ಘೋಷಣೆಯ ಸಾಧ್ಯತೆ

ಬೆಂಗಳೂರು: ಚಾಮರಾಜನಗರ ಜಿಲ್ಲೆಗೆ ಹೋದರೆ ಮುಖ್ಯಮಂತ್ರಿ ಸ್ಥಾನ ಹೋಗುತ್ತದೆ ಎನ್ನುವ ಕಾರಣಕ್ಕೆ ಅದೆಷ್ಟೋ ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ತೆರಳಲು ಹಿಂದೇಟು ಹಾಕುತ್ತಾರೆ. ಆದರೆ ಸಿಎಂ ಸಿದ್ದರಾಮಯ್ಯ ಅವರೀಗ, ಅದೇ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ ನಡೆಸುವ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ಚಾಮರಾಜನಗರ ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿರುವ ಮಲೆಮಹದೇಶ್ವರ ಬೆಟ್ಟದಲ್ಲಿ ಜನವರಿ ಮೂರನೇ ವಾರ ಸಚಿವ ಸಂಪುಟ ಸಭೆ ನಡೆಸಲು ಸರಕಾರ ತೀರ್ಮಾನಿಸಿದ್ದು, ಈಗಾಗಲೇ ಅಗತ್ಯ ಸಿದ್ಧತೆ ಆರಂಭಿಸಿದೆ. 2002ರಲ್ಲಿ ಎಸ್.ಎಂ. ಕೃಷ್ಣ ಅವರು ಬಿಳಿಗಿರಿರಂಗನ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದರು. ಬಳಿಕ ಜಿಲ್ಲೆಯಲ್ಲಿ ನಡೆಯುತ್ತಿರುವ ಎರಡನೇ ಸಚಿವ ಸಂಪುಟ ಸಭೆ ಇದಾಗಿದೆ.

ಮಲೆಮಹದೇಶ್ವರ ಬೆಟ್ಟದಲ್ಲಿ ನಡೆಯುತ್ತಿರುವ ಮೊದಲ ಸಚಿವ ಸಂಪುಟ ಸಭೆ ಇದಾಗಿರುವುದರಿಂದ, ಜಿಲ್ಲೆಯ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಈಗಾಗಲೇ ಭರದ ಸಿದ್ಧತೆ ಆರಂಭವಾಗಿದೆ. ಸಂಪುಟ ಸಭೆಯ ಬೆನ್ನಲ್ಲೇ, ಬೆಟ್ಟದಲ್ಲಿ ಮೂಲಸೌಕರ್ಯಕ್ಕೆ ಅಗತ್ಯ ಸಿದ್ಧತೆ ನಡೆಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಎಸ್.ಎಂ.ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸೋಲಿಗರು, ಗಿರಿಜನರಿಗೆ ಅನುಕೂಲವಾಗುವಂತಹ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಲಾಗಿತ್ತು.

ಸಿಎಂಗೆ ಇಷ್ಟದ ಜಿಲ್ಲೆ

ಚಾಮರಾಜನಗರಕ್ಕೆ ತೆರಳಿದರೆ ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ ಎಂದು ಅನೇಕ ಮುಖ್ಯಮಂತ್ರಿಗಳು ಚಾಮರಾಜನಗರಕ್ಕೆ ತೆರಳಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತ ಎನ್ನುವಂತೆ ಸಿದ್ದರಾಮಯ್ಯ ಅವರಿಗೆ ಚಾಮರಾಜನಗರದ ಬಗ್ಗೆ ವಿಶೇಷ ಒಲವು. ಮೊದಲ ಬಾರಿ ಹಾಗೂ ಎರಡನೇ ಬಾರಿಗೆ ಮುಖ್ಯಮಂತ್ರಿಯಾದಾಗಲೂ ಸಿದ್ದರಾಮಯ್ಯ ಅವರು ಹಲವು ಭಾರಿ ಚಾಮರಾಜನಗರಕ್ಕೆ ಭೇಟಿ ನೀಡುವ ಮೂಲಕ ಮೌಢ್ಯಕ್ಕೆ ತಿಲಾಂಜಲಿ ಹಾಡಿದ್ದರು.

ವಿಶೇಷ ಪ್ಯಾಕೇಜ್ ಸಾಧ್ಯತೆ

ಮೂಲಗಳ ಪ್ರಕಾರ ಚಾಮರಾಜನಗರ ಜಿಲ್ಲೆಗೆ ಈ ಸಚಿವ ಸಂಪುಟ ಸಭೆಯಲ್ಲಿ ವಿಶೇಷ ಪ್ಯಾಕೇಜ್ ಅನ್ನು ಘೋಷಣೆ ಮಾಡುವ ಸಾಧ್ಯತೆಯಿದೆ. ಈ ಸಂಬಂಧ ಈಗಾಗಲೇ ಜಿಲ್ಲೆಗೆ ಯಾವೆಲ್ಲ ಇಲಾಖೆಯಿಂದ ಯಾವೆಲ್ಲ ಯೋಜನೆಗಳಾಗ ಬೇಕು ಎನ್ನುವ ಬಗ್ಗೆ ಜಿಲ್ಲಾಡಳಿತ ವರದಿ ನೀಡಿದ್ದು, ಈ ವರದಿಯಲ್ಲಿರುವ ಹಲವು ಯೋಜನೆಗಳಿಗೆ ಸಂಪುಟದಲ್ಲಿ ಅಸ್ತು ಎನ್ನುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜನವರಿ ಮೂರನೇ ವಾರದಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸಲು ಸರಕಾರ ತೀರ್ಮಾನಿಸಿದೆ. ಆದ್ದರಿಂದ ಬೆಟ್ಟದಲ್ಲಿ ಈಗಾಗಲೇ ಸಿದ್ದತೆ ಆರಂಭವಾಗಿದೆ. ಸಂಪುಟ ಸಭೆಯ ಸ್ಥಳವನ್ನು ಇಡೀ ಜಿಲ್ಲೆಯ ವಿಶೇಷತೆ ಕಟ್ಟಿಕೊಡುವುದರೊಂದಿಗೆ, ಶಿಷ್ಟಾಚಾರಕ್ಕೂ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಸಿದ್ದಪಡಿಸಲಾಗುವುದು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಕಾರ್ಯದರ್ಶಿಗಳೊಂದಿಗೆ ನಿರಂತರ ಸಭೆಗಳು ನಡೆಯುತ್ತಿವೆ.

– **ಶಿಲ್ಪಾ ನಾಗ್** ಚಾಮರಾಜನಗರ, ಜಿಲ್ಲಾಧಿಕಾರಿ

ರೈತರ ಋಣ ತೀರಿಸಲು ಬಂದಿದ್ದೇನೆ

ಭೂಸ್ವಾಧೀನ ವಿರುದ್ಧದ ಬೃಹತ್ ಸಮಾವೇಶದಲ್ಲಿ ಪ್ರಕಾಶ್ ರೈ ಭಾಗಿ

ಚಿಕ್ಕಬಳ್ಳಾಪುರ : ನಾನು ರೈತನಲ್ಲದಿದ್ದರೂ ಅವರ ಋಣ ನನ್ನ ಮೇಲಿರುವ ಕಾರಣ ಇಲ್ಲಿಗೆ ಬಂದಿದ್ದೇನೆ.ಕೆಲವರು ಬಾಯಿಚಪಲಕ್ಕೆ ರೈತ ದೇಶದ ಬೆನ್ನೆಲುಬು ಎನ್ನುತ್ತಾರೆ.ಅದೆಲ್ಲಾ ಸುಳ್ಳು.ನಿಜವೇ ಆಗಿದ್ದಿದ್ದರೆ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಿ ಎಂದು ನ್ಯಾಯ ಕೇಳಿ ನಡೆಸುತ್ತಿರುವ ಹೋರಾಟಕ್ಕೆ ಒಂದು ಸಾವಿರ ದಿನ ಆಗುತ್ತಿರಲಿಲ್ಲ ಎಂದು ನಟ ಪ್ರಕಾಶ್ ರೈ ಬೇಸರ ವ್ಯಕ್ತಪಡಿಸಿದ್ದಾರೆ.

ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣದಲ್ಲಿ 13 ಗ್ರಾಮಗಳ ರೈತರು ನಡೆಸುತ್ತಿರುವ ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಸೋಮವಾರಕ್ಕೆ ಒಂದು ಸಾವಿರ ದಿನ ತುಂಬಿದ ಹಿನ್ನೆಲೆಯಲ್ಲಿ ನಡೆದ ರೈತರ ಬೃಹತ್ ಸಮಾವೇಶದಲ್ಲಿ ಅವರು ಮಾತನಾಡಿದರು.

ಸಾವಿರ ದಿನಗಳ ಹೋರಾಟ ಸಣ್ಣದಲ್ಲ: ನಾನು ರೈತ ಅಲ್ಲ, ಆದರೆ ನನ್ನದೇ ಭೂಮಿಯಲ್ಲಿ ಸ್ವಲ್ಪ ಗಿಡಮರ ಬೆಳೆಸಿದ್ದೇನೆ; ಸಾವಿರ ದಿನಗಳ ಹೋರಾಟ ಸಣ್ಣದಲ್ಲ. ಈ ದೇಶದ ದೊಡ್ಡ ಕರ್ಮ ಮತ್ತು ಶಾಪವೆಂದರೆ, ಹಲವಾರು ವರ್ಷಗಳಿಂದ ರೈತರು ತಮ್ಮ ನ್ಯಾಯೋಚಿತ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ರೈತರು ಈ ದೇಶದ ಬೆನ್ನಲುಬು ಎಂದು ಮಾತಿಗಷ್ಟೇ ಹೇಳುತ್ತಾರೆ. ಒಂದು ಸಾವಿರ ದಿನಗಳಿಂದ ಇಷ್ಟೆಲ್ಲಾ ಒತ್ತಾಯಿಸಿದರೂ, ಸರಕಾರಗಳು ಈವರೆಗೆ ನಿರ್ಧಾರ ಕೈಗೊಳ್ಳದಿರಲು ಯಾವ ಅಹಂ ಕಾರಣ..? ಎಲ್ಲ ಸರಕಾರಗಳು ಜನವಿರೋಧಿ ಹಾಗೂ ರೈತವಿರೋಧಿಯೇ ಆಗಿವೆ ಎಂದು ಪ್ರಕಾಶ್ ರೈ ಕುಟುಕಿದರು.

ಓಟಿಗಾಗಿ ಮಾತ್ರ ರೈತ ಬೇಕಾ?: ಈ ದೇಶದಲ್ಲಿ ನಮಗೆ ಏನು ಬೇಕು ಎಂಬ ಬಗ್ಗೆ ನಾವೇ ಆರಿಸಿದವರನ್ನು ನಾವು ಕೇಳುವಂತಾಗಬೇಕು. ವಿಪರ್ಯಾಸವೆಂದರೆ ಆಡಳಿತ ವ್ಯವಸ್ಥೆ ನಮಗೆ ಏನು ಬೇಡವೋ ಅದನ್ನು ಮಾಡುತ್ತಿದ್ದಾರೆ. ಈಗಿರುವ ಕೇಂದ್ರ ಸರಕಾರ ಪಂಜಾಬ್ ಮತ್ತು ಹರಿಯಾಣದಲ್ಲಿ ರೈತ ವಿರೋಧಿಯಾಗಿದೆ. ಈ ಹೋರಾಟ ಶುರುವಾದಾಗ ಅಸ್ತಿತ್ವದಲ್ಲಿದ್ದ ಸರಕಾರ, ಇವರು ರೈತರೇ ಅಲ್ಲ ಎಂದು ಹೇಳಿತ್ತು. ಆಗ ಪ್ರತಿಪಕ್ಷದಲ್ಲಿದ್ದವರು ನಾವು ಅಧಿಕಾರಕ್ಕೆ ಬಂದರೆ ರೈತರ ಪರವಾಗಿರುತ್ತೇವೆ ಎಂದು ಹೇಳಿದ್ದರು. ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಆಗಿದೆ. ರೈತರು ಓಟು ಹಾಕುವುದಕ್ಕಷ್ಟೇ ಸೀಮಿತವಾಗಿ ದ್ದಾರೆಯೇ ಎಂದು ಸರಕಾರವನ್ನು ರೈ ಪ್ರಶ್ನಿಸಿದರು.

ನ್ಯಾ. ಮಾತನಾಡಿ, 140 ಕೋಟಿ ಜನಸಂಖ್ಯೆಯಲ್ಲಿ ಶೇ.50ರಷ್ಟು ಮಹಿಳೆಯರಿದ್ದಾರೆ. ಈ ಹೋರಾಟ ಗೆಲ್ಲಲೇಬೇಕಾದರೆ, ಮಹಿಳೆಯರು ಮುಂದಾಳತ್ವ ವಹಿಸಬೇಕು ಎಂದು 50ನೇ ದಿನ ಹೇಳಿದ್ದೆ. ಅದು ಇಂದು ಋಜುವಾತಾಗಿದೆ. ಭೂಮಿ ನಮ್ಮ ತಾಯಿ; ತಾಯಿಯನ್ನೇ ಕಬಳಿಸಲು ಹೊರಟಿರುವ ಸರಕಾರಗಳು ಉಳಿಯುವುದಿಲ್ಲ.

–ಗೋಪಾಲಗೌಡ ನ್ಯಾಯಮೂರ್ತಿ

ಕೊಡಗು ಖಾಲಿ ಖಾಲಿ, ಇಲ್ಲ ಹೊಸ ವರ್ಷದ ಜಾಲಿ!

ಡಿಸೆಂಬರ್ ಒಂದು ತಿಂಗಳಲ್ಲಿ 7 ಲಕ್ಷ ಪ್ರವಾಸಿಗರು ಮಡಿಕೇರಿಗೆ। ವಾರದ ಮಧ್ಯೆ ಹೊಸವರ್ಷದ ಆಗಮನ, ಪ್ರವಾಸೋದ್ಯಮಕ್ಕೆ ತೊಡಕು

ಅನಿಲ್ ಎಚ್.ಟಿ., ಮಡಿಕೇರಿ

ಹೊಸ ವರ್ಷಾಚರಣೆಗೆ ಭರ್ತಿಯಾಗಲಿದೆ ಎಂದು ನಿರೀಕ್ಷೆ ಮೂಡಿಸಿದ್ದ ಸುಂದರ ತಾಣಗಳನ್ನು ಹೊಂದಿರುವ ಕೊಡಗು ಜಿಲ್ಲೆ ಪ್ರವಾಸಿಗರಿಲ್ಲದೇ ಬಿಕೋ ಎನ್ನುವಂತಾಗಿದೆ. ವಾರದ ಮಧ್ಯೆ ಹೊಸವರ್ಷ ಆಗಮಿಸುತ್ತಿದ್ದು ದೂರದೂರುಗಳಿಂದ ಕೊಡಗಿಗೆ ಪ್ರವಾಸಿಗರು ನಿರೀಕ್ಷಿಸಿದ ಸಂಖ್ಯೆಯಲ್ಲಿ ಬರುತ್ತಿಲ್ಲ.

ಕಳೆದ ಹಲವಾರು ವರ್ಷಗಳಿಂದ ಹೊಸವರ್ಷದ ಹಿಂದಿನ ದಿನ ಕೊಡಗು ಜಿಲ್ಲೆಗೆ ಸಾವಿರಾರು ಪ್ರವಾಸಿಗರು ಬರುತ್ತಿದ್ದರು. ಕೊಡಗಿನ ರೆಸಾರ್ಟ್, ಹೋಂ ಸ್ಟೇ, ಕಾಟೇಜ್, ಲಾಡ್ಜ್ ಗಳು ಭರ್ತಿಯಾಗಿ ಪ್ರವಾಸಿಗರು ಕೊಠಡಿಗಳಿಲ್ಲದೇ ಪರದಾಡುವ ಸ್ಥಿತಿ ಇರುತ್ತಿತ್ತು. ಆದರೆ ಈ ವರ್ಷ ಕೊಡಗಿನಲ್ಲಿ ಬಹುತೇಕ ರೆಸಾರ್ಟ್, ಕಾಟೇಜ್, ಹೋಂಸ್ಟೇ, ಲಾಡ್ಜ್ ಗಳು ಖಾಲಿಯಾಗಿಯೇ ಉಳಿದಿವೆ. ಹೆಚ್ಚಿನ ಪ್ರವಾಸಿಗರ ನಿರೀಕ್ಷೆಯಲ್ಲಿದ್ದ ಪ್ರವಾಸೋದ್ಯಮಿಗಳು ಕಂಗಾಲಾಗಿದ್ದಾರೆ.

ಪ್ರವಾಸಿಗರ ಕೊರತೆ, ಉದ್ಯಮಿಗಳು ಕಂಗಾಲು: ಜಿಲ್ಲಾ ಕೇಂದ್ರ ಮಡಿಕೇರಿ, ಕುಶಾಲನಗರ, ಗೋಣಿಕೊಪ್ಪಲು, ಸೋಮವಾರಪೇಟೆ ವ್ಯಾಪ್ತಿಯಲ್ಲಿ ಪ್ರವಾಸಿಗರ ಕೊರತೆ ಕಾಡುತ್ತಿದೆ. ಹೊಸವರ್ಷ ಕೊಡಗಿನಲ್ಲಿ ಸಂಭ್ರಮದಿಂದ ಆಚರಿಸಲು ದೂರದೂರುಗಳಿಂದ ಜನರು ಬರುತ್ತಾರೆ ಎಂಬ ನಿರೀಕ್ಷೆ ಹುಸಿಯಾಗಿದೆ. ತಮಿಳುನಾಡಿನಲ್ಲಿ ಜನವರಿ 5 ರವರೆಗೆ ರಜೆ ಇರುವುದರಿಂದಾಗಿ ಆ ರಾಜ್ಯದಿಂದ ಪ್ರವಾಸಿಗರು ಕೊಡಗಿಗೆ ಬರುತ್ತಿದ್ದಾರೆಯೇ ವಿನಾಃ ಬೆಂಗಳೂರು, ಮುಂಬೈ, ಆಂಧ್ರದ ಪ್ರವಾಸಿಗರು ಕಾಣುತ್ತಿಲ್ಲ.



ನಿರೀಕ್ಷಿತ ವಹಿವಾಟಿಲ್ಲ

ಹೊಸ ವರ್ಷಾಚರಣೆಗೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸಿದ್ಧತೆ ಕೈಗೊಂಡಿದ್ದ ಅನೇಕ ರೆಸಾರ್ಟ್‌ಗಳು, ಕಾಫಿತೋಟಗಳ ನಡುವಣ ಹೋಂ ಸ್ಟೇಗಳಲ್ಲಿ ಪ್ರವಾಸಿಗರ ಬುಕ್ಕಿಂಗ್ ಇಲ್ಲದೆ ಉದ್ಯಮಿಗಳು ಮಂಕಾಗಿದ್ದಾರೆ. ಕ್ರಿಸ್‌ಮಸ್ ದಿನಗಳಲ್ಲಿ ಬಂದಷ್ಟೂ ಪ್ರವಾಸಿಗರು ಹೊಸ ವರ್ಷಾಚರಣೆಗೆ ಬರಲಿಲ್ಲ ಎಂಬ ನೋವು ಪ್ರವಾಸೋದ್ಯಮಿಗಳದ್ದು. ಕೊಡಗಿನ ಪ್ರವಾಸೋದ್ಯಮಿಗಳ ಪಾಲಿಗೆ 2025 ನೇ ವರ್ಷ ನಿರೀಕ್ಷಿತ ವಹಿವಾಟಿಲ್ಲದ ಆತಂಕದಿಂದ ಪ್ರಾರಂಭವಾಗುವಂತಾಗಿದೆ..!



ಪ್ರವಾಸಿತಾಣಗಳೂ ಖಾಲಿ ಖಾಲಿ!

ಕೊಡಗು ಜಿಲ್ಲೆಯಲ್ಲಿ ರೆಸಾರ್ಟ್, ಲಾಡ್ಜ್ ಗಳಲ್ಲಿಯೇ 12 ಸಾವಿರದಷ್ಟು ಕೊಠಡಿಗಳಿವೆ. ಹೊಸ ವರ್ಷಕ್ಕೆ ಶೇ.40 ರಷ್ಟು ಕೋಣೆಗಳು ಮಾತ್ರ ಭರ್ತಿಯಾಗಿವೆ. ಹೋಂ ಸ್ಟೇಗಳಲ್ಲಿಯೂ ಇದೇ ಪರಿಸ್ಥಿತಿ. ಕೋವಿಡ್ ಲಾಕ್‌ಡೌನ್ ನಂತರ ಕೊಡಗು ಪ್ರವಾಸೋದ್ಯಮದಲ್ಲಿ ಚೇತರಿಕೆಯಾಗಲೇ ಇಲ್ಲ. ಹೊಸ ರೆಸಾರ್ಟ್‌ಗಳು ಪ್ರಾರಂಭವಾಗುತ್ತಿವೆಯಾದರೂ ನಿರೀಕ್ಷಿತ ವಹಿವಾಟಿಲ್ಲದೇ ಉದ್ಯಮಿಗಳು ನಿರಾಶೆಗೊಳಗಾಗಿದ್ದಾರೆ. ರಾಜಾಸೀಟ್, ಅಬ್ಬಿಫಾಲ್ಸ್ ಪ್ರವಾಸಿತಾಣಗಳೂ ಖಾಲಿ ಖಾಲಿ!

ಈ ಬಾರಿ ಕ್ರಿಸ್‌ಮಸ್ ಬುಧವಾರ ಬಂದಿದ್ದು, ಶುಕ್ರವಾರ ಮತ್ತು ಶನಿವಾರ ಸರಕಾರಿ ರಜೆ ಇದ್ದ ಕಾರಣ ಈ ಮೂರೂ ದಿನಗಳು ಅತ್ಯಧಿಕ ಸಂಖ್ಯೆಯಲ್ಲಿ ಪ್ರವಾಸಿಗರು ಕೊಡಗಿಗೆ ಭೇಟಿ ನೀಡಿದ್ದರು. ಈ ಕೊಡಗಿಗೆ ಭೇಟಿ ನೀಡಲು ಉದ್ದೇಶಿಸಿದ್ದ ಪ್ರವಾಸಿಗರು ಕಳೆದ ವಾರಾಂತ್ಯದಲ್ಲಿ ಆಗಮಿಸಿ ವಾಪಸ್ ಹೋಗಿದ್ದರಿಂದ ಪ್ರವಾಸಿಗರು ಹೊಸವರ್ಷಾಚರಣೆಗೆ ಬಂದಿಲ್ಲ.

ಜನವರಿ 2ರಿಂದ ರಾಜ್ಯವ್ಯಾಪಿ ಬಹುತೇಕ ಶಾಲಾ, ಕಾಲೇಜುಗಳು ಪ್ರಾರಂಭವಾಗುತ್ತಿರುವುದು, ಮಂಗಳವಾರ, ಬುಧವಾರವೂ ಐಟಿ ಸಂಸ್ಥೆಗಳೂ, ಸರಕಾರಿ ಕಚೇರಿಗಳಿಗೆ ಕೆಲಸದ ದಿನಗಳು. ಹೀಗಾಗಿ ನಗರ ಪ್ರದೇಶದ ಜನರು ತಾವಿರುವ ಸ್ಥಳದಲ್ಲೇ ಹೊಸವರ್ಷ ಆಚರಿಸಲು ಚಿಂತನೆ ನಡೆಸಿದ್ದಾರೆ.

ಡಿಸೆಂಬರ್‌ನಲ್ಲಿ ಅತ್ಯಧಿಕ ಸಂಖ್ಯೆ: ಅಕ್ಟೋಬರ್, ನವಂಬರ್ ನಲ್ಲಿ ಕೊಡಗು ಜಿಲ್ಲೆಗೆ ಪ್ರವಾಸಿಗರು ನಿರೀಕ್ಷಿತ ಸಂಖ್ಯೆಯಲ್ಲಿ ಬರಲೇ ಇಲ್ಲ. ಹೀಗಾಗಿ ಕೊಡಗಿನ ಪ್ರವಾಸೋದ್ಯಮಕ್ಕೆ ಭಾರಿ ಪೆಟ್ಟು ಬಿದ್ದಿತ್ತು. ಡಿಸೆಂಬರ್ ಮೊದಲ ವಾರದಿಂದ ಡಿ.29 ರವರೆಗೆ ಅತ್ಯಧಿಕ ಸಂಖ್ಯೆ ಪ್ರವಾಸಿಗರು ಜಿಲ್ಲೆಗೆ ಭೇಟಿ ನೀಡಿದ್ದು, ಈ 1 ತಿಂಗಳಲ್ಲಿ ಅಂದಾಜು 7 ಲಕ್ಷ ಪ್ರವಾಸಿಗರು ಕೊಡಗಿಗೆ ಭೇಟಿ ನೀಡಿದ್ದಾರೆ. ಇದು ಸಾರ್ವಕಾಲಿಕ ದಾಖಲೆಯಾಗಿದ್ದು, ಕಳೆದ ವರ್ಷ ಡಿಸೆಂಬರ್ ನಲ್ಲಿ 3 ಲಕ್ಷ ಪ್ರವಾಸಿಗರು ಮಾತ್ರ ಭೇಟಿ ನೀಡಿದ್ದರು ಎಂದು ಕೊಡಗು ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಸಂಘದ ಅಧ್ಯಕ್ಷ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ ವಿಶ್ವವಾಣಿಗೆ ತಿಳಿಸಿದರು.

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಸಅಸಂ/ಟೆಂಡರ್–ಕಾಂಪಾ/ಸಿಆರ್–2/24–25 ದಿ: 30.12.2024
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2024–25 ನೇ ಸಾಲಿನಲ್ಲಿ ವಿವಿಧ CAMPA (60 Others/NPV) ಲೆಕ್ಕಶೀರ್ಷಿಕೆಯಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ "ಮುಂಗಡ ಕಾಮಗಾರಿ (ಸಸಿಗಳನ್ನು ಬೆಳೆಸುವುದು ಸೇರಿಸದಂತೆ)" ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2024–25 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್–2 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06–01–2025 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/173/12/1320

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಟಪ್ರಭಾ ವಿಭಾಗ ನಂ. 2, ಹಿಡಕಲ್ ಡ್ಯಾಂ
ಕಚೇರಿ ದೂರವಾಣಿ ಸಂ:08333–2200119/ಫ್ಯಾಕ್ಸ ಸಂ:08333–263405/
ಇ–ಮೇಲ್:eegrbc2@gmail.com
ಸಂ: ಕನೀನಿನಿ/ಜಿಆರ್‌ಬಿಸಿಸಿ–2/ಡಿಬಿ/ಟೆಂಡರ್/2024–25/2187 ದಿನಾಂಕ:24–12–2024
ಅಲ್ಪಾವಧಿ ಟೆಂಡರ್ ಪ್ರಕಟಣೆ
2024–25 ನೇ ಸಾಲಿನಲ್ಲಿ ಈ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ 01 ಸಂಖ್ಯೆ ಕಟ್ಟಡ ನಿರ್ವಹಣೆ ಕಾಮಗಾರಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. (ಅಂದಾಜು ಮೊತ್ತ ರೂ.57.26 ಲಕ್ಷಗಳು) ಇಂಡೆಂಟ ನಂ.2257, 2) ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ: 24–12–2024 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 3)ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ:02–01–2025 ವೇಳೆ:17.30 ಗಂಟೆಯೊಳಗೆ ಸಲ್ಲಿಸುವುದು 4) ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ:04–01–2025 ವೇಳೆ: 10.30 ಗಂಟೆ 5) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.
Note:Here after any change with reference to this Notification will be Notified in https://kppp.karnataka.gov.in Portl Only.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.2, ಹಿಡಕಲ್–ಡ್ಯಾಮ
DIPR/BGM/RO-NO-1381/KSMCA/2024-25

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)
ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಕೆಂಗೇರಿಯ ಬಂಡೇಮಠ ಬಡಾವಣೆಯ ಕೊಮ್ಮಘಟ್ಟ ಮುಖ್ಯ ರಸ್ತೆಯಲ್ಲಿರುವ ವಾಣಿಜ್ಯ ನಿವೇಶನ ಸಂಖ್ಯೆ 1 ಮತ್ತು 2 ರಲ್ಲಿ ವಾಣಿಜ್ಯ ಸಂಕೀರ್ಣ ಹಾಗೂ ಇತರೆ ನಿರ್ಮಾಣ ಸಂಬಂಧ ಬೇಡಿಕೆ ಮೌಲ್ಯಮಾಪನ ಮತ್ತು ಕಾರ್ಯಸಾಧ್ಯತೆಯ ವರದಿ ಸಲ್ಲಿಸುವ ಸಲುವಾಗಿ ಸಲಹೆಗಾರರನ್ನು ನೇಮಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.
• ಟೆಂಡರ್ ಪ್ರಕಟಣೆ ಸಂಖ್ಯೆ: KHB/2024-25/SE0219 ದಿ: 30.12.2024
• ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 13.01.2025 upto 4.00 PM
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511/ 080–22100077 website: https://kppp.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾ.ಸಾ.ಸಂ.ಇ/ವಾಪ್ರ/4013/ಆಕಾರ್/2024–25 ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಮಗಳೂರು
Ph: 08262-298107 E-Mail: dhochikmagalur@gmail.com
ಸಂಖ್ಯೆ: ಜಿಆಕುಕ/ಸವಿ/ವಿವ–40/2024–25 ದಿನಾಂಕ: 26–12–2024
ಮರು ಟೆಂಡರ್ ಪ್ರಕಟಣೆ
ಚಿಕ್ಕಮಗಳೂರು ಜಿಲ್ಲಾ ಆರೋಗ್ಯ ಮತ್ತು ಕುಕ ಇಲಾಖೆಯ ಅಧೀನದ ಆಸ್ಪತ್ರೆಗಳಲ್ಲಿರುವ ಸಾಧನ ಸಲಕರಣೆಗಳ ದುರಸ್ತಿ ಹಾಗೂ ಬಣ್ಣಲೇಪನ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಕಾಯ್ದೆ.1999 ಮತ್ತು ನಿಯಮ, 2000 ರಂತೆ ದ್ವಿಲಕೋಟೆ ಪದ್ಧತಿಮೂಲಕ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮರುಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಮೊತ್ತ– ರೂ.26.00ಲಕ್ಷ (ಇಪ್ಪತ್ತಾರು ಲಕ್ಷ ರೂಪಾಯಿಗಳು) ಆಸಕ್ತ ಬಿಡ್‌ದಾರರು ರೂ.52,000 (ಐವತ್ತೆರಡು ಸಾವಿರ ರೂಪಾಯಿಗಳು) ಗಳ ಇ.ಎಂ.ಡಿ.ಯೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://eproc.karnataka.gov.inನಲ್ಲಿ ಪೂರ್ಣ ವಿಳಾಸದೊಂದಿಗೆ ಟೆಂಡರಿನಲ್ಲಿ ಭಾಗವಹಿಸಬಹುದು. ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ:27–12–2024, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:10–01–2025 ಸಂಜೆ:5–30ರವರೆಗೆ, ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24–25/134/1315

ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024–25/6689 ದಿನಾಂಕ:30.12.2024
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ದತಿ)
ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2023–24 ನೇ ಸಾಲಿನ ಲೆಶೀ ಶಿಕ್ಷಣ ಇಲಾಖೆಯ ಕೆ.ಪಿ.ಎಸ್. ಅನುದಾನ ಯೋಜನೆಯಡಿಯಲ್ಲಿ ಇಂಡೆಂಟ ನಂ. RDPR/2024-25/BD/WORK_INDENT8145 ಒಟ್ಟು 1 ಕಾಮಗಾರಿಗಳಿಗೆ ಕೆ.ಡಬ್ಲೂ–4 ರ ಪ್ರಕಾರ ರೂ. 122.32 ಲಕ್ಷದವರೆಗೆ ಈ ಕಚೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 6689 ದಿನಾಂಕ: 30.12.2024 ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 07.01.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.
ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/560/ಕೆಎಸ್‌ಎಂಸಿಎ/2024–25

ರಾಜಭವನ ಮೆಟ್ಟಿಲೇರಿದ ಲಕ್ಷ್ಮೀ–ರವಿ ಗದ್ದಲ

← ಮೊದಲಪುಟದಿಂದ

ಇದಕ್ಕೂ ಮುನ್ನ ವಿಧಾನಸೌಧಕ್ಕೆ ತೆರಳಿದ ಸಿ.ಟಿ.ರವಿ ಅವರು, ವಿಧಾನ ಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ ಅವರನ್ನು ಭೇಟಿಯಾಗಿ ಬೆಳಗಾವಿ ಸುವರ್ಣಸೌಧದಲ್ಲಿ ನಡೆದ ಪ್ರಕರಣದ ಕುರಿತು ಚರ್ಚೆ ನಡೆಸಿದರು.

ಪರಿಷತ್ ಕಾರ್ಯದರ್ಶಿ ಅವರನ್ನು ಭೇಟಿ ಬಳಿಕ ಮಾತನಾಡಿದ ಸಿ.ಟಿ.ರವಿ, ಸದನದೊಳಗೆ ನಡೆದಿರುವುದರಿಂದ ಸಭಾಪತಿ ಅವರ ವ್ಯಾಪ್ತಿಗೆ ಬರುತ್ತದೆ. ಅನುಮತಿ ಇಲ್ಲದೇ ಮೊಕದ್ದಮೆ ದಾಖಲು ಮಾಡಿದ್ದು ತಪ್ಪು. ಈಗ ಎಫ್‌ಎಸ್‌ಎಲ್‌ಗೆ ಕಳಿಸುತ್ತೇನೆ ಅಂತಿದ್ದಾರೆ. ದುರುದ್ದೇಶದಿಂದ ಪೊಲೀಸರು ನನ್ನನ್ನು ಬಂಧಿಸಿದ್ದಾರೆ. ಸದ್ದಾಂ ಮತ್ತು ಸಂಗಂ ಎಂಬುವವರು ನನ್ನ ಕಾರಿನ ಮೇಲೆ ಅಟ್ಯಾಕ್ ಮಾಡಿದರು. ನಮ್ಮ ಜೊತೆ ಇದ್ದ ಕಿಶೋರ್ ಪುತ್ತೂರು ಸಭಾಪತಿ ಅವರಿಗೆ ದೂರು ನೀಡಿದ್ದಾರೆ. ಅವರನ್ನು ಅರೆಸ್ಟ್ ಮಾಡಿದರು. ಆದರೆ, ಅವರನ್ನು ಬಿಟ್ಟು ಕಳಿಸಿದ್ದಾರೆ. ನಾನು ಹೆಸರು ಹಾಕಿ ಕೊಟ್ಟರೂ ದೂರು ದಾಖಲಿಸಿಲ್ಲ ಎಂದು ಆರೋಪಿಸಿದರು.

ನನ್ನ ಮೇಲಿನ ದೌರ್ಜನ್ಯ, ಹಕ್ಕುಚ್ಯುತಿ ಬಗ್ಗೆ ಸಭಾಪತಿ ಅವರಿಗೆ ದೂರು ನೀಡಿದ್ದೇನೆ. ಮಂತ್ರಿಗಳೇ ಆರೋಪಿತ ಸ್ಥಾನದಲ್ಲಿದ್ದಾರೆ. ಬೆಳಗಾವಿ ಚಲೋ ಬಗ್ಗೆ ಪಕ್ಷ ನಿರ್ಧರಿಸಲಿದೆ. ನಾನು ಬೆಳಗಾವಿಗೆ ಹೋಗುತ್ತೇನೆ. ಅದೇನು ನಿಷೇಧಿತ ಪ್ರದೇಶ ಅಲ್ಲವಲ್ಲ? ನನಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಹೇಳಲು ಹೋಗುತ್ತೇನೆ. ನನ್ನ ಬಂಧನ ಮಾಡಿದ ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಆಗಬೇಕು. ಈ ಬಗ್ಗೆ ಡಿಜಿಪಿ ಅವರಿಗೂ ದೂರು ಕೊಡುತ್ತೇನೆ.

– **ಸಿ.ಟಿ.ರವಿ** ವಿಧಾನ ಪರಿಷತ್ ಸದಸ್ಯ

ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ

ಬಿಜೆಪಿ ಮುಖಂಡ ರಘು ಕೌಟಿಲ್ಯ ಹೇಳಿಕೆಗೆ ಪ್ರತಾಪ್‌ಸಿಂಹ ತಿರುಗೇಟು

ಮೈಸೂರು: ನಾನು ಬದ್ಧತೆ ಇರುವ ವ್ಯಕ್ತಿ. ಕಾಂಗ್ರೆಸ್ ಗೆ ಸೇರುವ ಪ್ರಶ್ನೆಯೇ ಇಲ್ಲ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ಸ್ಪಷ್ಟವಾಗಿ ಹೇಳಿದ್ದಾರೆ.

ತಾವು ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ ಎಂಬ ಗುಮಾನಿ ಹರಡಿರುವ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ, ಕಾಂಗ್ರೆಸ್‌ಗೆ ಹೋಗುವ ಅನಿವಾರ್ಯತೆ ನನಗಿಲ್ಲ ಎಂದು ಸ್ಪಷ್ಟಪಡಿಸಿದರು.

ಮಾತು ಸಭ್ಯತೆ ಮೀರದಿರಲಿ: ಮೈಸೂರಿನ ರಸ್ತೆಗೆ ಸಿಎಂ ಸಿದ್ದರಾಮಯ್ಯ ಹೆಸರಿಡುವುದಕ್ಕೆ ಬೆಂಬಲ ವ್ಯಕ್ತಪಡಿಸಿದ ಬೆನ್ನಲ್ಲೇ ಬಿಜೆಪಿ ಮುಖಂಡ ರಘು ಕೌಟಿಲ್ಯ ಅವರು ಪ್ರತಾಪ್ ಸಿಂಹ ವಿರುದ್ಧ ವಾಗ್ದಾಳಿ ನಡೆಸಿ, ಬಕೆಟ್ ಹಿಡಿಯುವುದನ್ನು ನಿಲ್ಲಿಸಬೇಕು ಎಂದಿದ್ದರು. ಮಾತು ಸಭ್ಯತೆ ಮೀರಬಾರದು, ಯಾರು ಏನೇನು ಹಿಡಿದು ಅಧಿಕಾರಕ್ಕೆ ಬಂದರು ಎಂಬುದೂ ಗೊತ್ತಿದೆ ಎಂದು ಪ್ರತಾಪಸಿಂಹ ಮಾರ್ಮಿಕವಾಗಿ ತಿರುಗೇಟು ನೀಡಿದರು.

ವರುಣಾದಲ್ಲಿ ಸಿದ್ದರಾಮಯ್ಯ ವಿರುದ್ಧ ಕೆಲಸ ಮಾಡಿದವನು ನಾನು. ನನ್ನ ವಿರುದ್ಧ ಸಾಕಷ್ಟು ಕೇಸ್ ಹಾಕಿಸಿದರು. ನಾನು ಬದ್ಧತೆ ಇರುವ ವ್ಯಕ್ತಿ, ಕಾಂಗ್ರೆಸ್ ಸೇರುವ ವದಂತಿಗಳನ್ನು ಪ್ರತಾಪಸಿಂಹ ತಳ್ಳಿಹಾಕಿದರು.

ವಿವಾದ ಇಲ್ಲಿಗೆ ಮುಗಿಸೋಣ: ಕೆಆರ್‌ಎಸ್ ರಸ್ತೆಗೆ ಪ್ರಿನ್ಸಸ್ ಎಂದು ಮಹಾರಾಜರ ಕಾಲದಲ್ಲೇ ಹೆಸರಿತ್ತು ಎನ್ನುವುದಾದರೇ ಬದಲಾವಣೆ ಮಾಡುವುದು ಬೇಡ. ಈ ವಿಚಾರಕ್ಕೆ ನನ್ನ ತಕರಾರಿಲ್ಲ. ಹೆಸರು ಬದಲಾವಣೆ ಮಾಡುವುದು ಬೇಡ ಎಂದು ಸ್ಥಳೀಯ ಶಾಸಕ ಹರೀಶ್ ಗೌಡ ಅವರಿಗೆ ನಾನೇ ಮನವಿ ಮಾಡುತ್ತೇನೆ.ಕೆಆರ್‌ಎಸ್ ರಸ್ತೆಗೆ ಅಧಿಕೃತ ಹೆಸರಿಲ್ಲ, ಖಾಲಿ ಇದೆ ಎನ್ನುವ ಕಾರಣಕ್ಕೆ ಸಿದ್ದರಾಮಯ್ಯ ಹೆಸರನ್ನು ಇಡಬಹುದು ಎಂದು ಹೇಳಿದ್ದೆ. ದಯವಿಟ್ಟು ನೋಟಿಫಿಕೇಷನ್ ವಾಪಸ್ ತೆಗೆದುಕೊಳ್ಳಿ. ತಕರಾರು ಸಲ್ಲಿಸುವವರು ದಾಖಲೆಯನ್ನು ಒದಗಿಸಿ. ವಿವಾದವನ್ನು ಇಲ್ಲಿಗೆ ಮುಗಿಸೋಣ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದರು.

ಕೃಷಿ ಹೊಂಡಕ್ಕೆ ಬಿದ್ದು ಬಾಲಕಿ ಸಾವು

ಕೊಪ್ಪಳ: ತಾಲೂಕಿನ ಮೆತಗಲ್ ಗ್ರಾಮದಲ್ಲಿ ಕೃಷಿ ಹೊಂಡಕ್ಕೆ ಬಿದ್ದು ಬಾಲಕಿ ಸೋಮವಾರ ಮೃತಪಟ್ಟಿದ್ದು, ಇಬ್ಬರು ಮಕ್ಕಳನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಶಿವಲಿಂಗಯ್ಯ ಎಂಬುವರಿಗೆ ಸೇರಿದ ಕೃಷಿ ಹೊಂಡದಲ್ಲಿ ಘಟನೆ ನಡೆದಿದೆ.

ಅಮೃತ ಶಿವಪುರ(11) ಮೃತ ಬಾಲಕಿ. ಹೊಂಡಕ್ಕೆ ಬಿದ್ದಿದ್ದ ಗೌತಮಿ ಮತ್ತು ಅಮರೇಶ ಎಂಬ ಮಕ್ಕಳನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಎಳ್ಳ ಅಮವಾಸ್ಯೆ ಹಿನ್ನೆಲೆ ಕುಟುಂಬದ ಜೊತೆಗೆ ಮಕ್ಕಳು ಜಮೀನಿಗೆ ತೆರಳಿದ್ದಾಗ ಘಟನೆ ನಡೆದಿದೆ. ಆಟವಾಡುತ್ತಾ ಮೂರು ಮಕ್ಕಳು ಕೃಷಿ ಹೊಂಡದಲ್ಲಿ ಬಿದ್ದಿರುವುದನ್ನು ಸ್ಥಳೀಯರು ಗಮನಿಸಿದ್ದಾರೆ.

ಕೂಡಲೇ ಕೃಷಿ ಹೊಂಡಕ್ಕೆ ಜಿಗಿದು ಮೂವರನ್ನೂ ರಕ್ಷಿಸಿ ಹೊರ ತೆಗೆದು, ಆಸ್ಪತ್ರೆಗೆ ರವಾನಿಸಿದ್ದಾರೆ. ಮೃತ ಅಮೃತ ಹೆಚ್ಚು ನೀರು ಕುಡಿದಿದ್ದರಿಂದ ಚಿಕಿತ್ಸೆ ಫಲಕಾರಿಯಾಗಿಲ್ಲ. ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಸಚಿನ್ ಪಾಂಚಾಳಗೆ ಕಿರುಕುಳ ನೀಡಿಲ್ಲ: ಪ್ರಕಾಶ್ ಕಪನೂರ್

ಕಲಬುರಗಿ: ನಾವು ಸಚಿನ್ ಪಾಂಚಾಳ್ ನಿಗೆ ಯಾವುದೇ ಕಿರುಕುಳ ನೀಡಿಲ್ಲ. ಟೆಂಡರ್ ಕೊಡಿಸುತ್ತೇನೆಂದ ಆತನಿಗೆ 58.77 ಲಕ್ಷ ರು. ನಗದು ಕೊಟ್ಟಿದ್ದೆವು. ನಾವು ಕೊಟ್ಟ ಹಣ ವಾಪಸ್ ಕೇಳಿದ್ದೇವಷ್ಟೇ. ಆತನಿಗೆ ಕಿರುಕುಳ ನೀಡಿಲ್ಲ ಎಂದು ಕಾಂಗ್ರೆಸ್ ಮುಖಂಡ ರಾಜು ಕಪನೂರ್ ಸಹೋದರ ಪ್ರಕಾಶ್ ಕಪನೂರ್ ದಾಖಲೆ ಬಿಡುಗಡೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆತ್ಮಹತ್ಯೆಮಾಡಿಕೊಂಡ ಗುತ್ತಿಗೆದಾರ ಸಚಿನ್ ನಮಗೆ ಟೆಂಡರ್ ಕೊಡಿಸುವುದಾಗಿ 58.77 ಲಕ್ಷ ರು. ಪಡೆದು ವಾಪಸ್ ಕೊಡದೆ ಮೋಸ ಮಾಡಿದ್ದ. ನಮ್ಮ ಪರಿಚಯದವರು ಗುತ್ತಿಗೆದಾರರು ಇದ್ದಾರೆ. ಅವರ ಹೆಸರಿನಲ್ಲಿ ಕೆಲಸ ಕೊಡಿಸುತ್ತೇನೆ ಎಂದಿದ್ದ. ಹೀಗಾಗಿ, ಟೆಂಡರ್ ಇಎಂಡಿ ಹಣ ಹಾಕಿದ್ದೆವು. ಆತ ಮೋಸಮಾಡಿದ್ದು ಗೊತ್ತಾಗುತ್ತಿದಂತೆ ಹಣ ವಾಪಾಸ್ ಕೇಳಿದ್ದೆವು. ನಮ್ಮ ಹಣವನ್ನು ನಾವು ವಾಪಸ್ ಕೇಳಬಾರದೇ ಎಂದು ಪ್ರಶ್ನಿಸಿದರು.

ನಮ್ಮ ಸಹೋದರರ ರಾಜು ಕಪನೂರ ಅವರ ಹೆಸರನ್ನು ಕೆಡಿಸಲು ಈ ರೀತಿ ಹೇಳಿಕೆ ಹೇಳಿದ್ದಾನೆ. ನಾವು ಗುತ್ತೇದಾರ ಸಚಿನ್ ಗೆ ಕಿರುಕುಳ ನೀಡಿಲ್ಲ. ಬೆದರಿಕೆ ಹಾಕಿಲ್ಲ ಎಂದು ಪ್ರಕಾಶ್ ಕಪನೂರ್ ತಾವು ಹಣ ನೀಡಿದ್ದಕ್ಕೆ ದಾಖಲೆ ಬಿಡುಗಡೆ ಮಾಡಿ ಸ್ಪಷ್ಟನೆ ನೀಡಿದರು.



ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ರೈತ ಕುಟುಂಬದ ಕೈಹಿಡಿದ ಕಾಂಗ್ರೆಸ್ ಗ್ಯಾರಂಟಿ..! ಗೃಹಲಕ್ಷ್ಮೀ ಯೋಜನೆಯ ಯಶೋಗಾಥೆ ಬಿಟ್ಟಿಭಾಗ್ಯ ಎಂದು ಟೀಕಿಸುತ್ತಿದ್ದ ಅವಿವೇಕಿ ಬಿಜೆಪಿಗರ ನಿದ್ದೆಗೆಡಿಸುವಂತಿದೆ. ಗದಗ್ ಜಿಲ್ಲೆ ಮುಳಗುಂದ ಪಟ್ಟಣದ ನಿರ್ಮಲಾ -ಸೋಮಶೇಖರ್ ಉರಿಕೊಳ್ಳಿ ರೈತ ದಂಪತಿ ಕಾಂಗ್ರೆಸ್ ಸರಕಾರದ ಗೃಹಲಕ್ಷ್ಮೀ ಹಾಗೂ ಅನ್ನಭಾಗ್ಯ ಯೋಜನೆಯಿಂದ ತಮ್ಮ ಖಾತೆಗೆ ಬಂದ ಸುಮಾರು 40 ಸಾವಿರ ರು.ಗಳನ್ನು ಕೂಡಿಟ್ಟು ತಮ್ಮ ಜಮೀನಿನಲ್ಲಿ ಬೋರ್‌ವೆಲ್ ಕೊರೆಸುವ ಮೂಲಕ ಸ್ವಾವಲಂಬಿ ಜೀವನಕ್ಕೆ ಭದ್ರ ಬುನಾದಿ ಹಾಕಿಕೊಂಡಿದ್ದಾರೆ.

ಗೌತಮ್, ಬೆಂಗಳೂರು

ರೈತರಿಗೆ ಹೊಸ ವಿದ್ಯುತ್ ಸಂಪರ್ಕ ಪಡೆಯುವ ಶುಲ್ಕವನ್ನು 50 ಸಾವಿರದಿಂದ 2.5 ಲಕ್ಷ ರು.ಗಳಿಗೆ ಏರಿಕೆ ಮಾಡಿದ್ದು ಯಾರು..?

ವಿಶ್ವವಾಣಿ ಕ್ಲಬ್ ಹೌಸ್
ಕಾರ್ನರ್ 31.12.2024

ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ
ಶ್ರೀ ಸತ್ಯೇಶ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

- ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಗ್ರಾಮ ರೇಷ್ಮೆ ಇಲಾಖೆ ಜಮೀನಿಗೆ ಹೊಂದಿಕೊಂಡ ಸರ್ವೆ ನಂ.52 ಸುತ್ತಮುತ್ತ ಜಮೀನುಗಳಲ್ಲಿ ಕಳೆದ ಎರಡು ವರ್ಷಗಳಿಂದ ಕರೆಂಟ್ ವೈರ್ ಜೋತು ಬಿದ್ದಿರುವುದು.
- **ಪರಿಹಾರ:** 0ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಗ್ರಾಮ ರೇಷ್ಮೆ ಇಲಾಖೆ ಜಮೀನಿಗೆ ಹೊಂದಿಕೊಂಡ ಸರ್ವೆ ನಂ.52 ಸುತ್ತಮುತ್ತ ಜಮೀನುಗಳಲ್ಲಿ ಜೋತು ಬಿದ್ದಿರುವ ಕರೆಂಟ್ ವೈರ್‌ಗಳನ್ನು ಸರಿಪಡಿಸಲು ಕ್ರಮವಹಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಸಿಲಿಂಡರ್ ಸ್ಫೋಟ: ಸಾವಿನ ಸಂಖ್ಯೆ 7 ಕ್ಕೆ

ಹುಬ್ಬಳ್ಳಿ: ಉಣಕಲ್‌ನ ಅಚ್ಚವ್ವನ ಕಾಲೋನಿಯಲ್ಲಿ ನಡೆದ ಗ್ಯಾಸ್ ಸಿಲಿಂಡರ್ ಸೋರಿಕೆ ಪ್ರಕರಣದಲ್ಲಿ ಮತ್ತೋರ್ವ ಮಲಾಧಾರಿ ಭಾನುವಾರ ಸಂಜೆ ಚಿಕಿತ್ಸೆ ಫಲಿಸದೇ ಸಾವಿಗೀಡಾಗಿದ್ದು, ಸತ್ತವರ ಸಂಖ್ಯೆ 7 ಕ್ಕೆ ಏರಿದೆ. ತೇಜಸ್ ಸತಾರೆ ಎಂಬ ಮಾಲಾಧಾರಿ ಚಿಕಿತ್ಸೆ ಫಲಿಸದೇ ಸಾವಿಗೀಡಾಗಿದ್ದು, ತೇಜಸ್ ಹೋಟೆಲ್ ನಲ್ಲಿ ಕುಕ್ ಆಗಿ ಕೆಲಸ ಮಾಡು ತ್ತಿದ್ದ.

ಘಟನೆಯಲ್ಲಿ ಇನ್ನೋ ರ್ವನ ಸ್ಥಿತಿಯೂ ಗಂಭೀರ ವಾಗಿದೆ. ಘಟನೆಯ ಕುರಿತು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಮೃತ ಅಯ್ಯಪ್ಪಸ್ವಾಮಿ ಮಾಲಾಧಾರಿಗಳ ಕುಟುಂಬಕ್ಕೆ ಸರಕಾರ 5 ಲಕ್ಷ ರು. ಪರಿಹಾರ ಘೋಷಣೆ ಮಾಡಿದೆ.

ಜೋಗ ವೀಕ್ಷಣೆ ನಿರ್ಬಂಧ ತೆರವು

ಶಿವಮೊಗ್ಗ: ಹೊಸವರ್ಷದ ಹಿನ್ನೆಲೆಯಲ್ಲಿ ಅತಿಹೆಚ್ಚು ಪ್ರವಾಸಿಗರು ಬರುತ್ತಿರುವುದರಿಂದ ಜೋಗ ಜಲಪಾತ ವೀಕ್ಷಣೆಗೆ ಇದ್ದ ವಿಧಿಸಿದ್ದ ನಿರ್ಬಂಧವನ್ನು ಶಿವಮೊಗ್ಗ ಜಿಲ್ಲಾಡಳಿತ ತೆರವುಗೊಳಿಸಿದೆ. ಜೋಗ ಜಲಪಾತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವು ದರಿಂದ ಜ.1 ರಿಂದ ಮಾ.15 ರವರೆಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿತ್ತು. ಹೊಸವರ್ಷಾಚರಣೆ ಹಿನ್ನೆಲೆ ಯಲ್ಲಿ ವ್ಯಾಪಕ ವಾಗಿ ಪ್ರವಾಸಿಗರು ಜೋಗಕ್ಕೆ ಬರುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಜೋಗ ನಿರ್ವಹಣಾ ಪ್ರಾಧಿಕಾರದ ಪ್ರವೇಶದ್ವಾರ ಬಿಟ್ಟು ಉಳಿದ ಸ್ಥಳಗಳಿಂದ ಜೋಗ ಜಲಪಾತ ವೀಕ್ಷಿಸಲು ಪ್ರವಾಸಿ ಗರಿಗೆ ಅವಕಾಶ ಕಲ್ಪಿಸಲಾಗಿದೆ. ಮುಖ್ಯರಸ್ತೆಯ ವ್ಯೂ ಪಾಯಿಂಟ್, ಯಾತ್ರಿನಿವಾಸ, ರಾಣಿಫಾಲ್ಸ್, ಮುಂಬಯಿ ಬಂಗಲೆ, ಮುಂಗಾರು ಮಳೆ ಪಾಯಿಂಟ್ ಸೇರಿದಂತೆ ವಿವಿಧ ಸ್ಥಳಗಳಿಂದ ಪ್ರವಾಸಿಗರು ಜಲಪಾತದ ಸೊಬಗು ಕಣ್ತುಂಬಿಕೊಳ್ಳಬಹುದು ಎಂದು ಪ್ರವಾಸೋದ್ಯಮ ಇಲಾಖೆ ತಿಳಿಸಿದೆ.

ನಕ್ಸಲರಿಗೆ ಸಿಎಂ ಸಿದ್ದರಾಮಯ್ಯ ಸ್ಪಷ್ಟ ಸಂದೇಶ | ಶರಣಾಗಿ, ಮುಖ್ಯವಾಹಿನಿಗೆ ಬರಬೇಕು

ನಕ್ಸಲರ ಶರಣಾಗತಿಗೆ ಅವಕಾಶ ಇಲ್ಲದಿದ್ದರೆ ಕಠಿಣ ಕ್ರಮ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಕ್ಸಲೀಯ ಚಟುವಟಿಕೆಯಲ್ಲಿ ತೊಡಗಿರುವ ನಕ್ಸಲೀಯರು ಶರಣಾಗಿ ಮುಖ್ಯವಾಹಿನಿಗೆ ಬರಲು ಬಯಸಿದರೆ ಅದಕ್ಕೆ ಬೇಕಿರುವ ಅಗತ್ಯ ಕ್ರಮವನ್ನು ಸರಕಾರ ಕೈಗೊಳ್ಳಲಿದೆ. ಆದರೆ ಕಾನೂನನ್ನು ಕೈಗೆತ್ತಿಕೊಳ್ಳುವ ಮತ್ತು ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ವಿರುದ್ಧ ಕಠಿಣವಾದ ಕಾನೂನು ಕ್ರಮವನ್ನು ಸರಕಾರ ಕೈಗೊಳ್ಳಲಿದೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿ ರುವ ಅವರು, ನಕ್ಸಲೀಯ ಚಟುವಟಿಕೆಗಳಲ್ಲಿ ತೊಡಗಿರುವವರು ಶರಣಾಗಿ ಮುಖ್ಯವಾಹಿನಿಗೆ ಬರಬೇಕೆಂದು ಸರಕಾರವು ಬಯಸುತ್ತದೆ. ಈ ಮಧ್ಯೆ ನಕ್ಸಲೀಯರು ಪ್ರಜಾ ತಾಂತ್ರಿಕತೆಯ ಮುಖ್ಯವಾಹಿನಿಗೆ ಬರಬೇಕೆಂದು ಪ್ರತಿಪಾದಿಸುವ ಹಾಗೂ ಜೀವಹಾನಿ ಯಾವ ಕಡೆಯೂ ನಡೆಯಬಾರದು ಎಂದು ಬಯಸುವ ವಿವಿಧ ಪ್ರಗತಿಪರ ಹಾಗೂ ಜನಪರ ವೇದಿಕೆಗಳ ಹಲವಾರು ಮುಖಂಡರು ನನ್ನನ್ನು ಭೇಟಿ ಮಾಡಿರುತ್ತಾರೆ.

ಶಾಂತಿ ನೆಲೆಸಲು ಕಟ್ಟುನಿಟ್ಟಿನ ಕ್ರಮ: ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮತ್ತು ಶಾಂತಿ ನೆಲೆಸುವಂತೆ ಮಾಡಲು ಸರಕಾರವು ಕಟ್ಟುನಿಟ್ಟಿನ ಕ್ರಮಕ್ಕೆ ಗೊಳ್ಳಲು ಹಿಂಜರಿಯುವುದಿಲ್ಲ. ಆದರೆ ನಕ್ಸಲೀಯರು ಮುಖ್ಯವಾಹಿನಿಗೆ ಬರಲು ಮಾತುಕತೆ ನಡೆಸಲು ಮುಂದಾಗಿದ್ದರೆ, ಈ ಪ್ರಕ್ರಿಯೆಯನ್ನು ಸರಕಾರ ಕಾನೂನಿನ ಚೌಕಟ್ಟಿನಲ್ಲಿ ಸ್ವಾಗತಿಸಿ, ಸಹಾನುಭೂತಿಯಿಂದ ನಡೆದುಕೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

> ಶರಣಾಗುವ ನಕ್ಸಲರ ಮೇಲಿನ ಮೊಕದ್ದಮೆ/ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿ ಸಲು ಸರಕಾರದಿಂದ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಶರಣಾಗತರಾದ ನಕ್ಸಲೀಯರ ಅಗತ್ಯಗಳನ್ನು ಸಹ ಗುರುತಿಸಿ ಅವರಿಗೂ ಸಹ ಪುನರ್ವಸತಿ ಕಲ್ಪಿಸುವ ಪ್ರಕ್ರಿಯೆಯನ್ನು ಮಾಡಲಾಗುತ್ತಿದೆ.
> -**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಹಂತ ಹಂತವಾಗಿ ಆರ್ಥಿಕ ನೆರವು: ನಕ್ಸಲೀಯರು ಮುಖ್ಯವಾಹಿನಿಗೆ ಬರಲು ಮುಂದಾದ್ದಲ್ಲಿ ಶರಣಾಗತಿ ಕುರಿತು ಈಗಾಗಲೇ ಸರಕಾರವು ನೀತಿಯನ್ನು ರೂಪಿಸಿದ್ದು, ಈ ನೀತಿಯನ್ನು ಸರಳೀಕರಣಗೊಳಿಸಿ, ಸಮರ್ಪಕ ವಾಗಿ ಜಾರಿ ಮಾಡಲಾಗುವುದೆಂದು ಭರವಸೆ ನೀಡುತ್ತೇನೆ. ನಕ್ಸಲೀಯರ ಶರಣಾಗತಿ ನೀತಿ ಯನ್ವಯ ಹಂತ ಹಂತವಾಗಿ ಆರ್ಥಿಕ ನೆರವು ನೀಡಲಾಗುವುದು ಹಾಗೂ ಆಯುಧಗಳನ್ನು ಸರಕಾರಕ್ಕೆ ಅದ್ಯಾರ್ಪಣೆ ಮಾಡುವ ನಕ್ಸಲೀಯರಿಗೆ ಪ್ರೋತ್ಸಾಹ ಧನ, ಕೌಶಲ್ಯ ತರಬೇತಿಗಳು ನೀಡುವು ದಲ್ಲದೆ ಅವರುಗಳ ಪುನರ್ವಸತಿಗೂ ಸಹ ಎಲ್ಲ ಕ್ರಮಗಳನ್ನು ಸಹಾನುಭೂತಿಯಿಂದ ಹಾಗೂ ಆದ್ಯತೆ ಮೇರೆಗೆ ಪರಿಗಣಿಸಲು ಕ್ರಮವಹಿಸಲಾ ಗುವುದು ಎಂದು ಹೇಳಿದ್ದಾರೆ.

ನಕ್ಸಲರ ಹಾವಳಿ ಹೆಚ್ಚಿಲ್ಲ

ನಕ್ಸಲೀಯರ ಚಟುವಟಿಕೆಗಳು ಕರ್ನಾಟಕದಲ್ಲಿ ಎಂದೂ ನೆರೆಯ ರಾಜ್ಯಗಳಂತೆ ವಿಪರೀತ ಪ್ರಮಾಣದಲ್ಲಿ ನಡೆದಿಲ್ಲ. ಆದರೆ, ಮಲೆನಾಡಿನಲ್ಲಿ ಎರಡು ದಶಕಗಳಿಂದ ಆಗಾಗ್ಗೆ ನಕ್ಸಲೀಯ ಚಟುವಟಿಕೆಗಳು ಕಾಣುತ್ತಲಿವೆ ಮತ್ತು ಆ ಕಾರಣದಿಂದ ಹಿಂಸೆ ಹಾಗೂ ಸಾವು-ನೋವುಗಳು ಸಂಭವಿಸಿವೆ. ಹಲವಾರು ಅಮಾಯಕರ, ಪೊಲೀಸರ ಮತ್ತು ನಕ್ಸಲೀಯ ಚಟುವಟಿಕೆಗಳಲ್ಲಿ ಇದ್ದವರ ಜೀವಹಾನಿಯೂ ಆಗಿದೆ. ಆದರೆ, ಪ್ರಜಾತಾಂತ್ರಿಕ ಸಮಾಜದಲ್ಲಿ ಬಂದೂಕಿನ ಮೂಲಕ ಬದಲಾವಣೆ ತರಲು ಹೊರಟಿರುವ ಆದರ್ಶವಾದಿಗಳು ತಮ್ಮ ಜೀವವನ್ನೂ ತೆತ್ತುಕೊಳ್ಳುತ್ತಾರೆ, ಇತರರ ಜೀವಹಾನಿಗೂ ಕಾರಣವಾಗುತ್ತಾರೆ. ಇದು ನೋವಿನ ವಿಚಾರವಾದರೂ, ಸಂವಿಧಾನಬದ್ಧವಾಗಿ ಆಡಳಿತ ನಡೆಸುವ ಸರಕಾರ ಸುಮ್ಮನೇ ಕೂರುವುದು ಸಾಧ್ಯವಿಲ್ಲ ಎಂದಿದ್ದಾರೆ.

ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಷಡಾಕ್ಷರಿ ಸ್ಪಷ್ಟನೆ

ರಾಜ್ಯದ ನೌಕರರಿಗೂ ಕೇಂದ್ರ ವೇತನ ಜಾರಿ ನಮ್ಮ ಆದ್ಯತೆ

ಶಿವಮೊಗ್ಗ: ಹಳೇ ಪಿಂಚಣಿ ಯೋಜನೆ, ಆರೋಗ್ಯ ಸೇವೆ ಹಾಗೂ ಕೇಂದ್ರದ ವೇತನ ಶ್ರೇಣಿ ಜಾರಿಯೇ ನಮ್ಮ ಮೊದಲ ಆದ್ಯತೆ ಎಂದು ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿ ನಡೆದ ಚುನಾವಣೆಯಲ್ಲಿ ನಮ್ಮ ಸರಕಾರಿ ನೌಕರರು ಸತ್ಯ, ನ್ಯಾಯ, ಸೇವೆ, ಕಾಯಕ, ಸಂಘಟನೆಗೆ ಆಶೀರ್ವಾದ ಮಾಡಿದ್ದರೆ. ನಮ್ಮ ಚುನಾವಣೆ ಪ್ರಜಾಪ್ರಭುತ್ವದ ಆಶಯಗಳಂತೆಯೇ ನಡೆದಿದೆ. ನಾನು ಕಳೆದ 5 ವರ್ಷಗಳಿಂದ ಸಂಘಟನೆ ಮಾಡಿದ್ದೇನೆ. ನಾನು ಪ್ರವಾಸ ಮಾಡಿದ ಎಲ್ಲಾ ಕಡೆ ಒಳ್ಳೆಯ ವಾತಾವರಣ ಇತ್ತು. ಆದರೆ, ಚುನಾವಣೆಯು ನಾವು ಅಂದುಕೊಂಡಂತೆ ಆಗಲಿಲ್ಲ. ಆದರೂ ಮತದಾರ ಪ್ರಭುಗಳು ನಮ್ಮನ್ನು ಚುನಾವಣೆಯಲ್ಲಿ ಜಯಶೀಲರನ್ನಾಗಿ ಮಾಡಿದ್ದಾರೆ ಎಂದರು.

ನೌಕರರ ಮನ ಗೆದ್ದಿದ್ದೇವೆ: ಚುನಾವಣಾ ಮತ ಎಣಿಕೆಯ ಜೊತೆಗೆ ನೌಕರರ ಮನವನ್ನು ಗೆದ್ದಿದ್ದೇವೆ. ಚುನಾವಣೆ ಅಂದರೆ ತಂತ್ರಗಾರಿಕೆ ಇರುತ್ತದೆ. ನನ್ನನ್ನು 67 ಮತಗಳ ಅಂತರದಿಂದ ಗೆಲ್ಲಿಸಿದ್ದಾರೆ. ಹಿಂದೆ 52 ಮತಗಳಿಂದ ಗೆದ್ದಿದ್ದೆ. ಚುನಾವಣೆ ಈ ಭಾರಿ ಕಷ್ಟ ಇದೆ ಅಂತ ನೌಕರರು ಭಾವಿಸಿದ್ದರು. ಆದರೆ, ರಾಜ್ಯ ಸರಕಾರಿ ನೌಕರರು ನನ್ನ ಮೇಲೆ ವಿಶ್ವಾಸ ಇಟ್ಟು ಗೆಲ್ಲಿಸಿದ್ದಾರೆ ಎಂದು ಹೇಳಿದರು.

2025 ಓಪಿಎಸ್ ಯೋಜನೆ ಜಾರಿಮಾಡುವ ವರ್ಷವಾಗಿದೆ ಎಂದು ನಾವು ಘೋಷಿಸಿದ್ದೇವೆ . ಈಗಾಗಲೇ ಓಪಿಎಸ್ ಐದು ರಾಜ್ಯಗಳಲ್ಲಿ ಜಾರಿ ಆಗಿದೆ, ನಮ್ಮದು ಆರನೇ ರಾಜ್ಯವಾಗಲಿದೆ. ಈ ವಿಚಾರವಾಗಿ ಸಂಘಟನೆಯಲ್ಲಿ ರಾಜಿ ಇಲ್ಲ. ಕಾಂಗ್ರೆಸ್ ಸಹ ಓಪಿಎಸ್ ಬಗ್ಗೆ ಪ್ರಣಾಳಿಕೆಯಲ್ಲಿ ತಿಳಿಸಿತ್ತು ಎಂದರು.

ಕೇಂದ್ರದ ವೇತನ ನೀತಿ ಜಾರಿಯಾಗಲಿ

ಶಿವಮೊಗ್ಗ ಜಿಲ್ಲೆಯ 28 ಮತಗಳಲ್ಲಿ 27 ಮತಗಳು ನನಗೆ ಬಂದಿದ್ದವು. ನನ್ನ ಗೆಲುವಿನಿಂದ ಜವಾಬ್ದಾರಿ ಹೆಚ್ಚಾಗಿದೆ. ಇದರಿಂದ ನನ್ನ ರಚನಾತ್ಮಕ ಕೆಲಸ ಸಹ ಹೆಚ್ಚಾಗಿದೆ. ನಮ್ಮ ಪ್ರಣಾಳಿಕೆಯಂತೆ ಆರೋಗ್ಯ ಸೇವೆ, ಹಳೆ ಪಿಂಚಣಿ ವ್ಯವಸ್ಥೆ ಬರಬೇಕು. ಕೇಂದ್ರದ ಸಂಬಳ ನೀತಿ ಜಾರಿ ಆಗಬೇಕು. ಆರೋಗ್ಯ ಸೇವೆ ಕುರಿತು ಸಿಎಂ ಹಾಗೂ ಡಿಸಿಎಂ ಅವರನ್ನು ಭೇಟಿಯಾಗಿ ಆರೋಗ್ಯ ಸೇವೆ ಜಾರಿ ಕುರಿತು ಒತ್ತಡ ಹಾಕಲಿದ್ದೇವೆ. ಹಳೇ ಪಿಂಚಣಿ ವ್ಯವಸ್ಥೆ ಜಾರಿಯಾಗಬೇಕೆಂದು ಆಗ್ರಹಿಸಿದ್ದೇವೆ ಎಂದು ಷಡಾಕ್ಷರಿ ಸ್ಪಷ್ಟಪಡಿಸಿದರು.

ಹರೇಕಳ ಹಾಜಬ್ಬಗೆ ಜೆ.ಎಂ.ಇಮಾಂ ಸ್ಮಾರಕ ಪ್ರಶಸ್ತಿ

ದಾವಣಗೆರೆ: ಜಗಳೂರಿನ ಜೆ. ಮಹಮ್ಮದ್ ಇಮಾಂ ನೆನಪಿಗಾಗಿ ಜೆ.ಎಂ.ಇಮಾಂ ಸ್ಮಾರಕ' ರಾಜ್ಯಮಟ್ಟದ ಪ್ರಶಸ್ತಿಗೆ ದಕ್ಷಿಣ ಕನ್ನಡ ಜಿಲ್ಲೆಯ ಅಕ್ಷರ ಸಂತ ಹರೇಕಳ ಹಾಜಬ್ಬ ಅವರನ್ನು ಆಯ್ಕೆ ಮಾಡಲಾಗಿದೆ. ಕಿತ್ತಳೆ ಹಣ್ಣಿನ ವ್ಯಾಪಾರದ ಹಣದಿಂದ ಗ್ರಾಮದಲ್ಲಿ ಶಾಲೆ ತೆರೆದವರು ಹಾಜಬ್ಬ. ಇವರ ಸೇವೆಯನ್ನು ಗುರುತಿಸಿ ಸ್ಮಾರಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು 50,000 ನಗದು ಒಳಗೊಂಡಿದೆ. ಜ.4ರಂದು ಜಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ: ಬಿಜೆಪಿಗೆ ಸಚಿವ ಜಾರ್ಜ್ ತರಾಟೆ

ಗಣಪತಿ ಕೇಸ್ ನಲ್ಲಿ ರಾಜೀನಾಮೆ ನೀಡಿದ್ದೆ

ಚಿತ್ರದುರ್ಗ: ಕಂಟ್ರ್ಯಾಕ್ಟರ್ ಸಚಿನ್ ಪಾಂಚಾಳ್ ಆತ್ಮಹತ್ಯೆ ಕೇಸ್ ವಿಚಾರಕ್ಕೂ ಪ್ರಿಯಾಂಕ್ ಖರ್ಗೆಗೂ ಯಾವುದೇ ಸಂಬಂಧ ಇಲ್ಲ, ಬಿಜೆಪಿಯವರು ಹಿಟ್ ಅಂಡ್ ರನ್ ಮಾಡುತ್ತಾರೆ,ಬಿಜೆಪಿಗರು ಹೇಳುವ ಮಾತಿಗೆ ಮೌಲ್ಯವಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಕಿಡಿ ಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಜಾರ್ಜ್ ಡಿ.ಕೆ. ರವಿ ಕೇಸ್ ಹಾಗೂ ಡಿವೈಎಸ್ ಪಿ ಗಣಪತಿ ಕೇಸ್ ನಲ್ಲಿ ಬಿಜೆಪಿಯವರು ಪ್ರತಿಭಟನೆ ಮಾಡಿದ್ದರು. ಅಸೆಂಬ್ಲಿಯಲ್ಲಿ ಕುಳಿತು, ಮಲಗಿ ಧರಣಿ ಮಾಡಿದ್ದರು.ನಾನು ಗಣಪತಿ ಕೇಸ್ ನಲ್ಲಿ ರಾಜೀನಾಮೆ ಸಲ್ಲಿಸಿದ್ದೆ.ಸಿಐಡಿ, ಸಿಬಿಐ ನವರು ಕೂಡಾ ನನ್ನ ಮೇಲೆ ಬಿ.ರಿಪೋರ್ಟ್ ಕೊಟ್ಟಿದ್ದರು.ಸುಪ್ರೀಂ ಕೋರ್ಟ್ ನಲ್ಲಿ ಕೂಡಾ ನನ್ನ ಪರ ತೀರ್ಪು ಬಂತು.ಅವರು ಯಾರಾದರೂ ಮತ್ತೆ ಆ ವಿಷಯದಲ್ಲಿ ಧ್ವನಿ ಎತ್ತಿದರಾ ಎಂದು ಪ್ರಶ್ನಿಸಿದರು.

ಸಚಿವ ಸಂಪುಟ ವಿಚಾರದಲ್ಲಿ ಸಿಎಂ, ಡಿಸಿಎಂ, ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಜಾರ್ಜ್ ಹೇಳಿದರು.

ಸಂವಿಧಾನ ಹಿಡಿದು ಓಡಾಡುವುದು ದೇಶದ್ರೋಹದ ಕೆಲಸ ಎಂಬ ಕೇಂದ್ರ ಪ್ರಲ್ಹಾದ್ ಜೋಶಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ ಸಂವಿಧಾನದ ಮೇಲೆ ನಮ್ಮ ದೇಶ ನಡೆಯುತ್ತಿದೆ. ಅದೇ ಸಂವಿಧಾನ ಬೇಡ ಎಂದು ಹೇಳಿದ್ದವರು ಯಾರು ಎಂದು ಪ್ರಶ್ನಿಸಿದರು.



> ಶಾಸಕ ಟಿ.ಬಿ.ಜಯಚಂದ್ರ ಸೀನಿಯರ್ ಆಗಿದ್ದು ಅವರು ಮುಂದೆ ಕ್ಯಾಬಿನೆಟ್ ಗೆ ಬರಬಹುದು. ಸಂಪುಟಕ್ಕೆ ಸೇರಿಸೋದು ಬಿಡುವುದು ಹೈ ಕಮಾಂಡ್ ತೀರ್ಮಾನ. ಅವರು ಕ್ಯಾಬಿನೆಟ್ ಗೆ ಸೇರಬೇಕು ಅನ್ನೋದು ನನ್ನ ಶಿಫಾರಸ್ಸು. ಅದರ ತೀರ್ಮಾನ ಹೈ ಕಮಾಂಡ್ ಮಾಡಲಿ.
> -**ಕೆ.ಜೆ.ಜಾರ್ಜ್,** ಇಂಧನ ಸಚಿವ

ದಾಖಲೆ ಕೊಟ್ಟರೆ ತನಿಖೆ ಮಾಡುತ್ತೇವೆ

ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂಬ ಜಗದೀಶ್ ಶೆಟ್ಟರ್ ಅವರ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ ರಾಜ್ಯದ ಮುಖ್ಯಮಂತ್ರಿ ಆಗಿದ್ದವರು ಶೆಟ್ಟರ್, ದಾಖಲೆ ಕೊಟ್ಟರೆ ತನಿಖೆ ಮಾಡುತ್ತೇವೆ.ಯಾರು ತಪ್ಪಿತಸ್ಥರು ಇದ್ದಾರೆ ಅವರ ವಿರುದ್ಧ ಕ್ರಮ ವಹಿಸುತ್ತೇವೆ ಎಂದು ಇಂಧನ ಸಚಿವ ಕೆ. ಜೆ.ಜಾರ್ಜ್ ಹೇಳಿದರು.

ನಾಲ್ಕು ತಲೆಬುರುಡೆ, ಎಲುಬು ಇಟ್ಟು ಪೂಜೆ

ಬಳ್ಳಾರಿ: ನಗರದ ಮಾರ್ಕಂಡೇಯ ಕಾಲೋನಿಯಲ್ಲಿ ಜನರನ್ನು ಭಯಬೀಳುವ ರೀತಿಯಲ್ಲಿ ತಲೆಬುರುಡೆ, ಕೈ, ಕಾಲುಗಳ ಎಲುಬುಗಳು ಪತ್ತೆಯಾಗಿವೆ. ನಾಲ್ಕು ತಲೆಬುರುಡೆ, ಎಲುಬುಗಳನ್ನು ಮುಂದಿಟ್ಟು, ಕೂದಲು ಸುಟ್ಟು, ದೀಪ ಹಚ್ಚಿಟ್ಟು ಪೂಜೆ ಮಾಡಲಾಗಿದೆ. ಸೋಮವಾರ ಎಳ್ಳು ಅಮಾವಾಸ್ಯೆ ಹಿನ್ನೆಲೆಯಲ್ಲಿ ವಾಮಾಚಾರ ಮಾಡಿರಬಹುದು ನಿವಾಸಿಗಳು ಹೇಳುತ್ತಿದ್ದಾರೆ. ತಲೆಬುರುಡೆ ಪತ್ತೆಯಾದ ಸ್ಥಳದಲ್ಲಿ ನೀರಿನ ಟ್ಯಾಂಕ್ ಇದೆ. ಆದರೆ ಭಯದಿಂದ ನೀರು ತೆಗೆದುಕೊಂಡು ಹೋಗಲು ಹಿಂಜರಿಯುತ್ತಿದ್ದಾರೆ. ಪಕ್ಕದಲ್ಲೇ ಇರುವ ಅಂಗನವಾಡಿಗೆ ಮಕ್ಕಳನ್ನು ಕಳುಹಿಸಲು ಪೋಷಕರು ಭಯಪಡುತ್ತಿದ್ದಾರೆ.

ರಾಜ್ಯಾದ್ಯಂತ 3 ಸಾವಿರ ಮೆಗಾವ್ಯಾಟ್ ಸೌರವಿದ್ಯುತ್ ಉತ್ಪಾದನೆ ಗುರಿ: ಜಾರ್ಜ್

ರೈತರಿಗೆ ಹಗಲಿನಲ್ಲೂ ವಿದ್ಯುತ್ ಪೂರೈಕೆ

ತುಮಕೂರು: ರಾಜ್ಯದಲ್ಲಿ ಕೃಷಿ ಕ್ಷೇತ್ರವನ್ನು ಸಬಲೀಕರಣಗೊಳಿಸಲು ಸೌರಶಕ್ತಿ ಮೂಲಕ ಹಗಲಿನಲ್ಲಿ ರೈತರಿಗೆ ವಿದ್ಯುತ್ ಪೂರೈಕೆ ಮಾಡಲು ಯೋಜಿಸಲಾಗಿದೆ ಎಂದು ಇಂಧನ ಸಚಿವ ಕೆ. ಜೆ. ಜಾರ್ಜ್ ತಿಳಿಸಿದರು.

ಜಿಲ್ಲೆಯ ಶಿರಾ ತಾಲೂಕಿನ ಚಂಗಾವರ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿ ಪಿಎಂ ಕುಸುಮ್ ಘಟಕ ಸಿ ಯೋಜನೆಯಡಿ ನಿರ್ಮಿಸುತ್ತಿರುವ 2.4 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ಪ್ಲಾಂಟ್ ಅಳವಡಿಕೆ ಕಾಮಗಾರಿಯನ್ನು ವೀಕ್ಷಿಸಿದ ಅವರು, ರೈತರು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಅನುವಾಗುವಂತೆ ತಡೆರಹಿತ ಸುಸ್ಥಿರ ವಿದ್ಯುತ್ ಸರಬರಾಜು ಮಾಡಲು ಈ ಸೋಲಾರ್ ಪ್ಲಾಂಟ್ ಗಳನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಶಿರಾ ತಾಲೂಕಿನ ಚಂಗಾವರದಲ್ಲಿ ನಿರ್ಮಿಸಿರುವ ಸೋಲಾರ್ ಪ್ಲಾಂಟ್‌ನಿಂದ 944 ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಒದಗಿಸಲು ಸಾಧ್ಯವಾಗಲಿದೆ. ಈ ಸೋಲಾರ್ ಪ್ಲಾಂಟ್ ನಿರ್ಮಾಣಕ್ಕಾಗಿ 11 ಎಕರೆ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಚಂಗಾವರದಲ್ಲಷ್ಟೇ ಅಲ್ಲ, ತಾಲೂಕಿನ ಚಿಕ್ಕಬಾಣಗೆರೆಯಲ್ಲಿಯೂ 25 ಎಕರೆ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಂಡು 6.5 ಮೆಗಾ ವ್ಯಾಟ್ ಸಾಮರ್ಥ್ಯದ ಸೋಲಾರ್ ಪ್ಲಾಂಟ್ ನಿರ್ಮಿಸಲಾಗಿದೆ. ಇದರಿಂದ 1355 ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವ ಯೋಜನೆ ಹೊಂದಲಾಗಿದೆ ಎಂದು ತಿಳಿಸಿದರು.

ಶಿರಾ ತಾಲೂಕಿನ ಚಂಗಾವರ ಗ್ರಾಮದಲ್ಲಿ ಪಿಎಂ ಕುಸುಮ್ ಯೋಜನೆಗೆ ಚಾಲನೆ ನೀಡಲಾಯಿತು. ಇಂಧನ ಸಚಿವ ಕೆ.ಜೆ.ಜಾರ್ಜ್, ಶಾಸಕ ಟಿ.ಬಿ.ಜಯಚಂದ್ರ ಇದ್ದರು.

ರಾಜ್ಯಾದ್ಯಂತ ಕುಸುಮ್-ಸಿ ಯೋಜನೆ ಆರಂಭ

ಶಿರಾ ಶಾಸಕ ಹಾಗೂ ದೆಹಲಿಯಲ್ಲಿ ರಾಜ್ಯ ಸರಕಾರದ ಪ್ರತಿನಿಧಿ ಟಿ.ಬಿ.ಜಯಚಂದ್ರ ಮಾತನಾಡಿ, ರಾಜ್ಯಾದ್ಯಂತ ಸರಕಾರ ಕುಸುಮ್-ಸಿ ಯೋಜನೆಯ ಕಾರ್ಯಾರಂಭ ಮಾಡಿದ್ದು, ಪ್ರಾರಂಭಿಕವಾಗಿ ಶಿರಾದ ಚಂಗಾವರ ಹಾಗೂ ಚಿಕ್ಕಬಾಣಗೆರೆ ಗ್ರಾಮಗಳಲ್ಲಿ ಸೌರಘಟಕ ನಿರ್ಮಿಸಲಾಗಿದೆ. ಇದರಿಂದ ಸ್ಥಳೀಯ ರೈತರಿಗೆ ತಡೆ ರಹಿತ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ತಿಳಿಸಿದರು.

> ರಾಜ್ಯಾದ್ಯಂತ ಸೋಲಾರ್ ಘಟಕಗಳನ್ನು ನಿರ್ಮಿಸಿ 3000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಮಲೆನಾಡು ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಉಳಿದೆಡೆ ಪ್ರದೇಶಗಳಲ್ಲಿ ಸೌರ ವಿಕಿರಣ ಶಕ್ತಿ ಉತ್ತಮವಾಗಿರುವುದರಿಂದ ಎಲ್ಲ ಜಿಲ್ಲೆಗಳಲ್ಲಿಯೂ ಸೌರಘಟಕ ನಿರ್ಮಿಸಲಾಗುವುದು.
> -**ಕೆ.ಜೆ. ಜಾರ್ಜ್,** ಇಂಧನ ಸಚಿವ

ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಂತೇಶ್ ಬೀಳಗಿ, ಬೆಸ್ಕಾಂ ಎಂಜಿನಿಯರ್‌ಗಳಾದ ರಮೇಶ್ ಗುಡಿ, ನರಸಿಂಹಮೂರ್ತಿ, ಕೆಪಿಟಿಸಿಎಲ್ ಅಧೀಕ್ಷಕ ಎಂಜಿನಿಯರ್ ಡಿ. ಶಿವಕುಮಾರ್, ಕಾರ್ಯನಿರ್ವಾಹಕ ಎಂಜಿನಿಯರ್ ಜಿ. ಜಗದೀಶ್, ತುಮಕೂರು ಎಂಜಿನಿಯರ್ ಪ್ರಶಾಂತ್ ಕೂಡ್ಲಿಗಿ ಇದ್ದರು.

ಸೂರ್ಯನ ಕೈ ಹಿಡಿಯಲಿರುವ ಚಂದ್ರ ಚಕೋರಿ

ಮೋದಿಯಿಂದ ಶಹಬಾಸ್‌ಗಿರಿ ಪಡೆದಿದ್ದ ಯುವತಿ: ಅಯೋಧ್ಯೆ ರಾಮ ಮಂದಿರದ ಉದ್ಘಾಟನೆಯ ಸಮಯದಲ್ಲಿ ಶ್ರೀರಾಮನ ಕುರಿತಾಗಿ ಸಿವಶ್ರೀ ಸ್ಕಂದಪ್ರಸಾದ್ ಅವರು ಹಾಡಿದ್ದ ಹಾಡಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಸಿವಶ್ರೀ ಅವರು ಕನ್ನಡದ 'ಪೂಜಿಸಲೆಂದೇ ಹೂವಗಳ ತಂದೆ...' ಹಾಡನ್ನು ತಮ್ಮ ಯುಟ್ಯೂಬ್ ಚಾನೆಲ್‌ನಲ್ಲಿ ಹಾಕಿದ್ದರು. ಇದನ್ನು ಗಮನಿಸಿದ್ದ ಮೋದಿ ಅವರು, ಈ ಹಾಡಿನ ಲಿಂಕ್ ಟ್ವೀಟ್ ಮಾಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು. ಇವರು ಹಾಡಿರುವ ರಾಮ, ಕೃಷ್ಣ, ಈಶ್ವರ, ಪಾಂಡುರಂಗ, ಸೌಂದರ್ಯ ಲಹರಿ ಸೇರಿದಂತೆ ಭಕ್ತಿಗೀತೆ, ಕೀರ್ತನೆ ಹಾಗೂ ಭಜನೆಗೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.





ವಿಶ್ವವಾಣಿ

ಸಂಪಾದಕೀಯ

ಪ್ರಯಾಣವೇ ಕೆಟ್ಟ ಕನಸಾದರೆ..

181 ಪ್ರಯಾಣಿಕರಿದ್ದ ವಿಮಾನವೊಂದು ದಕ್ಷಿಣ ಕೊರಿಯಾದ ಮುವಾನ್ ವಿಮಾನ ನಿಲ್ದಾಣದಲ್ಲಿ ಪತನಗೊಂಡು 179 ಮಂದಿ ಅಸುನೀಗಿದ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಮತ್ತೊಂದೆಡೆ, 'ಏರ್ ಕೆನಡಾ ಎಕ್ಸ್‌ಪ್ರೆಸ್' ಸಂಸ್ಥೆಯ ವಿಮಾನವು ಕೆನಡಾದ ಹ್ಯಾಲಿಫ್ಯಾಕ್ಸ್ ಸ್ಟ್ಯಾನ್‌ಫೀಲ್ಡ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಬೇಕಿದ್ದಾಗ, ಲ್ಯಾಂಡಿಂಗ್ ಗೇರ್ ಕೈಕೊಟ್ಟಿದ್ದಕ್ಕೆ ಮತ್ತು ಚಕ್ರಗಳು ತೆರೆದುಕೊಳ್ಳದೆ ವಿಮಾನವು ರನ್‌ವೇಗೆ ಅಪ್ಪಳಿಸುವಂತಾಗಿದ್ದಕ್ಕೆ ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡ ಸಂಗತಿ ವರದಿಯಾಗಿದೆ. ಕಝುಕಿಸ್ತಾನದಲ್ಲಿ ಅಜರ್ಬೈಜಾನ್ ವಿಮಾನವು ದುರಂತಕ್ಕೀಡಾಗಿ 38 ಜನರ ಸಾವಿಗೆ ಕಾರಣವಾದ ಘಟನೆಯು ಇನ್ನೂ ಹಸಿರಾಗಿರುವಾಗಲೇ ಈ ಎರಡು ಅವಘಡಗಳು ಸಂಭವಿಸಿ ತಲ್ಲಣಕ್ಕೆ ಕಾರಣವಾಗಿವೆ. ಇಂಥ ಘಟನೆಗಳಾದಾಗ ವಿಮಾನ ಪ್ರಯಾಣದ ಸುರಕ್ಷತೆಯ ಬಗೆಗಿನ ಪ್ರಶ್ನೆಗಳು ಮತ್ತೊಮ್ಮೆ ಮುನ್ನೆಲೆಗೆ ಬರುತ್ತವೆ. 'ಅಪಘಾತಗಳು ಅಥವಾ ದುರಂತಗಳು ಅಕಸ್ಮಾತ್ತಾಗಿ ಆಗುವಂಥವು, ಇವು ನಮ್ಮ ಕೈಮೀರಿದಂಥವು' ಎಂಬ ಮಾತೂ ಒಪ್ಪುವಂಥದ್ದೇ. ಆದರೆ, ಇದರಲ್ಲಿ ಮನುಷ್ಯರ ಕರ್ತವ್ಯಲೋಪದ ಪಾಲೆಷ್ಟು? ಎಂಬ ಪ್ರಶ್ನೆಯೂ ನಡುವೆಯೇ ತೂರಿಕೊಳ್ಳುತ್ತದೆ. ಉದಾಹರಣೆಗೆ, ದಕ್ಷಿಣ ಕೊರಿಯಾದ ವಿಮಾನ ನಿಲ್ದಾಣದಲ್ಲಾದ ದುರಂತಕ್ಕೆ ಪಟ್ಟಿ ಮಾಡಲಾಗಿರುವ 'ಲ್ಯಾಂಡಿಂಗ್ ಗೇರ್ ವೈಫಲ್ಯ', 'ಬೆಲ್ಲಿ ಲ್ಯಾಂಡಿಂಗ್', 'ಎಂಜಿನ್‌ಗೆ ಹಕ್ಕಿಯ ಡಿಕ್ಕಿ' ಮುಂತಾದ ಕಾರಣಗಳ ಜತೆಗೆ, 'ಪ್ರತಿಕೂಲ ಹವಾಮಾನವಿದ್ದರೂ ತುರ್ತು ಲ್ಯಾಂಡಿಂಗ್‌ಗೆ ಅವಕಾಶ ನೀಡಿದ ಅಧಿಕಾರಿಗಳ ತಪ್ಪು ನಿರ್ಧಾರ' ಎಂಬ ಕಾರಣವೂ ಸೇರಿದೆ. ಈ ಕೊನೆಯ ಕಾರಣವೇ ಹಲವರಿಂದ ಪ್ರಶ್ನೆಗಳು, ಆಕ್ಷೇಪಗಳು ಹೊಮ್ಮುವುದಕ್ಕೆ ಕಾರಣವಾಗಿರುವುದು. ಏಕೆಂದರೆ, ಇದು ಸಿಬ್ಬಂದಿಯ ಕರ್ತವ್ಯಲೋಪಕ್ಕೆ ಸಂಬಂಧಿಸಿದ್ದು. ಒಂದು ರೀತಿಯಲ್ಲಿ ಇದು, ಎರಡು ರೈಲುಗಳು ಒಂದೇ ಟ್ರ್ಯಾಕ್‌ನಲ್ಲಿ ಪರಸ್ಪರ ಅಭಿಮುಖವಾಗಿ ವೇಗವಾಗಿ ಧಾವಿಸಿ ಅಪ್ಪಳಿಸಿ ಅಪಘಾತಕ್ಕೀಡಾಗುವುದಕ್ಕೆ ಕಾರಣವಾಗುವ, 'ಸಿಗ್ನಲಿಂಗ್ ವ್ಯವಸ್ಥೆ'ಯನ್ನು ನೋಡಿಕೊಳ್ಳುವ ಸಿಬ್ಬಂದಿಯ ಕರ್ತವ್ಯಲೋಪಕ್ಕೆ ಹೋಲುವಂಥದ್ದು. ಪ್ರಾಕೃತಿಕ ದುರಂತಗಳನ್ನು ತಡೆಯಲಾಗದು, ಆದರೆ ನಮ್ಮ ತಪ್ಪಿನಿಂದಾಗಿ ದುರಂತಗಳಾಗದಂತೆ ನೋಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ, ಅಲ್ಲವೇ?

ಸೊಂಪಾದಕೀಯ

ಕೇಸು ಹಾಕಲಾದೀತೇ?!

ನಮ್ಮ ಜನ ಸಿನಿಮಾಗಳನ್ನು ನೋಡಿ ಅದರಿಂದ ಪ್ರೇರೇಪಿತರಾಗುವುದು ಹೊಸ ವಿಷಯ ಏನಲ್ಲ. ಡಾ.ರಾಜ್‌ಕುಮಾರ್ ಅವರ 'ಬಂಗಾರದ ಮನುಷ್ಯ' ಸಿನಿಮಾ ನೋಡಿ ಅನೇಕರು ಮತ್ತೆ ತಮ್ಮ ಹಳ್ಳಿಗೆ ಹಿಂದಿರುಗಿ ವ್ಯವಸಾಯದಲ್ಲಿ ತೊಡಗಿಕೊಂಡಿದ್ದು ಎಲ್ಲರಿಗೂ ಗೊತ್ತು. ಅದು ಒಂದು ಸಿನಿಮಾ ಜನರ ಮೇಲೆ ಮಾಡುವಂಥ ಪ್ರಭಾವ. ಆದರೆ ಪ್ರತಿ ಬಾರಿಯೂ ಈ ಪ್ರಭಾವ ಪಾಸಿಟಿವ್ ಆಗಿ ಇರುತ್ತದೆ ಅಂತ ಹೇಳೋಕೆ ಆಗೋದಿಲ್ಲ. ಯಾಕೆಂದರೆ ಒಳ್ಳೆಯದಕ್ಕೆ ನಮ್ಮ ಜನ ಎಷ್ಟು ಸ್ಪಂದಿಸುತ್ತಾರೋ ಕೆಟ್ಟ ವಿಷಯಕ್ಕೆ ಅದಕ್ಕಿಂತ 100 ಪಟ್ಟು ಜಾಸ್ತಿ ಸ್ಪಂದಿಸುತ್ತಾರೆ ಎನ್ನುವುದು ಸತ್ಯ. ಅದಕ್ಕೆ ಇಲ್ಲಿದೆ ಸಾಕ್ಷಿ. ಇದು ಕೆಲ ತಿಂಗಳ ಹಿಂದಿನ ಕಥೆ. ಸ್ನೇಹಿತನ ಪತ್ನಿಯ ಕೊಲೆ ಆರೋಪದ ಮೇಲೆ ಪೊಲೀಸರ ಅತಿಥಿಯಾಗಿದ್ದ ವ್ಯಕ್ತಿಯೊಬ್ಬ ತನ್ನ ಹೆಂಡತಿಯನ್ನು ಕೊಲೆ ಮಾಡಿರುವ ಕೇಸ್‌ನಲ್ಲಿ ಸಿಕ್ಕಿಬಿದ್ದ. ಅಕ್ಕ ಪಕ್ಕದವರಿಗೂ, ಸ್ನೇಹಿತರಿಗೂ ಅಲ್ಲದೆ ಪೊಲೀಸರಿಗೂ 'ನನ್ನ ಹೆಂಡತಿ ಐದು ವರ್ಷಗಳ ಹಿಂದೆ ಯಾರ ಜತೆಗೋ ಓಡಿಹೋಗಿದ್ದಾಳೆ' ಎಂದು ಹೇಳಿಕೊಂಡೇ ಚಳ್ಳೆಹಣ್ಣು ತಿನ್ನಿಸಿದ್ದ. ಗೃಹಿಣಿಯೊಬ್ಬಳನ್ನು ಕೊಲೆ ಮಾಡಿ ಪೊಲೀಸರ ಅತಿಥಿಯಾಗಿದ್ದ ಇವನನ್ನು ಪೊಲೀಸರು ತಮ್ಮದೇ ಆದ ಭಾಷೆಯಲ್ಲಿ ವಿಚಾರಿಸಿದಾಗ ಐದು ವರ್ಷಗಳ ಹಿಂದೆ ತನ್ನ ಹೆಂಡತಿಯನ್ನು ತಾನೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡ. ಅಂದಹಾಗೆ, 2019ರಲ್ಲಿ ಕೊಲೆ ಮಾಡಿದ್ದ ಈತ ದೇಹವನ್ನು ಹೂತಿಟ್ಟಿದ್ದ. ಆದರೆ ನಂತರ ಬಿಡುಗಡೆಯಾಗಿದ್ದ 'ದೃಶ್ಯ' ಸಿನಿಮಾ ನೋಡಿ ಹೆಣವನ್ನು ಮಣ್ಣಿನಲ್ಲಿ ಬಿಟ್ಟರೆ ಯಾವತ್ತಾದರೂ ಸಿಕ್ಕಿಕೊಳ್ಳುತ್ತೇನೆ ಎಂದು ಹೆದರಿಕೊಂಡು, ಸಿನಿಮಾದ ರೀತಿಯಲ್ಲಿಯೇ ಹೆಣವನ್ನು ಮತ್ತೆ ಭೂಮಿಯಿಂದ ಹೊರ ತೆಗೆದು ಎರಡು ದಿನಗಳ ಕಾಲ ಅದನ್ನು ಸಂಪೂರ್ಣವಾಗಿ ಸುಟ್ಟು ಹಾಕಿದ್ದ. ಆದರೆ ಮಣ್ಣಿನಲ್ಲಿ ಹೂತಿದ್ದ ಹೆಣವನ್ನೇನೋ ತೆಗೆದು ಸುಟ್ಟವನು, ಪೊಲೀಸರ ಎದುರಿಗೆ ಮಾತ್ರ ಬಾಲಸುಟ್ಟ ಬೆಕ್ಕಿನಂತೆ ಗಾಬರಿಗೊಂಡು ಎಲ್ಲವನ್ನೂ ಕಕ್ಕಿದ. ಹಾಗಾಗಿ ಸ್ನೇಹಿತನ ಹೆಂಡತಿಯನ್ನು ಕೊಲೆ ಮಾಡಿದ್ದರ ಜತೆಗೆ ತನ್ನ ಹೆಂಡತಿಯನ್ನು ಕೂಡಾ ಕೊಲೆ ಮಾಡಿದ್ದಾಗಿಯೂ, ಈ ಕೇಸನ್ನು ಮುಚ್ಚಿ ಹಾಕಲು ತನಗೆ 'ದೃಶ್ಯ' ಚಿತ್ರವೇ ಪ್ರೇರಣೆ ಎಂದೂ ಒಪ್ಪಿಕೊಂಡ. ಹಾಗಂತ 'ದೃಶ್ಯ' ಚಿತ್ರತಂಡದ ಮೇಲೆ ಕೇಸು ಹಾಕಲು ಆಗುತ್ತದೆಯೇ?!

ಸಂಪಾದಕರ ಸದ್ಯಶೋಧನೆ

ಗಂಡನನ್ನು ಹೇಗೆ ಕರೆಯುವುದು?

ಕನ್ನಡದಲ್ಲಿ ಹೆಂಡತಿ ತನ್ನ ಗಂಡನನ್ನು ಏನೇನು ಪದಗಳನ್ನು ಬಳಸಿ ಕರೆಯುತ್ತಾಳೆ ಎಂಬ ಪ್ರಶ್ನೆಯನ್ನು 'ಕೋರಾ' ವೆಬ್‌ಸೈಟಿನಲ್ಲಿ ಯಾರೋ ಕೇಳಿದ್ದರು. ಅದಕ್ಕೆ ಒಬ್ಬರು ಹೀಗೆ ಉತ್ತರಿಸಿದ್ದರು– ''ಮನೆಯ ಹಿರಿಯರ ಮುಂದೆ ಅವರು/ಇವರು ಅಂತ, ಮಕ್ಕಳೊಂದಿಗೆ ಮಾತಾಡುವಾಗ ನಿಮ್ಮ ಅಪ್ಪ/ಚಿಕ್ಕಪ್ಪ, ಸೋದರಮಾವ ಅಂತ, ಸಂಬಂಧಿಗಳೊಡನೆ 'ನಮ್ಮ ಯಜಮಾನರು' ಎಂದು ಸಂಬೋಧಿಸುವುದು ವಾಡಿಕೆ. ನಮ್ಮ ಯಜಮಾನರನ್ನು ಕರೆಯಬೇಕೆಂದರೆ ರೀ ಎಂದು ಅಂತಾರೆ. ಕಟ್ಟುನಿಟ್ಟಾದ ಹಾಗೂ ಸಾಂಪ್ರದಾಯಿಕವಾದ ಕುಟುಂಬದಲ್ಲಿ ಬೆಳೆದವರು ತಮ್ಮ ಮನೆಯಲ್ಲಿ ಎಲ್ಲ ಹೆಂಗಸರು ಅವರವರ ಗಂಡನನ್ನ 'ರೀ' ಎಂದೇ ಕರೆಯುತ್ತಾರೆ. ಗಂಡನ ಹೆಸರು ಹೆಂಡತಿ ಬಾಯಲ್ಲಿ ಬರಬಾರದೆಂಬ ಸಂಪ್ರದಾಯವು ಇದೆ. ಅದಲ್ಲದೇ ಗಂಡ ಹೆಂಡತಿಗಿಂತ ವಯಸ್ಸಿನಲ್ಲಿ ದೊಡ್ಡವರಿರುತ್ತಾರೆ. ಹೀಗಾಗಿ ಅವರನ್ನು ಬಹುವಚನ ಕೊಟ್ಟು ಮಾತಾಡಿಸುವುದು ಸಂಪ್ರದಾಯ ಮತ್ತು ರೂಢಿ. ಅದೇ ಯಜಮಾನರು ಹೆಂಡತಿಯನ್ನು 'ಲೇಯ್' ಎಂದು ಹೆಸರು ಹೇಳದೇ ಕರೆಯುವುದುಂಟು''. ಇನ್ನೊಬ್ಬರು ಈ ಪ್ರಶ್ನೆಗೆ ಈ ರೀತಿ ಉತ್ತರಿಸಿದ್ದರು– ''ಇದು ಒಳ್ಳೆ ಪ್ರಶ್ನೆ ಆಯ್ತಲ್ಲ ಮಾರಾಯ್ರೆ, ಅವರವರ ಹೆಂಡತಿಯನ್ನು ಅವರು ಹೇಗಾದರೂ ಕರೆದುಕೊಳ್ಳಲಿ ಬಿಡಿ, ನಾವ್ಯಾಕೆ ತಲೆಬಿಸಿ ಮಾಡಿಕೊಳ್ಳಬೇಕು? ಆದರೂ ಗಂಡಂದಿರು ಹೆಂಡತಿಯರನ್ನು ಕರೆಯುವಷ್ಟು ಭಿನ್ನವಾಗಿ, ಸಲಿಗೆಯಿಂದ, ಪ್ರೀತಿಯಿಂದ ಬೇರೆ ಯಾವ ಸಂಬಂಧಗಳ ನಡುವೆಯೂ ಸಂಬೋಧನೆಗಳು ಇರುವುದಿಲ್ಲ ಎನ್ನುವುದು ಮಾತ್ರ ಸತ್ಯ. ಕೆಲವರು 'ಲೇ' ಅಂತಾರೆ. ಕೆಲವರು 'ಇವ್ಳೇ' ಅಂತಾರೆ. ಮತ್ತೆ ಕೆಲವರು 'ರೀ' ಅನ್ನಬಹುದು. ಹೆಸರು ಹಿಡಿದು ಕರೆಯುವವರು ಮಾತ್ರ ಜಾಸ್ತಿ ಇರುವುದನ್ನು ಗಮನಿಸಬಹುದು. ಹೆಸರುಗಳನ್ನು ಸಂಕ್ಷಿಪ್ತಗೊಳಿಸಿ ಕರೆಯುವವರು ಅದಕ್ಕಿಂತ ಸ್ವಲ್ಪ ಜಾಸ್ತಿ. ಶಾರದಾ ಅಂತ ಇದ್ದರೆ ಶಾರಿ ಅನ್ನೋರು, ಪಾರ್ವತಿ ಅಂತ ಇದ್ರೆ ಪಾರಿ ಅನ್ನೋರು, ಪ್ರಮೀಳಾ ಅಂತ ಇದ್ರೆ ಪ್ರಮ್ಮಿ ಎನ್ನಬಹುದು, ಹೀಗೆ ಶಾರ್ಟ್ ಮಾಡಿ ಕರೆಯುವವರು ಮಾತ್ರ ಜಾಸ್ತಿ ಇರ್ತಾರೆ. ಇತ್ತೀಚಿನ ಪೀಳಿಗೆಯವರು ಮದುವೆಯಾದ ಹೊಸತರಲ್ಲಿ ಹೆಂಡತಿಯನ್ನು ಚಿನ್ನು, ಮುನ್ನು, ಪುಟ್ಟ, ಬೇಬಿ ಇತ್ಯಾದಿ ಕರೆಯುತ್ತಾರೆ. ಹೇಗೆ ಕರೆದರೂ ಹೆಂಡತಿ ಹೆಂಡತಿಯೇ ತಾನೇ..''. ಈ ಪ್ರಶ್ನೆಗೆ ಲೀಲಾದೇವಿ ಎನ್ನುವವರು ಉತ್ತರಿಸಿದ್ದು ಹೀಗೆ– ''ನಾನು ಕಂಡಂತೆ ಹೆಂಡತಿಯನ್ನು ಹೆಸರು ಅಥವಾ ಕಿರುಹೆಸರಿಂದ ಕರೆಯುವುದು ಸಾಮಾನ್ಯ. ಕೆಲ ಗಂಡಂದಿರು ಪ್ರೀತಿಯಿಂದ 'ಚಿನ್ನ, ಪುಟ್ಟಿ, ರಾಣಿ' ಎಂದು ಕರೆಯುತ್ತಾರೆ. ಕೆಲ ಹಿರಿಯರು 'ಏನಮ್ಮ/ನೋಡಮ್ಮ' ಅಂತಾರೆ. ಆದರೆ ನಮ್ಮ ಯಜಮಾನರಿಗೆ ಈ ವಿಧಾನಗಳು ಅನ್ವಯಿಸಲ್ಲ. ನನ್ನ ಹೆಸರು ಲೀಲಾದೇವಿ. ಮನೆಯವರೆಲ್ಲ ಸಾಮಾನ್ಯವಾಗಿ ನನ್ನನ್ನು 'ಲೀಲಾ' ಎಂದು ಕರೆಯುತ್ತಾರೆ. ನನ್ನ ಯಜಮಾನರ ವಿಧಾನ ಮಾತ್ರ ಬೇರೆ. ರಾಯರು ನನ್ನ ಕಳೆದ ಇಪ್ಪತ್ತೊಂದು ವರುಷಗಳ ವೈವಾಹಿಕ ಜೀವನದಲ್ಲಿ ಸದಾ 'ಲೇ' ಎಂದೇ ಕರೆದಿದ್ದಾರೆ. ಪ್ರಣಯತನ, ಮೋಹ, ವಾತ್ಸಲ್ಯ ತೋರುವಾಗ 'ಲೇ ರಾಣಿ' ಅಂತಾರೆ. ಕೆಲವೊಮ್ಮೆ ಸಿಟ್ಟಿಗೆದ್ದು ಏನ್ರೀ? ನನ್ನ ಹೆಸರಾದರು ನೆನಪುಂಟಾ? ಎಂದು ಕೇಳಿದ್ದೇನೆ. 'ಲೇ, ಟೆನ್ಶನ್ ತಗೋಬೇಡ ಕಣೆ ಲೇ ಎಂದು ಉತ್ತರಿಸಿ ನಗುತ್ತ ಹೋಗುತ್ತಾರೆ''. ಇತ್ತೀಚಿನ ದಿನಗಳಲ್ಲಿ ಹೆಂಡತಿ ತನ್ನ ಗಂಡನನ್ನು ಏಕವಚನದಲ್ಲಿ ಸಂಬೋಧಿಸುವುದನ್ನು ಗಮನಿಸಬಹುದು. ಕೆಲವರಂತೂ ಗಂಡನನ್ನು ಹೋಗಲೋ, ಬಾರಲೋ ಅಂತ ಕರೆಯುತ್ತಾರೆ. ಇದು ಅಗೌರವ ಸೂಚಕವಲ್ಲ. ಅವರ ಪಾಲಿಗೆ ಇದು ಸಲುಗೆ. ಗಂಡನನ್ನು ಸರೀಕನಂತೆ, ಆಪ್ತವಾಗಿ ಕರೆಯುವುದರ ಸಂಕೇತ. ಗಂಡ ಹೆಂಡತಿಯ ಹೆಸರನ್ನು ಸಂಬೋಧಿಸುವುದಾದರೆ, ಹೆಂಡತಿಯೇಕೆ ಗಂಡನ ಹೆಸರು ಹೇಳಿ ಕರೆಯಬಾರದು ಎಂಬುದು ವಾದ. ಇದರಲ್ಲಿ ತಪ್ಪೇನೂ ಇಲ್ಲ. ಇದು ಗಂಡ–ಹೆಂಡಿರ ನಡುವಿನ ಒಡಂಬಡಿಕೆ. ಗಂಡನ ಜತೆ ಆತನ ತಂದೆ–ತಾಯಿ ವಾಸವಾಗಿರುವ ಮನೆಯಲ್ಲಿ ಹೆಂಡತಿ ತನ್ನ ಗಂಡನ ಹೆಸರು ಹೇಳಿ ಸಂಬೋಧಿಸುವ ಧೈರ್ಯ ತೋರದಿರಬಹುದು. ಆಗ 'ರೀ' ಸಹಾಯಕಾರಿ. ಇನ್ನು ಕೆಲವರು ಗಂಡನನ್ನು 'ಏನೊಂದ್ರೆ' ಎನ್ನುವುದನ್ನು ಕೇಳಿದ್ದೇನೆ.

ಪರೀಕ್ಷೆ ನಡೆಸುವ ಆಯೋಗದ ಮೌಲ್ಯ ಹೆಚ್ಚಲಿ!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಸರಕಾರಿ ವ್ಯವಸ್ಥೆಯಲ್ಲಿ ಹುದ್ದೆಗಳು ಖಾಲಿಯಾಗುವುದು, ನೇಮಕವಾಗುವುದು ಸಾಮಾನ್ಯ ಪ್ರಕ್ರಿಯೆ. ಪ್ರತಿವರ್ಷ ನೇಮಕ ಪ್ರಕ್ರಿಯೆ ನಡೆಯದೇ ಹೋದರೆ, ಖಾಲಿಯಾದ ಹುದ್ದೆಗಳ ಸಂಖ್ಯೆ ಮಿತಿಮೀರಿ, ಆಡಳಿತಾತ್ಮಕ ಸಮಸ್ಯೆಗೆ ಕಾರಣವಾಗುತ್ತದೆ. ಅದರಲ್ಲಿಯೂ ಗೆಜೆಟೆಡ್ ಅಧಿಕಾರಿಗಳ ಹುದ್ದೆ ಖಾಲಿಯಾಗುವುದರಿಂದ ಬಹುದೊಡ್ಡ ಸಮಸ್ಯೆಯಾಗುತ್ತದೆ. ಇಂಥ ಸಮಸ್ಯೆ ಸೃಷ್ಟಿಯಾಗದಂತೆ, ವರ್ಷದಿಂದ ವರ್ಷಕ್ಕೆ ನೇಮಕ ಪ್ರಕ್ರಿಯೆಗೆ ಪರೀಕ್ಷೆ ನಡೆಸುವ ಕರ್ನಾಟಕ ಲೋಕಸೇವಾ ಆಯೋಗದಲ್ಲಿಯೇ ಹಲವು ಗೊಂದಲಗಳಿವೆ ಎನ್ನುವುದು ವಾಸ್ತವ.

ಪ್ರತಿವರ್ಷ ಖಾಲಿಯಾಗುವ ಸರಕಾರಿ ಹುದ್ದೆಗಳ ಸಂಖ್ಯೆ ಸಾವಿರದ ಲೆಕ್ಕದಲ್ಲಿದ್ದರೆ, ಉದ್ಯೋಗ ಅರಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರ ಸಂಖ್ಯೆ ಲಕ್ಷದಲ್ಲಿರುತ್ತದೆ. ಅನೇಕ ಯುವಕರು ವಿದ್ಯಾಭ್ಯಾಸದ ಬಳಿಕ ಸರಕಾರಿ ನೌಕರಿಯನ್ನೇ ಹಿಡಿಯಬೇಕೆಂಬ ಆಸೆ ಕಟ್ಟಿಕೊಂಡು ವರ್ಷಾನುಗಟ್ಟಲೇ 'ಶ್ರಮ' ಹಾಕುವುದನ್ನು ನೋಡುತ್ತೇವೆ. ಆದರೆ ಈ ರೀತಿ ಶ್ರಮ ಹಾಕಿ ಬರೆದ ಪರೀಕ್ಷೆ 'ಊರ್ಜಿತವೋ' ಅನೂರ್ಜಿತವೋ ಎನ್ನುವ ಗೊಂದಲದಲ್ಲಿ ದಿನಗಳೆಯುವುದು ನರಕಯಾತನೆ ಅಲ್ಲದೇ ಮತ್ತೇನೂ ಅಲ್ಲ. ಆ ಕಾರಣಕ್ಕಾಗಿಯೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ, ಯಾವುದೇ ವಿವಾದವಿಲ್ಲದೇ, ಪಾರದರ್ಶಕವಾಗಿ ನಡೆಸಬೇಕು ಎನ್ನುವ ಉದ್ದೇಶದಿಂದ ಕೇಂದ್ರದಲ್ಲಿ ಕೇಂದ್ರ ಲೋಕಸೇವಾ ಆಯೋಗವಿದ್ದರೆ, ರಾಜ್ಯದಲ್ಲಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ರೂಪುಗೊಂಡಿದೆ. ಆದರೆ ಕೆಪಿಎಸ್‌ಸಿ ಇತ್ತೀಚಿನ ವರ್ಷಗಳಲ್ಲಿ ನಡೆಸುತ್ತಿರುವ ಪರೀಕ್ಷಾ ಪ್ರಕ್ರಿಯೆಯನ್ನು ನೋಡಿದರೆ, ಪರೀಕ್ಷಾ ಫಲಿತಾಂಶವಷ್ಟೇ ಅಲ್ಲದೇ, ಕೆಲಸ ಸಿಕ್ಕ ಬಳಿಕವೂ ಖಾತ್ರಿಯಿಲ್ಲ ಎನ್ನುವ ಸ್ಥಿತಿ ನಿರ್ಮಾಣಗೊಂಡಿದೆ.

ಹೌದು, ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ಅತಿ ಪ್ರಮುಖ ಪರೀಕ್ಷೆಯೆಂದರೆ ಕೆಎಎಸ್ ಅಧಿಕಾರಿಗಳ ನೇಮಕ ಪ್ರಕ್ರಿಯೆ. ಇದರೊಂದಿಗೆ ಲೋಕೋಪಯೋಗಿ ಎಂಜಿನಿಯರ್‌ಗಳು ಸೇರಿದಂತೆ ವಿವಿಧ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದ ಪರೀಕ್ಷೆಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ. 1951ರಲ್ಲಿ ಆರಂಭಗೊಂಡ ಕೆಪಿಎಸ್‌ಸಿಗೂ ಗೊಂದಲ, ವಿವಾದಗಳಿಗೂ ಬಿಡಲಾಗದ 'ಬಾಂಧವ್ಯ'ವಿದೆ. ಅದರಲ್ಲಿಯೂ ಕಳೆದ ಕೆಲ ವರ್ಷಗಳಿಂದ ನಡೆಯುತ್ತಿರುವ ಗೊಂದಲಗಳಿಂದಾಗಿ ಇಡೀ ಆಯೋಗದ ಮೇಲಿನ ನಂಬಿಕೆಯೇ ಕಳೆದುಹೋಗುವಂತಾಗಿದೆ.

ಈ ಹಿಂದೆ ಗೆಜೆಟೆಡ್ ಅಧಿಕಾರಿಗಳನ್ನು ನೇಮಿಸುವಾಗ ನಡೆಸುತ್ತಿದ್ದ ಸಂದರ್ಶನದ ಅಂಕಗಳಲ್ಲಿ ಭ್ರಷ್ಟಾಚಾರವಾಗುತ್ತದೆ ಎನ್ನುವ ಆರೋಪವಿತ್ತು. ಅದಾದ ಬಳಿಕ ಪ್ರಶ್ನೆಪತ್ರಿಕೆ ಸೋರಿಕೆಯಂಥ ವಿವಾದ ಕಾಣಿಸಿಕೊಂಡಿತು. ಕಳೆದ ವರ್ಷ ಪಿಎಸ್‌ಐ ಪರೀಕ್ಷೆಯಲ್ಲಿಯೇ ಭ್ರಷ್ಟಾಚಾರದ ವಾಸನೆ ಹೊಮ್ಮಿತ್ತು. ಈ ವರ್ಷ ಕೆಎಎಸ್ ಶ್ರೇಣಿಯ ಅಧಿಕಾರಿಗಳ ನೇಮಕಕ್ಕೆ ನಡೆದ ಪರೀಕ್ಷೆಯಲ್ಲಿನ ಎಡವಟ್ಟಿನಿಂದ, ಇಡೀ ಪರೀಕ್ಷೆಯನ್ನೇ ರದ್ದುಪಡಿಸಿ ಹೊಸದಾಗಿ ಬರೆಸಲಾಯಿತು. ಭಾನುವಾರ ಮುಕ್ತಾಯಗೊಂಡಿರುವ ಮರುಪರೀಕ್ಷೆಯಲ್ಲಿಯೂ ಸರಣಿ ಎಡವಟ್ಟುಗಳಾಗಿರುವುದು ಆಯೋಗದ 'ವಿಶ್ವಾಸ', 'ಪಾವಿತ್ರ್ಯ'ದ ಬಗ್ಗೆಯೇ ಅನುಮಾನ ಮೂಡುವಂತಾಗಿದೆ.

ಹಾಗೆ ನೋಡಿದರೆ, ಕರ್ನಾಟಕ ಲೋಕಸೇವಾ ಆಯೋಗವನ್ನು ಸರಕಾರಗಳು ರಚಿಸಿರುವುದೇ, ರಾಜ್ಯಕ್ಕೆ ಸಂಬಂಧಿಸಿರುವ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಅರ್ಹರನ್ನು ಕಾರ್ಯಾಂಗದೊಳಗೆ ಸೇರಿಸಿಕೊಳ್ಳುವುದಕ್ಕೆ. ಆದರೆ ಪ್ರತಿಬಾರಿ ನಡೆಯುವ ಪರೀಕ್ಷೆಯಲ್ಲಿಯೂ ಒಂದಿಲ್ಲೊಂದು ವಿವಾದವಿಲ್ಲದೇ ಈ ಪ್ರಕ್ರಿಯೆಯನ್ನು ಮುಗಿಸಿದ ಉದಾಹರಣೆಯಿಲ್ಲ. ಇಡೀ ಪ್ರಕ್ರಿಯೆಗೆ ಕೆಪಿಎಸ್‌ಸಿ ಆಯೋಗದ ಅಧ್ಯಕ್ಷರು, ಕಾರ್ಯದರ್ಶಿ ಮಾತ್ರವೇ ಕಾರಣವೆನ್ನಲಾಗುವುದಿಲ್ಲ. ಆದರೆ ತಳಹಂತದಲ್ಲಿ ನಡೆಯುವ ಭ್ರಷ್ಟಾಚಾರ, ಗೊಂದಲವನ್ನು ನಿವಾರಿಸುವಲ್ಲಿ ಈವರೆಗೆ ಈ ಹುದ್ದೆಯಲ್ಲಿರುವ ಯಾರೊಬ್ಬರಿಂದಲೂ ಸಾಧ್ಯವಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ವೇಳೆ ಆಗುವ ಎಡವಟ್ಟುಗಳಿಂದ ಆಗುವ ಅನಾಹುತ, ಅಭ್ಯರ್ಥಿಗಳ ಭವಿಷ್ಯದ ಮೇಲೆ ಬೀಳುವ ಹೊಡೆತ ಸಣ್ಣ ಪ್ರಮಾಣದಲ್ಲಿರುವುದಿಲ್ಲ. ಉದಾಹರಣೆಗೆ, ಕಳೆದ ವರ್ಷ ಪಿಎಸ್‌ಐ ಪರೀಕ್ಷೆ ನಡೆಸುವ ವೇಳೆ ನಡೆದ ಅಕ್ರಮದಿಂದಾಗಿ ಇಡೀ ಪ್ರಕ್ರಿಯೆಯನ್ನೇ ಸ್ಥಗಿತಗೊಳಿಸಲಾಗಿತ್ತು. ಸುಮಾರು 542 ಹುದ್ದೆಗಳಿಗೆ ನಡೆದಿದ್ದ ಪರೀಕ್ಷೆಯಲ್ಲಿ ಕೆಲವೊಂದಷ್ಟು ಮಂದಿ ತಪ್ಪು ಮಾಡಿದ್ದರು. ಈ ತಪ್ಪು ಮಾಡುವುದಕ್ಕೆ ಕೆಲ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆಯ ಕುಮ್ಮಕ್ಕು ಇತ್ತು ಎನ್ನುವುದು ಸ್ಪಷ್ಟ (ಶಾಮೀಲಾದವರು ಜೈಲು ಸೇರಿದ್ದೂ ಉಂಟು). ಆದರೆ ಇದರಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದು ಮಾತ್ರ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು, ಪಿಎಸ್‌ಐಗಳಾಗಲು ತುದಿಗಾಲಲ್ಲಿ ನಿಂತಿದ್ದ ನೂರಾರು ಯುವಕರು. ಪರೀಕ್ಷಾ ಪ್ರಕ್ರಿಯೆ ರದ್ದುಪಡಿಸಿ, ಮರುಪರೀಕ್ಷೆ ನಡೆಸಲು ಮುಂದಾದ ಸಮಯದಲ್ಲಿ ರದ್ದಾದ ಪರೀಕ್ಷೆಯಲ್ಲಿ ಪಾಸಾಗಿದ್ದ ಅನೇಕ ಅಭ್ಯರ್ಥಿಗಳಿಗೆ 'ಪುನರಾಯ್ಕೆ'ಯಾಗಲು ಸಾಧ್ಯವಾಗಲಿಲ್ಲ.

'ಎವೆರಿ ಡೇ ಈಸ್ ನಾಟ್ ಸಂಡೇ' ಎನ್ನುವ ರೀತಿಯಲ್ಲಿ ಬರೆದ ಪರೀಕ್ಷೆಗಳೆಲ್ಲವನ್ನೂ 'ಕ್ಲಿಯರ್' ಮಾಡಲು ಯಾರಿಂದಲೂ ಆಗುವುದಿಲ್ಲ. ಆದರೆ ಆಯೋಗ ಅಥವಾ ಸರಕಾರಿ ಇಲಾಖೆಗಳು ನಡೆಸುವ ಪರೀಕ್ಷೆಯಲ್ಲಿ ಆಗುವ ಎಡವಟ್ಟುಗಳಿಂದಾಗಿ ನಡೆಯುವ ಮರುಪರೀಕ್ಷೆಯಿಂದ ಅನೇಕ ಅಭ್ಯರ್ಥಿಗಳಿಗೆ ಕೆಲಸ ಸಿಗದೇ ಹೋಗಬಹುದು. ಇದರೊಂದಿಗೆ ಒಮ್ಮೆ ಬರೆದು ಮತ್ತೆ ಮರುಪರೀಕ್ಷೆಯೆಂದರೆ ಯಾವುದೇ ಅಭ್ಯರ್ಥಿ ಗೊಂದಲಕ್ಕೆ ಒಳಗಾಗುವುದು ನಿಶ್ಚಿತ. ಈ ಕಾರಣಕ್ಕಾಗಿಯೇ ಅದೆಷ್ಟೋ ಅಭ್ಯರ್ಥಿಗಳು ವರ್ಷಾನುಗಟ್ಟಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದರೂ, ಕ್ಲಿಯರ್ ಮಾಡುವಲ್ಲಿ ವಿಫಲರಾಗುತ್ತಿದ್ದಾರೆ.

ಮಾನಸಿಕ ಒತ್ತಡವಷ್ಟೇ ಅಲ್ಲದೇ, ವಯಸ್ಸಿನ ಕಾರಣಕ್ಕೂ ಅನೇಕ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅರ್ಹತೆ ಮೀರುವ ಸಾಧ್ಯತೆ ದಟ್ಟವಾಗಿರುತ್ತದೆ. ಕಳೆದ ಬಾರಿ ನಡೆದ ಪಿಎಸ್‌ಐ ಪರೀಕ್ಷೆಯ ಉದಾಹರಣೆಯನ್ನೇ ತೆಗೆದುಕೊಂಡರೆ, ಆ ಬಾರಿ ವಿಫಲರಾದ ಅದೆಷ್ಟೋ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ವಯಸ್ಸಿನ ಸಮಸ್ಯೆ ಎದುರಾಗಿತ್ತು. ಅರ್ಹತಾ ವಯಸ್ಸು ಮೀರಿದ್ದರಿಂದ ಪರೀಕ್ಷೆಯನ್ನೇ ಬರೆಯದೇ ವರ್ಷಾನುಗಟ್ಟಲೇ ಕಟ್ಟಿದ ಕನಸು ನುಚ್ಚುನೂರಾದ ಅನೇಕ ಘಟನೆಗಳಿವೆ.

ಇನ್ನು ಈ ಬಾರಿಯ ಕೆಎಎಸ್ ಪರೀಕ್ಷೆಯ ಗೊಂದಲದ ಬಗ್ಗೆ ಗಮನಿಸುವುದಾದರೆ, ಅಕ್ಟೋಬರ್ ತಿಂಗಳಲ್ಲಿ ನಡೆದಿದ್ದ ಪರೀಕ್ಷೆಯಲ್ಲಿ ಸುಮಾರು 50ಕ್ಕೂ ಹೆಚ್ಚು ಪ್ರಶ್ನೆಗಳ ಅನುವಾದ ತಪ್ಪಾಗಿ ಆಗಿದೆ ಎನ್ನುವ ಆರೋಪವಿತ್ತು. ಈ ಆರೋಪ ಸಾಬೀತಾಗಿದ್ದರಿಂದ, ಇಡೀ ಪರೀಕ್ಷಾ ಪ್ರಕ್ರಿಯೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸುವ ತೀರ್ಮಾನವನ್ನು ರಾಜ್ಯ ಸರಕಾರ ಕೈಗೊಂಡಿತ್ತು. ಇದು ಬಹುದೊಡ್ಡ ವಿವಾದವಾದ ಬಳಿಕ 'ಕಠಿಣ ಕ್ರಮದ ಎಚ್ಚರಿಕೆ'ಯೊಂದಿಗೆ ಮರುಪರೀಕ್ಷೆಗೆ ಆಯೋಗ ಮುಂದಾಗಿ, ಈ ಪರೀಕ್ಷೆಯನ್ನು ಡಿ.29ರಂದು ನಡೆಸಿತ್ತು. ಕಳೆದ ಬಾರಿಯ ಎಡವಟ್ಟನ್ನು ಸರಿಪಡಿಸಿಕೊಂಡು ಈ ಬಾರಿಯಾದರೂ ಸರಿಯಾಗಿ ಪರೀಕ್ಷೆ ನಡೆಸುತ್ತಾರೆ ಎಂದೇ ಅನೇಕರು ಭಾವಿಸಿದ್ದರು. ಆದರೆ ಈ ಬಾರಿಯೂ ಐದು ಪ್ರಶ್ನೆಗಳ ಅನುವಾದದ ಸಮಸ್ಯೆ, ಹಾಗೂ ವಿಜಯಪುರದಲ್ಲಿ ಓಎಂಆರ್ ನೋಂದಣಿ ಬದಲಾವಣೆಯ ಗೊಂದಲದಿಂದ ಮತ್ತೆ ವಿವಾದವಾಗಿ, ಮತ್ತೊಮ್ಮೆ ಮರುಪರೀಕ್ಷೆಗೆ ಕೆಲ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ. ಐದು ಪ್ರಶ್ನೆಯಲ್ಲಿನ ಗೊಂದಲಕ್ಕೆ ಮರುಪರೀಕ್ಷೆ ನಡೆಸುತ್ತಾರೋ ಅಥವಾ ಕೃಪಾಂಕದೊಂದಿಗೆ ಪರೀಕ್ಷಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವರೋ ಎನ್ನುವ ಬಗ್ಗೆ ಸ್ಪಷ್ಟತೆಯಿಲ್ಲ. ಆದರೆ ಮತ್ತೊಮ್ಮೆ ಈ ರೀತಿಯ ವಿವಾದವನ್ನು ಮೈಮೇಲೆ ಎಳೆದುಕೊಂಡಿರುವುದಂತೂ ಸತ್ಯ.

ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಶ್ನೆಪತ್ರಿಕೆ ರಚಿಸುವುದು ಇಂಗ್ಲಿಷ್‌ನಲ್ಲಿಯೇ ಆದರೂ, ಕನ್ನಡಕ್ಕೆ ಅನುವಾದ ಮಾಡಲು ಅಥವಾ ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡಲೆಂದೇ ಪ್ರತ್ಯೇಕ ಘಟಕವಿದೆ. ಅದಕ್ಕಾಗಿಯೇ ಹಲವು ಅಧಿಕಾರಿಗಳಿರುತ್ತಾರೆ. ಹೀಗಿರುವಾಗ, ಅನುವಾದದ ವೇಳೆ 'ಬಾಲಿಶ' ತಪ್ಪುಗಳಾಗುವುದಾದರೂ ಹೇಗೆ ಎನ್ನುವುದು ಹಲವರ ಪ್ರಶ್ನೆಯಾಗಿದೆ.

ಹಾಗೆ ನೋಡಿದರೆ, ಕೆಎಎಸ್ ಗೆಜೆಟೆಡ್ ಹುದ್ದೆಗಳಿಗೆ ನಡೆಯುವ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ವರ್ಷಾನುಗಟ್ಟಲೆ ಶ್ರಮ ಹಾಕಿರುತ್ತಾರೆ. ಅದೆಷ್ಟೋ ಅಭ್ಯರ್ಥಿಗಳಿಗೆ ಈ ಪರೀಕ್ಷೆ ಕೊನೆಯ ಪರೀಕ್ಷೆಯಾಗಿರುತ್ತದೆ. ಇಡೀ ಕುಟುಂಬ ಈ ಪರೀಕ್ಷೆಯ ಫಲಿತಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಪದೇಪದೆ ಪರೀಕ್ಷಾ ಪ್ರಕ್ರಿಯೆ ರದ್ದುಗೊಂಡರೆ ಅಥವಾ ಮರುಪರೀಕ್ಷೆ ನಡೆಸಿದರೆ ಆ ಅಭ್ಯರ್ಥಿಗಳ ಕುಟುಂಬಗಳು ಅನುಭವಿಸುವ ಆರ್ಥಿಕ ಹಾಗೂ ಮಾನಸಿಕ ಹೊಡೆತ ಅಷ್ಟಿಷ್ಟಲ್ಲ.

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ನಡೆಸಬೇಕು ಎಂದರೆ ಅದಕ್ಕೆ ಭಾರಿ ವೆಚ್ಚವಾಗುತ್ತದೆ ಎನ್ನುವುದು ಸ್ಪಷ್ಟ. ಅಭ್ಯರ್ಥಿಗಳಿಂದ ಶುಲ್ಕದ ರೂಪದಲ್ಲಿ ಹಣ ಕ್ರೋಡೀಕರಿಸಿದರೂ, ಹೆಚ್ಚುವರಿಯಾಗಿ ಅನುದಾನವನ್ನು ನೀಡಬೇಕಾಗುತ್ತದೆ. ರಾಜ್ಯ ಸರಕಾರವು ಪೂರಕ ಅಂದಾಜಿನಲ್ಲಿ ನೀಡಿರುವಂತೆ ಕೆಪಿಎಸ್‌ಸಿಗೆ ಪರೀಕ್ಷೆ ನಡೆಸುವುದಕ್ಕಾಗಿಯೇ 35.87 ಕೋಟಿ ರು. ಅನುದಾನ ಹಂಚಿಕೆಯನ್ನು 2024–25ನೇ ಸಾಲಿನಲ್ಲಿ ಮಾಡಿದೆ. ಒಂದು ಮರುಪರೀಕ್ಷೆ ನಡೆಸುವುದಕ್ಕೆ ಕನಿಷ್ಠ 15ರಿಂದ 16 ಕೋಟಿ ರು. ಅಗತ್ಯವಿದೆ. ಆದರೆ ಮರುಪರೀಕ್ಷೆಗೆ ಅಭ್ಯರ್ಥಿಗಳು ಶುಲ್ಕ ಮರುಪಾವತಿ ಮಾಡದೇ ಇರುವುದರಿಂದ ಇಡೀ ಖರ್ಚನ್ನು ಸರಕಾರವೇ ಹೊರಬೇಕಾಗುತ್ತದೆ. ಆದ್ದರಿಂದ ಗೊಂದಲವಿಲ್ಲದೆ, ಮೊದಲ ಬಾರಿಗೇ ಸರಿಯಾದ ರೀತಿಯಲ್ಲಿ ನಡೆಸಿದರೆ ಈ ರೀತಿಯ ಅನಗತ್ಯ ಹೊಡೆತವನ್ನು ತಡೆಯಬಹುದು.

ಕಾರ್ಯಾಂಗವನ್ನು ಮುನ್ನಡೆಸುವ ಭವಿಷ್ಯದ ಅಧಿಕಾರಿಗಳನ್ನು ನೇಮಿಸುವ ಸಲುವಾಗಿ ನಡೆಸುವ ಪರೀಕ್ಷೆಗಳ ವಿಷಯದಲ್ಲಿ ಕೆಪಿಎಸ್‌ಸಿ ಮತ್ತಷ್ಟು ಮುತುವರ್ಜಿವಹಿಸುವುದು ಅತ್ಯಗತ್ಯ. ಅದೇ ರೀತಿ ಇಡೀ ಕೆಪಿಎಸ್‌ಸಿ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಸರಕಾರವೂ ಗಂಭೀರ ಚಿಂತನೆ ನಡೆಸಬೇಕಿದೆ. ಪ್ರತಿಬಾರಿ ಪರೀಕ್ಷೆಯ ಸಮಯದಲ್ಲಾಗುವ ಎಡವಟ್ಟಿನ ಬಳಿಕ ಯಾವುದೋ ಒಬ್ಬ ಅಧಿಕಾರಿಯ 'ತಲೆದಂಡ' ಮಾಡಿ, ಕೈತೊಳೆದುಕೊಂಡು 'ಮತ್ತೊಮ್ಮೆ ಹೀಗಾಗದಂತೆ ಎಚ್ಚರವ ಹಿಸುತ್ತೇವೆ' ಎನ್ನುವ ಬದಲು ಪರೀಕ್ಷೆ ನಡೆಸುವ ವಿಷಯ ದಲ್ಲಿ ಎಚ್ಚರಿಕೆಯ ಹೆಜ್ಜೆಯಿಡುವ ನಿಟ್ಟಿನಲ್ಲಿ ಕಠಿಣ ಕ್ರಮ ಇಂದಿನ ಅಗತ್ಯ. ಪ್ರತಿಬಾರಿ ಆಗುವ ಎಡವಟ್ಟಿನಿಂದ ಕೆಪಿಎಸ್‌ಸಿ ಮೇಲಿನ 'ನಂಬಿಕೆ' ಕ್ಷೀಣಿಸುವುದು, ಮರುಪರೀಕ್ಷೆಗೆಂದು ಕೋಟ್ಯಂತರ ರುಪಾಯಿ ಖರ್ಚಾಗುವುದು ಒಂದು ಭಾಗವಾದರೆ, ಪ್ರತಿಭಾವಂತ ಅಭ್ಯರ್ಥಿಗಳ 'ಸಮಯ' ಮೀರಿ ಪರೀಕ್ಷೆ ಬರೆಯಲಾಗದೇ ವರ್ಷಾನು ಗಟ್ಟಲೇ ಪಟ್ಟ ಶ್ರಮ ವ್ಯರ್ಥವಾಗುವ ಮೂಲಕ ಅನೇಕ ಪ್ರತಿಭಾವಂತರೂ ಸರಕಾರಿ ಕೆಲಸದಿಂದ ವಿಮುಖವಾಗುವ ಆತಂಕವೂ ಇದೆ. ಆದ್ದರಿಂದ ಸರಕಾರವು ಇನ್ನಾದರೂ ಎಚ್ಚೆತ್ತುಕೊಂಡು ಕೆಪಿಎಸ್‌ಸಿಯಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಿರುವುದು ಇಂದಿನ ಅಗತ್ಯವಾಗಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪ್ರಯಾಸಕರ ಏನಲ್ಲ

ಸೈಕಲ್ ಸಂಸ್ಕೃತಿ ಕುರಿತಾದ ಕಿರಣ್ ಉಪಾಧ್ಯಾಯ ಅವರ ಲೇಖನ (ವಿಶ್ವವಾಣಿ ಡಿ.30) ಓದಿ ತುಂಬಾ ಸಂತೋಷವಾಯಿತು. ನೆದರ್ಲ್ಯಾಂಡ್ಸ್ ದೇಶಕ್ಕೆ ಸಾಕಷ್ಟು ಬಾರಿ ಹೋಗಿ ಬರುವ ಅವಕಾಶ ನನಗೆ ಸಿಕ್ಕಿದೆ. ನಾನು ನೋಡಿದ ಹಾಗೆ ಅಲ್ಲಿ ಸೈಕಲ್ಲೋ ಸೈಕಲ್ಲು! ಅದು ಬಿಟ್ಟರೆ, ಅಲ್ಲಿನ ನೀರಿನ ಕಾಲುವೆಗಳಲ್ಲಿ ಸಂಚರಿಸುವ ದೋಣಿಗಳು. ಇಡೀ ದೇಶ ಒಂದು ಸಮತಟ್ಟಾದ ಪ್ರದೇಶವಾದದ್ದರಿಂದ ಅಲ್ಲಿ ಸೈಕಲ್ ಸವಾರಿ ಪ್ರಯಾಸಕರವೇನಲ್ಲ. ಅಲ್ಲಿಯ ಪೊಲೀಸರು ಕೂಡ ಸೈಕಲ್ ಅನ್ನು ಉಪಯೋಗಿ ಸುತ್ತಾರೆ. ಅಲ್ಲಿ ಆಯೋಜಿಸಲಾಗಿದ್ದ ಸಮಾರಂಭವೊಂದಕ್ಕೆ 3–4 ಜನಪ್ರತಿನಿಧಿಗಳು ಸೈಕಲ್ ನಲ್ಲೇ ಬಂದಿದ್ದು ನಮಗೆ ಅಚ್ಚರಿ ತಂದಿತಾದರೂ, ಅದು ಅಲ್ಲಿ ಸಾಮಾನ್ಯ ಎಂದು ತಿಳಿಯಿತು. ನಮ್ಮಲ್ಲಾದರೆ, ಟೊಯೋಟಾ/ಬೆಂಝ್‌ನಂಥ ಕಾರುಗಳಿಲ್ಲದೆ ಜನಪ್ರತಿನಿಧಿಗಳು ಮನೆಯ ಗೇಟನ್ನೂ ದಾಟುವುದಿಲ್ಲ. ಇನ್ನು ಅಲ್ಲಿಯ ನಗರ ಸಾರಿಗೆ ವ್ಯವಸ್ಥೆಯೂ ತುಂಬಾ ಚೆನ್ನಾಗಿದ್ದು, ವಯಸ್ಸಾದವರಿಗೆ, ವಿಕಲಾಂಗರಿಗೆ, ಮಕ್ಕಳಿಗೆ ಅನುಕೂಲಕರವಾಗಿದೆ. ನಿಲುಗಡೆ ಬಂದಾಗ ಬಸ್ಸಿನ ಎತ್ತರವನ್ನು ತಗ್ಗಿಸಿ ಅವರನ್ನು ಹತ್ತಿಸಿಕೊಳ್ಳುವುದು ನಿಜಕ್ಕೂ ಶ್ಲಾಘನೀಯ. ನಮ್ಮಲ್ಲೂ ಅಂಥ ಅನುಕೂಲಗಳು ಬರುವುದು ಯಾವಾಗ? ಇತ್ತೀಚೆಗೆ ಬೆಂಗಳೂರಿನಲ್ಲೂ ಸೈಕಲ್ ಸವಾರಿ ಜಾಸ್ತಿಯಾಗುತ್ತಿದೆ, ಬಹುಶಃ ಅವರೆಲ್ಲ ಆರೋಗ್ಯ ಕಾಪಾಡಿಕೊಳ್ಳುವ ಕಸರತ್ತಿಗೆ ಒಡ್ಡಿಕೊಂಡವರೇ ಇರಬಹುದು. ಆದರೆ ಅವರಿಗೆ ಸರಿಯಾದ ಅನುಕೂಲಗಳಿಲ್ಲ. ಸರಕಾರಗಳು ಈ ನಿಟ್ಟಿನಲ್ಲಿ ಇನ್ನಷ್ಟು ಗಮನ ಹರಿಸಿದರೆ ನಮ್ಮಲ್ಲೂ ಸೈಕಲ್ ಸವಾರಿ ಹೆಚ್ಚಾಗಬಹುದು, ಆ ಮೂಲಕ ಸಂಚಾರ ವ್ಯವಸ್ಥೆ ಉತ್ತಮಗೊಳ್ಳಬಹುದು.

– ದಾವಣಗೆರೆ ಮುಕುಂದ, ಬೆಂಗಳೂರು

ಗುರುವಿನ ಅನುಗ್ರಹವಿದ್ದರೆ...

ಮನುಜನ ಬಾಳಿನಲ್ಲಿ ಗುರುವಿಗೆ ಇರುವ ಮಹತ್ವವನ್ನು ತಿಳಿಸುವ 'ಗರುಡನ ಮಂತ್ರವ ಕಲಿತಿರುವಾತಗೆ...' ಅಂಕಣ ಬರಹ ಮಾರ್ಮಿಕವಾಗಿ ಮೂಡಿಬಂದಿದೆ. ಗುರುವಿನ ಕೃಪೆಯೊಂದಿದ್ದರೆ ಏನೆಲ್ಲಾ ಪವಾಡಗಳು ನಡೆಯುತ್ತವೆ ಎಂಬುದನ್ನು ಇದು ತಿಳಿಹೇಳುತ್ತದೆ. 'ಪ್ರತಿಯೊಬ್ಬರಿಗೂ ಜೀವನದಲ್ಲಿ ಮುಂದೆ ಗುರಿ ಹಾಗೂ ಹಿಂದೆ ಗುರುಪ್ರೇರಣೆ ಇರಬೇಕು' ಅಂತ ಹಿರಿಯರು ಹೇಳಿದ್ದಾರೆ. ಗುರುವನ್ನು ನಂಬಿದವರಿಗೆ ಯಾವುದಕ್ಕೂ ಕೊರತೆ ಇರದು. ಗುರುವನ್ನು ನಂಬಿ ಅವರ ವಾಕ್ಯವನ್ನು ಶಿರಸಾವಹಿಸಿ ಪಾಲಿಸಲು ಕೂಡ ಶಿಷ್ಯನಲ್ಲೂ ಅಷ್ಟೇ ನಿಷ್ಠೆ ಇರಬೇಕು. ಈ ಇಬ್ಬರ ಸುಸಂಬಂಧ ಬಲು ಪವಿತ್ರ. ಲೇಖನದಲ್ಲಿ ಉದಾಹರಿಸಲಾದ ಮಠ ಯಾವುದು, ಆ ಗುರುಗಳು ಯಾರು ಎಂಬ ಕುತೂಹಲ ನಮಗೆ ಇದ್ದೇ ಇದೆ; ಆದರೂ ಅವರನ್ನು ಊಹಿಸಿ ಅವರಿಗೆ ಮನಃಪೂರ್ವಕವಾಗಿ ನಮಿಸಿದೆ. ಈ ಲೇಖನದ ಮೂಲಕ 'ವಿಶ್ವವಾಣಿ' ಜತೆಗಿನ ನನ್ನ ನಂಟು ಇನ್ನಷ್ಟು ಗಟ್ಟಿಯಾಯಿತು .

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಇದು ಕಾಕತಾಳೀಯವೇ?

ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇಗುಲವು ಅಪಾರ ಸಂಖ್ಯೆಯಲ್ಲಿ ಭಕ್ತರನ್ನು ಹೊಂದಿದ್ದು, ಇಲ್ಲಿ ನಡೆಯುವ ಜಾತ್ರೆಗೆ ಹೊರರಾಜ್ಯಗಳಿಂದಲೂ ಭಕ್ತರು ಬರುತ್ತಾರೆ. ಈ ದೇಗುಲದಲ್ಲಿ ಈಗಾಗಲೇ 6 ಕಾಣಿಕೆ ಹುಂಡಿಗಳಿದ್ದು, ಇದೀಗ ಮತ್ತೆ 3 ಹೊಸ ಹುಂಡಿಗಳನ್ನು ತಂದಿರಿಸಲಾಗಿದೆ, ಅದೂ ಭಕ್ತರು ನಿಲ್ಲುವ ಸ್ಥಳಗಳಲ್ಲಿ! ಮೊದಲೇ ಸ್ಥಳಾವಕಾಶವಿಲ್ಲದ ಈ ದೇಗುಲದಲ್ಲಿ ಇದರಿಂದಾಗಿ ಭಕ್ತರಿಗೆ ಬಗ್ಗಿ ನಮಸ್ಕರಿಸಲೂ ತೊಂದರೆಯಾಗುತ್ತಿದೆ. ಭಕ್ತರಿಗೆ ಶೀಘ್ರದರ್ಶನ, ವಿಶ್ರಾಂತಿಗೆ ಸ್ಥಳ ಮತ್ತಿತರ ಅವಶ್ಯ ಸೌಲಭ್ಯಗಳ ಕಡೆಗೆ ಗಮನ ಹರಿಸದೇ, ಕೇವಲ ಸರಕಾರದ ಆದಾಯ ಹೆಚ್ಚಿಸುವ ಯೋಜನೆಯಿದು. ಭಾರಿ ಜನ ಸೇರುವ ಕೊಟ್ಟೂರೇಶ್ವರನ ಜಾತ್ರೆ ಸದ್ಯದಲ್ಲಿಯೇ ನಡೆಯಲಿದ್ದು, ಈ ಸಂದರ್ಭದಲ್ಲಿ ಹೊಸ ಹುಂಡಿಗಳನ್ನು ಸ್ಥಾಪಿಸಿರುವುದು ಕಾಕತಾಳೀಯ ಎನ್ನಬಹುದೇ?!

– ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಅಡಕೆ ಕ್ಯಾನ್ಸರ್‌ಕಾರಕವೋ ಅಥವಾ ನಿವಾರಕವೋ?

ವಿಶ್ವ ಆರೋಗ್ಯ ಸಂಸ್ಥೆಯು ಸಂಶೋಧನೆಗಾಗಿ ಬಳಸಿದ ಅಡಕೆಯ ಸ್ಯಾಂಪಲ್ ಅನ್ನು ಎಲ್ಲಿಂದ ಹಾಗೂ ಯಾರಿಂದ ಸಂಗ್ರಹಿಸಿದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿಲ್ಲ. ಒಂದು ವೇಳೆ ಅಂಗಡಿಗಳಲ್ಲಿ ಮಾರಾಟಕ್ಕೆ ಇಟ್ಟಿರುವ ಗುಟ್ಕಾ ಪ್ಯಾಕೆಟ್‌ನಿಂದ ಪಡೆದು ಲ್ಯಾಬ್‌ನಲ್ಲಿ ಪರೀಕ್ಷೆಗೆ ಒಳಪಡಿಸಿ ವರದಿ ನೀಡಿದ್ದಾದರೆ, ಅಂಥ ವರದಿಯು ಮಾನ್ಯವಾಗುವುದಿಲ್ಲ. ಹಾಗಾಗಿ ಎಲ್ಲಿಂದ ಸ್ಯಾಂಪಲ್ ಸಂಗ್ರಹಿಸಿದ್ದಾರೆ ಎಂಬುದೇ ಇಲ್ಲಿ ಮಹತ್ವದ ಅಂಶವಾಗುತ್ತದೆ.

ಚರ್ಚಾವೇದಿಕೆ

ಸುರೇಂದ್ರ ಪೈ, ಭಟ್ಕಳ
vveditoped@gmail.com

ಕಳೆದ ಹಲವು ವರ್ಷಗಳಿಂದ, ನಮ್ಮ ಮಲೆನಾಡಿನ ಅಡಕೆಯು ವಿಶ್ವ ಮಟ್ಟದಲ್ಲಿ ಸುದ್ದಿಯಲ್ಲಿದೆ. ಅಡಕೆ ತಿಂದರೆ ಬಾಯಿಯ ಕ್ಯಾನ್ಸರ್ ಬರುತ್ತದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯವರು ಹೇಳುತ್ತಲೇ ಬಂದಿದ್ದಾರೆ. 2024ರ ಅಕ್ಟೋಬರ್ 9ರಂದು ಬಿಡುಗಡೆಯಾದ 'ಇಂಟರ್‌ನ್ಯಾಷನಲ್ ಏಜೆನ್ಸಿ ಫಾರ್ ರಿಸರ್ಚ್ ಆ್ಯಂಡ್ ಕ್ಯಾನ್ಸರ್' ವರದಿಯಲ್ಲಿ ಅಡಕೆ ಕ್ಯಾನ್ಸರ್‌ಕಾರಕ ಎಂದು ಹೇಳಲಾಗಿದೆ. 'ದಿ ಲ್ಯಾನ್ಸೆಟ್ ಆಂಕಾಲಜಿ' ಎಂಬ ಅಂತಾರಾಷ್ಟ್ರೀಯ ಜರ್ನಲ್‌ನಲ್ಲಿ ಈ ವರದಿ ಪ್ರಕಟವಾಗಿದ್ದೇ ತಡ, ಅಡಕೆ ಎಲ್ಲರ ಬಾಯಲ್ಲೂ ಓಡಾಡತೊಡಗಿತು!

ಇದೇನೂ ಹೊಸತಲ್ಲ. 'ಅಡಕೆ ಆರೋಗ್ಯಕ್ಕೆ ಹಾನಿಕಾರಕ' ಎಂದು ಈ ಹಿಂದೆಯೂ ಬಿಂಬಿಸಿ ಜಾಗತಿಕವಾಗಿ ನಿಷೇಧಿಸುವ ಪ್ರಯತ್ನಗಳು ನಡೆದಿದ್ದಿದೆ. ಅಡಕೆಯೊಂದಿಗೆ ಇತರ ಹಾನಿಕಾರಕ ರಾಸಾಯನಿಕಗಳನ್ನು ಬೆರೆಸಿ ಸೇವಿಸುವುದರಿಂದ ಹಾಗೂ ಇತರ ಉತ್ಪನ್ನಗಳನ್ನು ತಯಾರಿಸಿ ಬಳಸುವುದರಿಂದ ಕ್ಯಾನ್ಸರ್ ಬರಬಹುದೇನೋ. ಹಾಗಾಗಿ ವೀಳ್ಯದೊಂದಿಗೆ ಅಡಕೆಯನ್ನು ತಿಂದುಬಿಟ್ಟರೆ ಬಾಯಿಯ ಕ್ಯಾನ್ಸರ್ ಬರುತ್ತದೆ ಎಂಬುದಕ್ಕೆ ಯಾವ ಆಧಾರವೂ ಇಲ್ಲ.

ಮುಖ್ಯವಾಗಿ, ವಿಶ್ವ ಆರೋಗ್ಯ ಸಂಸ್ಥೆಯು ಸಂಶೋಧನೆಗಾಗಿ ಬಳಸಿದ ಅಡಕೆಯ ಸ್ಯಾಂಪಲ್ ಅನ್ನು ಎಲ್ಲಿಂದ ಹಾಗೂ ಯಾರಿಂದ ಸಂಗ್ರಹಿಸಿದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿಲ್ಲ. ಒಂದು ವೇಳೆ ಅಂಗಡಿಗಳಲ್ಲಿ ಮಾರಾಟಕ್ಕೆ ಇಟ್ಟಿರುವ ಗುಟ್ಕಾ ಪ್ಯಾಕೆಟ್‌ನಿಂದ ಪಡೆದು ಲ್ಯಾಬ್‌ನಲ್ಲಿ ಪರೀಕ್ಷೆಗೆ ಒಳಪಡಿಸಿ ವರದಿ ನೀಡಿದ್ದಾದರೆ, ಅಂಥ ವರದಿಯು ಮಾನ್ಯವಾಗುವುದಿಲ್ಲ. ಹಾಗಾಗಿ ಎಲ್ಲಿಂದ ಸ್ಯಾಂಪಲ್ ಸಂಗ್ರಹಿಸಿದ್ದಾರೆ ಎಂಬುದೇ ಇಲ್ಲಿ ಮಹತ್ವದ ಅಂಶವಾಗುತ್ತದೆ. ಜತೆಗೆ, ಅದನ್ನು ಎಷ್ಟು ವರ್ಷಗಳ ಕಾಲ 'ಕ್ಲಿನಿಕಲ್ ಟ್ರಯಲ್' ಮಾದರಿಯಲ್ಲಿ ಅಧ್ಯಯನ ಮಾಡಿದ ನಂತರ 'ಇದು ಕ್ಯಾನ್ಸರ್‌ಕಾರಕ' ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂಬುದನ್ನು ಬಹಿರಂಗಪಡಿಸದೇ, ಏಕಾಏಕಿ 'ಅಡಕೆ ಕ್ಯಾನ್ಸರ್‌ಕಾರಕ' ಎಂದರೆ ಹೇಗಾದೀತು?

ಅಡಕೆ ಕ್ಯಾನ್ಸರ್‌ಕಾರಕವೇ ಎಂಬುದನ್ನು ತಿಳಿಯಲು 2012ರಿಂದಲೂ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಸಮರ ನಡೆಯುತ್ತಿದ್ದು, 'ಅಡಕೆಯು ಆರೋಗ್ಯದಾಯಕ' ಎಂಬ ವರದಿಯನ್ನು ಸಲ್ಲಿಸಲಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರಿನ ಕುಮಾರಿ ಮತ್ತು ಇತರರು 1974ರಲ್ಲಿ ಅಧ್ಯಯನ ನಡೆಸಿ, 'ತಂಬಾಕುರಹಿತ ಅಡಕೆ ಮತ್ತು ವೀಳ್ಯದೆಲೆಯ ಸೇವನೆಯಿಂದ ಯಾವುದೇ ಟ್ಯೂಮರ್ ಉಂಟಾಗಿರುವುದಕ್ಕೆ ಸಾಕ್ಷಿ ಇಲ್ಲ; ಬದಲಾಗಿ ಟ್ಯೂಮರ್‌ಗಳ ಬೆಳವಣಿಗೆಯನ್ನು ತಡೆಯುವಲ್ಲಿ ಅದು ಯಶಸ್ವಿಯಾಗಿರುವುದು ಕಂಡುಬಂದಿದೆ' ಎಂದು ವರದಿ ನೀಡಿದ್ದರು.

ಅಟ್ಲಾಂಟದಲ್ಲಿನ 'ವಿನ್‌ಶಿಪ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್ ಆಫ್ ಎಮೊರಾಯ್ ಯುನಿವರ್ಸಿಟಿ'ಯ 25 ಮಂದಿಯ ತಂಡವು 2016ರಲ್ಲಿ ಅಧ್ಯಯನ ನಡೆಸಿ, ''ಅಡಕೆಯಿಂದ ತೆಗೆದ ಸಾರವು 'ಹೆಪಟೋ ಸೆಲ್ಯುಲರ್ ಕ್ಯಾನ್ಸರ್' ಸಂಬಂಧಿತ ಟ್ಯೂಮರ್ ಬೆಳವಣಿಗೆಯನ್ನು ತಡೆಯುವ ಗುಣವನ್ನು ಹೊಂದಿದೆ'' ಎಂದು ವರದಿ ನೀಡಿದೆ. 2022ರಲ್ಲಿ ನಿಟ್ಟೆ ವಿಶ್ವವಿದ್ಯಾಲಯವೂ ಸಂಶೋಧನೆ ನಡೆಸಿ 'ಅಡಕೆ ಕ್ಯಾನ್ಸರ್ ಕಾರಕವಲ್ಲ' ಎಂಬ ವಾದವನ್ನು ಪುಷ್ಟೀಕರಿಸಿದೆ. ಇದರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಲು ನಮ್ಮಲ್ಲಿ 'ಐಸಿಎಂಆರ್', 'ಐಸಿಎಆರ್ ಮೈಸೂರು' ಅಥವಾ ಭಾರತೀಯ ವಿಜ್ಞಾನ ಸಂಸ್ಥೆಗಳಿವೆ. ಈ ಯಾವಕ್ಕೂ ಅಡಕೆಯಲ್ಲಿ ಕ್ಯಾನ್ಸರ್‌ಕಾರಕ ಅಂಶ ಕಂಡುಬಂದಿಲ್ಲ; ಬದಲಾಗಿ ಅಡಕೆಯಲ್ಲಿ ಕ್ಯಾನ್ಸರ್ ನಿರೋಧಕ ಶಕ್ತಿಯಿದೆ ಎಂಬುದನ್ನು ಹಲವು ಸಂಸ್ಥೆಗಳು ಪತ್ತೆಹಚ್ಚಿವೆ.

ಸೈಟಾಕ್ಸನ್ ಬಯೋಸಲ್ಯೂಷನ್ ಪ್ರೈವೇಟ್ ಲಿಮಿಟೆಡ್‌ನ ಪ್ರಯೋಗಾಲಯದಲ್ಲಿ ನೆಕ್ಸ್‌ಜೆನ್ ಸಂಸ್ಥೆಯು ನಡೆಸಿದ ಸಂಶೋಧನೆಯಲ್ಲಿ, 'ಪರಿಶುದ್ಧ ಅಡಕೆಯ ಹಾಲನ್ನು ವಿವಿಧ ಹಂತದ ಪ್ರಯೋಗಗಳಿಗೆ ಒಳಪಡಿಸಿದಾಗ, ಆ್ಯಂಟಿ ಆಕ್ಸಿಡೆಂಟ್, ಆ್ಯಂಟಿ ಡಯಾಬಿಟಿಕ್ ವೈಶಿಷ್ಟ್ಯಗಳು ಮಾತ್ರವಲ್ಲದೆ ಬ್ಯಾಕ್ಟೀರಿಯಾ ನಿರೋಧಕ, ಶಿಲೀಂಧ್ರ ನಿರೋಧಕ, ಉರಿಯೂತ ನಿರೋಧಕ, ಗಾಯವನ್ನು ವಾಸಿಮಾಡುವ ಸೈಟೋಟಾಕ್ಸಿಕ್ ಅಂಶಗಳು/ಜೀವಶಾಸ್ತ್ರೀಯ ಚಟುವಟಿಕೆಗಳು ಹೆಚ್ಚಿನ ಪ್ರಮಾಣದಲ್ಲಿವೆ' ಎಂಬ ಅಂಶವು ಗೊತ್ತಾಗಿದೆ.

ಕ್ಯಾನ್ಸರ್ ಬರಲು ಕಾರಣ 'ಕಾರ್ಸಿನೋಜೆನ್' ಅಂಶ; ಇದು ಆನುವಂಶಿಕವಾಗಿಯೂ ಬರುವ ಸಾಧ್ಯತೆಯಿದೆ. ಕಾರ್ಸಿನೋಜೆನ್ ಅಂಶವು ವ್ಯಕ್ತಿಯ ಡಿಎನ್‌ಎಯನ್ನು ಬದಲಾಯಿಸಿದಾಗ, ಸಾಮಾನ್ಯ ಜೀವಕೋಶಗಳನ್ನು ಕ್ಯಾನ್ಸರ್ ಕೋಶಗಳಾಗಿ ಪರಿವರ್ತಿಸುವ ಸರಣಿ ಕ್ರಿಯೆಯನ್ನು ಅದು ಪ್ರಚೋದಿಸುತ್ತದೆ. ಆದರೆ ಅಡಕೆಯಲ್ಲಿ 'ಕಾರ್ಸಿನೋಜೆನ್' ಅಂಶವಿದೆಯೇ ಎಂಬುದಕ್ಕೆ ಆಧಾರವಿಲ್ಲ.

ವಿಶ್ವ ಆರೋಗ್ಯ ಸಂಸ್ಥೆಯ ನಿರಂತರ ವರದಿಗಳ ಬಳಿಕ ಎಚ್ಚೆತ್ತ ಕೇಂದ್ರ ಸರಕಾರವು ಈಗ, ಕೇವಲ ಅಡಕೆ ಕ್ಯಾನ್ಸರ್ ಕಾರಕವೇ ಎಂಬುದರ ಅಧ್ಯಯನ ನಡೆಸಲು ಮುಂದಾಗಿದೆ; ಕಾಸರಗೋಡಿನ 'ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್' (ಐಸಿಎಆರ್) ಮತ್ತು 'ಸೆಂಟ್ರಲ್ ಪ್ಲಾಂಟೇಷನ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಇವುಗಳ ಜಂಟಿ ಸಹಯೋಗದಲ್ಲಿ 3 ವರ್ಷಗಳ ಅಧ್ಯಯನ ನಡೆಸಲು ನಿರ್ಧರಿಸಿರುವ ಕೇಂದ್ರ ಸರಕಾರ ಇದಕ್ಕಾಗಿ 10 ಕೋಟಿ ರುಪಾಯಿಗಳನ್ನು ತೆಗೆದಿರಿಸಿದೆ. 'ಏಮ್ಸ್'ನಂಥ ದೇಶದ ಪ್ರತಿಷ್ಠಿತ 16 ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳು ಈ ಅಧ್ಯಯನಕ್ಕೆ ಕೈಜೋಡಿಸಲಿವೆ. ಅಡಕೆಯನ್ನು ತಿನ್ನುವುದರಿಂದ ಹಲ್ಲುಗಳ ಕ್ಯಾನ್ಸರ್ ಸಂಭವಿಸುವುದೇ ಎಂಬ ಬಗ್ಗೆಯೂ ಅಧ್ಯಯನ ನಡೆಯಲಿದೆ.

ಆದರೆ, ಇಲ್ಲಿ ಮತ್ತೊಂದು ಅಂಶವನ್ನೂ ಗಮನಿಸಬೇಕು. ಹೆಚ್ಚಿನ ಇಳುವರಿ ಪಡೆಯಲೆಂದು ರೈತರು ತಮ್ಮ ಬೆಳೆಗಳಿಗೆ ರಾಸಾಯನಿಕಗಳನ್ನು ಸಿಂಪಡಿಸುವುದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿದೆ. ಈ ಪರಿಪಾಠದಿಂದಾಗಿ ಬೆಳೆಯು ತನ್ನ ಮೂಲಸತ್ವವನ್ನು ಕಳೆದುಕೊಂಡು ವಿಷಯುಕ್ತವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಅದಕ್ಕಿಂತ ಮುಖ್ಯವಾಗಿ, ರೈತರಿಂದ ಬೆಳೆಯನ್ನು ಖರೀದಿಸುವ ಕಂಪನಿಗಳು, ಅವನ್ನು ಬಳಸಿಕೊಂಡು ತಾವು ತಯಾರಿಸುವ ವೈವಿಧ್ಯಮಯ ಆಹಾರೋತ್ಪನ್ನಗಳ ಉತ್ಪಾದನಾ ಹಂತದಿಂದ ಮೊದಲ್ಗೊಂಡು ಪ್ಯಾಕೇಜ್ ಹಂತದವರೆಗೆ, ಅವುಗಳ ಸಂರಕ್ಷಣೆಗಾಗಿ ಬಳಸುವ ರಾಸಾಯನಿಕಗಳಿಂದಾಗಿ ಆಹಾರವು ವಿಷಮಯವಾಗುವ ಸಾಧ್ಯತೆಯೇ ಹೆಚ್ಚು. ಇದಕ್ಕೆ ತಾಜಾ ಉದಾಹರಣೆ, ಭಾರತದ ಬಹುಬೇಡಿಕೆಯ ಎರಡು ಮಸಾಲ ಕಂಪನಿಗಳ ಉತ್ಪನ್ನಗಳಲ್ಲಿ (ಗರಂ ಮಸಾಲ, ಚಾಟ್ ಮಸಾಲ ಇತ್ಯಾದಿ) 'ಎಥಿಲೀನ್ ಆಕ್ಸೈಡ್' ಅಂಶವು ಪತ್ತೆಯಾಗಿದ್ದು, ಇದು ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎಂದು ಹಲವು ದೇಶಗಳು ಈ ಉತ್ಪನ್ನಗಳಿಗೆ ನಿಷೇಧ ಹೇರಿದವು ಎಂಬುದು ಗಮನಾರ್ಹ.

ರೈತರು ಬಳಸುವ ಕ್ರಿಮಿನಾಶಕಗಳಿಂದ ಹಿಡಿದು, ನಾವು ನಿತ್ಯವೂ ಬಳಸುವ ಬಹುತೇಕ ಆಹಾರ ಪದಾರ್ಥಗಳಲ್ಲಿ ಹಾನಿಕಾರಕ ಅಂಶಗಳಿವೆ. ನಾವು ಸೇವಿಸುವ ಗಾಳಿ, ಕುಡಿಯುವ ನೀರು ಹೀಗೆ ಎಲ್ಲವೂ ಇಂದು ಕಲುಷಿತವಾಗಿವೆ. ಒಟ್ಟಾರೆಯಾಗಿ, ಮನುಷ್ಯನ ಆಹಾರ ಸಂಸ್ಕೃತಿಯೇ ಇಂದು ಕಲಬೆರಕೆಯಾಗಿದೆ ಎಂದರೆ ತಪ್ಪಾಗಲಾರದು. ಪ್ರಕೃತಿಯಿಂದ ದೊರೆಯುವ 'ಸಹಜ–ಸ್ವರೂಪದ' ಉತ್ಪನ್ನಗಳು ರೋಗವನ್ನು ಉಂಟುಮಾಡಲಾರವು; ಆದರೆ ಮನುಷ್ಯನು ಅವಧಿಗೂ ಮುನ್ನ ಮತ್ತು ಹೆಚ್ಚೆಚ್ಚು ಫಸಲನ್ನು ಪಡೆಯುವ ದುರಾಸೆಯಿಂದಾಗಿ ಭೂಮಿಗೆ ವಿವಿಧ ರೂಪಗಳಲ್ಲಿ ವಿಷವನ್ನು ಉಣಿಸುತ್ತಿದ್ದಾನೆ. ಅವೆಲ್ಲವೂ ಒಂದಲ್ಲಾ ಒಂದು ರೂಪದಲ್ಲಿ/ಸಮಯದಲ್ಲಿ ಮನುಷ್ಯನ ದೇಹವನ್ನು ಪ್ರವೇಶಿಸಿ, ನಿಧಾನವಾಗಿ ಕ್ಯಾನ್ಸರ್‌ನಂಥ ರೋಗಕ್ಕೆ ಕಾರಣವಾಗುತ್ತಿವೆ. 'ಹಸಿರುಕ್ರಾಂತಿ'ಗೆ ಹೆಸರುವಾಸಿಯಾಗಿರುವ ಪಂಜಾಬ್‌ನಲ್ಲಿ ಕ್ಯಾನ್ಸರ್ ರೋಗಿಗಳ ಪ್ರಕರಣ ಹೆಚ್ಚಾಗಿ ವರದಿಯಾಗಿರುವುದು ಇದಕ್ಕೊಂದು ನಿದರ್ಶನ. ಮನುಷ್ಯರು ಸೇವಿಸುವ ಆಹಾರ ಪದಾರ್ಥಗಳು ಮಾತ್ರವಲ್ಲದೆ ಸಾಕುಪ್ರಾಣಿಗಳಿಗೆ, ದನ–ಕರುಗಳಿಗೆ ಉಣಿಸುವ ಪಶು–ಆಹಾರಗಳು, ಹುಲ್ಲು/ಮೇವು ಸಹ ವಿಷಮಯವಾಗುತ್ತಿರುವುದರಿಂದ ಅವು ಕೂಡ ರೋಗಕ್ಕೆ ತುತ್ತಾಗುತ್ತಿವೆ. ಅವುಗಳ ಹಾಲು ಕುಡಿಯುವ ನಾವೂ ಪರೋಕ್ಷವಾಗಿ ವಿಷವನ್ನೇ ಸೇವಿಸುತ್ತಿದ್ದೇವೆ.

'ಅಡಕೆಗೆ ಹೋದ ಮಾನ, ಆನೆ ಕೊಟ್ಟರೂ ಬಾರದು' ಎಂಬುದೊಂದು ಮಾತು ನಮ್ಮಲ್ಲಿ ಚಾಲ್ತಿಯಲ್ಲಿದೆ. ವಿಶ್ವ ಆರೋಗ್ಯ ಸಂಸ್ಥೆಯು ಈ ಮಾತನ್ನು ಮತ್ತೊಂದು ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಅಂದರೆ, ಅಡಕೆಯ ವಿಷಯದಲ್ಲಿ ರಾಜಕೀಯ ಮಾಡಿ, ಭಾರತದ ಈ ದೇಶೀಯ ಬೆಳೆಯ ಮೌಲ್ಯವು ಕುಸಿಯುವಂತೆ ಮಾಡುವ ಮೊದಲು, ಕ್ಯಾನ್ಸರ್ ಎಲ್ಲಿಂದ ಬರುತ್ತದೆ ಎಂಬುದನ್ನು ಅದು ಕಂಡುಕೊಂಡು ಸ್ಪಷ್ಟಪಡಿಸಬೇಕಿದೆ. ಒಂದು ವೇಳೆ, ಅಡಕೆ ಸೇವನೆಯಿಂದಲೇ ಕ್ಯಾನ್ಸರ್ ಬರುತ್ತದೆ ಎನ್ನುವುದಾಗಿದ್ದರೆ, ಹಲವು ದಶಕಗಳಿಂದಲೂ ತಾಂಬೂಲದ ರೂಪದಲ್ಲಿ ಅಡಕೆಯನ್ನು ನಿರಂತರವಾಗಿ ಬಳಸುತ್ತಾ ಬಂದಿರುವ ಮಲೆನಾಡು ಪ್ರದೇಶದ ಶೇ.50ಕ್ಕೂ ಹೆಚ್ಚು ಜನರಲ್ಲಿ ಕ್ಯಾನ್ಸರ್ ಕಾರಕ ಅಂಶ ಕಾಣಿಸಿಕೊಳ್ಳಬೇಕಿತ್ತಲ್ಲವೇ? ಹಾಗಿದ್ದರೆ ಅವರಿಗೇಕೆ ಅದು ಅಮರಿಕೊಳ್ಳಲಿಲ್ಲ? ಇಂಥ ಪ್ರಶ್ನೆಗಳಿಗೆ ವಿಶ್ವ ಆರೋಗ್ಯ ಸಂಸ್ಥೆಯು ಉತ್ತರ ನೀಡಬೇಕಿದೆ.

ಜಗತ್ತಿನಲ್ಲೇ ಅತಿಹೆಚ್ಚು ಮಾಲಿನ್ಯವನ್ನು ಹೊರಸೂಸುವ ದೇಶಗಳಲ್ಲಿ ಅಮೆರಿಕ ಪ್ರಸ್ತುತ ಅಗ್ರಸ್ಥಾನವನ್ನು ಪಡೆದಿದೆ. ವಾತಾವರಣದೊಳಗೆ ಹಾನಿಕಾರಕ ಅನಿಲಗಳನ್ನು ಬಿಡುಗಡೆಗೊಳಿಸಿ ತಾಪಮಾನ ಏರಿಕೆಗೆ ಕಾರಣವಾಗುತ್ತಿರುವುದರ ಜತೆಗೆ, ಗಾಳಿಯ ಮೂಲಕ 'ಮಾಲಿನ್ಯದ ಕ್ಯಾನ್ಸರ್' ಜಗತ್ತಿಗೇ ಹಬ್ಬುವಂತೆ ಮಾಡುತ್ತಿದೆ ಅಮೆರಿಕ. ಇದನ್ನು ನಾವೇಕೆ ಪ್ರಶ್ನಿಸುತ್ತಿಲ್ಲ? ಭಾರತದ ಪ್ರಾಚೀನ ಆಹಾರ/ಔಷಧ ಪದ್ಧತಿಗಳ ಮೇಲೆ ಪೇಟೆಂಟ್ ಪಡೆಯುವಾಗ ಇಲ್ಲದ ಆರೋಪಗಳು ಈಗ ಕೇಳಿಬರಲು ಕಾರಣವೇನು? ಇಂಥ ಹತ್ತಾರು ಪ್ರಶ್ನೆಗಳಿಗೆ ಸಂಬಂಧಪಟ್ಟವರು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಉತ್ತರವನ್ನು ನೀಡಬೇಕಿದೆ.

ಅತಿಯಾದರೆ ಅಮೃತವೂ ವಿಷವೇ. ಹಾಗಾಗಿ ನಾವು ಮೊದಲು ಪರಿಸರವನ್ನು ಉಳಿಸಬೇಕು. ಸ್ವಾಭಾವಿಕ, ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು, ಪರಿಸರ–ವಿರೋಧಿ ಕೃಷಿಯನ್ನು ಕೈಬಿಡಬೇಕು. ಅತಿಯಾಸೆಗೆ ಶರಣಾದರೆ ಎಲ್ಲವೂ ನಮ್ಮ ಕೈಮೀರಿ ಹೋಗುತ್ತದೆ ಎಂಬ ಅಪ್ರಿಯ ಸತ್ಯವನ್ನು ಇನ್ನಾದರೂ ಅರಿಯಬೇಕು.

(ಲೇಖಕರು ಶಿಕ್ಷಕರು)

ಭಟ್ಟರ್ ಸ್ನಾಕ್

- **ಕಾಶಿ ಪ್ರಾಣೇಶ, ವಿದ್ಯಾಪೀಠ**
ಭಟ್ರೇ, ಹಿಂದಿನವರು ಪ್ರೀತಿಯ ದ್ಯೋತಕವಾಗಿ ಬೆನ್ನ ಮೇಲೆ ಹೊತ್ತು (ಕೂಸುಮರಿ ಮಾಡಿ) ಮೆರೆಸುತ್ತಿದ್ದರು. ಈಗಿನವರು?
– **ತಲೆ ಮೇಲೆ ಹೊತ್ತು ಮೆರೆಸುತ್ತಿದ್ದಾರಲ್ಲ?!**

- **ಕೆ.ವಿನಯ್ ಶೆಟ್ಟಿ, ಕುಂದಾಪುರ**
ಭಟ್ರೇ, ನೀವು ಹವ್ಯಕರಾಗಿದ್ದೂ ಎಲೆ-ಅಡಕೆ ಜಗಿಯುವುದಿಲ್ಲವಲ್ಲ?
– **ನಿಜ, ನಾನು ಎಲೆ-ಅಡಕೆ ಜಗಿಯುವುದಿಲ್ಲ, ಆದರೆ ಉಗಿಯುತ್ತೇನೆ!**

- **ವಿನಾಯಕ ಕುದ್ರೋಳಿ, ಬೆಂಗಳೂರು**
ಭಟ್ರೇ, ಭಟ್ಟರ ಸಂಖ್ಯೆ ಜಾಸ್ತಿಯಾಗಬೇಕು ಎಂದು ಕರೆ ಕೊಟ್ಟಿದ್ದೀರಂತೆ?
– **ಅಡುಗೆ ಭಟ್ಟರ ಸಂಖ್ಯೆ ಜಾಸ್ತಿಯಾಗಲೆಂದು ಕರೆ ಕೊಟ್ಟಿದ್ದೇನೆ ಎಂದು ಕೆಲವರು ತಪ್ಪು ಭಾವಿಸಿದ್ದಾರಂತೆ!**

- **ಎಂ.ಸಂದೀಪ, ಕೆಂಗೇರಿ**
ಭಟ್ರೇ, ಹವ್ಯಕರೂ ಜಾತಿ ಸಮ್ಮೇಳನ ಮಾಡಲು ಮುಂದಾದರಾ?
– **ಸಮ್ಮೇಳನಕ್ಕೆ ಎಲ್ಲ ಜಾತಿಯವರನ್ನು ಆಹ್ವಾನಿಸಿದ್ದನ್ನು ನೋಡಿ ನೀನು ಹಾಗೆ ಭಾವಿಸಿದೆಯಾ?!**

- **ಗಣಪತಿ ಹೆಗಡೆ, ಶಿರಸಿ**
ಭಟ್ರೇ, ಹವ್ಯಕರ ಜನಸಂಖ್ಯೆ ಹೆಚ್ಚಳಕ್ಕೆ ರಾಘವೇಶ್ವರ ಶ್ರೀಗಳು ಸಮ್ಮೇಳನದ ವೇದಿಕೆಯಿಂದ ನೀಡಿದ ಸಲಹೆಯನ್ನು ಜಾರಿಗೆ ತರುವುದು ಹೇಗೆ?
– **ಸಿಂಪಲ್, 'ಮಂಚ್' (ವೇದಿಕೆ) ದಿಂದ ನೀಡಿದ ಸಲಹೆಯನ್ನು 'ಮಂಚ'ದಲ್ಲಿಯೇ ಜಾರಿಗೊಳಿಸಬೇಕು!**

- **ನಾರಾಯಣ ಮಕ್ಕಿಮನೆ, (ಇಮೇಲ್ ಮೂಲಕ)**
ಭಟ್ರೇ, ನೀವು ಹವ್ಯಕರು ಎಂಬುದು ನನಗೆ ಗೊತ್ತೇ ಇರಲಿಲ್ಲವಲ್ಲ?
– **ಒಮ್ಮೆ ಗೊತ್ತಾಗಿದ್ದಿದ್ದರೆ ಏನು ಮಾಡುತ್ತಿದ್ದೆ? ಈಗ ಗೊತ್ತಾಯ್ತಲ್ಲ.. ಏನು ಮಾಡ್ತೀಯಾ?!**

- **ಪಲ್ಲಕ್ಕಿ ರಾಘವೇಂದ್ರ, ಮಲ್ಲೇಶ್ವರ**
ಭಟ್ಟರ ಕೈನಿಂದ 'ಸ್ನಾಕ್' ಅಂಕಣದಲ್ಲಿ ಕಚಗುಳಿಗೆ ಒಳಗಾಗುವವರು, ಸಮಾರಂಭಗಳಲ್ಲಿ ಭಟ್ಟರ ಪಕ್ಕದಲ್ಲೇ ಒರಗಿ ನಿಂತುಕೊಂಡಾಗ ಆಗುವ ಅನುಭವ?
– **'ಸ್ನಾಕ್'ಗೂ 'ಸ್ನೇಕ್'ಗೂ ಬಹಳ ವ್ಯತ್ಯಾಸವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದ ಮುಗ್ಧರೇ?!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಖುದ್ದಾಗಿ ಸಾಹಿತಿಗಳನ್ನು ಎಲ್ಲಿ ನೋಡಬೇಕು?
– **ಸಪ್ನಾದಲ್ಲಿ (ಅಂದರೆ ಸಪ್ನಾ ಬುಕ್ ಹೌಸಿನಲ್ಲಿ) !**

- **ಅನೂಪ್ ಶಾಸ್ತ್ರೀ, ಕುಮಟಾ**
ಭಟ್ರೇ, ಇಡೀ ಹವ್ಯಕ ಸಮ್ಮೇಳನದ ಸಂದೇಶವೇನು?
– **'ಮಾಡು ಇಲ್ಲ ಮಾಡಿ'!**

ಬದಲಾದ ಮೌಲ್ಯ, ಬದಲಾದ ಶಿಕ್ಷಣ!

ಪ್ರಾಥಮಿಕ ಶಾಲೆಗಳು ಹೈಸ್ಕೂಲುಗಳಿಗೂ, ಹೈಸ್ಕೂಲುಗಳು ಕಾಲೇಜುಗಳಿಗೂ 'ಫೀಡರ್ ಕೇಂದ್ರ'ಗಳಾಗಿ ಮಾರ್ಪಟ್ಟಿವೆ. ಇಲ್ಲಿ ವಿದ್ಯಾರ್ಥಿಯನ್ನು ನಪಾಸು ಮಾಡುವಂತಿಲ್ಲ, ಮಾಡಿದರೆ ಮುಂದಿನ ತರಗತಿಗೆ ತಲೆ ಕಡಿಮೆಯಾಯ್ತು. ಆದರೆ ಸಿಬಿಎಸ್‌ಇಯವರು, '5 ಮತ್ತು 8ನೇ ತರಗತಿಯಲ್ಲಿ ನಪಾಸು ಮಾಡಬಹುದು' ಎಂದಿರುವುದು ಸ್ವಲ್ಪ ನೆಮ್ಮದಿ ನೀಡಿದೆ.

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಾನು ಹೈಸ್ಕೂಲ್ ಕಲಿಯುತ್ತಿದ್ದ ಸಮಯವದು. ಅಚ್ಯುತರಾವ್ ಎಂಬ ಮೇಷ್ಟ್ರು ನಮಗೆ ಜೀವಶಾಸ್ತ್ರವನ್ನು ಕಲಿಸುತ್ತಿದ್ದರು. ಅವರು ತುಂಬಾ ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರು, ಎಂದಿಗೂ ವಿದ್ಯಾರ್ಥಿಗಳನ್ನು ಕೋಪದಿಂದ ಬೈದವರಲ್ಲ, ಅಂಕಗಳಿಕೆಯಲ್ಲಿ ಕಡಿಮೆಯಾದಾಗಲೂ, ಹೀಗಾಗಿದ್ದಕ್ಕೆ ಕಾರಣವೇನು? ಮಕ್ಕಳ ಮನಸ್ಸಿನಲ್ಲಿ ಏನಾಗುತ್ತಿದೆ? ಅವರ ಹಿನ್ನೆಲೆಯೇನು? ಎಂಬೆಲ್ಲವನ್ನೂ ಅವರು ತಿಳಿದುಕೊಳ್ಳುತ್ತಿದ್ದರು. ನಮಗೆ ಅಂದು ಇಷ್ಟೆಲ್ಲಾ ಗೊತ್ತಾಗುತ್ತಿರಲಿಲ್ಲ, ಇಂದು ಅವರ ಎಲ್ಲಾ ನಡೆಗಳು ಅರ್ಥವಾಗುತ್ತಿವೆ.

ಇಷ್ಟೊಂದು ಒಳ್ಳೆಯ, ಮೃದುಭಾಷಿ ಗುರುಗಳು ತಮ್ಮ ಶಾಂತಸ್ವರದಲ್ಲಿ ಯಾರಾದರೊಬ್ಬ ವಿದ್ಯಾರ್ಥಿಯನ್ನು ಕರೆದು, ''ಸ್ಟಾಫ್ ರೂಮ್‌ಗೆ ಹೋಗಿ 'ರುದ್ರ'ನನ್ನು ತೆಗೆದುಕೊಂಡು ಬಾ'' ಎಂದರೆ, ಅಲ್ಲಿಗೆ ಆ ಹುಡುಗನಿಗೆ ಪೆಟ್ಟು ಬೀಳುತ್ತದೆ ಎಂದರ್ಥ. 'ರುದ್ರ' ಎಂದರೆ ಅದೊಂದು ಬಿದಿರಿನ ಬೆತ್ತ! ಅಚ್ಯುತರಾವ್ ಅವರು, ತಾವು ಯಾರನ್ನು ಶಿಕ್ಷಿಸಬೇಕೆತ್ತೋ ಆ ಹುಡುಗನನ್ನೇ 'ರುದ್ರ'ನನ್ನು ತರಲು ಕಳಿಸುತ್ತಿದ್ದುದು ವಿಶೇಷ. ತೆಳ್ಳಗೆ ಉದ್ದಕ್ಕಿದ್ದ 'ರುದ್ರ'ನಿಂದ ಪೆಟ್ಟು ತಿಂದರೆ, ಕೈಯಲ್ಲಿ ಮೂಡಿದ ಬಾಸುಂಡೆ ಮೂರು ದಿನದವರೆಗೆ ಮಾಸುತ್ತಿರಲಿಲ್ಲ, ಹಾಗೆಂದು ಮೇಷ್ಟ್ರು ಎಲ್ಲರಿಗೂ, ಯಾವಾಗಲೂ ದಂಡಿಸುತ್ತಿದ್ದರು ಎಂದಲ್ಲ; ಲಕ್ಷ್ಮಣರೇಖೆ ದಾಟಿದವರಿಗೆ ಮಾತ್ರ ಪೆಟ್ಟುಬೀಳುತ್ತಿತ್ತು. ಕೈ ಮುಂದೆ ಮಾಡಲು ಹೇಳಿ, ಅಂಗೈ ಮೇಲೆ ಒಂದೆರಡು ಬಾರಿಸಿ, ''ಬುದ್ಧಿಮಾತು ನಿನಗೆ ತಾಗಿಲ್ಲ, ಹೀಗಾಗಿ ಈ ಪೆಟ್ಟು. ನೆನಪಿರಲಿ'' ಎಂದು ಹೇಳುತ್ತಿದ್ದರು.

ಅಚ್ಯುತ ಸರ್ ಹೊಡೆದಿದ್ದಾರೆಂದರೆ, ಆ ವಿದ್ಯಾರ್ಥಿಯಿಂದ ಖಂಡಿತ ತಪ್ಪಾಗಿರುತ್ತದೆ ಎನ್ನುವುದು ಶಾಲೆಯಲ್ಲಿ ಜನಜನಿತವಾಗಿತ್ತು. ಅಂದಿನ ಕಾಲಘಟ್ಟದಲ್ಲಿ, ಮಕ್ಕಳನ್ನು ಹೀಗೆ ಶಿಕ್ಷಿಸಿದರೆ ಪೋಷಕರು ಕೋಪಗೊಳ್ಳುತ್ತಿರಲಿಲ್ಲ, ಬದಲಿಗೆ, ''ನೀನು ಅದೇನು ತಪ್ಪುಮಾಡಿದೆ, ಗುರುಗಳಿಂದ ಪೆಟ್ಟು ತಿನ್ನಲು?'' ಎಂದು ಮಕ್ಕಳನ್ನು ಪ್ರಶ್ನಿಸುತ್ತಿದ್ದರು. ಸಮಾಜದಲ್ಲಿ ಎಲ್ಲವೂ ಬದಲಾದಂತೆ ಇದು ಕೂಡ ಬದಲಾಗಿದೆ, ಕೆಲ ಶಿಕ್ಷಕರಲ್ಲಿಯೂ ಆ ಮಟ್ಟದ 'ಎಥಿಕ್ಸ್' ಇಲ್ಲವಾಗಿದೆ. ಇನ್ನು ಮಕ್ಕಳು ಮತ್ತು ಪೋಷಕರು ಬದಲಾಗಿರುವ ರೀತಿಯಂತೂ ದಿಗಿಲು ಹುಟ್ಟಿಸುತ್ತದೆ. 'ಎರಡು ಪ್ಲಸ್ ಎರಡು = ನಾಲ್ಕು' ಎನ್ನುವುದು ಸರಳಗಣಿತ. ಇವತ್ತೇನಾಗಿದೆಯೆಂದರೆ, ವಿದ್ಯಾರ್ಥಿಯೊಬ್ಬ 'ಇಪ್ಪತ್ತೆರಡು' ಎಂದು ಬರೆದಿದ್ದರೆ ಮತ್ತು ಅದು ತಪ್ಪು ಎಂದು ಶಿಕ್ಷಕರು ಅಂಕವನ್ನು ನೀಡದಿದ್ದರೆ, ಶಿಕ್ಷಕರನ್ನು ನಿಂದಿಸಲಾಗುತ್ತದೆ. 'ಮಗುವಿನ ಕ್ರಿಯೇಟಿವಿಟಿಯನ್ನು ಕೊಲ್ಲುವ ಹುನ್ನಾರ' ಎಂದು ಹುಯಿಲೆಬ್ಬಿಸಲಾಗುತ್ತದೆ. 'ಎರಡು ಪ್ಲಸ್ ಎರಡು ಯಾವಾಗಲೂ ನಾಲ್ಕೇ ಏಕೆ ಆಗಬೇಕು? ಮಗುವಿನ ಕ್ರಿಯಾಶೀಲತೆಯನ್ನು ಗಮನದಲ್ಲಿರಿಸಿಕೊಂಡು ಅರ್ಧ ಅಂಕವನ್ನು ಕೊಡಬೇಕು' ಎನ್ನುವ ಕೂಗು ಜೋರಾಗುತ್ತದೆ. ಮಕ್ಕಳು ಕೂಡ, 'ಹಸುವಿಗೆ ಎಷ್ಟು ಕಾಲು?' ಎಂದರೆ 'ಥ್ರೀ ಪ್ಲಸ್ ಒನ್' ಎನ್ನುತ್ತಾರೆ, ಇನ್ನು ಕೆಲವರು 'ಎರಡು ಪ್ಲಸ್ ಎರಡು' ಎನ್ನುತ್ತಾರೆ. ಅದೇನೇ ಇರಲಿ ಅಂಕನೀಡಬೇಕು ಎನ್ನುವ ತಾಕೀತು ಆಡಳಿತ ಮಂಡಳಿಯಿಂದ ಬಂದಿರುತ್ತದೆ.

ಹತ್ತನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಸರಿಯಾಗಿ ಓದಲು-ಬರೆಯಲು ಬಾರದು ಎನ್ನುವ ಸಂಗತಿಯನ್ನು ಮೊನ್ನೆ ತಾನೇ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಇವತ್ತು ಸಮಾಜ, ಶಿಕ್ಷಣ ಯಾವ ಮಟ್ಟಕ್ಕೆ ಬಂದಿದೆಯೆಂದರೆ, 'ಹಸುವಿಗೆ ಎಷ್ಟು ಕಾಲು?' ಎನ್ನುವ ಪ್ರಶ್ನೆಗೆ ಒಂದು ಅಂಕ ಇತ್ತೆಂದುಕೊಳ್ಳಿ, ವಿದ್ಯಾರ್ಥಿಯು 'ಎರಡು' ಎನ್ನುವ ಉತ್ತರ ಬರೆದಿದ್ದರೆ, 'ಕೊನೇಪಕ್ಷ ಅರ್ಧ ಸರಿಯಾಗಿ ಬರೆದಿದ್ದಾನೆ, ಅರ್ಧ ಅಂಕ ನೀಡಿ' ಎನ್ನುವ ಮಟ್ಟಕ್ಕೆ! ಈ ಮಾತುಗಳು ಉತ್ಪ್ರೇಕ್ಷೆ ಎನಿಸಬಹುದು, ಆದರೆ ಇದು ಇಂದು ಸಮಾಜದಲ್ಲಿ ನಡೆಯುತ್ತಿದೆ. 'ಬಿ ಲಿಬರಲ್ ಇನ್ ಕರೆಕ್ಷನ್' ಎನ್ನುವ ಒಂದು ಸಾಲಿನ ಆದೇಶ ಪಡೆಯದಿರುವ ಶಿಕ್ಷಕರು ಇಲ್ಲ ಎನ್ನುವಂತಾಗಿದೆ. ಈ ರೀತಿ ಅಂಕ ಕೊಟ್ಟು ಸಮಾಜದ ಆರೋಗ್ಯವನ್ನು ನಾವು ಕೊಲ್ಲುತ್ತಿದ್ದೇವೆ.

ಮೊನ್ನೆ ಸೋಷಿಯಲ್ ಮೀಡಿಯಾದಲ್ಲಿ, ''ಇದು ಪರೀಕ್ಷೆಯ ಸಮಯ. ಮಕ್ಕಳ ತಲೆಯಲ್ಲಿ ಪಠ್ಯ ಇರಬೇಕಾದ ಜಾಗದಲ್ಲಿ ಕ್ರಿಕೆಟ್ ಎನ್ನುವ ಕಸ ತುಂಬಿಕೊಳ್ಳುತ್ತಿದೆ. ಆಟಗಾರರು, ವೀಕ್ಷಕ ವಿವರಣೆಗಾರರು ಎಲ್ಲರ ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚುತ್ತದೆ. ಸಮಯ ವ್ಯಯಿಸಿ ಇದನ್ನು ನೋಡಿದ ಮಕ್ಕಳ ಭವಿಷ್ಯದ ಗತಿಯೇನು?'' ಎನ್ನುವ ಕಾಳಜಿ ವ್ಯಕ್ತಪಡಿಸಿ ಬರೆದಿದ್ದೆ. ಅದಕ್ಕೆ ಬಂದ ಪ್ರತಿಕ್ರಿಯೆಗಳು ನಮ್ಮ ಸಮಾಜ ಎತ್ತ ಸಾಗುತ್ತಿದೆ ಎನ್ನುವುದರ ದ್ಯೋತಕವಾಗಿತ್ತು. ಒಂದು ಪ್ರತಿಕ್ರಿಯೆಯು- ''ಸಮಾಜದಲ್ಲಿ ಎಲ್ಲರೂ ಶಿಸ್ತಿನಿಂದ ಓದಿ ಯಶಸ್ಸು ಪಡೆದರೆ, ಕಸ ಗುಡಿಸುವವರು ಯಾರು? ಡ್ರೈವಿಂಗ್ ಮಾಡುವವರು ಯಾರು? ಮುಸುರೆ ತೊಳೆಯುವವರು ಯಾರು? ಎಲ್ಲವೂ ಬ್ಯಾಲೆನ್ಸ್ ಆಗಬೇಕು, ಹೀಗಾಗಿ ಎಲ್ಲವೂ ಸರಿಯಾಗಿದೆ'' ಎನ್ನುವ ಅರ್ಥದಲ್ಲಿ ಇತ್ತು. ''ನಾವು ಉನ್ನತ ಯೋಚನೆ ಮಾಡಿ ಉನ್ನತ ಮಟ್ಟವನ್ನು ಮುಟ್ಟಬೇಕು'' ಎನ್ನುವುದು ನನ್ನ ಕಾಳಜಿಯಾಗಿತ್ತು. ಅದಕ್ಕೆ ಇಂಥ ವಿತಂಡವಾದದ ಪ್ರತಿಕ್ರಿಯೆ. ಸಮಾಜ ಇಂದು ಒಡೆದಮನೆ; ನೀವು ಏನೇ ಹೇಳಿ, ಅದಕ್ಕೊಂದು 'ಕೌಂಟರ್ ಸ್ಟೇಟ್‌ಮೆಂಟ್' ಸಿದ್ಧವಿರುತ್ತದೆ. 'ಪುರುಷರೇ ಏಕೆ ಸಿಗರೇಟು ಸೇದಬೇಕು?' ಎನ್ನುವ ವಾದವನ್ನು ಹುಟ್ಟುಹಾಕಿದ್ದು ಸಿಗರೇಟು ಕಂಪನಿಗಳು. 1960ರ ದಶಕದಲ್ಲಿ ಸಿಗರೇಟು ಮಾರಾಟದಿಂದ ನಿರ್ದಿಷ್ಟ ಮೊತ್ತದ ಲಾಭ ಗಳಿಸುತ್ತಿದ್ದ ಈ ಸಂಸ್ಥೆಗಳು ಇನ್ನಷ್ಟು ಲಾಭ ಮಾಡಿಕೊಳ್ಳಲು 'ಸ್ತ್ರೀವಾದ'ವನ್ನು ಹರಿಯಬಿಟ್ಟವು. 'ಹೆಣ್ಣಿಗೂ ಸಮಾನ ಹಕ್ಕಿದೆ, ಆಕೆ ಏಕೆ ಸಿಗರೇಟು ಸೇದಬಾರದು?' ಎನ್ನುವ ನರೇಟಿವ್ ಸೃಷ್ಟಿಮಾಡಲಾಯಿತು. ಹಣ ತೆತ್ತು ಹತ್ತಾರು ರೂಪದರ್ಶಿಗಳನ್ನು ಕರೆಸಿ, ಕೈಗೆ ಸಿಗರೇಟು ಕೊಟ್ಟು, ಸಮಾಜದ ಮುಂದೆ ಅದನ್ನು ಸೇದುವಂತೆ ಹೇಳಲಾಯಿತು. ಮಿಕ್ಕದ್ದು ಚರಿತ್ರೆ. ಇದರಿಂದ ಲಾಭ ಮಾಡಿಕೊಂಡದ್ದು



ಸಿಗರೇಟು ಉತ್ಪಾದಕ ಕಂಪನಿಗಳು! 'ಸೇದಬೇಡಿ, ಇದು ಆರೋಗ್ಯಕ್ಕೆ ಹಾನಿಕರ' ಎಂದರೆ, ಅದು ಸ್ತ್ರೀ ಮತ್ತು ಪುರುಷರ ನಡುವಿನ ಮೇಲು-ಕೀಳುಗಳ ಸಂಘರ್ಷವಾಗಿ ಮಾರ್ಪಾಡಾಗುತ್ತಿತ್ತು. ಇವತ್ತಿನ ಶಿಕ್ಷಣ ವ್ಯವಸ್ಥೆಯೂ ಹೀಗೇ ಆಗಿದೆ.

ಗಮನಿಸಿ ನೋಡಿ- ಪ್ರಾಥಮಿಕ ಶಾಲೆಗಳು ಎಂದರೆ ಅವು ಹೈಸ್ಕೂಲ್‌ಗೆ 'ಫೀಡರ್ ಕೇಂದ್ರ'ಗಳಾಗಿ ಮಾರ್ಪಟ್ಟಿವೆ; ಹೈಸ್ಕೂಲ್‌ಗಳು ಕಾಲೇಜುಗಳಿಗೆ ಫೀಡರ್‌ಗಳು, ಅಷ್ಟೇ. ಇಲ್ಲಿ ವಿದ್ಯಾರ್ಥಿಯನ್ನು ನಪಾಸು ಮಾಡುವಂತಿಲ್ಲ, ಮಾಡಿದರೆ ಮುಂದಿನ ತರಗತಿಗೆ ತಲೆ ಕಡಿಮೆಯಾಯ್ತು. ಇಲ್ಲ ಅದಾಗುವಂತಿಲ್ಲ, ಓದಲು ಬರೆಯಲು ಬರಲಿ ಬಿಡಲಿ, ಅವರು ಮುಂದಿನ ತರಗತಿಗೆ ಹೋಗಬೇಕು. ಒಟ್ಟಿನಲ್ಲಿ, ಶಾಲೆಗಳು 'ಕಲಿಕಾ ಕೇಂದ್ರ'ಗಳಾಗದೆ, ಮುಂದಿನ ಹಂತದ ತರಗತಿಗಳಿಗೆ 'ಫೀಡರ್'ಗಳಾಗಿ ಮಾರ್ಪಟ್ಟಿವೆ. ಕಳೆದ ವಾರ ಸಿಬಿಎಸ್‌ಸಿಯವರು, 'ಐದು ಮತ್ತು ಎಂಟನೇ ತರಗತಿಯಲ್ಲಿ ನಪಾಸು ಮಾಡಬಹುದು' ಎನ್ನುವ ಘೋಷಣೆ ಮಾಡಿದ್ದಾರೆ ಎನ್ನುವುದು ಸ್ವಲ್ಪ ಮಟ್ಟಿನ ನೆಮ್ಮದಿ ನೀಡಿದೆ.

ಇನ್ನು, ಸಮಾಜದಲ್ಲಿ ಕ್ರೀಡೆಯ ಹೆಸರಿನಲ್ಲಿ ನಡೆಯುವ ವ್ಯಾಪಾರದ ಬಗ್ಗೆ ಕೂಡ ನಮ್ಮದು ಇದೇ ಧೋರಣೆ. ಮಕ್ಕಳ ಪರೀಕ್ಷೆಯ ಸಮಯ ಎನ್ನುವ ಪರಿಜ್ಞಾನ ಕೂಡ ಯಾರಿಗೂ ಇಲ್ಲ. ''ಕ್ರಿಕೆಟ್ ನೋಡುವುದು ಓವರ್‌ಆಲ್ ಡೆವಲಪ್‌ಮೆಂಟ್‌ನ ಭಾಗ; ಕೇವಲ ಓದು ಮತ್ತು ಓದು ಎಂದರೆ ಅವರು ಕೂಚುಭಟ್ಟರಾಗುತ್ತಾರೆ'' ಎನ್ನುವ ಫರ್ಮಾನು ಸಮಾಜದಲ್ಲಿ ಉತ್ತಮ ಸ್ಥಾನದಲ್ಲಿರುವವರಿಂದ ಬರುತ್ತದೆ. ಕ್ರಿಕೆಟ್ ಆಟವನ್ನು 'ಆಡಿದ್ದರೆ' ಅಲ್ಲಿಗೆ ಪರವಾಗಿಲ್ಲ ಎನ್ನಬಹುದು, ದೈಹಿಕ ವ್ಯಾಯಾಮವಾದ ಹಾಗಾಯಿತು, ಓದಿನಿಂದ ಒಂದಷ್ಟು ಬದಲಾವಣೆ ಕೂಡ ಸಿಕ್ಕಿತು ಎನ್ನಬಹುದು. ಆದರೆ ಕ್ರಿಕೆಟ್‌ನ 'ವೀಕ್ಷಣೆ'ಯಿಂದ ಯಾವ ಲಾಭ? ಅದರಲ್ಲೂ ಕಲಿಯುವ ವಯಸ್ಸಿನಲ್ಲಿ ಮಕ್ಕಳನ್ನು ರಿಲ್ಯಾಕ್ಸ್ ಆಗಲು ಬಿಟ್ಟರೆ ಹೇಗೆ? ಹೀಗೆ ಯಾವುದೇ ಅಂಕೆ-ಶಂಕೆ ಇಲ್ಲದೆ ಬೆಳೆದ ಮಕ್ಕಳು ಸಮಾಜಕ್ಕೆ ಹೊರೆಯಾಗುತ್ತಾರೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಬಂದು ಇರುವ ಕೆಲಸಗಳಿಗೂ ತತ್ವಾರ ಬರುತ್ತಿರುವ ಈ ಸಮಯದಲ್ಲಿ, ಮಕ್ಕಳು ಇನ್ನಷ್ಟು ಶ್ರದ್ಧೆಯಿಂದ ಕಲಿಯಬೇಕಿದೆ. ಮುಂದೆ ಒದಗುವ ಸನ್ನಿವೇಶಗಳನ್ನು ಗ್ರಹಿಸಬೇಕಿದೆ. ಆದರೆ ಅದ್ಯಾವುದೂ ನಮ್ಮ ಸಮಾಜದಲ್ಲಿ ಆಗುತ್ತಿಲ್ಲ, ಬದಲಿಗೆ, ಒಂದು ಬದಲಾವಣೆ ಮಾತ್ರ ವೇಗವಾಗಿ ಆಗುತ್ತಿದೆ- ಶಾಲಾಕಾಲೇಜುಗಳಲ್ಲಿ ಶ್ರದ್ಧೆಯಿಂದ ಕಲಿತು ಪ್ರಥಮ ಸ್ಥಾನ ಪಡೆಯುವವರನ್ನು 'ನಿಷ್ಪ್ರಯೋಜಕರು', 'ಬದುಕನ್ನು ಆಸ್ವಾದಿಸಲು ಬಾರದವರು' ಎನ್ನಲಾಗುತ್ತಿದೆ. ಟಿವಿ ಟಾಕ್ ಶೋಗಳಲ್ಲಿ, ಸೆಲೆಬ್ರಿಟಿಗಳ ಬಾಯಲ್ಲಿ ''ನಾವು ಹೆಚ್ಚು ಓದಿಲ್ಲ, ಬಟ್ ಯಶಸ್ವಿಯಾಗಿದ್ದೇವೆ'' ಎನ್ನುವ ಹೇಳಿಕೆ ಹೆಚ್ಚಾಗುತ್ತಿದೆ. ಇನ್ನು ಬಾಲಿವುಡ್ ಮಂದಿಯಂತೂ ಟಾಕ್ ಶೋಗಳಲ್ಲಿ, ''ಹೆಚ್ಚು ಓದುತ್ತಿರುವವರ ಸಂಪಾದನೆ ಎಷ್ಟು?'' ಎಂದು ಕಿಚಾಯಿಸುತ್ತಾರೆ. 'ಪುರುಷರೇ ಏಕೆ ಸಿಗರೇಟು ಸೇದಬೇಕು?' ಎನ್ನುವ ಕ್ಯಾಂಪೇನ್ ಜ್ಞಾಪಿಸಿಕೊಳ್ಳಿ. ಇದರಿಂದ ಲಾಭವಾದದ್ದು ಯಾರಿಗೆ ಎನ್ನುವುದು ನೆನಪಿರಲಿ. ಇಂದಿನ ಸಮಾಜದಲ್ಲಿ ಹರಿಬಿಡಲಾಗುತ್ತಿರುವ ಅಂಶಗಳು ಕೂಡ ಇದೇ ತರಹದವು. ಅವರಿಗೆ ಬೇಕಿರುವುದು ಹೆಚ್ಚು ಚಿಂತಿಸದೆ, ಯೋಚಿಸದೆ ಅವರ ಪದಾರ್ಥಗಳನ್ನು ಮತ್ತು ಚಿಂತನೆಗಳನ್ನು 'ಕನ್ಸ್ಯೂಮ್' ಮಾಡುವ ಅಗಾಧ ಜನರ ಗುಂಪು, ಅಷ್ಟೇ!

ಗಮನಿಸಿ- ಬೀದಿಯಲ್ಲಿ ತಳ್ಳುಗಾಡಿಯಲ್ಲಿ ಬರುವ, ವಾರದಲ್ಲಿ 2-3 ಬಾರಿ ಖರೀದಿಸಬೇಕಾಗುವ ಟೊಮೆಟೋವನ್ನು ಕೊಳ್ಳುವ ಮುನ್ನ ಅದನ್ನು ಪರೀಕ್ಷಿಸಿ, ಸರಿಯಾಗಿದೆಯೇ ಇಲ್ಲವೇ ಎಂದು ನೋಡುವ ಮಧ್ಯಮ ವರ್ಗದ ಜನರು ಈ ವಿಷಯದಲ್ಲಿ ಮಾತ್ರ ಪೂರ್ಣನಿದ್ರೆಯಲ್ಲಿದ್ದಾರೆ. 'ಇವತ್ತು ಎಲ್‌ಕೆಜಿಗೆ ಸೇರಿಸಲು ಲಕ್ಷ ರುಪಾಯಿ ಬೇಕು' ಎನ್ನುವ ಕಾಲಘಟ್ಟದಲ್ಲಿ ನಾವಿದ್ದೇವೆ. ಅಲ್ಲಿಂದ ಪದವಿ ತರಗತಿಯವರೆಗೆ ಮಾಡಿದ ಖರ್ಚಿನ ಲೆಕ್ಕ ಹಾಕಿದರೆ ಅದೊಂದು ದೊಡ್ಡ ಮೊತ್ತವಾಗುತ್ತದೆ. ಇಷ್ಟೊಂದು ಹಣವನ್ನು ವ್ಯಯಿಸಿ ಕೂಡ ಕಲಿಕೆಯಲ್ಲಿ ಹಿಂದೆ ಬಿದ್ದು, ಅದರಿಂದ ಬದುಕು ಕಟ್ಟಿಕೊಳ್ಳಲಾಗಲಿಲ್ಲ ಎಂದರೆ ಅದಕ್ಕೇನು ಅರ್ಥ? ''ಹೇಗೆ ಜೀವಸ್ತರದಲ್ಲಿ 'ಇಕೊ-ಬ್ಯಾಲೆನ್ಸ್' ಆಗಬೇಕೋ, ಹಾಗೆ ಇಲ್ಲೂ ಎಲ್ಲಾ ತರಹದ ಕೆಲಸ ಮಾಡುವವರು ಬೇಕು'' ಎನ್ನುವ ವಾದ ಕೇಳಲು ಬಹಳ ಚೆನ್ನಾಗಿರುತ್ತದೆ. ಹತ್ತಾರು ವರ್ಷ ಆಟೋ ಓಡಿಸುತ್ತಾ, ಬದುಕಿನ ಕಷ್ಟಗಳನ್ನು ನುಂಗಿಕೊಂಡು, ''ನನ್ನ ಬದುಕಿನಂತೆ ನನ್ನ ಮಕ್ಕಳ ಬದುಕು ಆಗಬಾರದು'' ಎಂದು ಬಯಸುವ ತಂದೆ-ತಾಯಿಯನ್ನು ಒಮ್ಮೆ ಮಾತಾಡಿಸಿ ನೋಡಿ ಸಾಕು, ನೋವು-ಕಷ್ಟದ ಅರಿವಾಗುತ್ತದೆ.

''ಈಗ ನಮ್ಮ ಕೈಲಿರುವ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು, ಇಲ್ಲವಾದಲ್ಲಿ ಜೀವನಪೂರ್ತಿ ಹಣವಿಲ್ಲ, ಸಮಯವಿಲ್ಲ'' ಎನ್ನುತ್ತಾ, ಇಷ್ಟವಿರಲಿ ಬಿಡಲಿ ಬದುಕಿನ ಬಂಡಿ ಎಳೆಯಲು ಬೇಕಾಗುವ ಕೆಲಸವನ್ನು ಮಾಡಬೇಕಾಗುತ್ತದೆ. ಟಿವಿ ಪರದೆಯ ಮೇಲೆ ಕುಣಿದಾಡಿದ್ದ, ನೀವು ನೋಡಿ, ಆರಾಧಿಸಿ, ಮೆಚ್ಚಿದ್ದ ಸಿನಿಮಾ ನಟರು ಅಥವಾ ಆಟಗಾರರು ಮಾತ್ರ ಜಗತ್ತಿನ ಎಲ್ಲಾ ಸುಖಭೋಗಗಳನ್ನು ಅನುಭವಿಸುತ್ತಾ ಜೀವನವನ್ನು ಕಳೆಯುತ್ತಾರೆ. ಇದರರ್ಥ ಆಟವನ್ನು, ಸಿನಿಮಾವನ್ನು ಯಾರೂ ವೀಕ್ಷಿಸಬಾರದು ಅಂತಲ್ಲ; ಮಾಡುವ ಕೆಲಸ ಮುಖ್ಯವಾಗಿರಲಿ, ನಮ್ಮ ಗುರಿಗೆ ಆದ್ಯತೆಯಿರಲಿ, ಆ ಸಾಧನೆಯ ಹಾದಿಯಲ್ಲಿ ಬೇರಾವುದೂ ಅಡ್ಡಿಯಾಗದಿರಲಿ ಎನ್ನುವುದಷ್ಟೇ ಆಶಯ. ಉಳಿದಂತೆ, ಅವರವರ ತಲೆಗೆ ಅವರವರ ಕೈ. ಇಲ್ಲಿ ಎಲ್ಲರೂ ಅವರವರ ಮನಸ್ಸಿಗೆ ಬಂದದ್ದು ಮಾಡಲು ಸ್ವತಂತ್ರರು.

ಚಿನಕುರುಳಿ

ಎಚ್.ಆನಂದರಾಮ ಶಾಸ್ತ್ರೀ

2025ರಲ್ಲಾದರೂ ಇದು ಸಾಧ್ಯವೇ?

- ರಾಜಕಾರಣಿಗಳು ಸುಳ್ಳು ಹೇಳದಿರುವುದು
- ಚಿತ್ರನಟರು ಅಪ್ಪಟ ಕನ್ನಡದಲ್ಲಿ ಸಂದರ್ಶನ ನೀಡುವುದು
- ಕನ್ನಡಪರ ಹೋರಾಟಗಾರರು ಶುದ್ಧ ಕನ್ನಡ ಮಾತನಾಡುವುದು
- ಬೆಂಗಳೂರಿನ ಕನ್ನಡಿಗರು ಕನ್ನಡದಲ್ಲಿ ಮಾತನಾಡುವುದು
- ಬೆಂಗಳೂರಿನಲ್ಲಿರುವ ಹಿಂದಿ, ತಮಿಳು ಭಾಷಿಕರು ಕನ್ನಡ ಕಲಿಯುವುದು
- ದಿನಪತ್ರಿಕೆಗಳು ಒಂದು ದಿನವಾದರೂ ಮುದ್ರಣದೋಷವಿಲ್ಲದೆ ಪ್ರಕಟವಾಗುವುದು
- ಸುದ್ದಿವಾಹಿನಿಗಳು ಒಂದು ದಿನವಾದರೂ ಸಕಾರಾತ್ಮಕ ಸುದ್ದಿಗಳನ್ನೇ ಬಿತ್ತರಿಸುವುದು
- ಒಂದು ದಿನದ ಮಟ್ಟಿಗಾದರೂ ದಿನಪತ್ರಿಕೆಗಳ ಮುಖಪುಟದಲ್ಲಿ ರಾಜಕಾರಣಿಗಳ ಸುದ್ದಿ ಇಲ್ಲದಿರುವುದು
- ಪ್ರಶಸ್ತಿಗಳಿಗಾಗಿ ಯಾರೂ ಲಾಬಿ ಮಾಡದಿರುವುದು
- ಪುಸ್ತಕ ಬಿಡುಗಡೆಯ ಕಾರ್ಯಕ್ರಮಗಳಿಗೆ ಸಾಹಿತ್ಯಾಸಕ್ತರು ಸ್ವಇಚ್ಛೆಯಿಂದ ಹಾಜರಾಗುವುದು
- ಹಲವು 'ಗಣ್ಯ' ಸಾಹಿತಿಗಳು ಜನರಿಗೆ ಅರ್ಥವಾಗುವಂತೆ ಭಾಷಣ ಮಾಡುವುದು ಮತ್ತು ಕವಿಗಳು ಅರ್ಥವಾಗುವಂಥ ನವ್ಯಕಾವ್ಯ ರಚಿಸುವುದು
- ಯೋಗ್ಯರಿಗಷ್ಟೇ ಪ್ರಶಸ್ತಿಗಳನ್ನು ನೀಡುವುದು
- ಕ್ಲಿನಿಕ್ಕಿಗೆ ಬಂದ ರೋಗಿಗಳನ್ನು ಖಾಸಗಿ ವೈದ್ಯರು ಕಾಯಿಸದಿರುವುದು
- ಬೆಂಗಳೂರಿನಲ್ಲಿ ಒಂದು ದಿನವಾದರೂ ಎಲ್ಲಿಯೂ ಟ್ರಾಫಿಕ್ ಜಾಮ್ ಆಗದಿರುವುದು
- ಒಂದು ದಿನದ ಮಟ್ಟಿಗಾದರೂ ಬೆಂಗಳೂರು ಕಸಮುಕ್ತವಾಗಿರುವುದು
- ಬೆಂಗಳೂರಿನ ಎಲ್ಲ ಫಲಕಗಳಲ್ಲಿ ಕನ್ನಡವೂ ರಾರಾಜಿಸುವುದು
- ಬೆಂಗಳೂರಿನ ಆಟೋಗಳವರು ಕರೆದಲ್ಲಿಗೆ ಬರುವುದು ಮತ್ತು ಮೀಟರ್ ಪ್ರಕಾರವೇ ಹಣ ತೆಗೆದುಕೊಳ್ಳುವುದು
- ಬಿಬಿಎಂಪಿ ಚುನಾವಣೆ ನಡೆಯುವುದು
- ಬೆಂಗಳೂರಿನಲ್ಲಿ ಸಾಕಷ್ಟು ಸಾರ್ವಜನಿಕ ಮೂತ್ರಾಲಯಗಳ ವ್ಯವಸ್ಥೆ ಆಗುವುದು
- ಬೆಂಗಳೂರಿನ ಎಲ್ಲಾ ರಸ್ತೆ ಗುಂಡಿಗಳು ಮುಚ್ಚಲ್ಪಡುವುದು
- ಒಂದು ದಿನದ ಮಟ್ಟಿಗಾದರೂ ಬೆಂಗಳೂರು ಬ್ಯಾನರ್, ತಾತ್ಕಾಲಿಕ ಹೋರ್ಡಿಂಗ್, ಬಂಟಿಂಗ್ ಇತ್ಯಾದಿಗಳಿಂದ ಮುಕ್ತವಾಗಿರುವುದು
- ಇಡೀ ಬೆಂಗಳೂರಿನಲ್ಲಿ ಒಂದು ದಿನದ ಮಟ್ಟಿಗಾದರೂ ವಿದ್ಯುತ್ ಕೈಕೊಡದಿರುವುದು
- ಒಂದು ದಿನದ ಮಟ್ಟಿಗಾದರೂ ಬಿಎಂಟಿಸಿ ಬಸ್ಸುಗಳು ಸ್ಟಾಪುಗಳಲ್ಲೇ ನಿಲ್ಲುವುದು
- ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಟಿಕೆಟ್ ದರಗಳು ಜನರ ಕೈಗೆಟುಕುವಂತೆ ಇರುವುದು ಮತ್ತು ಅಲ್ಲಿಯ ಆಹಾರ-ಪಾನೀಯಗಳ ಬೆಲೆಗಳು ಆಕಾಶದಿಂದ ಕೆಳಕ್ಕಿಳಿಯುವುದು
- ಮಲ್ಲಿಕಾರ್ಜುನ ಖರ್ಗೆಯವರು, ದೇವೇಗೌಡರು, ಯಡಿಯೂರಪ್ಪನವರು ನಗುವ ಅಭ್ಯಾಸ ಬೆಳೆಸಿಕೊಳ್ಳುವುದು
- ಸದಾನಂದಗೌಡರು ನಗದಿರುವ ಅಭ್ಯಾಸ ಬೆಳೆಸಿಕೊಳ್ಳುವುದು
- ಕುಮಾರಸ್ವಾಮಿ ಮತ್ತು ಮಗ ನಿಖಿಲ್ ಅಳದಿರುವ ಅಭ್ಯಾಸ ಬೆಳೆಸಿಕೊಳ್ಳುವುದು
- ಕುಮಾರಸ್ವಾಮಿಯವರು ಒಂದು ಸಲವಾದರೂ ಒಂದು ವಾಕ್ಯವನ್ನಾದರೂ ವ್ಯಾಕರಣಬದ್ಧವಾಗಿ ಹೇಳುವುದು ಮತ್ತು ಆ ವಾಕ್ಯಕ್ಕೆ ಪೂರ್ಣವಿರಾಮ ನೀಡುವುದು
- ಕಸಾಪ ಅಧ್ಯಕ್ಷ ಮಹೇಶ ಜೋಶಿ ವಿವಾದಾಸ್ಪದ ಹೇಳಿಕೆಗಳನ್ನು ನೀಡದಿರುವುದು
- ಯಕ್ಷಗಾನ ವೇಷಧಾರಿಗಳು ಹಾದಿ ಬೀದಿಗಳಲ್ಲಿ ಕುಣಿಯುವುದನ್ನೂ, ಸಿಕ್ಕಸಿಕ್ಕಲ್ಲೆಲ್ಲ ವೇಷ ಧರಿಸಿ ನಿಲ್ಲುವುದನ್ನೂ ಕೈಬಿಡುವುದು
- ಸರಕಾರಿ ನೌಕರರು ಸಮಯಕ್ಕೆ ಸರಿಯಾಗಿ ಕಚೇರಿಗೆ ಹಾಜರಾಗುವುದು ಮತ್ತು ಕಚೇರಿಯ ಅವಧಿಯಲ್ಲಿ ಹೊರಕ್ಕೆ ಹೋಗದಿರುವುದು
- ಒಂದು ದಿನದ ಮಟ್ಟಿಗಾದರೂ ಸರಕಾರಿ ನೌಕರರು ಲಂಚ ತೆಗೆದುಕೊಳ್ಳದಿರುವುದು
- ಪೊಲೀಸರು ಜನರನ್ನು ಗೌರವದಿಂದ ಮಾತನಾಡಿಸುವುದು
- ಒಂದು ದಿನವಾದರೂ ಎಲ್ಲಾ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವುದು
- ಒಂದು ದಿನದ ಮಟ್ಟಿಗಾದರೂ ಜನರು ತಮ್ಮ ಮೊಬೈಲ್‌ಗಳಲ್ಲಿ ಪುಗಸಟ್ಟೆ ಮಾತನ್ನೂ ಅನವಶ್ಯಕ ನೋಟಗಳನ್ನೂ ನಿಲ್ಲಿಸುವುದು
- ಚಲನಚಿತ್ರಗಳಲ್ಲಿ ಜುಟ್ಟಿನ ಬ್ರಾಹ್ಮಣರನ್ನು, ಟೋಪಿಯ ಪಾರ್ಸಿಗಳನ್ನು, ಮಾರ್ವಾಡಿಗಳನ್ನು, ಪೊಲೀಸರನ್ನು ಹಾಸ್ಯದ ಹೆಸರಿನಲ್ಲಿ ಅಪಹಾಸ್ಯಕ್ಕೆ ಗುರಿ ಮಾಡದಿರುವುದು
- ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 'ಗ್ರಾಹಕ-ಸ್ನೇಹಿ' ಸೇವೆ ದೊರೆಯುವುದು
- ಒಂದು ದಿನದ ಮಟ್ಟಿಗಾದರೂ ಯಾವುದೇ ಸ್ವಾಮೀಜಿ-ಧರ್ಮಗುರು ಯಾವುದೇ ಸಾಮಾಜಿಕ ಹೋರಾಟದಲ್ಲಾಗಲೀ ರಾಜಕೀಯ ಸಮಾರಂಭದಲ್ಲಾಗಲೀ ಭಾಗವಹಿಸದಿರುವುದು
- ಬೀದಿ ನಾಯಿಗಳ ಮತ್ತು ಪಟಾಕಿಗಳ ಪರ-ವಿರೋಧ ವಾದ-ವಿವಾದ ನಡೆಯದಿರುವುದು
- ಕೊನೆಯದಾಗಿ, ನಾನು ಇಂಥ ಭಾರಿ ನಿರೀಕ್ಷೆಗಳನ್ನು ಇಟ್ಟುಕೊಳ್ಳದಿರುವುದು!

(ಲೇಖಕರು ಹಿರಿಯ ಸಾಹಿತಿ)

ದೇಶದ ಚರಿತ್ರೆ ಅವರನ್ನು ಆದರದಿಂದ ಕಾಣಲಿದೆ

ಮೆಲುಕು
ಪ್ರೊ.ಆರ್.ಜಿ.ಹೆಗಡೆ
vveditoped@gmail.com

ಜವಾಹರಲಾಲ್ ನೆಹರು, ಇಂದಿರಾ ಗಾಂಧಿ ಅಥವಾ ನರೇಂದ್ರ ಮೋದಿ ಅವರ ಗ್ಲಾಮರ್, ನಿರ್ಣಯ ತೆಗೆದುಕೊಳ್ಳುವ ಶಕ್ತಿ ಅಥವಾ ಪ್ರಚಂಡ ವ್ಯಕ್ತಿತ್ವ ಯಾವುದೂ ಇಲ್ಲದೆ ಪ್ರಧಾನಿಯಾಗಿ ದೇಶವನ್ನು 10 ವರ್ಷಗಳ ಕಾಲ ಆಳಿದವರು ಮನಮೋಹನ್ ಸಿಂಗ್. ಅವರನ್ನು, ದೇಶಕ್ಕೆ ಅವರಿತ್ತ ಕೊಡುಗೆಯನ್ನು ಇತಿಹಾಸ ಹೇಗೆ ಗಮನಿಸಬೇಕು ಎಂಬುದು ಗಹನವಾದ, ಸಂಕೀರ್ಣವಾದ ಪ್ರಶ್ನೆ. ದೇಶದ ಆರ್ಥಿಕತೆಗೆ ಮಹತ್ತರ ತಿರುವು ನೀಡಿದ ಅವರನ್ನು ವಿಶ್ಲೇಷಿಸಬೇಕಾದರೆ ಹಲವು ವೈರುಧ್ಯಗಳನ್ನು ದಾಟಿಹೋಗಬೇಕು.

ದೇಶದ ಚರಿತ್ರೆಯ ಒಂದು ಘಟ್ಟದಲ್ಲಿ 'ಉದ್ಭವ ಮೂರ್ತಿ'ಯಂತೆ ಬಂದು ಪ್ರಜ್ವಲಿಸಿದವರು ಮನಮೋಹನ್. ಎಲ್ಲರಿಗೂ ಗೊತ್ತಿರುವಂತೆ ಆ ಘಟ್ಟದಲ್ಲಿ ಭಾರತದ ಆರ್ಥಿಕ ವ್ಯವಸ್ಥೆಯು ಸಮಾಜವಾದಿ ಆರ್ಥಿಕ ನೀತಿಯ ಭಾರದಲ್ಲಿ ಕುಸಿದುಬೀಳುವ ಹಂತದಲ್ಲಿತ್ತು. ಕೆಲ ದಿನಗಳಿಗಷ್ಟೇ ಸಾಲುವಷ್ಟು ವಿದೇಶಿ ವಿನಿಮಯ ಉಳಿದಿತ್ತು, ದೇಶದ ಬಂಗಾರವನ್ನು ಅಡವಿಡಬೇಕಾದ ಪರಿಸ್ಥಿತಿ ಎದುರಾಗಿತ್ತು. ಇಂಥ ಸಂದರ್ಭದಲ್ಲಿ ದೇಶವನ್ನು ವಿದೇಶಿ ಬಂಡವಾಳ, ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಕಿಟಕಿಗಳಿಗೆ ತೆರೆದಿದ್ದು, ಭಾರತವನ್ನು ಮಾರುಕಟ್ಟೆಯ ಆರ್ಥಿಕತೆಗೆ ಜೋಡಿಸಿದ್ದು, ತನ್ಮೂಲಕ ದೇಶದ ಆರ್ಥಿಕತೆಯು ಏರುಗತಿ ಕಾಣುವಂತೆ ಮಾಡಿದ್ದು ಅವರೇ. ಪಿ.ವಿ.ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ದೇಶದ ಹೊಸ ಆರ್ಥಿಕತೆಯ ಶಿಲ್ಪಿಗಳು; ಆದರೆ ಮನಮೋಹನ್‌ರು ದೇಶದ ಸೋಷಲಿಸ್ಟ್ ಆರ್ಥಿಕ ವ್ಯವಸ್ಥೆಯನ್ನು ಕಟ್ಟಿದವರು ಕೂಡ ಆಗಿದ್ದರು ಎಂಬುದನ್ನು ನೆನಪಿಡಬೇಕು. ಏಕೆಂದರೆ, ಹಣಕಾಸು ಸಚಿವರಾಗುವ ಮೊದಲು ಅವರು ಯೋಜನಾ ಆಯೋಗದ ಉಪಾಧ್ಯಕ್ಷ, ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಇಂಥ ಮಹತ್ವದ ಹುದ್ದೆಗಳನ್ನು ನಿರ್ವಹಿಸಿದ್ದರು.

ಇಲ್ಲಿ ಮತ್ತೊಂದು ಸಂಗತಿಯನ್ನು ಗಮನಿಸಬೇಕು. ಮಧ್ಯಮ ವರ್ಗದವರಲ್ಲಿ ತಮಗಿದ್ದ ಅಪಾರ ಜನಪ್ರಿಯತೆಯ ನಡುವೆಯೂ ಮನಮೋಹನ್ ಸಿಂಗ್ ಅವರು ಇತರ ಪ್ರಧಾನಿಗಳಾದ ನೆಹರು, ಇಂದಿರಾ ಗಾಂಧಿ, ವಾಜಪೇಯಿ, ನರೇಂದ್ರ ಮೋದಿಯವರಂತೆ 'ಮಾಸ್ ಲೀಡರ್' ಆಗಿ ಪರಿವರ್ತನೆಗೊಳ್ಳಲೇ ಇಲ್ಲ. ತಾವಿದ್ದ ಪಕ್ಷವನ್ನು ಗೆಲ್ಲಿಸಿಕೊಂಡು ಬಂದು ಪ್ರಧಾನಿಯಾದವರಲ್ಲ ಅವರು. ಎರಡನೆಯ ಅವಧಿಯಲ್ಲೂ ಅವರು ತಮ್ಮ 'ಗವರ್ನರ್' ರೀತಿಯ ವ್ಯಕ್ತಿತ್ವದಿಂದ ಹೊರಬರಲೇ ಇಲ್ಲ, 'ಮಾಸ್ ಲೀಡರ್' ಆಗುವೆಡೆಗೂ ಚಿತ್ತ ಹರಿಸಲಿಲ್ಲ. 'ರಾಜಕೀಯ ವ್ಯಕ್ತಿತ್ವ' ಬೆಳೆಸಿಕೊಳ್ಳುವ ಕುರಿತು ಅವರಿಗೆ ಆಸಕ್ತಿಯೇ ಇರಲಿಲ್ಲ ಎಂಬ ಮಾತು ಸತ್ಯವೆನಿಸುತ್ತದೆ. ಹೆಚ್ಚು ಕಡಿಮೆ 'ಪಕ್ಷ ರಾಜಕೀಯ'ದಿಂದ ದೂರವೇ ಉಳಿದಿದ್ದ ಅವರು, ಪ್ರಧಾನಿಯಾಗಿದ್ದರೂ ಪಕ್ಷದ ಯಾವುದೇ ಹುದ್ದೆಯನ್ನು ಹೊಂದಿರಲೇ ಇಲ್ಲ. 1991ರಲ್ಲಿ ಅಸ್ಸಾಂ ವಿಧಾನಸಭೆಯಿಂದ ರಾಜ್ಯಸಭೆಗೆ ಸದಸ್ಯರಾಗಿ ಆಯ್ಕೆಯಾದ ಮನಮೋಹನ್, 1995, 2001, 2007 ಮತ್ತು 2013ರಲ್ಲೂ ಪುನರಾಯ್ಕೆಗೊಂಡರು ಹಾಗೂ 1998-2004ರ ಅವಧಿಯಲ್ಲಿ, ಕೇಂದ್ರದಲ್ಲಿ ಬಿಜೆಪಿಯು ಅಧಿಕಾರದಲ್ಲಿದ್ದಾಗ, ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿದ್ದರು. ಈ ಮಧ್ಯೆ, 1999ರಲ್ಲಿ ದಕ್ಷಿಣ ದೆಹಲಿ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸಿದರಾದರೂ, ಗೆಲುವು ದಕ್ಕಲಿಲ್ಲ. ಅಂದರೆ, ಜನರಿಂದ ನೇರವಾಗಿ ಆಯ್ಕೆಯಾಗದೆಯೇ 10 ವರ್ಷಗಳಷ್ಟು ಸುದೀರ್ಘ ಕಾಲ ಭಾರತದಂಥ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಧಾನಿಯಾದ ಏಕೈಕ ವ್ಯಕ್ತಿ ಮನಮೋಹನ್ ಸಿಂಗ್. ಹಾಗೆಂದು, ಅವರಿಗೆ ದೇಶದಲ್ಲಿ ಜನಪ್ರಿಯತೆ ಇರಲಿಲ್ಲವೆಂದೇನೂ ಅಲ್ಲ, ಆದರೆ ಅದು 'ರಾಜಕೀಯ ಸ್ವರೂಪ'ದ್ದಾಗಿರಲಿಲ್ಲವಷ್ಟೇ. 'ರಾಜಕೀಯೇತರ ವ್ಯಕ್ತಿತ್ವ'ದ ಅವರು ಪ್ರಧಾನಿ ಗಾದಿಗೇರಿದಾಗ ಶುರುವಿನಲ್ಲಿ ಒಂದಷ್ಟು ಇರಿಸು-ಮುರಿಸು, ಟೀಕೆಗಳನ್ನು ಎದುರಿಸಬೇಕಾಗಿ ಬಂತು. ಆದರೆ ಇವೆಲ್ಲದರ ನಡುವೆಯೂ ಸಮತೋಲನ ಕಾಯ್ದುಕೊಂಡು, ತಮ್ಮ ಹೆಗಲೇರಿದ್ದ ಹೊಣೆಯನ್ನು ಸಾಕಷ್ಟು ಉತ್ತಮವಾಗಿ ಮತ್ತು ವೈಯಕ್ತಿಕ ಘನತೆಯನ್ನು ಕಳೆದುಕೊಳ್ಳದೆ ಅವರು ನಿರ್ವಹಿಸಿದರೆನ್ನಬೇಕು.

ಸಿಂಗ್ ಅವರು ರಾಜಕೀಯ ವಲಯವನ್ನು ಪ್ರವೇಶಿಸಿದ ಸಂದರ್ಭವೂ ಗಮನಾರ್ಹ. 1991ರಲ್ಲಿ ಪ್ರಧಾನಿಯಾಗಿ ಬಂದ ಪಿ.ವಿ.ನರಸಿಂಹರಾವ್, ಭಾರತದ ಆರ್ಥಿಕತೆಯು ದಿವಾಳಿಯ ಅಂಚಿನಲ್ಲಿದ್ದುದನ್ನು ಗಮನಿಸಿದ್ದರು. ಆರ್ಥಿಕತೆಗೆ ಸ್ಥಿರತೆ ನೀಡಿ ಭಾರತವನ್ನು ಸದೃಢ ದೇಶವಾಗಿ ಕಟ್ಟಲೆಂದು ಮನಮೋಹನ್ ಸಿಂಗ್‌ರನ್ನು ರಾವ್ ಆಮಂತ್ರಿಸಿದರು. ಈ ಆಹ್ವಾನವನ್ನು ಮೊದಲಿಗೆ ಸಿಂಗ್ ಒಪ್ಪಿರಲಿಲ್ಲ, ಆದರೆ ನರಸಿಂಹರಾಯರ ಆಗ್ರಹ ತೀವ್ರವಾದಾಗ ಒಪ್ಪಬೇಕಾಗಿ ಬಂತು. ಹಾಗೆ ಅವರು ನಿರ್ವಹಿಸಬೇಕಾಗಿ ಬಂದುದು ಹಣಕಾಸು ಸಚಿವರ ಹುದ್ದೆಯನ್ನು. ಈ ನಿಟ್ಟಿನಲ್ಲಿ ಅವರು ನೀಡಿದ ಕೊಡುಗೆ ಅಮೋಘ ಎನ್ನಬೇಕು, ಅವರ ರಾಜಕೀಯ ವಿರೋಧಿಗಳದ್ದು ಕೂಡ ಈ ವಿಷಯದಲ್ಲಿ ಅಪಸ್ವರವಿರಲಿಲ್ಲ. ಮನಮೋಹನ್ ಸಿಂಗ್‌ರ ಈ ಸಾಮರ್ಥ್ಯದಲ್ಲಿ ವಿಶ್ವಾಸವಿಟ್ಟೇ ಸೋನಿಯಾ ಗಾಂಧಿಯವರು ಅವರನ್ನು ಪ್ರಧಾನಿ ಗದ್ದುಗೆಯಲ್ಲಿ ಕೂರಿಸಿದ್ದು. 2004ರಲ್ಲಿ ಮೈತ್ರಿಕೂಟದ ಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಸಹಜವಾಗಿಯೇ ಸೋನಿಯಾರನ್ನು ಪ್ರಧಾನಿ ಅಭ್ಯರ್ಥಿಯಾಗಿ ಆಯ್ಕೆಮಾಡಿದ್ದರೂ, ಅವರು ಕೈಗೊಂಡ ಅಚ್ಚರಿಯ ನಿರ್ಧಾರವು ಸಿಂಗ್‌ರನ್ನು ಪ್ರಧಾನಿಯನ್ನಾಗಿಸಿತು. ಅವರಿಗೆ ವಿತ್ತ ಸಚಿವ ಅಥವಾ ಪ್ರಧಾನಿಯಾಗುವ ಅರ್ಹತೆ ನಿಜಕ್ಕೂ ಇತ್ತು; ಆದರೂ ಭಾರತದಂಥ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಟುಮಾತಾಡಿ ಯಾರನ್ನೂ ನೋಯಿಸದ, ಅಕಾಡೆಮಿಕ್ ಹಿನ್ನೆಲೆ ಮತ್ತು ಶೈಲಿಯ ಸಿಂಗ್‌ರಂಥ ವ್ಯಕ್ತಿ ಈ ಹುದ್ದೆಗಳನ್ನು ಅಲಂಕರಿಸಿದ್ದು, ದೇಶದ ರಾಜಕೀಯ ಇತಿಹಾಸದ ಸಾಂಪ್ರದಾಯಿಕತೆಗೆ ಹೊರತಾದದ್ದು ಮತ್ತು ವಿಭಿನ್ನವಾಗಿ ನಿಲ್ಲುವಂಥದ್ದು ಎನ್ನಲಡ್ಡಿಯಿಲ್ಲ. ಮತ್ತೊಂದು ವಿಶೇಷವೆಂದರೆ, ಬಹುಸಂಖ್ಯಾತರೇನೂ ಅಲ್ಲದ ಸಿಖ್ ಸಮುದಾಯಕ್ಕೆ ಸೇರಿದ್ದವರು ಸಿಂಗ್; ಇದು ಕೂಡ ದೇಶದ ರಾಜಕೀಯದ ಅಚ್ಚರಿ, ನಮ್ಮ ಪ್ರಜಾಪ್ರಭುತ್ವದಲ್ಲಿ ಏನು ಬೇಕಾದರೂ ಆಗಬಹುದು ಎಂಬುದರ ದ್ಯೋತಕ.

''ತಮ್ಮ ಮೊದಲ ಅಧಿಕಾರಾವಧಿಯಲ್ಲಿ ಸಿಂಗ್ ದೇಶವನ್ನು ಜಾಗತೀಕರಣದ ಹಳಿಯ ಮೇಲೆ ಸ್ಥಿರವಾಗಿ ನಿಲ್ಲಿಸಿದ್ದು ಹೌದು. ಈ ಪರಿಕಲ್ಪನೆಯು ದೇಶಕ್ಕೆ ಒಳ್ಳೆಯದು ಮಾಡಿದರು ಕೂಡ,

ವಿಶೇಷವಾಗಿ ಪಕ್ಷದ ಪರಂಪರಾನುಗತ ಮತಬ್ಯಾಂಕುಗಳನ್ನು ಅಲುಗಾಡಿಸಿಬಿಟ್ಟಿತು ಮತ್ತು ಚುನಾವಣಾ ರಾಜಕೀಯದಲ್ಲಿ ಪಕ್ಷಕ್ಕೆ ಹೊಡೆತ ನೀಡಿಬಿಟ್ಟಿತು; ಈ ಕಾರಣದಿಂದಾಗಿಯೇ ಅವರು ತಮ್ಮ ಎರಡನೇ ಅವಧಿಯಲ್ಲಿ, ಮಾರುಕಟ್ಟೆ ಆರ್ಥಿಕತೆಯನ್ನು ಮುಂದೊಯ್ಯುವ ವೇಗವನ್ನು ಕಡಿಮೆ ಮಾಡಿದರು'' ಎಂಬ ಅಭಿಪ್ರಾಯವಿದೆ.

ಕೆಲ ಸಂದರ್ಭಗಳಲ್ಲಿ ಮನಮೋಹನ್ ಸಿಂಗ್ ವಿಪಕ್ಷಗಳಿಗಿಂತ ಹೆಚ್ಚಾಗಿ ಸ್ವಪಕ್ಷದೊಳಗಿಂದಲೇ ಹೆಚ್ಚಿನ ಒತ್ತಡವನ್ನು ಎದುರಿಸುತ್ತಿದ್ದಂತಿತ್ತು ಎನ್ನುವ ಮಾತುಗಳಿವೆ. ಹಾಗೆಯೇ, ಸ್ವತಃ ಅಕಳಂಕಿತ ವ್ಯಕ್ತಿತ್ವದವರಾಗಿದ್ದ ಅವರ ಅವಧಿಯಲ್ಲಿ ಹಲವು ದೊಡ್ಡ ಹಗರಣಗಳು ಹೊರಬಂದುಬಿಟ್ಟವು ಎಂಬುದೂ ಸತ್ಯವೇ. ಆದರೆ, ಸಿಂಗ್‌ರ ಕೊಡುಗೆಯನ್ನು, ಈ ವೈರುಧ್ಯಗಳ ಆಚೆ ನಿಂತು ನೋಡಬೇಕು; ಆಗ ಮಾತ್ರವೇ ದೇಶಕ್ಕೆ ಅವರು ನೀಡಿದ ಅಪೂರ್ವ ಕೊಡುಗೆಗಳು ಕಾಣಿಸಿಯಾವು. ಅವುಗಳ ಪೈಕಿ ಎದ್ದು ಕಾಣುವಂಥದ್ದು, ನಂದನ್ ನಿಲೇಕಣಿ ನೇತೃತ್ವದಲ್ಲಿ ಆರಂಭಿಸಲಾದ 'ವಿಶಿಷ್ಟ ಗುರುತಿನ ಚೀಟಿ' (ಆಧಾರ್) ಯೋಜನೆ. ಅಗಾಧ ಸವಾಲು-ಸಂಕೀರ್ಣತೆಯನ್ನು ಒಳಗೊಂಡಿದ್ದ ಈ ಯೋಜನೆ ಇಂದು ಜನರಿಗೆ ಮತ್ತು ಸರಕಾರಕ್ಕೆ ಹಲವು ನೆಲೆಯಲ್ಲಿ ಸಹಕಾರಿಯಾಗಿದೆ. ಜನರನ್ನು ಗುರುತಿಸುವುದಕ್ಕೆ, ಸರಕಾರದ ಯೋಜನೆಗಳು ಅವರನ್ನು ತಲುಪುವಂತಾಗುವುದಕ್ಕೆ ಇದು ಮಾರ್ಗೋಪಾಯವಾಗಿದೆ. ಬ್ಯಾಂಕಿಂಗ್ ಸವಲತ್ತು ಸೇರಿದಂತೆ ಅನೇಕ ಪ್ರಯೋಜನಗಳು ಬಡವರಿಗೆ ನೇರವಾಗಿ ತಲುಪುವಂತಾಗುವುದಕ್ಕೆ ನಾಂದಿ ಹಾಡಿದ ಯೋಜನೆಯಿದು.

ಹಾಗೆಯೇ, ಅವರು ಜಾರಿಗೆ ತಂದ 'ಮಾಹಿತಿ ಹಕ್ಕು ಕಾಯ್ದೆ'ಯನ್ನು ಮರೆಯಲಾದೀತೇ? ವ್ಯಂಗ್ಯವೆಂದರೆ, ಅವರ ಅಧಿಕಾರಾವಧಿಯ ಹಲವು ಹಗರಣಗಳನ್ನು ಬಯಲು ಮಾಡಿದ್ದು ಈ ಕಾಯ್ದೆಯಲ್ಲಿದ್ದ ಅವಕಾಶಗಳೇ. ಮಾಹಿತಿ ಹಕ್ಕು ಕಾಯ್ದೆಯು ದೇಶದಲ್ಲಿನ ಭ್ರಷ್ಟಾಚಾರವನ್ನು ಮತ್ತು ಕಾನೂನುಬಾಹಿರ ಕೃತ್ಯಗಳನ್ನು ಹೊರಗೆಳೆವಲ್ಲಿ ನೆರವಾಗಿ ಪ್ರಜಾಪ್ರಭುತ್ವಕ್ಕೆ ಒಂದು ನಿಜವಾದ ಅರ್ಥನೀಡಿದೆ ಎಂಬುದರಲ್ಲಿ ಸಂಶಯವಿಲ್ಲ. ರಾಷ್ಟ್ರೀಯ ಗ್ರಾಮೀಣ ಸ್ವಾಸ್ಥ್ಯ ಮಿಷನ್, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂಥ ಮಹತ್ವದ ಉಪಕ್ರಮಗಳನ್ನು ಜಾರಿಗೆ ತಂದಿದ್ದು ಸಿಂಗ್ ಅವರೇ.

ಬಹುಶಃ, ಇವೆಲ್ಲಕ್ಕಿಂತಲೂ ಮಹತ್ವದ್ದು ಮನಮೋಹನ್ ಸಿಂಗ್ ಅವರ ಸರಳ, ಸಜ್ಜನಿಕೆಯ, ನಿರಾಡಂಬರದ ವ್ಯಕ್ತಿತ್ವ. ದಕ್ಷಿಣ ದೆಹಲಿ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಅವರು ಸ್ಪರ್ಧಿಸಿದಾಗ ಖ್ಯಾತ ಪತ್ರಕರ್ತ ಖುಷ್ವಂತ್ ಸಿಂಗ್‌ರಿಂದ ಸಾಲ ಪಡೆದಿದ್ದರಂತೆ, ನಂತರ ಪೈಸೆ ಬಿಡದಂತೆ ಅದನ್ನು ಹಿಂದಿರುಗಿಸಿದರಂತೆ. ಈ ಪ್ರಸಂಗವನ್ನು 'ಆಬ್ಸಲ್ಯೂಟ್ ಖುಷ್ವಂತ್' ಎಂಬ ತಮ್ಮ ಪುಸ್ತಕದಲ್ಲಿ ಖುಷ್ವಂತ್ ಸಿಂಗ್ ಹೇಳಿಕೊಂಡಿದ್ದಾರೆ. ಮನಮೋಹನ್ ಸಿಂಗ್‌ರನ್ನು 'ನ್ಯೂಸ್‌ವೀಕ್' ಪತ್ರಿಕೆಯು 'ನಾಯಕರು ಪ್ರೀತಿಸುವ ನಾಯಕ' ಎಂದು ವರ್ಣಿಸಿದರೆ, 'ಟೈಮ್' ಪತ್ರಿಕೆಯು 'ಜಗತ್ತಿನ ಸೂಪರ್ ಪವರ್ ದೇಶಗಳ ಪಟ್ಟಿಯಲ್ಲಿ ಭಾರತವನ್ನು ಸೇರಿಸಿದ ನಾಯಕ' ಎಂದು ಹಾಡಿಹೊಗಳಿದೆ. 'ಮನಮೋಹನ್ ಸಿಂಗ್‌ರನ್ನು ಇಡೀ ಜಗತ್ತು ಗೌರವದಿಂದ ಸ್ಮರಿಸಿಕೊಳ್ಳುತ್ತದೆ' ಎಂದು ಅಮೆರಿಕದ ಹಿಂದಿನ ಅಧ್ಯಕ್ಷ ಬರಾಕ್ ಒಬಾಮ ಹೇಳಿದ್ದೂ ಇಲ್ಲಿ ಉಲ್ಲೇಖನೀಯ.

ಪ್ರಧಾನಿ ಹುದ್ದೆಯನ್ನು ನಿಜಕ್ಕೂ ಒಂದು 'ಸೇವಾಮಾಧ್ಯಮ'ವಾಗಿ ನೋಡಿದವರು ಮನಮೋಹನ್ ಸಿಂಗ್. ಅವರಿಗೆ ವೈಯಕ್ತಿಕವಾದ ಯಾವುದೇ ಆಸೆ-ಆಕಾಂಕ್ಷೆಗಳಿರಲಿಲ್ಲ. ವೈಯಕ್ತಿಕ ಅವಮಾನ, ಟೀಕೆ-ಟಿಪ್ಪಣಿಗಳನ್ನು ಕೂಡ ನುಂಗಿಕೊಂಡು ದೇಶಕ್ಕಾಗಿ ಮನಃಪೂರ್ವಕವಾಗಿ ದುಡಿದವರು ಅವರು. ಬಹುಶಃ ಈ ಕಾರಣಕ್ಕಾಗಿಯೇ ಅವರಿಗೆ ಪಕ್ಷಾತೀತವಾಗಿ ಪ್ರೀತಿ-ಗೌರವ ಲಭಿಸಿದ್ದು. ದೇಶದ ಚರಿತ್ರೆಯು ಅವರನ್ನು ಆದರದಿಂದ ಕಾಣಲಿದೆ ಎಂಬುದಂತೂ ಸತ್ಯ.

(ಲೇಖಕರು ನಿವೃತ್ತ ಪ್ರಾಂಶುಪಾಲರು ಮತ್ತು ಸಂವಹನ ಸಲಹೆಗಾರರು)

ಪ್ರತಿಸ್ಪಂದನ

ಪ್ರೇಮದಾಸ ಅಡ್ಯಂತಾಯ

ಖಂಡಿತ ಬೇಸರವಾಗುತ್ತದೆ..

ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು ಬರೆದ, 'ಕನ್ನಡಿಗರಾಗಿಯೂ ಕನ್ನಡ ಬರೊಲ್ಲ ಎಂದಾಗ ಬೇಸರವಾಗದೇ?' ಎಂಬ ಅಂಕಣ ಬರಹ (ವಿಶ್ವವಾಣಿ ಡಿ.29) ಓದಿ ಖುಷಿಯಾಯಿತು. ವಿಚಾರದ ಜತೆಜತೆಗೆ ಅವರ ಬರವಣಿಗೆಯ ಶೈಲಿಯೂ ತುಂಬಾ ಇಷ್ಟವಾಯಿತು. ಈ ಲೇಖನದಲ್ಲಿ ಅವರು ಕನ್ನಡಿಗರಾದ ಐಶ್ವರ್ಯ ರೈ, ಸುನಿಲ್ ಶೆಟ್ಟಿ ಮತ್ತು ದೀಪಿಕಾ ಪಡುಕೋಣೆಯವರ ಕುರಿತು ಉಲ್ಲೇಖಿಸಿದ್ದಾರೆ. ಈ ಮೂವರೂ 'ಕನ್ನಡ ಬರೊಲ್ಲ' ಎಂದಾಗ ಕನ್ನಡಿಗರಿಗೆ ಬೇಸರವಾಗುವುದು ಸಹಜ. ಆದರೆ ವಾಸ್ತವವೆಂದರೆ, ಈ ಮೂವರಲ್ಲಿ ಐಶ್ವರ್ಯ ರೈ, ಸುನಿಲ್ ಶೆಟ್ಟಿಯವರ ಮನೆಮಾತು ತುಳು ಮತ್ತು ದೀಪಿಕಾ ಪಡುಕೋಣೆಯವರ ಮನೆಮಾತು ಕೊಂಕಣಿ. ಆದರೆ ನಾವು ಕರ್ನಾಟಕದವರಾದುದರಿಂದ, ಕನ್ನಡ ನಮ್ಮ ಮಾತೃಭಾಷೆ ಆದುದರಿಂದ ತುಳು, ಕೊಡವ, ಕೊಂಕಣಿ, ಅರೆಭಾಷೆ, ಬ್ಯಾರಿ, ಹವ್ಯಕ, ಕರಾಡ್, ಕುಂದಗನ್ನಡವನ್ನು ಮಾತನಾಡು ವವರೆಲ್ಲರೂ ಎರಡೂ ಭಾಷೆಗಳನ್ನೂ ಏಕಪ್ರಕಾರವಾಗಿ ಮಾತೃಭಾಷೆಯಾಗಿಯೇ ಪರಿಗಣಿಸುತ್ತಾರೆ ಮತ್ತು ಪರಿಗಣಿಸಲೇಬೇಕು ಎಂಬುದನ್ನು ದೃಢವಾಗಿ ನಂಬಿದ್ದೇನೆ. ಇಷ್ಟಾಗಿಯೂ ಕೆಲವರು ತಾವು ಕರ್ನಾಟಕದವರಾದರೂ 'ಕನ್ನಡ ಬರೊಲ್ಲ' ಅನ್ನುವುದಕ್ಕೆ ಬಲವಾದ ಕಾರಣವಿದೆ. ಅದೆಂದರೆ, ಅವರು ಹುಟ್ಟಿ ಬೆಳೆದಿರುವುದು ಬೇರೆ ರಾಜ್ಯದಲ್ಲಾದರೆ ಆ ರಾಜ್ಯದ ಭಾಷೆಯನ್ನು ಕಲಿಯಬೇಕಾಗುತ್ತದೆ ಮತ್ತು ಮನೆಯಲ್ಲಿ ತಮ್ಮ ಮನೆಮಾತನ್ನು ಆಡುತ್ತಾರೆ. ಆದುದರಿಂದ ಅವರಿಗೆ ಕನ್ನಡ ಕಲಿಯುವ ಅವಕಾಶವೇ ಇರುವುದಿಲ್ಲ. ಐಶ್ವರ್ಯ ರೈ ಮತ್ತು ಸುನಿಲ್ ಶೆಟ್ಟಿಯವರು ಬೆಳೆದಿದ್ದೆಲ್ಲಾ ಮುಂಬೈಯಲ್ಲಿ, ಹೀಗಾಗಿ ಅವರಿಗೆ ವಿನಾಯಿತಿ ನೀಡಬಹುದು. ಆದರೆ ದೀಪಿಕಾ ಪಡುಕೋಣೆ ತಮಗೆ ಕನ್ನಡ ಬರೊಲ್ಲ ಎಂದರೆ, ಕನ್ನಡಿಗರಿಗೆ ಖಂಡಿತ ಅಸಮಾಧಾನವಾಗುವುದು ಸಹಜ. ಇಲ್ಲೊಂದು ವೈಯಕ್ತಿಕ ವಿಚಾರವನ್ನು ಉಲ್ಲೇಖಿಸಲು ಬಯಸುವೆ- ನಾನು ಕೊಲ್ಕತ್ತದಲ್ಲಿ ಕೇವಲ ಮೂರು ವರ್ಷ ಇದ್ದೆ, ಅಲ್ಲಿ ಬಂಗಾಳಿ ಭಾಷೆ ಕಲಿತೆ. ಆದರೆ ಆರು ದಶಕಗಳಿಂದ ಬೆಂಗಳೂರಿನಲ್ಲಿದ್ದೇನೆ (ಮಧ್ಯದಲ್ಲಿ ಮೂರ್‍ನಾಲ್ಕು ವರ್ಷ ಇತರ ರಾಜ್ಯದಲ್ಲಿದ್ದೆ). ಇಲ್ಲಿ ನಾನು ತಮಿಳು, ತೆಲುಗು, ಹಿಂದಿ ಕಲಿತಿದ್ದರೂ ಇಲ್ಲಿನ ಕನ್ನಡವನ್ನು ಖಂಡಿತವಾಗಿಯೂ ಕಲಿಯಲಿಲ್ಲ. ಏಕೆಂದರೆ, ಬೆಂಗಳೂರಿನ ಕನ್ನಡದ ವೈಖರಿ ಹೀಗಿದೆ- ''ನಮ್ಮಪ್ಪಂದು ಆನ್ಸಿಸ್ಟರ್ ಪ್ರಾಪರ್ಟಿ ಇದೆ. ಅದನ್ನು ಲುಕ್ ಆಫ್ಟರ್ ಮಾಡ್ಲಿಕ್ಕೆ ಯಾರೂ ಇಲ್ಲ. ಸೋ, ನಾನು ನೇಟಿವ್ ಪ್ಲೇಸ್‌ಗೆ ಹೋಗಿ ಅದನ್ನು ಡಿವೈಡ್ ಮಾಡಿ, ಅವರವರ ಶೇರ್ ಕೊಟ್ಟುಬಿಟ್ರೆ, ನನ್ನ ರೆಸ್ಪಾನ್ಸಿಬಿಲಿಟಿ ಮುಗೀತದೆ. ಅದಕ್ಕೇಂತ ಸಿಕ್ ಡೇಸ್ ಲೀವ್ ಹಾಕಿ ಹೋಗ್ತಿದ್ದೀನಿ....''.

(ಲೇಖಕರು ಕೆನರಾ ಬ್ಯಾಂಕ್‌ನ ನಿವೃತ್ತ ಪ್ರಬಂಧಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:06

ಸಮಾಚಾರ ಸಣ್ಣದಲ್ಲ

ಲೋಕಕ್ಕೆ ಮತ ಹಾಕದ ವಿದೇಶವಾಸಿ ಕನ್ನಡಿಗರು!

ದೆಹಲಿ: ವಿವಿಧ ದೇಶಗಳಲ್ಲಿ ಸದ್ಯ ನೆಲೆಸಿರುವ 1.20 ಲಕ್ಷ ಮಂದಿ ಭಾರತೀಯರು ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿದ್ದು, 2024ರ ಲೋಕಸಭಾ ಚುನಾವಣೆಯಲ್ಲಿ ಕೇವಲ 2958 ಮಂದಿಯಷ್ಟೇ ಭಾರತಕ್ಕೆ ಬಂದು ಮತ ಚಲಾವಣೆ ಮಾಡಿದ್ದಾರೆ. ಇವರಲ್ಲಿ ಕರ್ನಾಟಕದ ಒಬ್ಬರೂ ಇಲ್ಲ. 2019ರಲ್ಲಿ 99,844 ರಷ್ಟಿದ್ದ ಸಾಗರೋತ್ತರ ಮತದಾರರ ಸಂಖ್ಯೆ 2024ರಲ್ಲಿ 1,19,374ಕ್ಕೇರಿದೆ. ಮತದಾರರ ಪಟ್ಟಿಗೆ ಸೇರ್ಪಡೆಗೊಂಡವರಲ್ಲಿ ಕೇರಳದವರೇ ಅಧಿಕ(89,839) ಎಂದು ಚುನಾವಣಾ ಆಯೋಗ ಅಂಕಿ ಅಂಶ ಪ್ರಕಟಿಸಿದೆ.

ಬೈಕ್‌ಗಾಗಿ 9 ದಿನದ ಶಿಶು ಮಾರಿದ ಅಪ್ಪ!

ಬಾಲಸೋರ್: ಒಡಿಶಾದ ಬಾಲಸೋರ್ ಜಿಲ್ಲೆಯ ತಂದೆಯೊಬ್ಬ ಮೋಟಾರ್ ಬೈಕ್ ಖರೀದಿಸಲು ತನ್ನ 9 ದಿನದ ಶಿಶುವನ್ನೇ 60 ಸಾವಿರ ರು.ಗೆ ಮಾರಿದ್ದಾನೆ. ಹದಮೌಡಾ ಗ್ರಾಮದ ಧರ್ಮು ಬೆಹೆರಾ ಪತ್ನಿ ಶಾಂತಿಲತಾಗೆ ಡಿ.19ರಂದು ಜನಿಸಿದ ಗಂಡು ಮಗುವನ್ನು ಡಿ.28ರಂದು ಮಧ್ಯವರ್ತಿ ಮೂಲಕ ನೆರೆಯ ಮಯೂರ್‌ಭಂಜ್ ಜಿಲ್ಲೆಯ ಮಕ್ಕಳಿಲ್ಲದ ದಂಪತಿಗೆ 60,000 ರು.ಗೆ ಮಾರಾಟ ಮಾಡಿ, ಮೋಟಾರ್ ಬೈಕ್ ಖರೀದಿಸಿ ವರ್ಷಗಳ ಆಸೆ ಈಡೇರಿಸಿಕೊಂಡಿದ್ದಾನೆ. ಅನುಮಾನಗೊಂಡ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಧರ್ಮುವನ್ನು ಬಂಧಿಸಿದ್ದಾರೆ.

ಸಿಂಗ್‌ಗೆ ಭಾರತ ರತ್ನ: ತೆಲಂಗಾಣ ನಿರ್ಣಯ

ಹೈದರಾಬಾದ್: ದಶಕಗಳ ಕಾಲ ದೇಶವಾಳಿದ ಮಾಜಿ ಪ್ರಧಾನಿ, ಶ್ರೇಷ್ಠ ಆರ್ಥಿಕ ತಜ್ಞರಾಗಿದ್ದ ಡಾ. ಮನಮೋಹನ್ ಸಿಂಗ್ ಅವರಿಗೆ ಮರಣೋತ್ತರ

'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಬೇಕು ಎಂದು ಕೇಂದ್ರ ಸರಕಾರವನ್ನು ತೆಲಂಗಾಣ ವಿಧಾನಸಭೆ ಆಗ್ರಹಿಸಿದೆ. ಈ ಸಂಬಂಧ ಸೋಮವಾರ ವಿಧಾನ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದೆ. ಸೋಮವಾರದ ಕಲಾಪ ಆರಂಭದಲ್ಲೇ ಡಾ.ಸಿಂಗ್ ಅವರಿಗೆ ಸಂತಾಪ ಸೂಚನೆ ನಡೆಯಿತು. ತೆಲಂಗಾಣ ರಾಜ್ಯದ ರಚನೆಯಲ್ಲಿ ಡಾ.ಸಿಂಗ್ ಅವರ ಪಾತ್ರ ಮಹತ್ವದ್ದು ಎಂದು ಸಿಎಂ ರೇವಂತ್ ರೆಡ್ಡಿ ಸ್ಮರಿಸಿದರು. ಸಿಂಗ್ ಅವರಿಗೆ ಕೃತಜ್ಞತೆ ಸಲ್ಲಿಸುವ ನಿಲುವಳಿಯನ್ನೂ ಮಂಡಿಸಿದರು. ಸದನ 2 ನಿಮಿಷಗಳ ಮೌನ ಆಚರಿಸಿತು.

ಪ್ರಧಾನಿ ನೆತನ್ಯಾಹುಗೆ ಪ್ರಾಸ್ಟೇಟ್ ಶಸ್ತ್ರಚಿಕಿತ್ಸೆ

ಟೆಲ್‌ಅವಿವ್: ಮೂತ್ರನಾಳದ ಸೋಂಕಿನಿಂದ ಬಳಲುತ್ತಿದ್ದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು

ಅವರಿಗೆ ಭಾನುವಾರ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಜನನೇಂದ್ರಿಯದ ಗ್ರಂಥಿ (ಪ್ರಾಸ್ಟೇಟ್) ಹಿಗ್ಗಿದ್ದ ಕಾರಣ ಅದನ್ನು ತೆಗೆದು ಹಾಕಲಾಗಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ. 70-80 ವರ್ಷದ ಪುರುಷರಿಗೆ ಪ್ರಾಸ್ಟೇಟ್ ಹಿಗ್ಗುವ ಸಮಸ್ಯೆ ಸಾಮಾನ್ಯ ಎಂದು ಚಿಕಿತ್ಸೆ ನೀಡಿದ ವೈದ್ಯರು ಹೇಳಿದ್ದಾರೆ.

ಹಿಮಾಚಲ: 2000 ವಾಹನ ಹಿಮಾವೃತ

ಮನಾಲಿ: ಹಿಮಾಚಲ ಪ್ರದೇಶದ ಮನಾಲಿ ಮತ್ತು ಸೋಲಾಂಗ್ ಕಣಿವೆ ಪ್ರದೇಶಗಳಲ್ಲಿ ತೀವ್ರ ಹಿಮಪಾತವಾಗುತ್ತಿದ್ದು, 2,000ಕ್ಕೂ ಹೆಚ್ಚು ವಾಹನಗಳು

ರಸ್ತೆಯಲ್ಲಿ ಸಿಲುಕಿಕೊಂಡು ಹಿಮದಲ್ಲಿ ಮುಚ್ಚಿಹೋಗಿವೆ. ಈವರೆಗೆ ರಕ್ಷಣಾ ಕಾರ್ಯಾಚರಣೆ ತಂಡ 1,800 ವಾಹನಗಳನ್ನು ಹಿಮದಿಂದ ಹೊರತೆಗೆದಿದೆ, ಇನ್ನೂ 200 ವಾಹನ ಹಿಮಾವೃತವಾಗಿವೆ. ಹಿಮಪಾತದಿಂದಾಗಿ ರಸ್ತೆಯಲ್ಲಿ ಸಿಲುಕಿದ್ದ ವಾಹನಗಳಲ್ಲಿದ್ದ ಸಾವಿರಾರು ಪ್ರಯಾಣಿಕರನ್ನು ರಕ್ಷಿಸಲಾಗಿದೆ ಎಂದು ಹೇಳಿರುವ ರಾಜ್ಯದ ಪೊಲೀಸರು ಸದ್ಯ ಪ್ರವಾಸಿಗರು ಮನಾಲಿಗೆ ಭೇಟಿ ನೀಡದಂತೆ ಮನವಿ ಮಾಡಿದ್ದಾರೆ. ಆದರೆ, ಹೊಸ ವರ್ಷ ಸ್ವಾಗತಿಸುವ ಸಂಭ್ರಮಾಚರಣೆಗೆ ಮನಾಲಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೇ ಇದೆ.

{ನಿರ್ಮಲಾ ಸೀತಾರಾಮನ್} ಕೇಂದ್ರ ವಿತ್ತ ಸಚಿವೆ

ವೇತನವನ್ನೇ ಆಧರಿಸಿ ಬದುಕು ಸಾಗಿಸುತ್ತಿದ್ದ ಮಧ್ಯಮ ವರ್ಗದಿಂದಲೇ ಬಂದವಳು ನಾನು. ದೇಶದ ಜನರಿಗೆ ಹೆಚ್ಚಿನ ಅನುಕೂಲ ಮಾಡುವುದನ್ನೇ ಬಯಸುತ್ತೇನೆ. ಆದರೆ ಆದಕ್ಕೂ ಕೆಲ ಮಿತಿಗಳಿರುತ್ತವೆ. ತೆರಿಗೆ ವ್ಯವಸ್ಥೆ ಸರಳಗೊಳಿಸಲು ಕಡಿಮೆ ದರ-ವಿನಾಯಿತಿಗಳ ಸಮೇತವೇ ವಿನ್ಯಾಸಗೊಳಿಸಿದ ಹೊಸ ತೆರಿಗೆ ಪದ್ಧತಿ 'ಜಿಎಸ್‌ಟಿ' ಅತ್ಯುತ್ತಮವಾದುದೇ ಆಗಿದೆ.



ದೇಶದ ನ್ಯಾಯಾಂಗ ನೇಮಕ ಪ್ರಕ್ರಿಯೆಯಲ್ಲಿ ಪ್ರಥಮ ಪ್ರಯೋಗ

ಸಂಭಾವ್ಯ ಹೈ ನ್ಯಾಯಮೂರ್ತಿಗಳ ಜತೆ ಕೊಲಿಜಿಯಂ ನೇರ ಸಂವಾದ

ದೆಹಲಿ: ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ 'ಕೊಲಿಜಿಯಂ' ಇದೇ ಮೊದಲ ಬಾರಿಗೆ ಹೈಕೋರ್ಟ್‌ಗಳ ಸಂಭಾವ್ಯ ನ್ಯಾಯಮೂರ್ತಿಗಳ ಜತೆ ಸಂವಾದ ಆರಂಭಿಸಿದೆ.

- ರಾಜಸ್ಥಾನ, ಬಾಂಬೆ, ಅಲಹಾಬಾದ್ ಹೈಕೋರ್ಟ್ ನೇಮಕ ಪ್ರಕ್ರಿಯೆ
- ಹಿರಿಯ ವಕೀಲರು, ನ್ಯಾಯಾಂಗ ಇಲಾಖೆ ನೌಕರರಿಗೂ ಅವಕಾಶ

ವಿಶ್ವಹಿಂದೂ ಪರಿಷತ್ ಕಾರ್ಯಕ್ರಮದಲ್ಲಿ ಕೆಲ ದಿನಗಳ ಹಿಂದೆ ಭಾಗಿಯಾಗಿದ್ದ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ವಿವಾದಾತ್ಮಕ ಹೇಳಿಕೆ ನೀಡಿದ ಘಟನೆ ಹಿನ್ನೆಲೆಯಲ್ಲಿ ಮಹತ್ವದ ಈ ಕ್ರಮವನ್ನು ಕೊಲಿಜಿಯಂ ಇದೇ ಮೊದಲ ಬಾರಿಗೆ ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿದೆ ಎಂದು ತಿಳಿದುಬಂದಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ(ಸಿಜೆಐ) ಅವರನ್ನು ಒಳಗೊಂಡಂತೆ ಮೂವರು ಸದಸ್ಯರ ಕೊಲಜಿಯಂ ಈ ಹೊಸ ಕ್ರಮಕ್ಕೆ ಮುಂದಾಗಿದೆ. ಸಂಭಾವ್ಯ ಹೈಕೋರ್ಟ್ ನ್ಯಾಯಮೂರ್ತಿಗಳ ಜತೆಗಿನ ಸಂವಾದ ಪ್ರಕ್ರಿಯೆಯಲ್ಲ ಸಿಜೆಐ ಜತೆಗೆ ಸುಪ್ರೀಂ ಕೋರ್ಟ್‌ನ ನ್ಯಾ.ಭೂಷಣ್ ಆರ್. ಗವಾಯಿ ಮತ್ತು ನ್ಯಾ.ಸೂರ್ಯಕಾಂತ್ ಅವರೂ ಇದ್ದರು. ರಾಜಸ್ಥಾನ, ಅಲಹಾಬಾದ್ ಮತ್ತು ಬಾಂಬೆ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲು ನ್ಯಾಯಾಂಗ ಇಲಾಖೆ ಅಧಿಕಾರಿಗಳು ಮತ್ತು ವಕೀಲರ ಹೆಸರುಗಳನ್ನೂ ಶಿಫಾರಸು ಮಾಡಲಾಗಿದೆ. ಮೂವರು ನ್ಯಾಯಮೂರ್ತಿಗಳನ್ನೊಳಗೊಂಡ ಕೊಲಿಜಿಯಂ ಇದೇ ಮೊದಲ ಬಾರಿಗೆ ವಕೀಲರು ಮತ್ತು ನ್ಯಾಯಾಂಗ ಇಲಾಖೆ ಅಧಿಕಾರಿಗಳ ಜತೆ ಸಂವಾದ ನಡೆಸಲಾರಂಭಿಸಿದೆ.

ನೇರ ಸಂವಾದ ಹೊಸ ಬೆಳವಣಿಗೆ

ಸಂಭಾವ್ಯ ನ್ಯಾಯಮೂರ್ತಿಗಳಾಗಿ ಹೆಸರು ಶಿಫಾರಸುಗೊಂಡವರ ಬಗ್ಗೆ ಸಮಗ್ರವಾಗಿ ತಿಳಿದುಕೊಳ್ಳಲು ಮತ್ತು ಅವರ ಅರ್ಹತೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಕೊಲಿಜಿಯಂ ಸದಸ್ಯರು ವೈಯಕ್ತಿಕವಾಗಿ ಭೇಟಿ ಮಾಡಿದ್ದಾರೆ. ಈವರೆಗಿನ ಸಾಂಪ್ರದಾಯಿಕ ಪ್ರಕ್ರಿಯೆಗಿಂಥ ಸ್ವಲ್ಪ ಭಿನ್ನವಾಗಿರಲೆಂಬ ಕಾರಣಕ್ಕೇ ಸುಪ್ರೀಂಕೋರ್ಟ್ ಕೊಲಿಜಿಯಂ ಈ ಸಂವಾದ ಪ್ರಕ್ರಿಯೆ ಆರಂಭಿಸಿದೆ. ಇದು ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ದೇಶದ ಇತಿಹಾಸದಲ್ಲೇ ಹೊಸ ಬೆಳವಣಿಗೆ ಎನ್ನಲಾಗಿದೆ. ಅಭ್ಯರ್ಥಿಗಳನ್ನು ನ್ಯಾಯಮೂರ್ತಿಗಳಾಗಿ ನೇಮಿಸುವ ಮುನ್ನ ಅವರ ವ್ಯಕ್ತಿತ್ವದ ಬಗ್ಗೆ ಆಳವಾಗಿ ಅಧ್ಯಯನ ಮಾಡುವುದೂ ಈ ಸಂವಾದದ ಉದ್ದೇಶವಾಗಿದೆ. ಅವರು ಈ ಪ್ರತಿಷ್ಠಿತ ಹುದ್ದೆಗೆ ಎಷ್ಟು ಅರ್ಹರು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವ ಸಲುವಾಗಿಯೇ ಸಂವಾದ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಮೂಲಗಳು ತಿಳಿಸಿವೆ.

'ಪರಿವಾರ ವಾದ' ಆರೋಪ ತಪ್ಪಿಸಲು ಹೊಸ ಪ್ರಯೋಗ?

ದೇಶದ ನ್ಯಾಯಾಂಗ ಇತಿಹಾಸದಲ್ಲಿ ಈವರೆಗೂ ಹೈಕೋರ್ಟ್‌ಗಳಿಗೆ ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆ ಕೊಲಿಜಿಯಂ ಶಿಫಾರಸಿನ ಮೇರೆಗೇ ನಡೆಯುತ್ತಿದೆ. ಆದರೆ, ವ್ಯವಸ್ಥೆಯಲ್ಲಿ ನೆಪೊಟಿಸಂ(ಪರಿವಾರ ವಾದ) ಇರಬಹುದೆಂದು ಕೆಲವರು ಶಂಕೆ ವ್ಯಕ್ತಪಡಿಸಿದ್ದೂ ಇದೆ.

ಈಗಾಗಲೇ ನ್ಯಾಯಮೂರ್ತಿಗಳಾಗಿದ್ದವರ ಮಕ್ಕಳು, ಕುಟುಂಬದವರಿಗೇ ಹೆಚ್ಚಿನ ಅವಕಾಶವಾಗುತ್ತಿದೆ. ಹಾಗಾಗಿ ಬೇರೆಯವರಿಗೆ ಅರ್ಹತೆ ಇದ್ದರೂ ನ್ಯಾಯಮೂರ್ತಿಯಾಗುವ ಅವಕಾಶ ಕಡಿಮೆ ಎಂಬ ಮಾತುಗಳು ಕೇಳಿಬರುತ್ತಿವೆ. ಹಾಗಾಗಿ 'ಪರಿವಾರ' ದವರು ಎಲ್ಲಾ ರೀತಿಯಲ್ಲೂ ನ್ಯಾಯಮೂರ್ತಿಯಾಗಲು ಅರ್ಹರೇ ಆಗಿದ್ದರೂ ಈ ಅಪಸ್ವರ ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಕೊಲಿಜಿಯಂ ಈ ಬಾರಿ ನೇರ ಸಂವಾದದ ಮಾರ್ಗ ಅನುಸರಿಸಲಾರಂಭಿಸಿದೆ ಎನ್ನಲಾಗಿದೆ. ಈ ನೇರ ಸಂವಾದದ ಪ್ರಯೋಗ ರಾಜಸ್ಥಾನ, ಅಲಹಾಬಾದ್ ಮತ್ತು ಬಾಂಬೆ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ನ್ಯಾಯಮೂರ್ತಿಗಳ 'ಪರಿವಾರ'ಕ್ಕೆ ಸೇರದ ಹಾಗೂ ಅರ್ಹರಾದ ನ್ಯಾಯಾಂಗ ಇಲಾಖೆ ಅಧಿಕಾರಿಗಳು ಮತ್ತು ವಕೀಲರ ಹೆಸರುಗಳನ್ನೇ ಈ ಬಾರಿ ಶಿಫಾರಸು ಮಾಡಲು ಉದ್ದೇಶಿಸಲಾಗಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ರೈಲು ಸಂಚಾರ-ಸರಕಾರಿ ಬಸ್ ಸೇವೆಯೂ ಸ್ಥಗಿತ

ಪಂಜಾಬ್ ಬಂದ್: ರಸ್ತೆ ತಡೆ

ಚಂಡೀಗಢ: ಕೃಷಿ ಉತ್ಪನ್ನಗಳಿಗೆಲ್ಲಾ ಕನಿಷ್ಠ ಬೆಂಬಲ ಬೆಲೆ ಘೋಷಿಸಿ ಅದಕ್ಕೆ ಕಾಯದೆ ಮೂಲಕ ಖಾತ್ರಿ ನೀಡುವಂತೆ ಆಗ್ರಹಿಸಿ ಕೇಂದ್ರ ಸರಕಾರದ ವಿರುದ್ಧ ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳ ರೈತರು, ಇದೀಗ 'ಬಂದ್' ಆಚರಿಸುತ್ತಿದ್ದು, ಎರಡೂ ರಾಜ್ಯಗಳ ಹಲವೆಡೆ ರಸ್ತೆ ಮತ್ತು ರೈಲು ಸಂಚಾರ ಸ್ಥಗಿತಗೊಂಡಿದೆ. ವಾಣಿಜ್ಯ ಸಂಸ್ಥೆಗಳ ಬಾಗಿಲು ಬಂದ್ ಆಗಿವೆ.

ರೈತರ ಬೇಡಿಕೆಗಳನ್ನು ಕೇಂದ್ರ ಸರಕಾರ ಒಪ್ಪಿ ಈಡೇರಿಸದೇ ಇರುವುದನ್ನು ಖಂಡಿಸಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಕಳೆದ ವಾರವೇ ಬಂದ್‌ಗೆ ಕರೆ ನೀಡಿದ್ದವು. 'ಬಂದ್' ಕರೆ ಹಿನ್ನೆಲೆ ವಿವಿಧೆಡೆಯ ರೈತರು ರಸ್ತೆಗಳಲ್ಲಿ ಧರಣಿ ನಡೆಸಿ, ಜನ-ವಾಹನ ಸಂಚಾರಕ್ಕೆ ಅಡ್ಡಿಪಡಿಸಿದರು. ಧರೇರಿ ಜತ್ತನ್ ಟೋಲ್ ಪ್ಲಾಜಾದಲ್ಲಿ ರೈತರು ಧರಣಿ ನಡೆಸಿದ್ದರಿಂದ ಪಟಿಯಾಲ-ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ತೊಡಕಾಯಿತು. ಅಮೃತಸರದ ಗೋಲ್ಡನ್ ಗೇಟ್‌ನಲ್ಲಿ ಹಾಗೂ ಭಟಿಂಡಾದ ರಾಂಪುರ ಫುಲ್‌ನಲ್ಲಿಯೂ ಧರಣಿ ನಡೆಸಲಾಗಿದೆ. ಮೊಹಾಲಿ ಜಿಲ್ಲೆಯಲ್ಲಿ ಮಾರುಕಟ್ಟೆ ಪ್ರದೇಶ ನಿರ್ಜನವಾಗಿದ್ದರೆ, ರಸ್ತೆಗಳಲ್ಲಿ ವಾಹನ ಸಂಚಾರ ಇರಲಿಲ್ಲ. ಸರಕಾರಿ ಸಾರಿಗೆ ಸಂಸ್ಥೆ ಕೂಡಾ ಬಸ್‌ಗಳನ್ನು ರಸ್ತೆಗೆ ಇಳಿಸಲಿಲ್ಲ. ರಾಜ್ಯದ ಮೂಲಕ ಹಾದುಹೋಗುವ ಹಲವಾರು ರೈಲುಗಳನ್ನು ರದ್ದುಗೊಳಿಸಲಾಗಿತ್ತು.

ಆತಿಷಿ ಹಂಗಾಮಿ: ಕೇಜ್ರಿ ಮಾತಿಗೆ ಆಕ್ಷೇಪ

ದೆಹಲಿ: ದೆಹಲಿ ಮುಖ್ಯಮಂತ್ರಿ ಆತಿಷಿ ಅವರನ್ನು 'ತಾತ್ಕಾಲಿಕ ಸಿಎಂ' ಎಂದು ಆಮ್ ಆದ್ಮಿ ಪಕ್ಷದ(ಎಎಪಿ) ರಾಷ್ಟ್ರೀಯ ಸಂಚಾಲಕ, ಮಾಜಿ ಸಿಎಂ ಅರವಿಂದ್ ಕೇಜ್ರಿವಾಲ್ ಕರೆದಿರುವುದಕ್ಕೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದೇ ವಿಚಾರವಾಗಿ ದೆಹಲಿ ಸಿಎಂ ಆತಿಷಿ ಅವರಿಗೆ ಪತ್ರ ಬರೆದಿರುವ ಲೆ.ಗವರ್ನರ್, ಇದರಿಂದ ತಮಗೆ ಬಹಳ ನೋವಾಗಿದೆ ಎಂದಿದ್ದಾರೆ. 'ನಾನು ಕೇಜ್ರಿವಾಲ್ ಅವರ ಮಾತನ್ನು ಬಹಳ ಆಕ್ಷೇಪಾರ್ಹ ಎಂದು ಹೇಳುತ್ತೇನೆ. ಇದು ನಿಮಗೆ ಮಾತ್ರವಲ್ಲ, ರಾಷ್ಟ್ರಪತಿ ಮತ್ತು ಅವರ ಪ್ರತಿನಿಧಿಯಾದ ನನಗೆ ಮಾಡಿದ ಅವಮಾನ. ಇಂಥ ಕೀಳುಮಟ್ಟದ ಸಾರ್ವಜನಿಕ ಸಂವಾದ ಬಗ್ಗೆ ಕಳವಳಗೊಂಡಿದ್ದೇನೆ. ನನ್ನ ಸರಕಾರದ ಪೂರ್ಣಾವಧಿ ಮುಖ್ಯಮಂತ್ರಿಯನ್ನು ತಾತ್ಕಾಲಿಕ ಸಿಎಂ ಎಂದು ಹೇಳಿರುವುದರಿಂದ ಬಹಳ ನೋವಾಗಿದೆ' ಎಂದು ಸಕ್ಸೇನಾ ಪತ್ರದಲ್ಲಿ ಬರೆದಿದ್ದಾರೆ.

ಹೊಸ ವರ್ಷಾಚರಣೆ ಸಲ್ಲ; ಫತ್ವಾ

ಲಖನೌ: ಕ್ರೈಸ್ತ ಕ್ಯಾಲೆಂಡರ್ ಆಧರಿಸಿದ ಹೊಸ ವರ್ಷ ಸ್ವಾಗತದ ಸಂಭ್ರಮ ಆಚರಣೆಯನ್ನು ಮುಸ್ಲಿಮರು ನಡೆಸಬಾರದು ಎಂದು ಅಖಿಲ ಭಾರತ ಮುಸ್ಲಿಂ ಜಮಾತ್, ದೇಶದ ಮುಸ್ಲಿಮರಿಗೆ ಫತ್ವಾ ಹೊರಡಿಸಿದೆ.

ಕ್ರಿಶ್ಚಿಯನ್ನರು ಆಚರಿಸುವ ಹೊಸ ವರ್ಷದ ಸಂಭ್ರಮವನ್ನು ಮುಸ್ಲಿಮರು ಆಚರಿಸಬಾರದು. ಧಾರ್ಮಿಕವಲ್ಲದ ಯಾವುದೇ ರೂಢಿಗಳ ಆಚರಣೆಯನ್ನು ಮುಸ್ಲಿಮರಿಗೆ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಹೊಸ ವರ್ಷದ ಸ್ವಾಗತಿಸುವ ಸಂಭ್ರಮ ಆಚರಿಸದಂತೆ ಮುಸ್ಲಿಂ ಯುವಕ-ಯುವತಿಯರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಇಂಥ ಆಚರಣೆಯನ್ನು ಮುಸ್ಲಿಂ ಮುಖಂಡರು ತಡೆಯಬೇಕು ಎಂದು ಅಖಿಲ ಭಾರತ ಮುಸ್ಲಿಂ ಜಮಾತ್‌ನ ಅಧ್ಯಕ್ಷ ಮೌಲಾನಾ ಶಹಾಬುದ್ದೀನ್ ರಜ್ವಿ ಬರೇಲ್ವಿ ಹೇಳಿದ್ದಾರೆ. ಹೊಸ ವರ್ಷಾಚರಣೆ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ್ದಾಗಿದೆ ಎಂದಿರುವ ಅವರು, ಆಚರಣೆ ನಡೆಸದಂತೆ ಇಸ್ಲಾಂ ಧರ್ಮೀಯರಿಗೆ ಫತ್ವಾವನ್ನೂ ಅವರು ಭಾನುವಾರ ಹೊರಡಿಸಿದ್ದಾರೆ.

ಖಾಸಗಿ ಪ್ರವಾಸ ಕೈಗೊಂಡರೆ ನಿಮಗೇನು ತೊಂದರೆ?: ಕಾಂಗ್ರೆಸ್ ತಿರುಗೇಟು

ರಾಹುಲ್ ವಿಯೆಟ್ನಾಂ ಪ್ರವಾಸ: ಬಿಜೆಪಿ ಟೀಕೆ

ದೆಹಲಿ: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನ ಹಿನ್ನೆಲೆ ದೇಶಾದ್ಯಂತ 7 ದಿನಗಳ ಶೋಕಾಚರಣೆ ನಡೆದಿದೆ. ಕೇಂದ್ರ ಸರಕಾರದ ವತಿಯಿಂದ ನಿಗದಿಯಾಗಿರುವ ಎಲ್ಲಾ ಮನರಂಜನಾ ಕಾರ್ಯಕ್ರಮಗಳನ್ನೂ ರದ್ದುಗೊಳಿಸಲಾಗಿದೆ.

ಈ ಮಧ್ಯೆ, ಕಾಂಗ್ರೆಸ್‌ನ ಸಂಸದ, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ವಿಯೆಟ್ನಾಂ ಪ್ರವಾಸಕ್ಕೆ ಹೊರಟಿರುವುದು ದೇಶದ ರಾಜಕೀಯ ವಲಯದಲ್ಲಿ ಗಂಭೀರ ಚರ್ಚೆಗೆ ಗ್ರಾಸವಾಗಿದೆ. ರಾಹುಲ್ ವಿಯೆಟ್ನಾಂ ಪ್ರವಾಸವನ್ನು ಬಿಜೆಪಿ ತೀವ್ರವಾಗಿ ಟೀಕಿಸಿದೆ. ರಾಹುಲ್ ಗಾಂಧಿ ಸಂವೇದನಾಶೀಲತೆಯೇ ಇಲ್ಲದ ವ್ಯಕ್ತಿ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಟೀಕಿಸಿದ್ದಾರೆ. ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನಕ್ಕೆ ಇಡೀ ದೇಶ ಶೋಕಿಸುತ್ತಿರುವಾಗ ರಾಹುಲ್ ಹೊಸ ವರ್ಷದ ಸಂಭ್ರಮ ಆಚರಿಸಲು ವಿಯೆಟ್ನಾಂಗೆ ತೆರಳಿದ್ದಾರೆ ಎಂದು ಮಾಳವೀಯ ಕಿಡಿಕಾರಿದ್ದಾರೆ.

ಗಾಂಧಿ ಪರಿವಾರ ಮತ್ತು ಕಾಂಗ್ರೆಸ್ ಪಕ್ಷ ಸಿಖ್ ಧರ್ಮೀಯರನ್ನು ಬಹಳವಾಗಿ ದ್ವೇಷಿಸುತ್ತವೆ. ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗ 'ಆಪರೇಷನ್ ಬ್ಲೂ ಸ್ಟಾರ್' ನಡೆಸಿ ದರ್ಬಾರ್ ಸಾಹಿಬ್ ಅಪವಿತ್ರಗೊಳಿಸಿದ್ದಾರೆ ಎಂಬುದನ್ನು ಮರೆಯಲಾಗದು ಎಂದು ಮಾಳವೀಯ ವಾಗ್ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ಪ್ರತಿಕ್ರಿಯೆ: ಡಾ.ಸಿಂಗ್ ಅಂತ್ಯಕ್ರಿಯೆ, ಸ್ಮಾರಕ ವಿಚಾರದಲ್ಲಾದ ಲೋಪ ಮುಚ್ಚಿಕೊಳ್ಳಲು ಬಿಜೆಪಿ, ರಾಹುಲ್ ಪ್ರವಾಸವನ್ನು ಟೀಕೆಗೆ ಗುರಿಯಾಗಿಸಿಕೊಂಡಿದೆ. ಬಿಜೆಪಿ ದಿಕ್ಕುತಪ್ಪಿಸುವ ರಾಜಕೀಯದಲ್ಲಿ ತೊಡಗಿದೆ ಎಂದು ಕಾಂಗ್ರೆಸ್ ನಾಯಕ ಮಾಣಿಕಂ ಠಾಗೋರ್ ಟೀಕಿಸಿದ್ದಾರೆ.

ರಾಹುಲ್ ಖಾಸಗಿ ಪ್ರವಾಸ ಕೈಗೊಂಡರೆ ನಿಮಗೇನು ತೊಂದರೆ? ಹೊಸ ವರ್ಷದಲ್ಲಾದರೂ ಆರೋಗ್ಯ ಸರಿಪಡಿಸಿಕೊಳ್ಳಿ ಎಂದು ವ್ಯಂಗ್ಯವಾಡಿದ್ದಾರೆ.

ಮಹಾ ಕುಂಭಮೇಳಕ್ಕೆ ರಕ್ಷಣೆ: ನೀರಿನಾಳದ ಡ್ರೋನ್ ಬಳಕೆ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ಜನವರಿಯಲ್ಲಿ ನಡೆಯಲಿರುವ ಮಹಾಕುಂಭಮೇಳದಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ ಸಾವಿರಾರು ಪೊಲೀಸರ ಭದ್ರತಾ ವ್ಯವಸ್ಥೆಯ ಜತೆಗೇ ಹೆಚ್ಚಿನ ಸಂಖ್ಯೆಯಲ್ಲಿ ಡ್ರೋನ್‌ಗಳನ್ನೂ ಬಳಸಲಾಗುತ್ತಿದೆ. ಅಷ್ಟೇ ಅಲ್ಲದೇ, 2700 ಸರ್ವೆಲೆನ್ಸ್ ಕೆಮರಾಗಳನ್ನೂ ಅಳವಡಿಸಲಾಗುತ್ತಿದೆ. ಅಪರೂಪದ ಈ ಮಹಾ ಕುಂಭಮೇಳಕ್ಕೆ

ದೇಶ-ವಿದೇಶದಿಂದ ಹಿಂದೂಗಳು ಸೇರಿದಂತೆ ವಿವಿಧ ಧರ್ಮದ 45 ಕೋಟಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಕುಂಭಮೇಳದ ತ್ರಿವೇಣಿ ಸಂಗಮ ಪ್ರದೇಶ ಮಹಾಕುಂಭ ನಗರದಲ್ಲಿ ಉತ್ತರ ಪ್ರದೇಶ ಸರಕಾರ ಭಾರೀ ಭದ್ರತಾ ವ್ಯವಸ್ಥೆ ಮಾಡುತ್ತಿದೆ. ಭೂಮಿಯ ಮೇಲ್ಭಾಗ ಹಾರಾಡುವ ಡ್ರೋನ್‌ಗಳ ಜತೆಗೇ ಗಂಗಾ ನದಿಯ ನೀರಿನಾಳದಲ್ಲಿಯೂ ಸಂಚರಿಸುತ್ತಾ ಕಾವಲು ಕಾಯುವಂತಹ ವಿಶೇಷ ಡ್ರೋನ್‌ಗಳನ್ನು ಇದೇ ಮೊದಲ ಬಾರಿಗೆ ಬಳಕೆ ಮಾಡಲಾಗುತ್ತಿದೆ. ಈ ವಿಶಿಷ್ಟ ಡ್ರೋನ್‌ಗಳು ನದಿಯ ನೀರಿನಾಳದಲ್ಲಿ 100 ಮೀ.ವರೆಗೂ ಮುಳುಗಿ ಚಲಿಸುವ, ಕ್ಯಾಮೆರಾ ಕಣ್ಗಾವಲು ನಡೆಸಬಲ್ಲ ಸಾಮರ್ಥ್ಯ ಹೊಂದಿವೆ. ಅದಕ್ಕಾಗಿ ಮೊದಲ ಬಾರಿಗೆ 'ಟೆಥರ್ಡ್' ಡ್ರೋನ್‌ಗಳನ್ನು ಬಳಸಲಾಗುತ್ತಿದೆ.

ಈ ವಿಶೇಷ ಡ್ರೋನ್‌ಗಳು ಕೇಬಲ್ ಮೂಲಕ ಸಂಪರ್ಕ ಹೊಂದಿರುವುದರಿಂದ ದೀರ್ಘ ಸಮಯದವರೆಗೂ ನಿರಂತರ ಕಾರ್ಯನಿರ್ವಹಿಸಬಲ್ಲವಾಗಿವೆ. ಅನುಮಾನಾಸ್ಪದ ವಸ್ತುಗಳ ನಿಖರ ಮಾಹಿತಿ ನೀಡಬಲ್ಲಷ್ಟು ಕ್ಷಮತೆ ಹೊಂದಿವೆ. ಪ್ರಯಾಗ್ ರಾಜ್ ನಲ್ಲಿನ ನದಿಯ ಉದ್ದಕ್ಕೂ 700 ರಕ್ಷಣಾ ದೋಣಿಗಳನ್ನು ನಿಯೋಜನೆ ಮಾಡಲಾಗಿದೆ. ಇದೆಲ್ಲದರ ಜತೆಗೆ 56 ಸೈಬರ್ ತಜ್ಞರನ್ನೂ ನಿಯೋಜಿಸಲಾಗಿದ್ದು, ಆನ್‌ಲೈನ್ ಎದುರಾಗುವ ಅಪಾಯ, ಆತಂಕಗಳನ್ನು ಪತ್ತೆ ಹಚ್ಚಿ ನಿವಾರಿಸಲು ನೆರವಾಗಲಿದ್ದಾರೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಕೇರಳದಲ್ಲಿ ರಾಹುಲ್, ಪ್ರಿಯಾಂಕಾ ಗೆಲುವು

ಕೇರಳವೊಂದು ಮಿನಿ ಪಾಕಿಸ್ತಾನ ಮಹಾ ಸಚಿವ ರಾಣೆ ವಿವಾದ

ಪುಣೆ: ಕೇರಳ ರಾಜ್ಯ ಮಿನಿ ಪಾಕಿಸ್ತಾನವಾಗಿದೆ. ಅದರಿಂದಾಗಿಯೇ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮತ್ತು

ಅವರ ಸೋದರಿ ಪ್ರಿಯಾಂಕಾ ವಾದ್ರಾ, ಗೆಲ್ಲಲು ಸಾಧ್ಯವಾಗಿದೆ ಎಂದು ಭಾರತೀಯ ಜನತಾ ಪಕ್ಷದ(ಬಿಜೆಪಿ) ನಾಯಕ, ಮಹಾರಾಷ್ಟ್ರ ಮೀನುಗಾರಿಕಾ ಸಚಿವ ನಿತೇಶ್ ರಾಣೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಇವರೆಲ್ಲಾ ಭಯೋತ್ಪಾದಕರ ನೆರವಿನಿಂದ ಸಂಸದರಾಗಿದ್ದಾರೆ. ಎಲ್ಲಾ ಭಯೋತ್ಪಾದಕರೂ ಅವರಿಗೇ ಮತ ಹಾಕುತ್ತಾರೆ. ಇದು ಸತ್ಯ ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ನಾರಾಯಣ ರಾಣೆ ಅವರ ಪುತ್ರ, ನಿತೇಶ್ ರಾಣೆ ಹೇಳಿದ್ದಾರೆ. ಅಫ್ಜಲ್ ಖಾನ್ ಎದುರು ಛತ್ರಪತಿ ಶಿವಾಜಿ ಮಹಾರಾಜರ ಗೆಲುವಿನ ಸಂದರ್ಭದ ವರ್ಷಾಚರಣೆ ವೇಳೆ ಪುಣೆ ಜಿಲ್ಲೆಯ ಪುರಂದರ ತಾಲೂಕಿನಲ್ಲಿ ಸಚಿವ ರಾಣೆ ಹೇಳಿದ್ದಾರೆ. ಅವರ ಈ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಲೇ ಮಾತು ಬದಲಿಸಿದ ರಾಣೆ, ಕೇರಳ ಭಾರತದ ಭಾಗವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಮತಾಂತರ, ಲವ್ ಜಿಹಾದ್ ಮೊದಲಾದ ವಿಷಯಗಳ ಉಲ್ಲೇಖಿಸಿರುವ ಸಚಿವರು, ಕೇರಳನ್ನು ಪಾಕಿಸ್ತಾನಕ್ಕೆ ಹೋಲಿಸಿದ ಹೇಳಿಕೆ ವಾಸ್ತವದಿಂದ ಕೂಡಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಕಾಂಗ್ರೆಸ್ ಟೀಕೆ

ನಿತೇಶ್ ರಾಣೆ ಅಂಥವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಅವರು ಇದಕ್ಕಾಗಿಯೇ ಸಚಿವರಾಗಿದ್ದಾರೆ. ಆದರೆ, ಪ್ರಧಾನಿ ಮೋದಿ ಮತ್ತು ಸಿಎಂ ಫಡ್ನವಿಸ್ ಅವರನ್ನು ಕೇಳಲು ಬಯಸುತ್ತೇನೆ. ರಾಣೆಗೆ ಸಚಿವ ಸ್ಥಾನದಲ್ಲಿ ಮುಂದುವರೆಯುವ ನೈತಿಕ ಹಕ್ಕಿದೆಯೇ? ರಾಣೆ ಸಂಪುಟದ ಭಾಗವಾಗಿ ಉಳಿಯುವ ಅಗತ್ಯವೇನಿದೆ? ಎಂದು ಕಾಂಗ್ರೆಸ್ ಮಹಾರಾಷ್ಟ್ರ ಘಟಕದ ವಕ್ತಾರ ಅತುಲ್ ಲೋಂಧೆ ಪಾಟೀಲ್ ಟೀಕಿಸಿದ್ದಾರೆ.

ಅಮೆರಿಕ ಮಾಜಿ ಅಧ್ಯಕ್ಷ, ನೊಬೆಲ್ ಪುರಸ್ಕೃತ ಜಿಮ್ಮಿ ಕಾರ್ಟರ್ ನಿಧನ

ವಾಷಿಂಗ್ಟನ್: ಅಮೆರಿಕದ ಮಾಜಿ ಅಧ್ಯಕ್ಷ, ನೊಬೆಲ್ ಪ್ರಶಸ್ತಿ ಪುರಸ್ಕೃತ, ಶತಾಯುಷಿ ಜಿಮ್ಮಿ ಕಾರ್ಟರ್ ಭಾನುವಾರ ಜಾರ್ಜಿಯಾದಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.



ಜಿಮ್ಮಿ ಕಾರ್ಟರ್ ಮೆಲನೋಮಾ ಎಂಬ ಚರ್ಮದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು ಎಂದು 'ರಾಯಿಟರ್ಸ್' ವರದಿ ಮಾಡಿದೆ. 1924ರ ಅ.1ರಂದು ಜಾರ್ಜಿಯಾದಲ್ಲಿ ಜನಿಸಿದ ಜಿಮ್ಮಿ ಕಾರ್ಟರ್ ಅಮೆರಿಕದ 39ನೇ ಅಧ್ಯಕ್ಷರಾಗಿ 1977-81ರ ಅವಧಿಯಲ್ಲಿ ಸೇವೆ ಸಲ್ಲಿಸಿದ್ದರು. ಆಡಳಿತಾವಧಿಯಲ್ಲಿ ಅವರು ಮಾಡಿದ ಅನೇಕ ಮಾನವೀಯ ಕೆಲಸಗಳನ್ನು ಪರಿಗಣಿಸಿ 'ನೊಬೆಲ್ ಶಾಂತಿ ಪ್ರಶಸ್ತಿ' ಪ್ರದಾನ ಮಾಡಲಾಗಿತ್ತು. ಕಾರ್ಟರ್, ಇಸ್ರೇಲ್-ಈಜಿಪ್ಟ್ ನಡುವೆ ಶಾಂತಿ ನೆಲೆಸಲು ಮಧ್ಯಸ್ಥಿಕೆ ವಹಿಸಿದ್ದರು. ದೇಶದ ಅಧ್ಯಕ್ಷರಾಗುವ ಮುನ್ನ ಕಾರ್ಟರ್ ಅಮೆರಿಕದ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ್ದರು. ಬಳಿಕ ಜಾರ್ಜಿಯಾ ಗವರ್ನರ್ ಆದರು. 1977ರಲ್ಲಿ ಅಮೆರಿಕ ಅಧ್ಯಕ್ಷರಾದ ನಂತರ ನೂರಾರು ಸವಾಲುಗಳು ಕಾರ್ಟರ್ ಅವರಿಗೆ ಎದುರಾದವು. ಅವೆಲ್ಲವನ್ನೂ ಧೈರ್ಯದಿಂದ ಎದುರಿಸಿ ಉತ್ತಮ ಆಡಳಿತ ನಡೆಸಿದರು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ.

ಹರಿಯಾಣ ಗ್ರಾಮ ನಂಟು: ಕಾರ್ಟರ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದ ಸವಿನೆನಪಿಗಾಗಿ ಹರಿಯಾಣದ ಗ್ರಾಮವೊಂದಕ್ಕೆ ಕಾರ್ಟರ್ ಪುರಿ ಎಂದು ಹೆಸರಿಡಲಾಗಿದೆ. ಇಂದಿಗೂ ಆ ಹೆಸರಿಂದಲೇ ಗ್ರಾಮವನ್ನು ಗುರುತಿಸಲಾಗುತ್ತದೆ.

ಪ್ರಧಾನಿ ಸಂತಾಪ

ಶತಾಯುಷಿ, ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಜಿಮ್ಮಿ ಕಾರ್ಟರ್ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಪ್ರಧಾನಿ ನರೇಂದ್ರ ಮೋದಿ, ಕಾರ್ಟರ್ ಅವರೊಬ್ಬ ಅತ್ಯುತ್ತಮ ಆಡಳಿತಗಾರ, ಬಹಳ ದೂರದೃಷ್ಟಿ ಹೊಂದಿದ್ದ ರಾಜಕೀಯ ನೇತಾರ. ಭಾರತ-ಅಮೆರಿಕ ಸಂಬಂಧ ವೃದ್ಧಿಗೆ ಕಾರ್ಟರ್ ಅವರು ಹಾಕಿಕೊಟ್ಟ ತಳಪಾಯವೇ ಮುಖ್ಯ ಕಾರಣ. ಜಿಮ್ಮಿ ಅವರ ನಿಧನದಿಂದ ಬಹಳ ದುಃಖವಾಗಿದೆ ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಸಿಂಗ್ ಅಸ್ಥಿ ವಿಸರ್ಜನೆ ವೇಳೆ ಕೈ ಗೈರು: ಟೀಕೆ

ದೆಹಲಿ: ದೆಹಲಿಯಲ್ಲಿನ ಯಮುನಾ ನದಿಯಲ್ಲಿ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಚಿತಾಭಸ್ಮ ವಿಸರ್ಜನೆ ಸಂದರ್ಭ ಒಬ್ಬ ಕಾಂಗ್ರೆಸ್ ನಾಯಕರೂ ಹಾಜರಾಗದೇ ಇರುವುದಕ್ಕೆ ಟೀಕೆ ಮಾಡಲಾಗುತ್ತಿದೆ.

ಚಿತಾಭಸ್ಮ ವಿಸರ್ಜನೆ ಸಂದರ್ಭ ಗೈರು ಹಾಜರಿ ಮೂಲಕ ಕಾಂಗ್ರೆಸ್ ಸಿಂಗ್ ಅವರಿಗೆ ಅಗೌರವ ತೋರಿದೆ ಎಂದು ಬಿಜೆಪಿ ನಾಯಕರು ಟೀಕಿಸಿದ್ದಾರೆ. ಕುಟುಂಬದವರ ಖಾಸಗಿತನಕ್ಕೆ ಧಕ್ಕೆ ಮಾಡಬಾರದೆಂದೇ ಅಸ್ಥಿ ವಿಸರ್ಜನೆ ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ ಎಂದು ಕಾಂಗ್ರೆಸ್ ಸೋಮವಾರ ಪ್ರತಿಕ್ರಿಯಿಸಿದೆ.

ಅಸ್ಥಿ ವಿಸರ್ಜನೆಯು ಕುಟುಂಬ ಸದಸ್ಯರಿಗೆ ಭಾವನಾತ್ಮಕ ಮತ್ತು ಕಷ್ಟಕರ ಸಂದರ್ಭ. ಮನಮೋಹನ್ ಸಿಂಗ್ ಕುಟುಂಬದವರ ಖಾಸಗಿತನ ಗೌರವಿಸುವ ಉದ್ದೇಶದಿಂದಲೇ ಚಿತಾಭಸ್ಮ ಸಂಗ್ರಹ ಮತ್ತು ವಿಸರ್ಜನೆ ಸಂದರ್ಭ ಕಾಂಗ್ರೆಸ್ ನಾಯಕರು ಯಾರೂ ಭಾಗಿಯಾಗಿರಲಿಲ್ಲ ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಹೇಳಿದ್ದಾರೆ. ಡಾ. ಸಿಂಗ್ ಚಿತಾಭಸ್ಮವನ್ನು ಕುಟುಂಬ ಸದಸ್ಯರು ಭಾನುವಾರ ಬೆಳಗ್ಗೆ ನಿಗಮಬೋಧ್ ಘಾಟ್‌ನಿಂದ ಸಂಗ್ರಹಿಸಿ, ಮಜ್ನೂ ಕಾ ತಿಲಾ ಗುರುದ್ವಾರ ಬಳಿಯ ಯಮುನಾ ನದಿಯಲ್ಲಿ ವಿಸರ್ಜನೆ ಮಾಡಿದ್ದಾರೆ.

ಬಿಹಾರ ಪ್ರತಿಭಟನೆ: ಪಿಕೆ ವಿರುದ್ಧ ಪ್ರಕರಣ

ಪಟನಾ: ಬಿಹಾರದ ಪಟನಾ ನಗರದ ಗಾಂಧಿ ಮೈದಾನದಲ್ಲಿ ಬಿಹಾರ ಲೋಕಸೇವಾ ಆಯೋಗದ (ಬಿಪಿಎಸ್‌ಸಿ) ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗೆ ಪ್ರಚೋದನೆ

ನೀಡಿದ ಆರೋಪದ ಮೇಲೆ ಜನ್ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್(ಪಿಕೆ) ಸೇರಿದಂತೆ 21 ಜನರ ವಿರುದ್ಧ ಬಿಹಾರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಡಿ.13ರಂದು ನಡೆದ 'ಬಿಪಿಎಸ್‌ಸಿ' ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ. ಪರೀಕ್ಷೆ ರದ್ದುಗೊಳಿಸಿ ಹೊಸದಾಗಿ ಪರೀಕ್ಷೆ ನಡೆಸಬೇಕೆಂದು ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದು, ಪ್ರಶಾಂತ್ ಕಿಶೋರ್ ನೇತೃತ್ವ ವಹಿಸಿದ್ದರು. ಪ್ರತಿಭಟನಾಕಾರರು ಪೊಲೀಸರ ಬ್ಯಾರಿಕೇಡ್ ದೂಡಿ ಮುನ್ನುಗ್ಗಲು ಯತ್ನಿಸಿದ್ದು, ಪೊಲೀಸರು ಪ್ರತಿಭಟನಾಕಾರರ ಮೇಲೆ ಜಲಫಿರಂಗಿ ಬಳಸಿದ್ದಾರೆ, ಜತೆಗೆ ಲಾಠಿ ಪ್ರಹಾರವನ್ನೂ ನಡೆಸಿದ್ದಾರೆ. ಜಿಲ್ಲಾಧಿಕಾರಿ ಚಂದ್ರಶೇಖರ್ ಸಿಂಗ್ ಮಾತನಾಡಿ, ಅನುಮತಿ ಪಡೆಯದೇ ಪ್ರತಿಭಟನೆ ನಡೆಸಲಾಗಿದೆ. ನೇತೃತ್ವ ವಹಿಸಿದ್ದ ಪ್ರಶಾಂತ್ ಕಿಶೋರ್, ಅವರ ಪಕ್ಷದ ಅಧ್ಯಕ್ಷ ಮನೋಜ್ ಭಾರತಿ ಸೇರಿ 21 ಮಂದಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದಿದ್ದಾರೆ.

ಅರ್ಚಕ, ಸಿಖ್ ಗ್ರಂಥಿಗೆ ₹18,000 : ಎಎಪಿ

ದೆಹಲಿ: ದೆಹಲಿ ವಿಧಾನಸಭೆಗೆ ಇನ್ನೂ ಚುನಾವಣೆ ಆಯೋಗದಿಂದ ದಿನಾಂಕವೇ ಪ್ರಕಟವಾಗಿಲ್ಲ. ಆದರೆ, ಆಮ್ ಆದ್ಮಿ ಪಕ್ಷ ಸರಣಿಯೋಪಾದಿಯಲ್ಲಿ ಮತದಾರರಿಗೆ ಆಮಿಷ ಒಡ್ಡುವುದನ್ನು

ಮುಂದುವರಿಸಿದೆ. ಎಎಪಿ ದೆಹಲಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದಲ್ಲಿ 'ಪೂಜಾರಿ-ಗ್ರಂಥಿ ಸಮ್ಮಾನ್ ಯೋಜನೆ' ಆರಂಭಿಸಲಿದೆ. ದೇವಾಲಯದ ಅರ್ಚಕರು ಮತ್ತು ಗುರುದ್ವಾರಗಳ ಗ್ರಂಥಿಗಳಿಗೆ ಮಾಸಿಕ 18,000 ರು. ಭತ್ಯೆ ಕೊಡಿಸಲಾಗುವುದು ಎಂದು ಎಎಪಿ ರಾಷ್ಟ್ರೀಯ ಸಂಚಾಲಕ, ದೆಹಲಿ ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಸೋಮವಾರ ಪ್ರಕಟಿಸಿದ್ದಾರೆ. ಫೆಬ್ರವರಿಯಲ್ಲಿ ದೆಹಲಿ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, 4ನೇ ಅವಧಿಗೆ ಅಧಿಕಾರ ಉಳಿಸಿಕೊಳ್ಳಲು ಎಎಪಿ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಮತದಾರರಿಗೆ ಹಲವು ಯೋಜನೆಗಳನ್ನು ಘೋಷಿಸುತ್ತಾ ಗಮನ ಸೆಳೆಯುತ್ತಿದೆ. 'ಪೂಜಾರಿ, ಗ್ರಂಥಿ ಸಮಾಜದ ಪ್ರಮುಖ ಭಾಗ. ಆದರೆ, ಅವರನ್ನು ಈವರೆಗೂ ನಿರ್ಲಕ್ಷ್ಯಿಸಲಾಗಿದೆ. ಮೊದಲ ಬಾರಿಗೆ ನಾವು ಅವರನ್ನು ಬೆಂಬಲಿಸುತ್ತಿದ್ದೇವೆ. ಹೊಸ ಯೋಜನೆಗೆ ಮಂಗಳವಾರದಿಂದಲೇ ನೋಂದಣಿ ಆರಂಭ. ಕನ್ನಾಟ್ ಪ್ಲೇಸ್‌ನಲ್ಲಿರುವ ಹನುಮಾನ್ ಮಂದಿರಕ್ಕೆ ಭೇಟಿ ನೀಡಿ, ಅಲ್ಲಿನ ಅರ್ಚಕರ ನೋಂದಣಿ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸುವೆ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಸ್ಕಾಟ್ಲೆಂಡ್ ನದಿಯಲ್ಲಿ ಕೇರಳ ಯುವತಿ ಶವ

ಲಂಡನ್: ಡಿಸೆಂಬರ್ ಮಾಸಾರಂಭ ನಾಪತ್ತೆಯಾಗಿದ್ದ ಭಾರತ ಮೂಲದ ವಿದ್ಯಾರ್ಥಿನಿಯ ಶವ ಸ್ಕಾಟ್ಲೆಂಡ್‌ನ ನದಿಯೊಂದರಲ್ಲಿ ಇತ್ತೀಚೆಗೆ ಪತ್ತೆಯಾಗಿದೆ. ಈ ವಿಚಾರವನ್ನು



ಯುವತಿಯ ಕುಟುಂಬಕ್ಕೆ ತಿಳಿಸಲಾಗಿದೆ. ಕೇರಳದ ಸಂತ್ರಾ ಸಾಜು(22) ಸ್ಕಾಟಿಷ್ ರಾಜಧಾನಿ ಎಡಿನ್‌ಬರ್ಗ್‌ನಲ್ಲಿರುವ ಹೆರಿಯಟ್-ವ್ಯಾಟ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಡಿ.6ರ ಸಂಜೆ ಲಿವಿಂಗ್‌ಸ್ಟನ್‌ನ ಆಲ್ಮಂಡ್‌ವೇಲ್‌ನಲ್ಲಿರುವ ಅಸ್ಡಾ ಸೂಪರ್ ಮಾರ್ಕೆಟ್‌ನಲ್ಲಿ ಸಾಜು ಕೊನೆ ಬಾರಿ ಕಾಣಿಸಿದ್ದು ಸಿಸಿಟಿವಿಯಲ್ಲಿ ದಾಖಲಾಗಿದೆ. ಸಾಜು ನಾಪತ್ತೆ ಕುರಿತು ಕುಟುಂಬದವರು, ಸ್ನೇಹಿತರಿಂದ ದೂರು ಸ್ವೀಕರಿಸಿದ ಪೊಲೀಸರು ಶೋಧ ನಡೆಸಿದ್ದರು. ಶುಕ್ರವಾರ ಬೆಳಗ್ಗೆ 11.55ರ ವೇಳೆ ನ್ಯೂಬ್ರಿಡ್ಜ್ ನದಿಯಲ್ಲಿ ಯುವತಿಯ ಮೃತದೇಹ ಕಂಡುಬಂದಿದೆ.

ಯುವತಿ ಕಾಲು ಜಾರಿ ನದಿಗೆ ಬಿದ್ದಿರಬಹುದು. ಸಾವಿನ ಬಗ್ಗೆ ಯಾವುದೇ ಅನುಮಾನಾಸ್ಪದ ಸಂಗತಿ ಕೇಳಿಬಂದಿಲ್ಲ. ಸ್ಕಾಟ್ಲೆಂಡ್‌ನ ಪ್ರಾಸಿಕ್ಯೂಷನ್ ಮತ್ತು ತನಿಖಾ ಸಂಸ್ಥೆಗೆ ವರದಿ ಕಳುಹಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ ಕಾರ್ಯದರ್ಶಿ

ಹೊಳಲ್ಕೆರೆ: ಬಿ ಡಿ ಎ ಉಪ ಆಯುಕ್ತರು ಬೆಂಗಳೂರು ಹಾಗೂ ಹೊಳಲ್ಕೆರೆ ತಾಲೂಕಿನ ಉಸ್ತುವಾರಿ ಕಾರ್ಯದರ್ಶಿಗಳು ಆದ ಎ. ಸೌಜನ್ಯ ಸೋಮವಾರ ಹೊಳಲ್ಕೆರೆ ಪಟ್ಟಣಕ್ಕೆ ಇದೇ ಮೊದಲ ಭಾರಿ ಆಗಮಿಸಿ ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಮಟ್ಟದ ಸಭೆ ನಡೆಸಿ ಅಧಿಕಾರಿಗಳಿಗೆ ಮಾರ್ಗ ದರ್ಶನ ನೀಡಿದರು. ಇದೇ ವೇಳೆ ತಾಲೂಕು ಆಸ್ಪತ್ರೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕಿಯರ ಹಾಸ್ಟೆಲ್ ಹಾಗೂ ಬಿ ಸಿ ಎಂ ಇಲಾಖೆ ಹಾಸ್ಟೆಲ್ ಗಳಿಗೆ ಭೇಟಿ ಮಕ್ಕಳಿಗೆ ಸರಕಾರದಿಂದ ಗುಣ ಮಟ್ಟದ ಆಹಾರ ವಸ್ತುಗಳನ್ನು ನೀಡಿ ಹಾಸ್ಟೆಲ್ ಒಳಗೆ ಹೊರಗೆ ಸ್ವಚ್ಛತೆ ಕಾಪಾಡಿ ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಬಿ ಬಿ ಫಾತೀಮಾ, ಹಿರಿಯ ಪತ್ರಕರ್ತರು ಆದ ಚಿತ್ತಪ್ಪ ಇದ್ದರು.

ಮರಳು ಗಣಿಗಾರಿಕೆ ಮಾಡಲು ಬಿಡಲ್ಲ: ಡಿಸಿ

ದಾವಣಗೆರೆ: ಜಿಲ್ಲೆಯಲ್ಲಿ ಅಕ್ರಮ ಮಣ್ಣು, ಮರಳು ಗಣಿಗಾರಿಕೆಗೆ ಮಾಡಲು ಯಾವುದೇ ಕಾರಣಕ್ಕೂ ಬಿಡಲ್ಲ ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಭಿವೃದ್ಧಿ ದೃಷ್ಟಿಯಿಂದ ಮಣ್ಣು ಮತ್ತು ಮರಳು ಗಣಿಗಾರಿಕೆ ನಡೆಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅನುಮತಿ ಪಡೆದು ಗಣಿಗಾರಿಕೆ ನಡೆಸಲು ಅವಕಾಶವಿದೆ. ಆದರೆ, ಅನುಮತಿ ಇಲ್ಲದೆ ಅಕ್ರಮ ಮರಳು ಗಣಿಗಾರಿಕೆ ನಡೆಸುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸುವಂತೆ ಈಗಾಗಲೇ ಸೂಚನೆ ನೀಡಿದ್ದೇನೆ ಎಂದು ಹೇಳಿದರು. ಅಧಿಕೃತವಾಗಿ ಮರಳು ಗಣಿಗಾರಿಕೆ ನಡೆಸಲು ಸರಕಾರ ಅವಕಾಶ ನೀಡಿದೆ. ಮರಳಿನ ಲಭ್ಯತೆ ಎಲ್ಲಿದೆ?, ಅಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅನುಮತಿ ಪಡೆದು ಮರಳು ಗಣಿಗಾರಿಕೆ ನಡೆಸಬಹುದು. ಆದರೆ, ಯಾವುದೇ ಅನುಮತಿ ಪಡೆಯದೇ ಸರಕಾರ ಅಥವಾ ಇಲಾಖೆ ಕಣ್ಣು ತಪ್ಪಿಸಿ ಅನಧಿಕೃತವಾಗಿ ಮರಳು ಗಣಿಗಾರಿಕೆ ನಡೆಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಇದನ್ನು ಆಧರಿಸಿ ಈಗಾಗಲೇ ಅಕ್ರಮ ಮರಳು ಗಣಿಗಾರಿಕೆ ನಡೆಸುವ ಸ್ಥಳಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿ ಅವರು ವಿರುದ್ಧ ಎಫ್ ಐಆರ್ ದಾಖಲಿಸಿದ್ದಾರೆ. ಮುಂದೆ ಕೂಡ ಇದೇ ರೀತಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ತಿಳಿಸಿದರು.

ಕನದಾಸ ಜಯಂತಿ ಜ.5ರಂದು

ಹರಿಹರ: ಜ.5ರಂದು ದಾವಣಗೆರೆಯಲ್ಲಿ ಜಿಲ್ಲಾ ಮಟ್ಟದ 537ನೇ ಕನಕದಾಸರ ಜಯಂತ್ಯುತ್ಸವ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ಎಸ್. ರಾಮಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 11.30ಕ್ಕೆ ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯುವ ಕನಕ ಜಯಂತ್ಯುತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಜಿಲ್ಲಾಉಸ್ತುವಾರಿ ಸಚಿವ ಎಸ್ ಎಸ್ ಮಲ್ಲಿಕಾರ್ಜುನ್ ಅವರು ಕನಕದಾಸರ ಪುತ್ಥಳಿ ಉದ್ಘಾಟಿಸುವರು ಎಂದರು. ಕಾಗಿನೆಲೆ ಮಹಾಸಂಸ್ಥಾನ ಪೀಠದ ನಿರಂಜನಾನಂದ ಪುರಿ, ಪಂಚಮಸಾಲಿ ಪೀಠದ ವಚನಾನಂದ ಶ್ರೀ, ವಾಲ್ಮೀಕಿ ಪೀಠದ ಪ್ರಸನ್ನಾನಂದ ಪುರಿ, ಭೋವಿ ಗುರು ಪೀಠದಇಮ್ಮಡಿ ಸಿದ್ದರಾಮೇಶ್ವರ ಶ್ರೀ, ಮಾದರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದರಚನ್ನಯ್ಯ ಶ್ರೀಗಳು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮಕ್ಕೆ ಹರಿಹರ ತಾಲೂಕಿನಿಂದ ಅಂದಾಜು 10 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಹರಿಹರ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹಾಲೇಶಪ್ಪ, ದಾವಣಗೆರೆ ಪಾಲಿಕೆ ಸದಸ್ಯ ಶ್ರೀನಿವಾಸ್, ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ, ವಕೀಲರಾದ ಎಂ. ನಾಗೇಂದ್ರಪ್ಪ, ಕೆ.ಬಿ. ರಾಜಶೇಖರ್, ಕರಿಬಸಪ್ಪ, ಶಿವಣ್ಣ, ರುದ್ರಣ್ಣ, ಸಿ. ಎನ್. ಹುಲಿಗೇಶ್ ಇತರರಿದ್ದರು.

ಮಹಿಳಾ ಕಾಂಗ್ರೆಸ್ಸಿಗೆ ಅರ್ಪಿತಾ ನೇಮಕ

ಚಿತ್ರದುರ್ಗ: ಕಾಂಗ್ರೆಸ್ ಯುವ, ವಿದ್ಯಾರ್ಥಿ ಘಟಕದಲ್ಲಿ ಒಂದು ದಶಕದ ಕಾಲ ಕಾರ್ಯಕರ್ತೆಯಾಗಿ ಪಕ್ಷ ಸಂಘಟನೆಯಲ್ಲಿ ಸಲ್ಲಿಸಿದ ಸೇವೆ ಗುರುತಿಸಿ ನಗರದ ನಿವಾಸಿ, ಎಂಎಸ್ಸಿ ಪದವೀಧರೆ ಎಂ.ಸಿ.ಅರ್ಪಿತಾ ಅವರನ್ನು ಮಹಿಳಾ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ಜಿಲ್ಲಾಧ್ಯಕ್ಷೆ ಗೀತಾನಂದಿನಿ ಗೌಡ ನೇಮಕ ಮಾಡಿ ಆದೇಶಿಸಿದ್ದಾರೆ. ಮುಂಬರುವ ತಾಲೂ ಕು, ಜಿಲ್ಲಾ ಪಂಚಾಯಿತಿ ಸೇರಿ ಎಲ್ಲ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಶ್ರಮಿಸಲು ಸಂಘಟನೆ ಕಾರ್ಯ ಕೈಗೊಳ್ಳುವಂತೆ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ. ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸುವಂತೆ ಮಾಜಿ ಸಚಿವ ಎಚ್.ಆಂಜನೇಯ, ಜಿಲ್ಲಾಧ್ಯಕ್ಷ ಎಂ.ಕೆ.ತಾಜ್ ಪೀರ್ ಶಿಫಾರಸ್ಸು ಮಾಡಿದ್ದರು.

{ ಪ್ರಿಯಾಂಕ್ ಖರ್ಗೆ } ಸಚಿವ

ಸೇಡಂನ ಬಿಜೆಪಿಯ ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೇಲ್ಕೂರ್ ಅವರ ಸೋದರ ಜಿ.ಬಿ.ಪಾಟೀಲ್ ತಲ್ವಾರ್ ನಿಂದ ಕೇಕ್ ಕತ್ತರಿಸಿ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ನಡೆಸಿದ ವಿಡಿಯೋ ವೈರಲ್ ಆಗಿದೆ. ಅಲ್ಲದೆ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಚಿತ್ರವನ್ನು ಕಾಲ ಬಳಿ ಇಟ್ಟು ಅಗೌರವ ತೋರಲಾಗಿದೆ.

ಆಯೋಜನೆಗೆ ಎಲ್ಲಾ ಸಿದ್ಧತೆ 10 ಸಾವಿರಕ್ಕಿಂತ ಹೆಚ್ಚು ಭಾಗಿ | ಎಂ.ಬಿ.ಎ ಮೈದಾನದ ಮುಖ್ಯ ವೇದಿಕೆಯಲ್ಲಿ ಮುಖ್ಯಮಂತ್ರಿಯಿಂದ ಉದ್ಘಾಟನೆ

ಜ. 5, 6ರಂದು ರಾಜ್ಯ ಮಟ್ಟದ ಯುವಜನೋತ್ಸವ

ದಾವಣಗೆರೆ: ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ನಡೆಸುವ ರಾಜ್ಯ ಮಟ್ಟದ ಯುವಜನೋತ್ಸವ ಜನವರಿ 5 ಮತ್ತು 6 ರಂದು ನಡೆಯಲಿದ್ದು ನಗರದ ಎಂ.ಬಿ.ಎ. ಮೈದಾನದ ಮುಖ್ಯ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಯಕ್ರಮ ಉದ್ಘಾಟಿಸುವರು ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಯುವಜನೋತ್ಸವ ಕಾರ್ಯಕ್ರಮದ ಸಿದ್ಧತೆಗೆ ಜಿಲ್ಲಾಡಳಿತದಿಂದ ಕೈಗೊಂಡಿರುವ ಕಾರ್ಯಕ್ರಮ ರೂಪುರೇಷೆಗಳ ಬಗ್ಗೆ ವಿವಿಧ ಉಪ ಸಮಿತಿಗಳೊಂದಿಗೆ ಸಭೆ ನಡೆಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಯುವಜನೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿದಂತೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಜನಪ್ರತಿನಿಧಿಗಳು ಮತ್ತು ಯುವ ಪ್ರಶಸ್ತಿ ಪುರಸ್ಕೃತರು ಭಾಗವಹಿಸುವರು.

ಜನಪದ ರ‍್ಯಾಲಿ: ಯುವಜನೋತ್ಸವವು ಜನವರಿ 5 ರಂದು ಬೆಳಗ್ಗೆ ಉದ್ಘಾಟನೆಯಾಗಲಿದ್ದು ಇದರ ಅಂಗವಾಗಿ ಬೆಳಗ್ಗೆ 9 ಗಂಟೆಯಿಂದ ವಿವಿಧ ಕಲಾತಂಡಗಳೊಂದಿಗೆ ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳೊಂದಿಗೆ ಜನಪದ ಮೆರವಣಿಗೆ ಮೂಲಕ ಎಂಬಿಎ ಮೈದಾನಕ್ಕೆ ತೆರಳಿ ಉದ್ಘಾಟನೆಯಲ್ಲಿ ಭಾಗಿಯಾಗಲಿದ್ದಾರೆ. ಕಲಾಮೇಳದಲ್ಲಿ ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರದಿಂದ 10 ಕ್ಕಿಂತ ಹೆಚ್ಚು ತಂಡಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 10 ಕ್ಕೂ ಹೆಚ್ಚು ಕಲಾ ತಂಡಗಳು ಸೇರಿದಂತೆ ವಿವಿಧ ಕಾಲೇಜುಗಳು ವಿದ್ಯಾರ್ಥಿಗಳ ತಂಡಗಳು ಕಲಾ ಮೇಳದಲ್ಲಿ ಭಾಗಿಯಾಗಲಿದ್ದು ಆಕರ್ಷಕ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಕದ್ರಿ ಮಣಿಕಂತ ಮತ್ತು ತಂಡದಿಂದ ಸಾಂಸ್ಕೃತಿಕ ಸಂಜೆ; ಯುವಜನೋತ್ಸವ ಅಂಗವಾಗಿ ಖ್ಯಾತ ಕಲಾವಿದರಾದ ಕದ್ರಿ ಮಣಿಕಂತ ಮತ್ತು ತಂಡದವರಿಂದ ಜನವರಿ 5 ರ ಸಂಜೆ 5 ಗಂಟೆಯಿಂದ ಪ್ರಧಾನ ವೇದಿಕೆ ಎಂಬಿಎ ಮೈದಾನದಲ್ಲಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವೇದಿಕೆಯಲ್ಲಿ ಐದು ಸಾವಿರಕ್ಕಿಂತಲೂ ಹೆಚ್ಚು ಆಸನದ ವ್ಯವಸ್ಥೆ ಮಾಡಲಾಗಿದ್ದು ಸುಮಾರು 10 ಸಾವಿರಕ್ಕೂ ಹೆಚ್ಚಿನ ಜನರು ಸೇರುವ ನಿರೀಕ್ಷೆ ಹೊಂದಲಾಗಿದೆ. ಗ್ಲಾಸ್‌ಹೌಸ್‌ನಲ್ಲಿ ಫಲಪುಷ್ಪ ಪ್ರದರ್ಶನ ಭಾನುವಾರದಿಂದ ನಡೆಯುತ್ತಿದ್ದು ಜನವರಿ 5 ರವರೆಗೆ ಯುವಜನೋತ್ಸವ ಹಿನ್ನಲೆಯಲ್ಲಿ ಮುಂದುವರೆಸಲಾಗಿದ್ದು ದಾವಣಗೆರೆ ಜನತೆಯು ಯುವಜನೋತ್ಸವವನ್ನು ವೀಕ್ಷಣೆ ಮಾಡುವ ಮೂಲಕ ಪ್ರೋತ್ಸಾಹಿಸಬೇಕಾಗಿದೆ ಎಂದರು.

ಯುವಜನೋತ್ಸವ ವೀಕ್ಷಣೆಗೆ ನಗರ ಸಾರಿಗೆ; ಜನವರಿ 5 ಮತ್ತು 6 ರಂದು ನಡೆಯುವ ಯುವಜನೋತ್ಸವ ವೀಕ್ಷಣೆಗಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಕೆಎಸ್‌ಆರ್‌ಟಿಸಿ ಯಿಂದ ನಿರಂತರ ಬಸ್ ಸೇವೆಯನ್ನು ಒದಗಿಸಲಾಗುತ್ತಿದೆ. ವೀಕ್ಷಣೆ ಮಾಡುವವರು ಈ ಬಸ್ ಸೌಲಭ್ಯ ಪಡೆಯಬಹುದಾಗಿದ್ದು ಎಲ್ಲಾ ವೇದಿಕೆಗಳಿಗೂ ಬಸ್ ಕರೆದುಕೊಂಡು ಹೋಗಲಿದೆ ಎಂದರು.

ಜನಪ್ರತಿನಿಧಿಗಳು, ಯುವ ಪುರಸ್ಕೃತರು ಭಾಗಿ; ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಸೇರಿದಂತೆ ರಾಜ್ಯದಲ್ಲಿನ ಪ್ರಮುಖ ಯುವ ಪುರಸ್ಕೃತರು ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಊಟದ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗುತ್ತಿದೆ. ವಿವಿಧ ಜಿಲ್ಲೆಗಳಿಂದ ಆಗಮಿಸುವ ಯುವ ಸ್ಪರ್ಧಾಳುಗಳಿಗೆ ಊಟ, ವಸತಿ ಸೇರಿದಂತೆ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಹಮ್ಮಿಕೊಳ್ಳಲು ಸೂಕ್ತ ವಾಹನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದರು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ. ಸಂತೋಷ್, ಪಾಲಿಕೆ ಆಯುಕ್ತೆ ರೇಣುಕಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಯುವಜನೋತ್ಸವ ಕಾರ್ಯಕ್ರಮದ ಸಿದ್ಧತೆ ಬಗ್ಗೆ ಸಭೆ ನಡೆಸಿ ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ ಮಾತನಾಡಿದರು.

7 ಸ್ಪರ್ಧೆಗಳು

ರಾಜ್ಯ ಮಟ್ಟದ ಯುವಜನೋತ್ಸವ ಸ್ಪರ್ಧೆಯಲ್ಲಿ 7 ಸ್ಪರ್ಧೆಗಳಿದ್ದು ಪ್ರತ್ಯೇಕವಾಗಿ ನಡೆಯಲಿವೆ. ಜಾನಪದ ನೃತ್ಯ ಸ್ಪರ್ಧೆಯು ಬಿಐಇಟಿ ಕಾಲೇಜಿನ ಎಸ್.ಎಸ್.ಎಂ. ಸಾಂಸ್ಕೃತಿಕ ಸಭಾಂಗಣ, ಜಾನಪದ ಗೀತೆ ಸ್ಪರ್ಧೆಯು ಬಾಪೂಜಿ ಎಂಬಿಎ ಕಾಲೇಜು ಸಭಾಂಗಣ, ವಿಜ್ಞಾನ ವಸ್ತು ಪ್ರದರ್ಶನ ಎಂಬಿಎ ಮೈದಾನದಲ್ಲಿನ ಎಸ್.ಎಸ್. ಪಬ್ಲಿಕ್ ಸ್ಕೂಲ್, ಕವನ ರಚನೆ ಎಂಬಿಎ ಕಾಲೇಜಿನ ಕೊಠಡಿ 1, ಕಥೆ ಬರೆಯುವುದು ಇಲ್ಲಿನ ಕೊಠಡಿ 2 ರಲ್ಲಿ ಹಾಗೂ ಚಿತ್ರಕಲೆ ಸ್ಪರ್ಧೆ ಮತ್ತು ಘೋಷಣ ಸ್ಪರ್ಧೆಯು ಲಲಿತ ಕಲಾ ಮಹಾವಿದ್ಯಾಲಯದಲ್ಲಿ ನಡೆಯಲಿದೆ.

> ರಾಜ್ಯ ಎಲ್ಲಾ ಜಿಲ್ಲೆಗಳಿಂದ ಏಳು ಸ್ಪರ್ಧೆಗಳಲ್ಲಿ ಭಾಗವಹಿಸಲು ಯುವ ಸ್ಪರ್ಧಾಳುಗಳು ಆಗಮಿಸುವರು. ಇಲ್ಲಿನ ಸ್ಪರ್ಧೆಯಲ್ಲಿ ವಿಜೇತರಾಗುವವರಿಗೆ ಮೊದಲ ಬಹುಮಾನವಾಗಿ ರು.25000, ದ್ವಿತೀಯ ರು.15000 ಮತ್ತು ತೃತೀಯ ಬಹುಮಾನವಾಗಿ ರು.10000 ಗಳನ್ನು ಪ್ರಶಸ್ತಿ ಪತ್ರದೊಂದಿಗೆ ನಗದು ನೀಡಲಾಗುತ್ತದೆ. ಇಲ್ಲಿ ವಿಜೇತರಾದವರು ಜನವರಿ 11 ಮತ್ತು 12 ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಯುವಜನೋತ್ಸವದಲ್ಲಿ ಭಾಗವಹಿಸುವರು.
> -ಗಂಗಾಧರಸ್ವಾಮಿ ಜಿ.ಎಂ, ಜಿಲ್ಲಾಧಿಕಾರಿ

ನೀರಗುಂದ ಸೌರವಿದ್ಯುತ್ ಘಟಕ ಪರಿಶೀಲಿಸಿದ ಇಂಧನ ಸಚಿವ ಕೆ.ಜೆ.ಜಾರ್ಜ್

ಕೃಷಿ ಪಂಪ್‌ಸೆಟ್‌ಗೆ ನಿರಂತರ 7 ಗಂಟೆ ವಿದ್ಯುತ್

ಹೊಸದುರ್ಗ: ರಾಜ್ಯದಲ್ಲಿ ರೈತರ ಬೇಡಿಕೆಗೆ ಅನುಗುಣವಾಗಿ ಸೌರವಿದ್ಯುತ್ ಘಟಕ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಈ ಯೋಜನೆಯಿಂದ ಹಗಲು ವೇಳೆಯಲ್ಲಿಯೇ ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ತಾಲೂಕಿನ ನೀರಗುಂದ ಗೇಟ್ ಸಮೀಪದಲ್ಲಿ ನೂತನವಾಗಿ ನಿರ್ಮಿಸಿರುವ ಸೌರವಿದ್ಯುತ್ ಘಟಕ ಪರೀಕ್ಷಾರ್ಥ ಸೋಮವಾರ ಅವರು ಭೇಟಿ ನೀಡಿ ಘಟಕದ ಪರಿಶೀಲನೆ ನಂತರ ಮಾತನಾಡಿ, ರಾಜ್ಯದಲ್ಲಿ 3 ಸಾವಿರ ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ ಕ್ರಮವಹಿಸಲಾಗಿದೆ. ಸೌರವಿದ್ಯುತ್ ಯೋಜನೆಗೆ ರಾಜ್ಯ ಸರಕಾರ ಶೇ. 50 ಹಾಗೂ ಕೇಂದ್ರ ಸರ್ಕಾರ ಶೇ.30ರಷ್ಟು ಅನುದಾನ ನೀಡುತ್ತಿದೆ. ಉಳಿದ ಶೇ.20ರಷ್ಟು ಹಣವನ್ನು ರೈತರು ಭರಿಸಬೇಕು. ಸರಕಾರಿ ಜಾಗದಲ್ಲಿ ಸೋಲಾರ್ ಪ್ಲಾಂಟ್ ಅಳವಡಿಸುವ ಗುತ್ತಿಗೆದಾರರಿಗೆ ಎಕರೆಗೆ ವರ್ಷಕ್ಕೆ 25 ಸಾವಿರ ರು. ಹಣವನ್ನು ಸರಕಾರ ಬಾಡಿಗೆ ರೂಪದಲ್ಲಿ ವಿಧಿಸಲಿದ್ದು, ಈ ಹಣವನ್ನು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಇಟ್ಟು ಆಯಾ ವಿದ್ಯುತ್ ಉಪವಿಭಾಗ ಇರುವ ಗ್ರಾಮ ಪಂಚಾಯಿತಿಗಳಲ್ಲಿ ಅಭಿವೃದ್ದಿಗಾಗಿ ಬಳಸಲಾಗುವುದು ಎಂದು ತಿಳಿಸಿದರು.

ಆಹಾರ ಸರಬರಾಜು ನಿಗಮದ ಅಧ್ಯಕ್ಷ ಹಾಗೂ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಮಾತನಾಡಿ, ತಾಲೂಕಿನಲ್ಲಿ ಹಲವು ಗ್ರಾಮಗಳಲ್ಲಿ ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗಡೆ ಮನೆ ನಿರ್ಮಾಣ ಮಾಡಿಕೊಂಡಿದ್ದು, ಅವುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ವಿದ್ಯುತ್ ಮಾರ್ಗವಿಲ್ಲದೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಹೆಚ್ಚುವರಿ ವಿದ್ಯುತ್ ಮಾರ್ಗ ಕಲ್ಪಿಸಲು ಅನುಮತಿಯೊಂದಿಗೆ ಅನುದಾನ ನೀಡಬೇಕು. ಹಾಗೆಯೇ ಭದ್ರಾ ಮೆಲ್ದಂಡೆ ಯೋಜನೆಯಲ್ಲಿ ನೀರು ಮೇಲೆತ್ತಲು ಹೆಚ್ಚುವರಿಯಾಗಿ 3 ಹೊಸ ಸಬ್ ಸ್ಟೇಷನ್ ಮಂಜೂರು ಮಾಡಿಕೊಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಸಚಿವರು ಸಬ್ ಸ್ಟೇಷನ್ ಮಾಡಲು ಭೂಮಿಮಂಜೂರು ಮಾಡಿಸಿ ಪ್ರಸ್ತಾವನೆ ಸಲ್ಲಿಸಿ, ಕೂಡಲೇ ಅದಕ್ಕೆ ಅನುಮೋದನೆ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಮುಖ್ಯಕಾರ್ಯದರ್ಶಿ ಗೌರವ್‌ಗುಪ್ತ, ಕೆಪಿಟಿಸಿಎಲ್ ಎಂ.ಡಿ.ಪಂಕಜ್ ಪಾಂಡೆ, ಬೆಸ್ಕಾಂ ಎಂಡಿ ಮಹಂತೇಶ್ ಬೀಳಗಿ, ರಾಜ್ಯ ಸರಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಸ್ಥಳೀಯ ಕಾಂಗ್ರೆಸ್ ಮುಖಂಡರು, ಬೆಸ್ಕಾಂ ಅಧಿಕಾರಿಗಳು ಹಾಜರಿದ್ದರು.

ತಾಲೂಕಿನ ನೀರಗುಂದ ಗೇಟ್ ಸಮೀಪದಲ್ಲಿ ನೂತನವಾಗಿ ನಿರ್ಮಿಸಿರುವ ಸೌರವಿದ್ಯುತ್ ಘಟಕ ಪರೀಕ್ಷಾರ್ಥ ಸೋಮವಾರ ಅವರು ಭೇಟಿ ನೀಡಿ ಘಟಕದ ಪರಿಶೀಸಿದ ಇಂಧನ ಸಚಿವ ಕೆ.ಜಿ. ಜಾರ್ಜ್.

ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕಕ್ಕೆ ಕ್ರಮ

ರಾಜ್ಯದಲ್ಲಿ 4 ಲಕ್ಷ ಅಕ್ರಮ ಕೃಷಿ ಪಂಪ್‌ಸೆಟ್‌ಗಳಿಗೆ ರೈತರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ 2 ಲಕ್ಷಕ್ಕೂ ಅಧಿಕ ಪಂಪ್‌ಸೆಟ್‌ಗಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಬಾಕಿ ಉಳಿದಿರುವ ಪಂಪ್‌ಸೆಟ್‌ಗಳಿಗೆ ಶೀಘ್ರದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಸಕ್ರಮಗೊಳಿಸುತ್ತಿವೆ. ಕೃಷಿ ಪಂಪ್ ಸೆಟ್ ಗಳು ವಿದ್ಯುತ್ ಮಾರ್ಗ ಜಾಲದಿಂದ 500 ಮೀಟರ್ ಒಳಗಿದ್ದರೆ, ಫೀಡರ್‌ನಿಂದ ವಿದ್ಯುತ್ ಸಂಪರ್ಕ ಮತ್ತು ಮೂಲಸೌಕರ್ಯ ಕಲ್ಪಿಸಲಾಗುವುದು. 500 ಮೀಟರ್‌ಗಿಂತ ದೂರವಿರುವ ಪಂಪ್‌ಸೆಟ್‌ಗಳಿಗೆ ಸೌರವಿದ್ಯುತ್ ಪಂಪ್‌ಸೆಟ್‌ಗಳನ್ನು ಕಲ್ಪಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಮೂಢನಂಬಿಕೆ ದೂರವಾಗಲು ಶಿಕ್ಷಣ ಸಹಕಾರಿ

ಚಿತ್ರದುರ್ಗ: ಗ್ರಾಮೀಣ ಪ್ರದೇಶದ ಜನರು ಕಂದಾಚಾರ ಮತ್ತು ಮೂಢನಂಬಿಕೆಯಿಂದ ದೂರವಿರಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಭರಮಸಾಗರ ಸಮೀಪವಿರುವ ಬಸವನಶಿವನಕೆರೆ ಗ್ರಾಮದಲ್ಲಿ ಶಿವಯೋಗಿ ಸಿದ್ದರಾಮೇಶ್ವರರ ಕಂಚಿನ ಪ್ರತಿಮೆಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ವಚನಗಳ ಅಭ್ಯಾಸದಿಂದ ವೈಜ್ಞಾನಿಕ ಪ್ರಜ್ಞಾವಂತರಾಗಿ, ಪ್ರಶ್ನಿಸುವ ಮನೋಭಾವದಿಂದ ಜ್ಞಾನ-ವಿಜ್ಞಾನ-ಸುಜ್ಞಾನವಂತರಾಗಿ. ಜೀವದೆಯ ಪರ ಮತ್ತು ಮೂಢನಂಬಿಕೆಗೆ ವಿರುದ್ದವಾದ ಚಿಂತನೆಗಳನ್ನು ಸಿದ್ದರಾಮೇಶ್ವರರ ವಚನಗಳಲ್ಲಿ ಏಕಕಾಲಕ್ಕೆ ಕಾಣಬಹುದು. ಬೇರೆಯವರ ಮನಸ್ಸನ್ನು ನೋಯಿಸಿ ಹಿಂಸೆಯನ್ನುಂಟು ಮಾಡಿ ಸಂತೋಷ ಪಡುವುದು ವಿಘ್ನ ಸಂತೋಷಿಗಳ ಕುಕೃತ್ಯವಾಗಿದೆ. ಇಂತಹ ನಿರ್ಧಯಿಗಳು ನೂರೆಂಟು ಪಾಪ ಕೃತ್ಯಗಳನ್ನು ಎಸಗಿದ ನಂತರ ಪ್ರಾಯಶ್ಚಿತಕ್ಕಾಗಿ ಕಾಶಿಗೆ ಹೋಗಿ ಗಂಗಾ ನದಿಯಲ್ಲಿ ಮುಳುಗಿ ವಿಶ್ವನಾಥನ ದರ್ಶನ ಪಡೆದರೆ ಪಾಪ ಪರಿಹಾರವಾಗುವುದೆ ಎಂದು ಸಿದ್ದರಾಮೇಶ್ವರರು ಪ್ರಶ್ನಿಸಿದ್ದಾರೆಂದು ಹೇಳಿದರು.

ಹುಣ್ಣಿಮೆ ದಿನ ಪೂರ್ಣಚಂದ್ರ ಗಂಗಾನದಿಯಲ್ಲಿ ಥಳಥಳನೆ ಹೊಳೆಯುತ್ತಿರುತ್ತಾನೆ. ಆದರೆ ಚಂದ್ರನ ಜೊತೆ ಆತನ ಕಲೆಗಳು ಎದ್ದು ಕಾಣುತ್ತಿರುತ್ತವೆ. ಧರ್ಮ, ನೀತಿ ತತ್ವಜ್ಞಾನ ಮುಂತಾದವು ಮಾನವರಿಗೆ ಸಂಸ್ಕಾರ ಕೊಟ್ಟು ನಿಜಮಾನವರನ್ನಾಗಿಸುವ ಗುರಿಯನ್ನೆ ಹೊಂದಿವೆ. ಆದರೆ ಧಾರ್ಮಿಕ ವಿಧಿ, ವಿಧಾನಗಳು ಸುಳ್ಳು ಜ್ಯೋತಿಷಿಗಳು ಭವಿಷ್ಯ ಹೇಳುವವರು ಪಾಪ ಪರಿಹಾರ ಮಾಡುತ್ತೇವೆಂದು ನಂಬಿಸಿ ಧರ್ಮದ ಹೆಸರಿನಲ್ಲಿ ಮೋಸ ಮಾಡುತ್ತಾರೆ. ಇದರಿಂದ ಅಪರಾಧಗಳು ಹೆಚ್ಚಾಗುತ್ತವೆ. ಪಾಪಕ್ಕೆ ಪರಿಹಾರವಿದೆ ಎಂದ ಮೇಲೆ ಪಾಪ ಮಾಡುವುದಕ್ಕೆ ಜನರು ಹಿಂಜರಿಯುವುದಿಲ್ಲ. ವಿವಿಧ ಪಾಪ ಕಾರ್ಯಗಳಿಗೆ ತಕ್ಕಂತೆ ಪರಿಹಾರವನ್ನೂ ಹುಸಿ ಧರ್ಮ ಪಂಡಿತರು ಸೂಚಿಸುತ್ತಾರೆ ಎಂದರು.

ಜಿಲ್ಲಾ ಭೋವಿ ಸಂಘದ ಅಧ್ಯಕ್ಷ ಚಿಕ್ಕಂದವಾಡಿ ತಿಪ್ಪೇಸ್ವಾಮಿ, ಮಾಜಿ ಅಧ್ಯಕ್ಷ ಡಿ.ತಿಮ್ಮಣ್ಣ, ಕಾರ್ಯದರ್ಶಿ ಹೆಚ್.ಲಕ್ಷ್ಮಣ್, ಬಸವನಶಿವನಕೆರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಚಂದ್ರಪ್ಪ, ದೇವೇಂದ್ರಪ್ಪ ಆರ್. ಕೆ. ಬಸವರಾಜಪ್ಪ ಬ್ಯಾಲಹಾಳ್, ಈಶ್ವರಪ್ಪ ಬೇಡರಶಿವನಕೆರೆ, ತಿಪ್ಪೇಸ್ವಾಮಿ, ಯಲ್ಲಪ್ಪ ಹಾಗೂ ಬೇಡರ ಶಿವನಕೆರೆ ಬಸವನಶಿವನಕೆರೆ ಗ್ರಾಮಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಶಿವಯೋಗಿ ಸಿದ್ದರಾಮೇಶ್ವರರ ಕಂಚಿನ ಪ್ರತಿಮೆಯನ್ನು ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

> ನಿಜವಾದ ಧರ್ಮ ಜ್ಞಾನಿಗೆ ಈ ಅವನತಿ ಹೊಂದುತ್ತಿರುವ ವ್ಯವಸ್ಥೆಯಲ್ಲಿ ಸ್ಥಾನವೇ ಇಲ್ಲದಂತಾಗಿ ತನ್ನೊಳಗಿನ ಆತ್ಮಸಾಕ್ಷಿ ಹೊರಗಿನ ಜೀವ ಜಗತ್ತಿನ ಬಗೆಗಿನ ಭೂತ ದಯೆ, ಧರ್ಮ, ದರ್ಶನ, ನೀತಿ, ಮೌಲ್ಯ ಮತ್ತು ಸಂಸ್ಕಾರದ ಮೂಲಕ ಪರಮ ಪಾವನವಾಗಿ ಯಾರ ಮನಸ್ಸನ್ನು ನೋಯಿಸದೆ, ಹಿಂಸೆ ಕೊಡದೆ ಬದುಕುವವನೆ ನಿಜವಾದ ಮಾನವ.
> - ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ

ಸದ್ದು ಮಾಡುವ ಬೈಕ್‌ಗಳ ಕಡಿವಾಣಕ್ಕೆ ಮನವಿ

ಚಿತ್ರದುರ್ಗ: ನಗರದಲ್ಲಿ ಜೋರು ಸದ್ದು ಮಾಡುವ ಬೈಕ್‌ಗಳಿಗೆ ಕಡಿವಾಣ ಜತೆಗೆ ಗಾಂಜಾ ವ್ಯಸನಮುಕ್ತವನ್ನಾಗಿಸಲು ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಜಿಲ್ಲಾಡಳಿತ ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವೇದಿಕೆವತಿಯಿಂದ ಸೋಮವಾರ ಮನವಿ ಸಲ್ಲಿಸಲಾಯಿತು.

ಇತ್ತೀಚೆಗೆ ಯುವಪೀಳಿಗೆ ಬೈಕ್‌ಗಳ ಸೈಲೆನ್ಸರ್ ತೆಗೆಸಿ ಹೆಚ್ಚು ಅದರಲ್ಲೂ ಕರ್ಕಶ ಶಬ್ದ ಮಾಡಿಕೊಂಡು ಬೈಕ್ ಚಲಾಯಿಸುತ್ತಿದ್ದಾರೆ. ಕೆಲವರು ಹಾರನ್‌ಗಳನ್ನು ಕೂಡ ಕರ್ಕಶ ಶಬ್ದ ಮಾಡಿಕೊಂಡಿದ್ದಾರೆ. ಶಾಲಾ-ಕಾಲೇಜ್ ಸೇರಿ ಜನಸಂದಣಿ ಪ್ರದೇಶದಲ್ಲಿ ದಿಢೀರನೆ ಕರ್ಕಶ ಶಬ್ದ ಮಾಡಿಕೊಂಡು ಸಾಗುವ ಬೈಕ್‌ಗಳು ಎದೆಯನ್ನೇ ಝಲ್ ಎನಿಸುತ್ತವೆ. ಇದಕ್ಕೆ ಕಡಿವಾಣ ಹಾಕಲು ಗ್ಯಾರೇಜ್ ಮೆಕಾನಿಕ್‌ಗಳ ಸಭೆ ಕರೆದು, ಇಂತಹ ವ್ಯವಸ್ಥೆ ಮಾಡಿಕೊಡದಂತೆ ಕಟ್ಟಪ್ಪಣೆ ಮಾಡಬೇಕು. ಜತೆಗೆ ಅಲ್ಲಲ್ಲಿ ಗಸ್ತು ಪೊಲೀಸರು ಇಂತಹ ಬೈಕ್‌ಗಳನ್ನು ವಶಕ್ಕೆ ಪಡೆದು, ಯುಪೀಳಿಗೆ ಬುದ್ದಿ ಹೇಳಬೇಕು. ಜತೆಗೆ ಅವರ ಕುಟುಂಬದವರಿಗೆ ಮಾಹಿತಿ ನೀಡಬೇಕು. ಸಾಧ್ಯವಾದರೆ ಅಂತಹವರಿಗೆ ದಂಡದ ಜತೆಗೆ ಚಾಲನ ಪರವಾನಗಿ ರದ್ದುಗೊಳಿಸಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಹಳಷ್ಟು ಮಂದಿ ಮಕ್ಕಳನ್ನು ಬೈಕ್‌ಲ್ಲಿ ಕೂರಿಸಿಕೊಂಡು ನಿಧಾನವಾಗಿ ಸಾಗುತ್ತಿದ್ದ ಸಂದರ್ಭದಲ್ಲಿ ದಿಢೀರನೆ ಇಂತಹ ಬೈಕ್ ಪಕ್ಕದಲ್ಲಿ ಕರ್ಕಶ ಶಬ್ದ ಮಾಡಿಕೊಂಡು ಸಾಗುವುದು ಅವಘಡಕ್ಕೆ ಕಾರಣವಾಗುತ್ತದೆ. ಮಕ್ಕಳು ಭಯಭೀತಿಗೆ ಒಳಗಾಗುತ್ತಿದ್ದಾರೆ. ಇನ್ನೂ ವಯೋವೃದ್ಧರ ಪಾಡು ಹೇಳತೀರದು. ಇದರ ಜೊತೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಗಾಂಜಾ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ಸುದ್ದಿ ಆತಂಕ ಹುಟ್ಟಿಸಿದೆ. ಈಗಾಗಲೇ ಪೊಲೀಸ್ ಇಲಾಖೆ ಈ ಕುರಿತು ಜಾಗೃತಿ ಮೂಡಿಸುತ್ತಿದ್ದರೂ, ಕಳ್ಳ ಮಾರ್ಗದಲ್ಲಿ ಗಾಂಜಾ ಸೇವನೆ ನಡೆಯುತ್ತಿದೆ ಎಂಬ ಸುದ್ದಿ ಭಯ ಹುಟ್ಟಿಸುತ್ತಿದೆ.ಆದ್ದರಿಂದ ಗಾಂಜಾ ವ್ಯಸನಿಗಳನ್ನು ವಶಕ್ಕೆ ಪಡೆದು ಅವರಿಗೆ ಆಪ್ತಸಮಾಲೋಚನೆ ಜೊತೆಗೆ ಸಮಗ್ರ ತನಿಖೆ ಮಾಡಿದರೆ ಚೈನ್‌ಲಿಂಕ್ ಮಾದರಿ ದಂಧೆ ಬೆಳಕಿಗೆ ಬರಬಹುದು ಎಂದು ತಿಳಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕರ್ಕಶ ಶಬ್ದ ಮಾಡುವ ಬೈಕ್ ಹಾವಳಿಗೆ ಯುವಪೀಳಿಗೆ ಹೆಚ್ಚು ಆಕರ್ಷಣೆಗೊಂಡು ಸ್ವಯಂ ಸಂಕಷ್ಟಕ್ಕೆ ಸಿಲುಕುತ್ತಿದೆ. ಅನೇಕರು ಶಾಲಾ-ಕಾಲೇಜ್ ಗಳಿಗೆ ಚಕ್ಕರ್ ಹೊಡೆದು ಇಂತಹ ರೈಡಿಂಗ್ ಮಾಡುತ್ತಿದ್ದಾರೆ. ಆದ್ದರಿಂದ ಯುವ ಪೀಳಿಗೆಯ ಹಿತದೃಷ್ಠಿಯಿಂದ ಹಾಗೂ ರಸ್ತೆಯಲ್ಲಿ ಸಮಾಧಾನವಾಗಿ ಸಾಗುವ ಸಾರ್ವಜನಿಕರ ಹಿತದೃಷ್ಟಿಯಿಂದ ಸದ್ದು ಮಾಡುವ ಬೈಕ್‌ಗಳ ಚಾಲನೆಗೆ ಕಡಿವಾಣ ಹಾಕಬೇಕು ಎಂದು ಜಿಲ್ಲಾಡಳಿತ ಹಾಗೂ ಜಿಲ್ಲಾ ರಕ್ಷಣಾಧಿಕಾರಿಗಳಲ್ಲಿ ವಿನಂತಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾಹಿತಿ ಹಕ್ಕು ಬಳಕೆದಾರರಾದ ವೇದಮೂರ್ತಿ, ಎಂ.ಬೀಮಸಮುದ್ರ, ಜ್ಯೋತಿ ಲಕ್ಷ್ಮೀ, ವಿನೋದಮ್ಮ ಎಂ.ರಾಮಪ್ಪ ಭಾಗವಹಿಸಿದ್ದರು.

ಸದ್ದು ಮಾಡುವ ಬೈಕ್‌ಗಳಿಗೆ ಕಡಿವಾಣ ಜತೆಗೆ ಗಾಂಜಾ ವ್ಯಸನಮುಕ್ತವನ್ನಾಗಿಸಲು ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಚಿತ್ರದುರ್ಗ ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವೀಸ್ ರವರನ್ನು ನಾಗಪುರದ ಪ್ರವಾಸಿ ಮಂದಿರದಲ್ಲಿ ಮಾಜಿ ಕೇಂದ್ರ ಸಚಿವರಾದ ಡಾ.ಜೆಎಂಸಿದ್ದೇಶ್ವರ ರವರು ಭೇಟಿಯಾಗಿ ಶುಭ ಕೋರಿದರು. ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಯುವ ಮುಖಂಡರಾದ ಅನಿತ್ ಕುಮಾರ್ ಜಿ ಎಸ್, ಪೂನ ಕ್ಷೇತ್ರದ ಶಾಸಕರಾದ ರಾಹುಲ್ ಸುಭಾಷ್ ಕೂಲ್ ಮುಖಂಡರಾದ ವೈಭವ್ ರವರು ಉಪಸ್ಥಿತರಿದ್ದರು.

ಡ್ರಾಯಿಂಗ್ ಪರೀಕ್ಷೆ: ಫಲಿತಾಂಶ

ಚಿತ್ರದುರ್ಗ: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ನಡೆದ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಹಾಜರಾದ 110 ವಿದ್ಯಾರ್ಥಿಗಳಲ್ಲಿ ಆರು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಪ್ರಥಮ ದರ್ಜೆಯಲ್ಲಿ 40 ದ್ವಿತೀಯ ದರ್ಜೆಯಲ್ಲಿ 46 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು. ಎಂಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.90 ರಷ್ಟು ಫಲಿತಾಂಶ ಬಂದಿರುವುದಕ್ಕೆ ಉಪ ಪ್ರಾಂಶುಪಾಲರು ಚಿತ್ರಕಲಾ ಶಿಕ್ಷಕರು ಅಭಿನಂದಿಸಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭ ಜ.4ಕ್ಕೆ

ದಾವಣಗೆರೆ: ಜಗಳೂರಿನ ಜೆಎಂ ಇಮಾಂ ಶಾಲೆಯ ಆವರಣದದಲ್ಲಿ ಜಗಳೂರಿನ ಜೆ.ಎಂ ಇಮಾಂ ಟ್ರಸ್ಟ್ ಸಹಯೋಗದಲ್ಲಿ 6ನೇ ವರ್ಷದ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜ. 4ರಂದು ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ ಎಂದು ಜೆಎಂ ಇಮಾಂ ಪ್ರಶಸ್ತಿ ಸಲಹಾ ಸಮಿತಿಯ ಅಧ್ಯಕ್ಷ ಎನ್.ಟಿ. ಯರ‍್ರಿಸ್ವಾಮಿ ತಿಳಿಸಿದರು.

ಹರೆಕಳ ಹಾಜಬ್ಬ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಜನಪರ ಹೋರಾಟಗಾರ ಡಾ.ಬಂಜಗೆರೆ ಜಯಪ್ರಕಾಶ್ ಉದ್ಘಾಟನೆ ನೆರವೇರಿಸಲಿದ್ದು, ಹರೇಕಳ ಹಾಜಬ್ಬ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜೆಎಂ ಇಮಾಂ ಟ್ರಸ್ಟಿನ ಗೌರವಾಧ್ಯಕ್ಷ ಜೆ.ಕೆ. ಹುಸೇನ್ ಮಿಯ್ಯಾ ಅಧ್ಯಕ್ಷತೆ ವಹಿಸುವರು ಎಂದರು. ಅತಿಥಿಗಳಾಗಿ ಜಗಳೂರು ಶಾಸಕ ಚಿಮ್ಮನಹಟ್ಟಿ ಬಿ. ದೇವೇಂದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಈ. ಹಾಲಮೂರ್ತಿ, ಜಗಳೂರು ತಾಲೂಕಿನ ರಾಜ್ಯ ಪಿಂಜಾರ್, ನಧಾಪ್ ಸಂಘದ ಅಧ್ಯಕ್ಷ ಜಲೀಲ್ ಸಾಬ್, ಉದ್ಯಮಿ ಎಚ್.ಇ. ದಾದಾ ಖಲಂದರ್, ಟ್ರಸ್ಟಿನ ಅಧ್ಯಕ್ಷ ಎಸ್. ಎಚ್. ಮಸ್ತಾನ್ ಸಾಬ್, ಕಾರ್ಯದರ್ಶಿ ಜೆ.ಬಿ. ಖಲೀಲ್ ಸಾಬ್, ಖಜಾಂಚಿ ಜೆ.ಕೆ. ಮಹಮ್ಮದ್ ಶರೀಫ್ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸಮಾರಂಭದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು ಎಂದು ತಿಳಿಸಿದರು. ಡಾ.ದಾದಾಪೀರ್ ನವಿಲೇಹಾಳ್, ಎಸ್.ಹಾಲಪ್ಪ, ಖಾಸೀಂಸಾಬ್ ಇದ್ದರು.

ಉಚಿತ ಆರೋಗ್ಯ ತಪಾಸಣೆ ಜನರಿಗೆ ಸಹಕಾರಿ

ಗಣೇಶ ಸದನದಲ್ಲಿ ಭಾನುವಾರ ಹೃದಯ, ಕೀಲು ಮೂಳೆ ಹಾಗೂ ಮೊಣಕಾಲು ಬದಲಿ ಉಚಿತ ತಪಾಸಣೆ ಶಿಬಿರ ನಡೆಯಿತು.

ಹೊಸದುರ್ಗ: ಪಟ್ಟಣದ ಗಣೇಶ ಸದನ ಟ್ರಸ್ಟ್ ವತಿಯಿಂದ ಬೆಂಗಳೂರಿನ ನಾರಾಯಣ ಹೆಲ್ತ್ ಅವರ ಸಹಯೋಗದಲ್ಲಿ ಪಟ್ಟಣದ ಗಣೇಶ ಸದನದಲ್ಲಿ ಭಾನುವಾರ ಹೃದಯ, ಕೀಲು ಮೂಳೆ ಹಾಗೂ ಮೊಣಕಾಲು ಬದಲಿ ಉಚಿತ ತಪಾಸಣೆ ಶಿಬಿರ ನಡೆಯಿತು.

ಡಾ.ಬಿ.ಎನ್.ಪ್ರಕಾಶ್ ಸೇರಿದಂತೆ ಹಲವು ತಜ್ಞ ವೈದ್ಯರು ಶಿಬಿರದಲ್ಲಿ ಭಾಗವಹಿಸಿದ್ದರು. ವಿವಿಧ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ನೂರಾರು ರೋಗಿಗಳು ಆಗಮಿಸಿ, ರೋಗ ನಿವಾರಣೆಗೆ ತಜ್ಞರಿಂದ ಅಗತ್ಯ ಸಲಹೆ ಪಡೆದರು. ಹೆಚ್ಚಿನ ಆರೋಗ್ಯ ಸಮಸ್ಯೆ ಇರುವವರಿಗೆ ಶಸಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ವೈದ್ಯರು ಸಲಹೆ ನೀಡಿದರು.

ಶಿಬಿರದ ಅಧ್ಯಕ್ಷತೆ ವಹಿಸಿದ್ದ ಗಣೇಶ ಸದನ ಟ್ರಸ್ಟ್ ಹಾಗೂ ಸೀತಾರಾಘವ ಬ್ಯಾಂಕ್ ಅಧ್ಯಕ್ಷರಾದ ಹಂಜಿಶಿವಸ್ವಾಮಿ ಮಾತನಾಡಿ, ಆರ್ಥಿಕವಾಗಿ ಸಬಲರಾದವರು ಆರೋಗ್ಯದಲ್ಲಿ ಏನೇ ಸಮಸ್ಯೆಯಾದರೆ ತಕ್ಷಣ ದೊಡ್ಡ ಆಸ್ಪತ್ರೆಗಳಿಗೆ ಹೋಗಿ ಅಗತ್ಯ ಚಿಕಿತ್ಸೆ ಪಡೆಯುತ್ತಾರೆ. ಆದರೆ ಬಡವರು ಆರೋಗ್ಯ ತಪಾಸಣೆಗೆ ಹಣವಿಲ್ಲದೇ ಅಗೆಯೇ ದಿನದೂಡುತ್ತಿದ್ದಾರೆ. ಹಾಗಾಗಿ ಇಂತಹ ಜನರಿಗೆ ಅನುಕೂಲ ಆಗಲೆಂದು ನಮ್ಮ ಟ್ರಸ್ಟ್ ವತಿಯಿಂದ ಪ್ರತಿತಿಂಗಳು ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರ ನಡೆಸುತ್ತಿದ್ದು, ಇದರಿಂದ ತಾಲೂಕಿನ ಸಾಕಷ್ಟು ಜನರಿಗೆ ಅನುಕೂಲ ಆಗಿರುವ ಬಗ್ಗೆ ಸಾರ್ವಜನಿಕರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗಿರುವುದು ತುಂಬಾ ಸಂತಸ ತಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಟ್ರಸ್ಟ್ ಉಪಾಧ್ಯಕ್ಷ ಡಿ. ಆದಿರಾಜಯ್ಯ, ಬಾಹುಬಲಿ, ಕುಷ್ ಕುಮಾರ್, ಮಂಜುನಾಥ್ ಸೇರಿ ನಿರ್ದೇಶಕರು ಹಾಜರಿದ್ದರು.

ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ಆಗ್ರಹ

ದಾವಣಗೆರೆ: ರಾಜ್ಯದಲ್ಲಿ ಟೈಲರ್ ಕಲ್ಯಾಣ ಮಂಡಳಿ ಜಾರಿ ತಂದರೆ ಸರಕಾರ ಬೊಕ್ಕಸದ ಹಣ ಕೊಡಬೇಕಾಗಿಲ್ಲ ಎಂದು ಎಐಟಿಯುಸಿ ರಾಜ್ಯ ಕಾರ್ಯದರ್ಶಿ, ಟೈಲರ್ ಫೆಡರೇಶನ್‌ನ ರಾಜ್ಯ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ಹೇಳಿದರು. ಸೋಮವಾರ ನಗರದ ಜಯದೇವ ಸರ್ಕಲ್‌ನಿಂದ ಪ್ರತಿಭಟನೆ ಮೆರವಣಿಗೆ ಮೂಲಕ ಟೈಲರ್‌ಗಳು ಪ್ರತಿಭಟನೆ ನಡೆಸಿ ಮಾತನಾಡಿ, ಟೈಲರ್ ಕಲ್ಯಾಣ ಮಂಡಳಿಗೆ ಟೆಕ್ಸ್‌ಟೈಲ್ಸ್ ಮಿಲ್ಸ್, ಗಾರ್ಮೆಂಟ್ಸ್, ಬಟ್ಟೆ ಅಂಗಡಿಗಳು ಹಾಗೂ ಬಟ್ಟೆ ಹೊಲಿಗೆಗೆ ಪೂರಕವಾಗಿ ಉತ್ಪನ್ನ ಮಾಡುವ ಸರಕುದಾರ ಉತ್ಪಾದಕರಿಂದ ಶೇ. 2 ಸೆಸ್ ಸಂಗ್ರಹ ಮಾಡುವ ಮೂಲಕ ಬರುವ ಬಜೆಟ್‌ನಲ್ಲಿ ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ತಂದು ರಾಜ್ಯದ್ಯಾಂತ ಇರುವ ಸುಮಾರು 15 ಲಕ್ಷ ಟೈಲರ್‌ಗಳ ಕುಟುಂಬಗಳಿಗೆ ನೆರವಾಗಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ಘೋಷಣೆ ಕೂಗುತ್ತಾ ಅಶೋಕ ರಸ್ತೆ, ಗಾಂಧಿ ಸರ್ಕಲ್, ಹಳೆ ನಿಲ್ದಾಣ ರಸ್ತೆ ಮೂಲಕ ಸಾಗಿ ಎಸಿ ಕಚೇರಿ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳು, ಕಾರ್ಮಿಕ ಮಂತ್ರಿಗಳು ಮತ್ತು ಜವಳಿ ಖಾತೆ ಸಚಿವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಉಪಾಧ್ಯಕ್ಷ ರಮೇಶ್ ಸಿ ದಾಸರ, ಸಂಚಾಲಕ ಗದಿಗೇಶ ಪಾಳೆದ, ಸರೋಜಾ, ಚನ್ನಪ್ಪ ಗುಮ್ಮನೂರು, ಐರಣಿ ಚಂದ್ರು, ಮಹಮದ್ ರಫೀಕ್, ಟೈಲರ್ ಮುಖಂಡರಾದ ನಾಗರತ್ನಮ್ಮ, ಸ್ಮಿತಾ, ಉಷಾ, ಬಸಮ್ಮ, ದಯಾನಂದ, ರಾಮು, ಅಶೋಕ, ಮರಿಯಪ್ಪ, ನಾಗರತ್ನಮ್ಮ, ಕಾವೇರಿ, ವೀಣಾ, ಪುಷ್ಪಾ ಇದ್ದರು.

ಚಿತ್ತ ವಿಹಾರ

ನಮಸ್ಕಾರಕ್ಕಿರಲಿ ಪ್ರತಿ ನಮಸ್ಕಾರ

ನಾವು ಯಾರನ್ನಾದರೂ ಭೇಟಿಯಾದಾಗ ಮೊದಲು ಪರಸ್ಪರ ನಮಸ್ಕಾರ ಮಾಡಿದ ನಂತರವೇ ಉಭಯ ಕ್ಷೇಮ ಸಮಾಚಾರವನ್ನು ಮಾಡುತ್ತೇವೆ. ಆದರೆ, ಕೆಲವರು ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಮಾಡದೇ, ತಮ್ಮ ಅಹಂಕಾರವನ್ನು ಪ್ರದರ್ಶನ ಮಾಡುವರು! ಇದರಿಂದ ವ್ಯಕ್ತಿಯ ಘನತೆಗೆ ಪೆಟ್ಟು ಬಿದ್ದು ಸಮಯಾವಕಾಶ ಸಿಕ್ಕಾಗ ಅದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ.

ದುರ್ಯೋಧನನು ಪಾಡವರೊಡನೆ ಪ್ರತಿಕಾರಮಾಡದ ಭೀಷ್ಮ ಪಿತಾಮಹರನ್ನು ಅವಮಾನಿಸಿದಾಗ, ತಕ್ಷಣ ಪಾಂಡವರನ್ನು ಕೊಲ್ಲುತ್ತೇನೆ ಎಂದು ಭೀಷ್ಮರು ನಿರ್ಧರಿಸುತ್ತಾರೆ. ಇವರ ಸಾಮರ್ಥ್ಯಗಳ ಬಗ್ಗೆ ಅರಿವಿದ್ದ ಪಾಂಡವರ ಶಿಬಿರದಲ್ಲಿ ಆತಂಕ ಸೃಷ್ಟಿಯಾಯಿತು. ತಡಮಾಡದೆ ಶ್ರೀಕೃಷ್ಣನು ದ್ರೌಪದಿಯೊಂದಿಗೆ ನೇರವಾಗಿ ಭೀಷ್ಮ ಪಿತಾಮನ ಶಿಬಿರವನ್ನು ತಲುಪುತ್ತಾನೆ. ದ್ರೌಪತಿಗೆ 'ಒಳಗೆ ಹೋಗಿ, ಭೀಷ್ಮ ಅಜ್ಜನಿಗೆ ನಮಸ್ಕರಿಸು' ಎಂದು ಹೇಳಿ ಶಿಬಿರದ ಹೊರಗೆ ನಿಲ್ಲುತ್ತಾನೆ. ದ್ರೌಪದಿ ಒಳಗೆ ಹೋಗಿ ಪಿತಾಮಹ ಭೀಷ್ಮನಿಗೆ ನಮಸ್ಕರಿಸಿದಾಗ ಅವರು 'ಅಖಂಡ ಸೌಭಾಗ್ಯವತಿ ಭವ' ಎಂದು ಆಶೀರ್ವದಿಸಿ ಕಳುಹಿಸುತ್ತಾರೆ. ಆಗ ಶ್ರೀ ಕೃಷ್ಣನು ದ್ರೌಪದಿಯನ್ನು ದ್ದೇಶಿಸಿ ನೋಡು 'ನೀನು ಹೋಗಿ ಭೀಷ್ಮರಿಗೆ ನಮಸ್ಕಾರ ಸಲ್ಲಿಸಿದ ಪ್ರತಿಯಾಗಿ ಪಾಂಡವರಿಗೆ ಜೀವದಾನ ಲಭಿಸಿದಂತಾಯಿತು' ಎನ್ನುತ್ತಾನೆ. ಇದೇ ರೀತಿ, ಪಾಂಡವರು ಮತ್ತು ಕೌರವರು ಪರಸ್ಪರ ಗೌರವದಿಂದ ನಮಸ್ಕರಿಸಿದ್ದರೆ, ಮಹಾಭಾರತ ಯುದ್ಧವೇ ಸಂಭವಿಸುತ್ತಿರಲಿಲ್ಲ, ಅಪಾರ ಪ್ರಾಣ ಹಾನಿಯೂ ನಡೆಯುತ್ತಿರಲಿಲ್ಲ! ನಮಸ್ಕಾರವು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು ಪರಸ್ಪರ ಗೌರವ ಹೆಚ್ಚಿಸಿ ದ್ವೇಷವನ್ನು ಧ್ವಂಸ ಮಾಡಿ, ಸುವಿಚಾರದ ಸದ್ವರ್ತನೆಗೆ ದಾರಿ ಮಾಡಿಕೊಡುತ್ತದೆ. ಎನಗಿಂತ ಕಿರಿಯರಿಲ್ಲ ಎಂಬ ಭಾವದೊಂದಿಗೆ ಬೀಗುವು ದನ್ನು ಬದಿಗೆ ಸರಿಸಿ ಬಾಗಿ ನಮಸ್ಕಾರ ಮಾಡಿದರೆ, ಪ್ರತಿಯಾಗಿ ಶುಭಹಾರೈಕೆಯೇ ಸಿಗುತ್ತದೆ. ನಮ್ಮೊಂದಿಗೆ ನಿತ್ಯ ವ್ಯವಹರಿಸುವವರೊಂದಿಗೆ ನಮಸ್ಕಾರದ ವಿನಿ ಮಯ ಮಾಡಿಕೊಳ್ಳದೇ ಗಂಟು ಮೋರೆ ಹಾಕಿಕೊಂಡು ಬೀಗದೆ, ಪರಸ್ಪರ ನಮಸ್ಕಾರದೊಂದಿಗೆ ಸದ್ವಿಚಾರದ ಮಾಧುರ್ಯದ ಮಾತುಗಳನ್ನಾಡುತ್ತ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಂಡು ನಮಗೊಪ್ಪಿತ ಕಾರ್ಯದಲ್ಲಿ ನಿರತವಾದರೆ ನೆಮ್ಮದಿ ಮನೆ ಮಾಡುವುದಲ್ಲವೇ?

• ರವಿ ಕಂಗಳ, ಕೊಂಕಣಕೊಪ್ಪ

ಕೆಲಸದ ನಡುವೆ ಮನೋರಂಜನೆ!

ಸಮಕಾಲೀನ ಸಂದರ್ಭದಲ್ಲಿ ಯಾರಿಗೂ ಸಮಯವಿಲ್ಲ ಎನ್ನುವುದು ಸರ್ವ ಸಮ್ಮತ ಸಂಗತಿಯಂತೆ ತೋರುತ್ತಿದೆ. ಹಗಲಿರುಳೂ ಏಣಿಸದೆ ಏನಾದರೊಂದು ಕೆಲಸದಲ್ಲಿ ತೊಡಗಿಕೊಂಡಿರುವುದು ಇತ್ತೀಚಿಗೆ ಸಹಜವೆನಿಸತೊಡಗಿದೆ. ಇದು ದೇಹದ ಬಳಲಿಕೆ ಮಾತ್ರ ಸೀಮಿತವಾಗದೇ ಮನಸ್ಸನ್ನು ಕೂಡ ತುಂಬ ಹೈರಾಣಾಗಿಸುತ್ತದೆ. ಕೆಲವು ಬಾರಿ ಖಿನ್ನತೆಗೂ ದಾರಿ ಮಾಡಿಕೊಡುತ್ತದೆ. ಇದಕ್ಕಾಗಿಯೇ ನಮಗೆ ಬಿಡುವಿರದ ಕೆಲಸದ ನಡುವೆ ಮನೋರಂಜನೆ ನಮಗೆ ಅಗತ್ಯವೆನಿಸುತ್ತದೆ. ಬಹುದೊಡ್ಡ ಉದ್ಯಮಿಯೊಬ್ಬರು ಸದಾ ಕಾಲವೂ ಕ್ರಿಯಾಶೀಲತೆಯಿಂದಲೇ ಇರುತ್ತಿದ್ದರು. ಅವರ ಪುಟಿಯುವ ಉತ್ಸಾಹ, ನಿತ್ಯವೂ ರಚನಾತ್ಮಕ ಚಿಂತನೆ, ಮುಖದ ಮೇಲೆ ಎಂದೂ ಕರಗದ ಮಂದಹಾಸ, ಎಲ್ಲರೊಡನೆ ಸೌಜನ್ಯದಿಂದಲೇ ಬೆರೆಯುವ ಅವರ ವ್ಯಕ್ತಿತ್ವ ಇತರರಿಗೆ ತೀರ ಆಶ್ಚರ್ಯವನ್ನುಂಟು ಮಾಡಿತ್ತು. ಒಂದೊಮ್ಮೆ ಅವರ ಸಂದರ್ಶನ ಏರ್ಪಾಟಾಗಿತ್ತು. ಸಂದರ್ಶಕ ಅವರ ನಿರಂತರವಾಗಿ ಚಟುವಟಿಕೆಯಲ್ಲಿ ನಿರತವಾಗಿರುವ ಹಿಂದಿನ ರಹಸ್ಯವೇನು? ಎಂದು ಕೇಳಿದ. ಆಗ ಉದ್ಯಮಿ 'ಅಂಥದ್ದೇನು ಬಹುದೊಡ್ಡ ರಹಸ್ಯವಿಲ್ಲ. ತುಂಬ ದಣಿವೆನಿಸಿದಾಗ ನಾನು ಮನರಂಜನೆಯ ಮೊರೆ ಹೋಗುತ್ತೇನೆ. ಮನರಂಜನೆಯು ನನ್ನ ಸಮತೋಲನದ ಬದುಕಿಗೆ ಆಸರೆಯಾಗಿದೆ. ಅದು ನನ್ನಲ್ಲಿ ಪುನರ್ನವಿಕೃತ ಆಶಾಭಾವವನ್ನು ಹೊತ್ತು ತರುತ್ತದೆ' ಎಂದು ಹೇಳಿದರು. ಬಿಡುವಿರದ ಕೆಲಸಗಳಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ಬಳಲಿಕೆಗೆ ಒಂದಷ್ಟು ಮನೋರಂಜನೆ ದಿವ್ಯೌಷಧಿಯಂತೆ ಕೆಲಸ ಮಾಡಬಲ್ಲದು. ಒಳ್ಳೆಯ ಮನಸ್ಸು ಖಂಡಿತವಾಗಿಯೂ ದೇಹದ ಸ್ವಾಸ್ಥ್ಯವನ್ನು ಸುಧಾರಿಸಬಲ್ಲದು. ದೇಹ ಮತ್ತು ಮನಸ್ಸುಗಳ ನಡುವೆ ಸಾಮರಸ್ಯವನ್ನು ಸಾಧಿಸಬಲ್ಲದು. ಕೆಲವು ಬಾರಿ ನಮ್ಮ ಬೆಳವಣಿಗೆಗೆ ಪೂರಕವಾಗದ ಮನೋರಂಜನೆ ವ್ಯರ್ಥ ಕಾಲಹರಣಕ್ಕೆ ಕಾರಣವಾಗುತ್ತದೆ. ಅತಿಯಾದ ಮನೋರಂಜನೆಯ ಅಪಾಯಕಾರಿಯೂ ಹೌದು. ಇದನ್ನು ಗಮನದಲ್ಲಿಟ್ಟುಕೊಂಡು, ಕೆಲಸದ ನಡುವೆ ಮನರಂಜನೆ ಪಡೆಯಬೇಕು!

• ಮಹಾದೇವ ಬಸರಕೋಡ

ಹನಿ ಮಳೆ

ಒಡನಾಡಿ

ಸಪ್ಪಗೆ ಇರುವ ಇಡ್ಲಿ
ಗಳಿಸುವುದು ರುಚಿ
ಸಾಂಬಾರ ಚಟ್ನಿಯಲ್ಲಿ ಹೊರಳಾಡಿ
ನಮ್ಮ ಬದುಕೂ ಅಷ್ಟೆ
ನೀರಸ ದಿನಚರಿ ಕಳೆಗಟ್ಟಲು
ಆಗಬೇಕು ಸನ್ಮಿತ್ರರ ಒಡನಾಡಿ

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಬೆಂಗಳೂರು ಮಂಗಳವಾರ 31 | 12 | 2024
@vishwavaninews
ವಿಶ್ವವಾಣಿ

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಹಸುರು ಬಣ್ಣದ ಸಂತೆ

ಒಂದು ಮನೆ, ಒಂದು ಬದುಕು, ಒಂದು ಪರಿಸರ ಮತ್ತು ಅಲ್ಲಿನ ಸಕಲ ಚರಾಚರ ಜೀವಿಗಳು ಒಂದೇ ಲಯಕ್ಕೆ ಒದಕ್ಕೊಂಡು ಪೂರಕವಾಗಿ, ಪ್ರೇರಕವಾಗಿ ಹೊಂದಿಕೊಂಡು ಒಂದು ಬಣ್ಣದ ಕ್ಯಾನ್‌ವಾಸ್ ಮಾಡಿಟ್ಟಂತಿದೆ ಕವಿಶೈಲ. ಅದರ ಶಕ್ತಿ, ಚೈತನ್ಯ, ಆತ್ಮ ಅಸ್ಮಿತೆ ಎಲ್ಲವೂ ಕುವೆಂಪು! ಇದನ್ನೇ ಕುವೆಂಪು ತೆರೆ ಮೇಲೆ ತೆರೆಯೆದ್ದು ಹರಿಯುತಿದೆ ಗಿರಿಪಂಕ್ತಿ ಕಣ್ದಿಟ್ಟಿ ಹೋಹನ್ನೆಗಂ. ಚಿತ್ರ ಬರೆದಂತೆ, ಕಡುಹಸಿರು, ತಿಳಿಹಸಿರು, ಹಸುರುಬಣ್ಣದ ಸಂತೆ ಎಂದು ಬಣ್ಣಿಸಿರಬಹುದು.

ಇದೊಂದು ಪ್ರಕೃತಿ ಶಾಲೆ

• ತುರುವೇಕೆರೆ ಪ್ರಸಾದ್

ಶಾಲಾದಿನಗಳಲ್ಲಿ ಪ್ರವಾಸ ಹೋಗಿದ್ದ ಮಸುಕು ನೆನಪು. ಅದು ಬಿಟ್ಟರೆ ಹಲವು ಬಾರಿ ತೀರ್ಥಹಳ್ಳಿಯ ಮೂಲಕವೇ ಹಾದು ಹೋದರೂ ಕವಿಶೈಲವನ್ನು ಮತ್ತೆ ಕಣ್ತುಂಬಿಕೊಳ್ಳುವ ಭಾಗ್ಯ ದಕ್ಕಿರಲಿಲ್ಲ. ಕೊನೆಗೆ, ಚಳಿಗಾಲದ ಒಂದು ಬೆಳ್ಳಂಬೆಳಿಗ್ಗೆ ಕುವೆಂಪು ಅವರ ಜನ್ಮಭೂಮಿ, ಕರ್ಮಭೂಮಿ, ತಪೋಭೂಮಿ ಎಲ್ಲವೂ ಆಗಿದ್ದ ಆ ಪರಮಪವಿತ್ರ ಪುಣ್ಯಕ್ಷೇತ್ರಕ್ಕೆ ಹೊರಟೇಬಿಟ್ಟವು.

ಕನ್ನಡ ಮನಸುಗಳ ಮೇಲೆ ಅಪಾರ ಪ್ರಭಾವ ಬೀರಿದ ಕುವೆಂಪು ಅವರ ಜನ್ಮಸ್ಥಳಕ್ಕೆ ಒಂದು ಭೇಟಿ.

ನಾವು ಕವಿಶೈಲಕ್ಕೆ ಭೇಟಿ ನೀಡಿದ ದಿನ ಆ ಗುಡ್ಡದ ಮೇಲೆ ಯಾರೊಬ್ಬ ಪ್ರವಾಸಿಗನೂ ಇರಲಿಲ್ಲ. ಮೊರೆವ ಗಾಳಿಯಲ್ಲಿ ಅನಂತ ಮೌನದಲ್ಲಿ ಕುವೆಂಪು ಅವರ ಭಾವಗಳೆಲ್ಲಾ ಅಲೆ ಅಲೆಯಾಗಿ ಅಲ್ಲಿ ಸುಳಿದಾಡಿದಂತಾಯಿತು. ನಗರದ ಜಂಜಡದ ಬದುಕಿನ ತಲ್ಲಣ,ಯೋಚನೆಗಳೆಲ್ಲಾ ಈ ಅಲೆಯಲ್ಲಿ ಲೀನವಾಗಿ ಒಂದು ಅದ್ಭುತ ಜಗತ್ತಿಗೆ ತೆರೆದುಕೊಂಡ ಅನುಭವವಾಯಿತು. ಆ ಅದಮ್ಯ, ಅನನ್ಯ ಪ್ರಶಾಂತತೆಯ ನಡುವೆಯೇ ರೂಪ ರೂಪಗಳನ್ನು ದಾಟಿ, ನಾಮಕೋಟಿಗಳನ್ನು ಮೀಟಿ ಅನಿಕೇತನದತ್ತ ಮನಸ್ಸು, ಚೇತನ ತುಡಿಯುತ್ತಿದೆಯೇನೋ ಎನಿಸಿ ರೋಮಾಂಚನವಾಯಿತು. ಆದರೂ ಎದೆಯ ಬಿರಿಯೆ ಬಾವದೀಟಿ ಚೇತನ ಮಾತ್ರ ಅನಿಕೇತನವಾಗದೆ ಅಲ್ಲೇ ಆ ಕವಿಶೈಲದಲ್ಲೇ ಹಕ್ಕಿಯಾಗಿಯೋ, ಬಳ್ಳಿಯಾಗಿಯೋ, ಹೂವಾಗಿಯೋ, ಒಂದು ಕಲ್ಲಾಗಿಯೋ ನೆಲೆಕಂಡುಕೊಳ್ಳಬೇಕು ಎನಿಸಿತು. ಕವಿಸಮಾಧಿ ಪಕ್ಕ ಒಂದಷ್ಟು ಹೊತ್ತು ನಿಂತಿದ್ದು, ಕುಳಿತದ್ದೇ ಬದುಕಿನ ಒಂದು ಅನನ್ಯ ಧನ್ಯತೆ!

ನೀಲಗಿರಿ

ಬೆಳಗಿನಲಿ ಬೈಗಿನಲಿ ಮಾಗಿಯಲಿ ಚೈತ್ರದಲಿ ಮಳೆಯಲ್ಲಿ ಮಂಜಿನಲಿ ಹಗಲಿನಲಿ ರಾತ್ರಿಯಲಿ ದೃಶ್ಯವೈವಿಧ್ಯಮಂ ರಚಿಸಿ ನೀಂ ಭುವನದಲಿ ಸ್ವರ್ಗವಾಗಿಹೆ ನನಗೆ ನೀಲಗಿರಿ, ಬ್ರಹ್ಮಗಿರಿ ಎಂದಿದ್ದಾರೆ ಕುವೆಂಪು. ಇಂತಹ ಆನಂದಾನುಭೂತಿಯನ್ನು ಅನುಭವಿಸುವುದು ಅದೆಷ್ಟು ಜನ್ಮದ ಪುಣ್ಯವೋ? ಅದಕ್ಕೆ ಬೇಕಾದ ಏಕಾಂತ, ಮಾನಸಿಕ ತಯಾರಿ ಎಲ್ಲವೂ ಸುಲಭವಾಗಿ ದಕ್ಕುವಂತಹುದಲ್ಲ.

ಕವಿಶೈಲವೊಂದು ಪ್ರಕೃತಿ ಶಾಲೆ. ಪ್ರಕೃತಿಯನ್ನು ಅನುಭವಿಸುವುದಷ್ಟೇ ಅಲ್ಲ, ಪ್ರಕೃತಿಯೊಂದಿಗೆ ಅನುಸಂಧಾನ ಮಾಡಿಕೊಂಡು ಜೀವಿಸುವುದನ್ನು ಈ ರಮಣೀಯ ತಾಣ ಕಲಿಸುತ್ತದೆ. ಪ್ರಕೃತಿಯ ಅನಂತ ವೈಭವಗಳನ್ನು, ವಿಸ್ಮಯಗಳನ್ನು, ನಿಗೂಢತೆಗಳನ್ನು ತೆರೆದಿಡುತ್ತಾ ಹೋಗುತ್ತದೆ. ಮೇಲ್ನೋಟಕ್ಕೆ ದೃಷ್ಟಿ ಹಾಯಿಸಿದಷ್ಟೂ ಕಣ್ಮನ ತಣಿಸುವ ಹಸಿರು, ಮರ, ಗಿಡ ಹೂವುಗಳ ಚಿತ್ತಾರ, ದುಂಬಿಗಳ ಜೇಂಕಾರ, ಹರಿಯುವ ನದಿ ತೊರೆಗಳ ನಿನಾದದ ಕಲ್ಪನೆಯ ಸಾಕಾರಕ್ಕೆ ಕವಿಶೈಲ ಸಾಕ್ಷಿಯಾಗುತ್ತದೆ. ಇದೊಂದು ಸದಾ ಕಾಡುವ ನಯನ ಮನೋಜ್ಞ ಸೊಬಗಿನ ಮೆರವಣಿಗೆ. ಹಾಗೇ ಈ ಪ್ರಕೃತಿಯೊಳಗಿನ ವ್ಯಾಪಕತೆ, ಅಚಲವಾಗಿ ನಿಂತ ಬಂಡೆ ಕಲ್ಲುಗಳು, ಮತ್ತೂ ಮತ್ತೂ ಎದೆ ತುಂಬುತ್ತಲೇ ಗಾಢವಾಗುವ ಮೌನ, ಪದೇ ಪದೇ ಕವಿ ಗುಂಗಿನದೇ ಧ್ಯಾನ, ಮನುಷ್ಯನ ಬದುಕಿನ ಶೋಧನೆಯ ಪರಿಮಿತಿಯನ್ನು ವಿಸ್ತರಿಸುತ್ತಾ ಹೋಗುತ್ತದೆ. ಇದೇ ಕೊನೆ, ತುದಿ ಎಂದಾಗಲೆಲ್ಲಾ ಆ ಸೀಮಾರೇಖೆಯ ಲಂಘಿಸಿ ಮತ್ತೊಂದು ಅಚ್ಚರಿ ಮೈದಾಳುತ್ತಾ ಹೋಗುತ್ತದೆ. ಭಾವಲಹರಿಯ ರಿಂಗಣದಲ್ಲಿ ಮನಸ್ಸು ನಲಿದಾಡುತ್ತದೆ. ತಹತಹಿಸುವ ಆತ್ಮ ಆಧ್ಯಾತ್ಮದ ಅವಿಚ್ಛಿನ್ನ ಸಚ್ಚಿದಾನಂದ ಸ್ವರೂಪದಲ್ಲಿ ಅನಂತ ಶಾಂತಿಯನ್ನು ಕಂಡುಕೊಳ್ಳುತ್ತದೆ.

ಇಲ್ಲಿನ ಕಲ್ಲು, ಬಂಡೆಗಳೂ ಜೀವ ತುಂಬಿಕೊಂಡು ಮಾತಾಡುತ್ತವೆ. ಭಾವದಲೆಗಳು ನನ್ನ ರಕ್ತನಾಳದಲ್ಲಿ ಮೊರೆಯುವುವು ಸೌಂದರ್ಯದಾನಂದಭರದಲ್ಲಿ.. ಎಂಬ ಕುವೆಂಪು ಅವರ ಕಾವ್ಯಸೆಲೆ ಎಂತಹವರನ್ನೂ ಜೀವನ್ಮುಖಿಯಾಗಿಸುತ್ತವೆ.

ಕುವೆಂಪು ಸಮಾಧಿಗೆ ಕೈ ಮುಗಿದು ಹಿಂದಿನ ಹಸಿರು ಹಾಸಿನ ಮೇಲೆ ನಡೆಯುವಾಗಿ ನಾನು ಹಸಿರು ಹುಲ್ಲಿನ ಬಯಲ ಮೇಲೆ ಕುಳಿತು ಆ ಮೇಘ ವಿರಚಿತ ಯಕ್ಷಲೋಕದಲ್ಲಿ ತಿರುಗಾಡಿದೆ. ಒಬ್ಬನೆಯೆ ಆ ಹೊನ್ನಿನ ಹೊಳಲಿನಲ್ಲಿ ಮನ ಬಂದಂತೆ ಸುತ್ತಿದೆಂಬ ಕುವೆಂಪು ಅವರ ಮಾತುಗಳು ನೆನಪಾಯಿತು. ಕುವೆಂಪು ಇಲ್ಲೇ ಈ ಪ್ರಕೃತಿಯ ಮದ್ಯೆ ಜೀವಂತವಾಗಿದ್ದಾರೆ ಎಂದು ಗಾಢವಾಗಿ ಅನಿಸಿಬಿಟ್ಟಿತು. ಈ ವಿಶ್ವವೆಲ್ಲವನು ನಿನ್ನಂತೆ ನಿಂತಲ್ಲೇ ಕಲ್ಪನೆಯ ತೆಕ್ಕೆಯಲಿ ತಬ್ಬಿ ಸಾಯಲು ಬಲ್ಲೆ! ಆದರೂ ನನಗಿನ್ನೂ ನಿನ್ನಿರವು ಬಂದಿಲ್ಲ, ಅದಕಾಗಿ ತಪವಗೈಯುತಿಹೆನು! ಎಂದಿದ್ದರು ಕುವೆಂಪು. ಇಂತಹ ಸಾಕ್ಷಾತ್ಕಾರವಾದರೂ ನಮಗೆ ಆದರೆ ಅದೇ ಸಾರ್ಥಕತೆ, ಬದುಕು ಧನ್ಯ!

ಕರ್ಮಯೋಗ ಜೀವನ ವಿಧಾನ

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಕೃಷ್ಣ ಹೇಳಿದಂತೆ ಕರ್ಮ ಮಾಡುವ ಹಕ್ಕು ನಮಗೆ ಇದೆಯೇ ಹೊರತು ಕರ್ಮಫಲದ ಮೇಲಲ್ಲ (2.47). ನಮಗೆ ಪ್ರಿಯವಾದ ಒಬ್ಬ ವ್ಯಕ್ತಿಗೆ ಶಸ್ತ್ರ ಚಿಕಿತ್ಸೆ ಮಾಡಿಬೇಕಾದ ಸಂದರ್ಭ ಬಂದಾಗ ನಾವು ಸಮರ್ಥ ಸರ್ಜನ್‌ನ್ನು ಹುಡುಕುತ್ತೇವೆ. ಅವನ ಅರ್ಹತೆ, ಸಾಮರ್ಥ್ಯ ಹಾಗೂ ನಡತೆ ಅದರ ಯಶಸ್ಸು ಹಾಗೂ ಅವನು ಅನಾವಶ್ಯಕವಾಗಿ ಶಸ್ತ್ರ ಚಿಕಿತ್ಸೆ ಮಾಡುವುದಿಲ್ಲ ಎಂಬ ಭರವಸೆಯನ್ನು ನೀಡುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ನಿಜವಾದ ಕರ್ಮ ಯೋಗಿ ಆಗಿರುವ ಸರ್ಜನ್‌ನ್ನು ನಾವು ಹುಡುಕುತ್ತೇವೆ. ಈ ಎರಡು ಸಂಗತಿಗಳು ಈ ಶ್ಲೋಕವನ್ನು ಹೆಚ್ಚು ತಿಳಿದುಕೊಳ್ಳುವಲ್ಲಿ ನಮಗೆ ಸಹಾಯ ಮಾಡುತ್ತವೆ.

ನಮಗೆ ಸೇವೆ ನೀಡುವ ಎಲ್ಲರೂ ಕರ್ಮಯೋಗಿಗಳಾಗಿರಬೇಕು. ಹಾಗೂ ನಾವು ಬಯಸುವ ಉತ್ತಮ ಫಲಿತಾಂಶ ನಮಗೆ ಸಿಗಬೇಕೆಂದು ನಾವು ನಿರೀಕ್ಷಿಸುತ್ತೇವೆ. ಇದೆ ಸಮತ್ವ ತತ್ವವನ್ನು ನಾವು ನಮಗೆ ಅನ್ವಯಿಸಿಕೊಂಡರೆ ನಾವು ದಿನನಿತ್ಯ ಇತರರಿಗೆ ಸೇವೆ ಮಾಡುವಾಗ ನಾವೂ ಕೂಡ ಕರ್ಮಯೋಗಿ ಗಳಾಗಿರಬೇಕು. ನಮ್ಮ ಕಾರ್ಯದಲ್ಲಿ ಹಾಗೂ ನಮ್ಮ ಕೌಟುಂಬಿಕ ವ್ಯವಹಾ ರಗಳಲ್ಲಿ ಮಾಡುವ ಪ್ರತಿ ಕೆಲಸದಲ್ಲಿ ಉತ್ತಮವಾದದ್ದನ್ನೇ ಮಾಡಬೇಕೆಂಬುದು ಈ ಶ್ಲೋಕದ ಅರ್ಥ. ಕರ್ಮಯೋಗದಲ್ಲಿ ನಾವಿಡುವ ಸಣ್ಣ ಹೆಜ್ಜೆಯೂ ಕೂಡ ನಮ್ಮನ್ನು ಸಮತ್ವದ ಸನಿಹ ಒಯ್ಯುತ್ತದೆ. ಅದೇ ಒಂದು ಆನಂದ. ಯಾರಿಗಾ ದರೂ ನಾವು ನಮ್ಮ ಉತ್ತಮ ಸೇವೆಯನ್ನು ಮಾಡಲು ಸಮರ್ಥರಿರುವಾಗ (ಅವರನ್ನು ಮತ್ತೆ ಭೇಟಿಯಾಗುವ ಸಂದರ್ಭ ವಿಲ್ಲದಿದ್ದರೂ) ನಾವು ನಿಶ್ಚಿತವಾಗಿ ಕರ್ಮ ಯೋಗಿಯಾಗುವ ಮಾರ್ಗದಲ್ಲಿ ಇರುತ್ತೇವೆ.

ನಿಜವಾಗಿ ಕರ್ಮಫಲದ ಬಗ್ಗೆ ತಲೆಕೆಡಿಸಿಕೊಳ್ಳದೆ ಕರ್ಮದಲ್ಲಿ ನಾವು ನಮ್ಮನ್ನು ಆಳವಾಗಿ ತೊಡಗಿಸಿ ಕೊಂಡಾಗ ಕಾಲವು ಅಪ್ರಸ್ತುತ ವಾಗಿರುವ ಕಾಲಾತೀತ ಸ್ಥಿತಿಯನ್ನು ತಲುಪುತ್ತೇವೆ. ಮೇಲಿನ ಉದಾಹರಣೆ ಯನ್ನು ತೆಗೆದುಕೊಂಡರೆ ನಾವು ಶಸ್ತ್ರ ಚಿಕಿತ್ಸೆ ಕೊಠಡಿಯ ಹೊರಗೆ ಕಾಯುತ್ತಿರುವಾಗ ಸಮಯವು ನಿಧಾನವಾಗಿ ಕಳೆದಂತೆ ಅನಿಸುತ್ತದೆ. ಆದರೆ ಕರ್ಮಯೋಗಿ ಸರ್ಜನ್‌ನಿಗೆ ಕಾಲದ ಪರಿವೆಯೇ ಇರುವುದಿಲ್ಲ; ಅಂದರೆ ಅವನ ವಿಷಯದಲ್ಲಿ ಕಾಲ ನಿಂತಿರುತ್ತದೆ. ಕರ್ಮದ ಫಲದ ಬಗ್ಗೆ ಇರುವ ನಮ್ಮ ಆಸೆಯು ದುಃಖಕ್ಕೆ ಕಾರಣ ವಾಗಿರುವುದರಿಂದ ಆ ದುಃಖವೆಂಬ ಮರವನ್ನು ಬುಡಮೇಲು ಮಾಡಬೇಕೆಂದು ಕೃಷ್ಣ ಹೇಳುತ್ತಾನೆ.

ಕಾರ್ಟರ್ ಪುರಿ!

ನಿನ್ನೆ ನಿಧನರಾದ ಅಮೆರಿಕದ ಅಧ್ಯಕ್ಷರಾಗಿದ್ದ ಶತಾಯುಷಿ ಜಿಮ್ಮಿ ಕಾರ್ಟರ್ ನೆನಪಿನಲ್ಲಿ, ನಮ್ಮ ದೇಶದಲ್ಲಿ ಒಂದು ಹಳ್ಳಿಯನ್ನು ಮರುನಾಮಕರಣ ಮಾಡಲಾಗಿತ್ತು. ಅದೇ 'ಕಾರ್ಟರ್ ಪುರಿ'! ಹರ್‍ಯಾಣಾದ ದೌಲತ್‌ಪುರ್ ನಾಸಿರಾಬಾದ್‌ನ್ನು 'ಕಾರ್ಟರ್ ಪುರಿ' ಎಂದು ಮರು ನಾಮಕಾರಣ ಮಾಡಿದ್ದು 1978ರಲ್ಲಿ! ಆ ವರ್ಷ ಜಿಮ್ಮಿ ಕಾರ್ಟರ್ ಅವರು ಭಾರತಕ್ಕೆ ಭೇಟಿ ನೀಡಿದ್ದರು; ಅಂದಿನ ಪ್ರಧಾನಿ, ಜನತಾಪಕ್ಷದ ಮೊರಾರ್ಜಿ ದೇಸಾಯಿಯವರ ಜತೆ, ಆ ಹಳ್ಳಿಗೆ ಭೇಟಿ ನೀಡಿದ್ದರು. ಕಾರಣ, 1960ರ ದಶಕದಲ್ಲಿ ಜಿಮ್ಮಿ ಕಾರ್ಟರ್ ಅವರ ತಾಯಿಯು ಆ ಹಳ್ಳಿಗೆ ಭೇಟಿ ನೀಡಿದ್ದರಂತೆ. ಜಿಮ್ಮಿ ಕಾರ್ಟರ್ ಅವರು 3.1.1978ರಂದು ಆ ಹಳ್ಳಿಗೆ ಭೇಟಿ ನೀಡಿ, ಆಗ ಅಪರೂಪದ ವಸ್ತು ಎನಿಸಿದ್ದ ಒಂದು ಟಿ.ವಿ.ಯನ್ನು ಆ ಹಳ್ಳಿಗೆ ಕೊಡುಗೆಯಾಗಿ ನೀಡಿದ್ದರು! ಆ ಹಳ್ಳಿಯ ಜನರು ಜಿಮ್ಮಿ ಕಾರ್ಟರ್ ಮತ್ತು ಆತನ ಪತ್ನಿಗೆ ಸಿಂಧೂರ ಹಚ್ಚಿ, ಹೂವಿನ ಹಾರ ಹಾಕಿ ಸನ್ಮಾನಿಸಿದ್ದರು! ಯಾರಿಗೆ ಗೊತ್ತು, ಮುಂದೊಂದು ದಿನ, ನಮ್ಮ ದೇಶದ ಅಧ್ಯಕ್ಷ ಅಥವಾ ಪ್ರಧಾನಿಯ ಹೆಸರನ್ನು ಅಮೆರಿಕದ ಯಾವುದಾದರೂ ಊರಿಗೆ ಮರುನಾಮಕರಣ ಮಾಡಿದರೂ ಮಾಡಬಹುದು!



• ಶ್ರೀರಾಜ್ ವಕ್ವಾಡಿ

ಐದು ನಾಟಕಗಳ ವೀಕ್ಷಣೆ

ಶ್ರೀಸ್ತಿನ ಆಯೋಜನೆ ಮತ್ತು ಕಲಾ ಸೇವೆ ಮೇಳೈಸಿದ 'ಸುವರ್ಣ ಜೇಸೀಸ್ ನಾಟಕೋತ್ಸವ'ದಲ್ಲಿ ಪ್ರದರ್ಶನಗೊಂಡ ನಾಟಕಗಳು ವೈವಿಧ್ಯ ಮಯ ಎನಿಸಿ, ಮನ ಸೆಳೆದವು. ಸುವರ್ಣ ಸಂಭ್ರಮದ ಭಾಗವಾಗಿ ಜೆಸಿಐ ಕುಂದಾಪುರ, ಈ ನಾಟಕೋತ್ಸವವನ್ನು ಆಯೋಜಿಸಿತ್ತು.

> ಪುಟ್ಟ ಪಟ್ಟಣ ವೊಂದರಲ್ಲಿ ಇತ್ತೀಚೆಗೆ ಐದು ನಾಟಕಗಳು ಪ್ರದರ್ಶನಗೊಂಡು, ಎಲ್ಲರ ಗಮನ ಸೆಳೆದವು.

ದಟ್ಸ್ ಆಲ್ ಯುವರ್ ಆನರ್

ಶಶಿರಾಜ್ ಕಾವೂರು ರಚನೆ, ನಿರ್ದೇಶನದ, ರಂಗ ಸಂಗಾತಿ ಪ್ರತಿಷ್ಠಾನ ರಿ. ಮಂಗಳೂರು ಪ್ರಸ್ತುತಪಡಿಸಿದ ನಾಟಕ 'ದಟ್ಸ್ ಆಲ್ ಯುವರ್ ಆನರ್' ನಾಟಕೋತ್ಸವದ ಮೊದಲ ನಾಟಕ. ನ್ಯಾಯಾಧೀಶ ಮನೆಯಿಂದ ಕೋರ್ಟ್‌ಗೆ ಸಂಚರಿಸುತ್ತಿರವಾಗ ಒಬ್ಬ ಸಾಮಾನ್ಯನಿಂದ ಉಂಟಾದ ಸಣ್ಣ ಅಡ್ಡಿ, ದೂರು, ವಿಚಾರಣೆ, ಅಧಿಕಾರದ ದರ್ಪ ಹೀಗೆ ಕೆಲವು ಎಳೆಗಳನ್ನು ಆಧರಿಸಿಕೊಂಡು ರಚಿಸಿದ ಒಳ್ಳೆಯ ಅಭಿವ್ಯಕ್ತಿ. ನ್ಯಾಯಾಧೀಶನನ್ನೂ ಕಟಕಟೆಗೆ ಹತ್ತಿಸಬಹುದು ಎನ್ನುವುದನ್ನು ನಾಟಕ ಬಹಳ ಗಂಭೀರವಾಗಿ ಹೇಳಿದೆ. ದೊಡ್ಡ ರಂಗಸಜ್ಜಿಕೆ ಇಲ್ಲದೇ ಇದ್ದರೂ, ಇಂತಹದ್ದೊಂದು ವಿಷಯವನ್ನು ಸಮಾಜಕ್ಕೆ ತಲುಪಿಸುವ ಪ್ರಯತ್ನ ಯಶಸ್ವಿಯಾಗಿ ತಂಡ ಮಾಡಿದೆ. ರಂಗದ ಮೇಲೆ ಸ್ವಲ್ಪ ಚುರುಕು ಕಡಿಮೆ ಆಯ್ತೇನೋ ಎಂಬ ಭಾವ ಮೂಡಿದರೂ ಇದು ಒಳ್ಳೆಯ ಪ್ರಸ್ತುತಿ.

ಬರ್ಬರಿಕ

ಬಿ. ಎಸ್. ರಾಮ್ ಶೆಟ್ಟಿ ಹಾರಾಡಿ ನಿರ್ದೇಶನದ, ಶಶಿರಾಜ್ ಕಾವೂರು ರಚನೆಯ, ಭೂಮಿಕಾ ಹಾರಾಡಿ ಪ್ರಸ್ತುತಪಡಿಸಿದ ನಾಟಕ 'ಬರ್ಬರಿಕ'. ಪುರಾಣ ಕಥೆಯ ಮರು ಓದಿಗೆ ಅಥವಾ ಮರು ಚಿಂತನೆಗೆ ಈ ನಾಟಕ ಸಹಾಯ ಮಾಡುತ್ತದೆ. ಉಳ್ಳವರು, ಇಲ್ಲದವರ ಮೇಲೆ ತೋರಿಸುವ ದರ್ಪ ವನ್ನು ಬಹಳ ಚೆನ್ನಾಗಿ ಈ ಪೌರಾಣಿಕ ಕಥೆಯ ಮೂಲಕ ವಿಡಂಬನಾತ್ಮಕವಾಗಿ ತೋರಿಸಿದ್ದಾರೆ. ಕಾಡು ಜನರ ಒಂದು ಮೇಳದ ಪ್ರವೇಶ ಗೀತೆಯ ಮೂಲಕ ಆರಂಭಗೊಳ್ಳುವ ಬರ್ಬರಿಕ ನಾಟಕ, ಕಲಾವಿದರ ಅಭಿನಯಕ್ಕಿಂತ ಹೆಚ್ಚಾಗಿ ವೈಭವದ ರಂಗಸಜ್ಜಿಕೆ, ಹಿನ್ನೆಲೆ ಸಂಗೀತ, ಗಾಯಕಿಯ ಧ್ವನಿ, ಸಾಹಿತ್ಯದ ಮೂಲಕವೇ ಸೆಳೆಯುತ್ತದೆ.

ಮಾಲತೀ ಮಾಧವ

ಈ ವರ್ಷದ ನೀನಾಸಂ ತಿರುಗಾಟದ ನಾಟಕಗಳಲ್ಲಿ 'ಮಾಲತೀ ಮಾಧವ' ಒಂದು. ಭವಭೂತಿ ಕವಿಯ ಸಂಸ್ಕೃತ ನಾಟಕವನ್ನು ಕನ್ನಡಕ್ಕೆ ರೂಪಾಂತರಿಸಿ, ನಿರ್ದೇಶಿಸಿರುವುದು ಅಕ್ಷರ ಕೆ.ವಿ. ಅವರು. ಮಾಲತೀ, ಮಾಧವ ತಮ್ಮ ಸಮಾಗಮಕ್ಕೆ ಎದುರಾಗುವ ಅನೇಕ ಕಷ್ಟ, ದುಃಖ, ದುಮ್ಮಾನಗಳನ್ನು ಎದುರಿಸಿ, ಮೀರಿ, ದಾಟಿ ಕಡೆಗೂ ಮಿಲನಗೊಳ್ಳುವ ಕಥೆ. ಗತ ಚರಿತ್ರೆಯ ಹೆಜ್ಜೆಗಳೊಡನೆ, ಭವಿಷ್ಯದ ಹಾದಿಯ ಕಾಣ್ಕೆಯನ್ನು ವಿಶಾಲ ಸಮಾಜದ ಮುಂದೆ ಪ್ರೀತಿ, ಪ್ರೇಮ, ಪ್ರಣಯ, ಮಾಯೆಯ ರಸವತ್ತತೆಯ ಮೂಲಕ ತೋರಿಸಬಹುದಾದ ಈ ಕಥೆ ತುಸು ಪೇಲವ ಎನ್ನುವ ಹಾಗೆ ಮೂಡಿಬಂದಿರುವುದು, 'ನೀನಾಸಂ ನಾಟಕ' ಎಂದು ದೊಡ್ಡ ನಿರೀಕ್ಷೆಯಲ್ಲಿ ಬಂದ ರಂಗಾಸಕ್ತರಿಗೆ ತುಸು ನಿರಾಸೆ ಮೂಡಿಸಿತು ಎನಿಸಿತು. ರಂಗದ ಮೇಲೆ ತಂದಿರುವ ರೀತಿಯೇ ಸ್ವಲ್ಪ ಸಂಕೀರ್ಣವಾಯ್ತೇನೋ ಅನ್ನಿಸುತ್ತದೆ. ಭೂತ, ಪ್ರೇತ, ಪಿಶಾಚಿಗಳು, ನರಬಲಿ, ಮಾನವ ಮಾಂಸ ಮಾರಾಟ ಇವೆಲ್ಲಾ, ಪ್ರೀತಿ, ಪ್ರೇಮದ ನಡುವೆ ಬಂದಿರುವ ಅನಗತ್ಯ ಸಂಗತಿಗಳು ಎಂದು ಕಾಣಿಸುತ್ತವೆ. ಮತ್ತವು ಪ್ರಸ್ತುತವೂ ಅಲ್ಲ. ಈ ನಾಟಕದ ಸಂಭಾಷಣೆಗಳು ಮತ್ತದನ್ನು ಕಲಾವಿದರು ಪ್ರಕಟಗೊಳಿಸಿದ ರೀತಿ, ಹಿನ್ನೆಲೆ ಸಂಗೀತ, ರಂಗದ ಮೇಲೆ ಕಲಾವಿದರ ಚುರುಕುತನ, ಭಾವಾಭಿವ್ಯಕ್ತಿ, ಬೆಳಕಿನ ವಿನ್ಯಾಸ ನಿಜಕ್ಕೂ ಅದ್ಭುತ.

ಅಂಕದ ಪರದೆ

ಈ ವರ್ಷದ ನೀನಾಸಂ ಪ್ರಸ್ತುತಿಯ ಮತ್ತೊಂದು ನಾಟಕ 'ಅಂಕದ ಪರದೆ'. ಅಭಿರಾಮ್ ಭಡ್ಕಂಕರ್ ರಚನೆಯ ಮರಾಠಿ ನಾಟಕವನ್ನು ಕನ್ನಡಕ್ಕೆ ತಂದವರು ಜಯಂತ್ ಕಾಯ್ಕಿಣಿ. ವಿದ್ಯಾನಿಧಿ ವನಾರಸೆ ನಿರ್ದೇಶಿಸಿದ್ದಾರೆ. ತಿಳಿ ಹಾಸ್ಯ, ವ್ಯಂಗ್ಯ, ವಿಡಂಬನೆಯೊಂದಿಗೆ ನಗಿಸುತ್ತಲೇ ವೃದ್ಧಾಪ್ಯದ ಜೀವನವನ್ನು ಹೆಣೆಯುತ್ತಾ ಸಾಗುವ ನಾಟಕ, ವೃದ್ಧಾಪ್ಯ ಎಂಬ ಗೋಳು ಅಥವಾ ಮರುಕ ಹುಟ್ಟಿಸದೆ ಮನೋಜ್ಞವಾಗಿ, ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ವಿಭಿನ್ನ ಹಿನ್ನೆಲೆಯವರು ವೃದ್ಧಾಶ್ರಮವನ್ನು ಸೇರಿದ ನಂತರದ ಜೀವನವನ್ನು ನಾಟಕ ಕಟ್ಟಿಕೊಡುತ್ತದೆ. ಈ ನಾಟಕದೊಳಗೆಯೇ ಒಂದು ನಾಟಕವಿದೆ. ಅದೇ ಈ ನಾಟಕದ ಸ್ವಾರಸ್ಯ. ಚಳುವಳಿ, ರಂಗಭೂಮಿ, ಸಿದ್ಧಾಂತ, ಚರ್ಚೆ ಸಂವಾದ ಹೀಗೆ ಅನೇಕ ಸಂಗತಿಗಳನ್ನು ನಾಟಕ ಮುಂದಿಡುತ್ತದೆ.

ದಶಾನನ ಸ್ವಪ್ನ ಸಿದ್ಧಿ

ಭಳಿರೇ ವಿಚಿತ್ರಂ ನಟನೆಯ ಈ ನಾಟಕ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಯಿಂದ ಆಯ್ದ ಭಾಗವನ್ನು ಆಧರಿಸಿದೆ. ಸರಳ ರಂಗಸಜ್ಜಿಕೆಯ ಈ ನಾಟಕ, ಪೂರ್ತಿ ಹಳೆಗನ್ನಡದಲ್ಲೇ ಇರುವ ಕಾರಣಕ್ಕೆ ಜನರೊಂದಿಗೆ ಕನೆಕ್ಟ್ ಆಗುವಲ್ಲಿ ತುಸು ವಿಫಲಗೊಂಡಿತು ಎನ್ನಬಹುದು. ಅಭಿನಯ ನಿಜಕ್ಕೂ ಸ್ತುತ್ಯಾರ್ಹ. ಪ್ರದರ್ಶನಕ್ಕೆ ಮುನ್ನಾ ಕಥೆಯನ್ನು ಪೂರ್ತಿಯಾಗಿ ವಿವರಿಸಿ ಹೇಳುವ ಅನಿವಾರ್ಯ ಬಂದಿರುವುದೇ ನಾಟಕ ತಂಡದ ಸೋಲು. ಅವಿನಾಶ್ ರೈ, ಶ್ವೇತಾ ಅರೆಹೊಳೆ ಅವರ ನಟನೆ ಅದ್ಭುತ. ಆದರೆ 'ರಾಮಾಯಣ ದರ್ಶನಂ' ಬಗ್ಗೆ ಗೊತ್ತಿದ್ದವರಿಗೆ ಮಾತ್ರ ನಾಟಕ ಅರ್ಥವಾಗುತ್ತದೆ. ಹಿನ್ನೆಲೆ ಸಂಗೀತ ಮನ ಸೆಳೆಯಿತು. ಮಂಜು ಕೊಡುಗು ಅವರ ನಿರ್ದೇಶನ ಚೆನ್ನಾಗಿದೆ. ಶ್ವೇತ ಅರೆಹೊಳೆ ನಟಿಸಿದ ಅಷ್ಟೂ ಪಾತ್ರಗಳ ವಸ್ತ್ರ ವಿನ್ಯಾಸ ಗಮನ ಸೆಳೆಯುವಂತಿದ್ದವು. ಗ್ರಾಮೀಣ ಪ್ರದೇಶದಿಂದ ಸುತ್ತುವರಿದಿರುವ ಕುಂದಾಪುರದಲ್ಲಿ ಪ್ರದರ್ಶನಗೊಂಡ ಈ ನಾಟಕಗಳು ಸಾಹಿತ್ಯ, ಕಲೆ, ರಂಗ ಪ್ರದರ್ಶನದ ಕುರಿತು ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟವು.



ಮನ ಹಗುರ ಬದುಕು ಸುಂದರ..

• ಡಾ. ಎನ್ ಜಯರಾಮ ಶೆಟ್ಟಿ

ಮನಸ್ಸು ಮತ್ತು ದೇಹದ ಅವಿನಾಭಾವ ಸಂಬಂಧದ ಕುರಿತು ಅಧ್ಯಯನ ನಡೆಸಿದವರು ಭಾರತ ಸಂಜಾತ, ಅಮೆರಿಕ ವಾಸಿ ಡಾ. ದೀಪಕ್ ಚೋಪ್ರಾರವರು. ಅವರ 'ಸವೆನ್ ಸ್ಪಿರಿಚ್ವಲ್ ಲಾಸ್ ಆಫ್ ಸಕ್ಸೆಸ್' ನಲ್ಲಿ ಬರುವ 'ಲಾ ಆಫ್ ಡಿಟ್ಯಾಚ್ ಮೆಂಟ್' ನಮ್ಮ ಬದುಕಿಗೆ ಪೂರಕವಾಗಿರುವ ಆಧ್ಯಾತ್ಮಿಕ ನಿಯಮವಾಗಿದೆ. ಬದುಕಿಗೆ ಎಲ್ಲವೂ ಬೇಕು ಆದರೆ ಯಾವುದೂ ಅಷ್ಟೊಂದು ಬೇಕಿಲ್ಲ, ಕ್ರಮೇಣ ಲೌಕಿಕ ವಸ್ತು, ಒಡವೆ, ವೈಭವಗಳಿಂದ ಬೇರಾಗುವುದು ಬೇಕಿದೆ ಎನ್ನುವ ಪ್ರತಿಪಾದನೆಯನ್ನು ಅಲ್ಲಿ ಅವರು ಮಾಡಿದ್ದಾರೆ.

ರೈಲಿನ ಬೋಗಿಗಳು ಒಂದೇ ಆಗಿಲ್ಲ, ಅವುಗಳು ಒಂದಕ್ಕೊಂದು ಜೋಡಿಸಿಕೊಂಡಿವೆ! ಬೇಕಾದಾಗ ಒಟ್ಟಾಗಿ ಸಾಗಿಸಿ, ಬೇಡವೆಂದಾಗ ಕಳಚಿಕೊಳ್ಳಲೂ ಬಹುದು: ನಮ್ಮ ಬದುಕಿನ ಬಂಡಿ ಹಾಗೆಯೆ, ಏಕತೆ-ಪ್ರತ್ಯೇಕತೆ, ಹಚ್ಚಿಕೊಳ್ಳುವುದು-ಕಳಚಿಕೊಳ್ಳವುದು ಎಲ್ಲವೂ ಬದುಕಿನಲ್ಲಿ ಇವೆ ಮತ್ತು ನಾವು ಅವಕ್ಕೆ ಸಿದ್ಧರಾಗಿರಬೇಕು. ಇದ್ದೂ ಇಲ್ಲದಂತೆ ಬದುಕುವ ಭಾವ ಇಂದಲ್ಲ ನಾಳೆ, ನಿಧಾನವಾಗಿ ನಾವು ರೂಢಿಸಿಕೊಳ್ಳುವುದೇ ನಮ್ಮ ಆಯ್ಕೆಯಂತೆ. ಅದಕ್ಕೆ ಬೇಕಾಗುವ ಕ್ರಮ-ಉಪಕ್ರಮಗಳಾವುವು?

ಮಾನಸಿಕ ಮತ್ತು ಭಾವನಾತ್ಮಕ ಸಿದ್ಧತೆ

ಮನಸ್ಸು ಬಯಕೆಗಳ ಆಗರ. ಕಂಡದ್ದೆಲ್ಲವನ್ನೂ ಬಯಸುವ ಮಾಯಾವಿ. ಮನಸ್ಸನ್ನು ಹದಗೊಳಿಸುವ, ಮುದಗೊಳಿಸುವ ಮೂಲಕ ಅದನ್ನು ಹಿಡಿತಕ್ಕೆ ತರಬೇಕು. ದೇಹಕ್ಕೆ ಬೇಕಾಗುವಂತೆ ಮನಸ್ಸಿಗೂ, ಬೇಕು- ಬೇಡಗಳ ತುಲನ ಮಾಡುವ ಶಕ್ತಿಯನ್ನು ತುಂಬಿಸಬೇಕು. ಚಂಚಲ ಮತ್ತು ವಿವ್ಹಲ ಮನಸ್ಸಿಗೆ ಆಯಾಮ ಮತ್ತು ಸ್ಥಿರತೆ ಸಿಗುವುದು ದೈನಂದಿನ ಪ್ರಾರ್ಥನೆಯಿಂದ. ಭಾವನಾತ್ಮಕ ಬುದ್ಧಿವಂತಿಕೆ ಎನ್ನುವ ಪ್ರಿಸಂ ಮೂಲಕ ನಮ್ಮ ಮನಸ್ಸಿನ ಆಟ, ವೈಪರೀತ್ಯ ಮತ್ತು ವೈರುಧ್ಯಗಳನ್ನು ನಾವೇ ಗುರುತಿಸಬೇಕು.

ಸರಳ ಬದುಕು

ಸರಳತೆ ತರುವಷ್ಟು ನಿರಾಳತೆ ಮತ್ತು ನಿರುಮ್ಮಳತೆ ಬೇರೆ ಯಾವುದರಿಂದ ಸಾಧ್ಯ? 'ಮಿತವಿರಲಿ ಮನಸ್ಸಿನುದ್ವೇಗದಲಿ, ಭೋಗದಲಿ, ಅತಿಬೇಡವೆಲ್ಲಿಯುಂ' ಎನ್ನುವ ಕಗ್ಗವಾಣಿಯಂತೆ, ಎಲ್ಲದರಲ್ಲೂ ಒಂದು ಮಿತಿಯನ್ನು ಹಾಕಿಕೊಂಡು ಬದುಕೋಣ. ಮಾರುಕಟ್ಟೆಗೆ ಹೋಗುವಾಗ ಕೈಯಲ್ಲಿ ಸಾಮಾನು ಚೀಟಿ ಒಯ್ಯುವುದೇನೊ ಸರಿ, ಆದರೆ ಬರುವಾಗ ಹೆಚ್ಚುವರಿ ಅದೆಷ್ಟೊ ಸರಕುಗಳನ್ನು ಹೇರಿಕೊಂಡು ಬರುತ್ತೇವಲ್ಲ, ಅದನ್ನು ನಾವು ಗಮನಿಸಿ ಹಿಡಿತಕ್ಕೆ ಬರಬೇಕು. ಅರಿಸ್ಟಾಟಲ್ ಪ್ರತಿದಿನ ಚೀಲ ಹಿಡಿದು ಮಾರುಕಟ್ಟೆಗೆ ಹೋಗುತ್ತಿದ್ದರಂತೆ, ಆದರೂ ಹಾಗೆಯೆ ಖಾಲಿ ಚೀಲ ಹಿಡಿದು ಮನೆಗೆ ಬರುತ್ತಿದ್ದರಂತೆ. ಆತನ ಮಿತ್ರರು ಹೀಗೆ ಯಾಕೆ ಎಂದು ಪ್ರಶ್ನಿಸಿದಾಗ, 'ನಾನು ಪ್ರತಿದಿನ ಹೋಗಿ ಅದೆಷ್ಟೋ ವಸ್ತುಗಳನ್ನು ನೋಡುತ್ತೇನೆ. ಆ ವಸ್ತುಗಳಿಲ್ಲದೆಯೇ ಬದುಕಬಹುದು ಎಂಬ ತೀರ್ಮಾನಕ್ಕೆ ಅಲ್ಲೇ ಬಂದು, ಖಾಲಿ ಕೈಯಲ್ಲಿ ಸಂತೋಷದಿಂದ ಮರಳುತ್ತೇನೆ' ಎಂದುತ್ತರಿಸಿದನಂತೆ. ತೆಗೆದುಕೊಳ್ಳುವ ಭಾರ, ಬೇಸರಗಳಿಗಿಂತ ಹಾಗೆಯೇ ಬರುವುದು ಹಗುರವಾಗಿದ್ದರೆ, ಹಾಗೆ ಯಾಕಿರಬಾರದು!

ಅಹಂ ನಿಂದ ಆಹಾ ದೆಡೆಗೆ

ಹೆಚ್ಚು ಹೆಚ್ಚು ಪಡೆದು, ಮೇಲೆ ಮೇಲೆ ಏರಿ, ಇತರರ ಮೇಲೆ ನಿಯಂತ್ರಣ ಸಾಧಿಸಿ ಮುಂದೇನು ಎನ್ನುವ ಪ್ರಶ್ನೆಗೆ ಉತ್ತರ ಇದೆಯೆ? ಎಲ್ಲಿ ಉತ್ತರ ಸಿಗದು ಅಲ್ಲಿ ಇರಬಹುದಾದುದು ಕೇವಲ ಗೊಂದಲ ಮತ್ತು ಗೋಜಲು. ಅಲ್ಲಿಂದಲೇ ನಮ್ಮ ಅಹಂ ಉಳಿದೆಲ್ಲವುಗಳನ್ನು ಮೀರಿ ಬೆಳೆದು ಮಿತಿಮೀರಿದ ನಡವಳಿಕೆಗೆ ಹೇತುವಾಗುತ್ತದೆ. ಇನ್ನೂ ಹೆಚ್ಚು 'ಸಂಗ್ರಹ' ಪಿಪಾಸು ಆಗಿ ಮನಸ್ಸು ಬೆಳೆಯಬಹುದು. ನಾವು ಆ ಹಂತದಲ್ಲೇ ಮನಸ್ಸನ್ನು ಬೆಳೆಯ ಬಿಡಬೇಕು, ಕೆರಳಲಿಕ್ಕಲ್ಲ. ಅಹಂ ಪ್ರವೃತ್ತಿಯಿಂದ ಆಹಾ ಮನೋಭೂಮಿಕೆಯಲ್ಲಿ ನಾವು ನೆಲೆಸಿದಾಗ, ಸಾತ್ವಿಕ ವೈರಾಗ್ಯ ಮೂಡಲು ಸಾಧ್ಯ. ಇನ್ನೂ ಬೇಕು ಎನ್ನುವ ಹಪಾಹಪಿಯ ಹಿಡಿತದಿಂದ ತಪ್ಪಿಸಿಕೊಂಡವರು, ಇಷ್ಟೇ ಸಾಕು ಎನ್ನುವ ತೃಪ್ತತೆಯನ್ನು ಮೈಗೂಡಿಸಿಕೊಂಡು ಶಾಂತಿ-ನೆಮ್ಮದಿಯನ್ನು ಕಂಡುಕೊಂಡಾರು. ನಿಮ್ಮ ಮನೆ ಮತ್ತು ಪರಿಸರ ಒಮ್ಮೆ ನೋಡಿಕೊಳ್ಳಿ. ಕಳೆದ ಎಷ್ಟೊ ವರ್ಷಗಳಿಂದ ಉಪಯೋಗಿಸದ ವಸ್ತುಗಳನ್ನು ಇನ್ನು ಬಳಸುವ ಸಾಧ್ಯತೆ ಎಷ್ಟಿರಬಹುದು? ಇಲ್ಲೇ ಪರೀಕ್ಷಿಸಿ, ಅಂತಹ ವಸ್ತುಗಳನ್ನು ಯಾರಿಗೂ ಕೊಡದೆ, ನೀವೂ ಉಪಯೋಗಿಸದೆ ಪುನ: ಜೋಪಾನವಾಗಿ ಒಳಗೆ ಸೇರಿಸುವಿರಾ ಅಥವಾ ಅವುಗಳನ್ನು ಬೇಕಿದ್ದವರಿಗೆ ಕೊಟ್ಟು ಬಿಡುಗಡೆ ಹೊಂದುವಿರಾ? ಕೂಡುವ, ಕೊಳ್ಳುವ ಬಂಧನದಿಂದ ಮುಕ್ತರಾಗಿ ನೋಡಿ. ಕಾಲ ಕ್ರಮೇಣ ಕಳಚಿ ಕೊಳ್ಳುವ ಕಡೆಗೇ ನಮ್ಮ ಮನಸ್ಸು ಹರಿಯಬೇಕು. ಪ್ರತಿ ವಾರ ಒಂದಷ್ಟು ಹಳೆಯ ವಸ್ತುಗಳನ್ನು ಹೊರಹಾಕುತ್ತಾ ಬನ್ನಿ. ನಿಮ್ಮ ಮನೆ ಮತ್ತು ಮನ ಆವಾಗಲೇ ಭಾರದಿಂದ ಮುಕ್ತವಾಗುವುದು.

ವಿಶ್ವವಾಣಿ
31.12.2024 ಮಂಗಳವಾರ
vishwavani.news

ದಿನ ದರ್ಶಿಕೆ

ಪೌಷ, ಶುಕ್ಲ ಪಕ್ಷ, ಪ್ರತಿಪದ, ಪೂರ್ವಾಷಾಢ ನಕ್ಷತ್ರ, ಕಿನಸ್ತುಘ್ನ ಕರಣ, ಧ್ರುವ ಯೋಗ, ಧನು ಲಗ್ನ, ಧನು ರಾಶಿ, ಶಿಶಿರ ಋತು, ಉತ್ತರಾಯಣ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮಶಕ ಸಂವತ್ಸರ

ಮನೆಮದ್ದು

ಜೀರಿಗೆಯನ್ನು ರಾತ್ರಿ ಇಡೀ ನೆನೆಹಾಕಿ ಕುಡಿಯುವ ಅಭ್ಯಾಸ ಮಾಡಿಕೊಂಡರೆ ನಮ್ಮ ದೇಹದ ತೂಕ ನಿಯಂತ್ರಣವಾಗುತ್ತದೆ. ಬೆಳಗಿನ ಸಮಯದಲ್ಲಿ ಖಾಲಿ ಹೊಟ್ಟೆಯಲ್ಲಿ ಜೀರಿಗೆ ನೀರನ್ನು ಕುಡಿಯುವುದರಿಂದ ನಮ್ಮ ದೇಹಕ್ಕೆ ಆಂಟಿ ಆಕ್ಸಿಡೆಂಟ್ ಮತ್ತು ಆಂಟಿ ಇನ್ಫ್ಲಾಮೇಟರಿ ಲಕ್ಷಣಗಳು ಸಿಗುತ್ತವೆ. ಇದು ನಮ್ಮ ಹೊಟ್ಟೆ ಹಸಿವನ್ನು ನಿಯಂತ್ರಿಸುತ್ತದೆ.

ಸೌಂದರ್ಯ ಸೂತ್ರ

ಒಂದು ಸೌತೆಕಾಯಿ ಮತ್ತು ಒಂದು ಟೊಮೆಟೊ ರಸವನ್ನು ತೆಗೆದುಕೊಂಡು ಅದನ್ನು ನಿಮ್ಮ ಮುಖದ ಮೇಲೆ 15 ರಿಂದ 20 ನಿಮಿಷಗಳ ಕಾಲ ಹಚ್ಚಿರಿ, ನಂತರ ನಿಮ್ಮ ಮುಖವನ್ನು ತಣ್ಣೀರಿನಿಂದ ತೊಳೆಯಿರಿ. ಹೀಗೆ ಮಾಡುವುದರಿಂದ ತ್ವಚೆಯು ತೇವಾಂಶದಿಂದ ಕೂಡಿರುತ್ತದೆ ಮತ್ತು ಟೊಮೇಟೊ ದಲ್ಲಿರುವ ಲೈಕೋಪೀನ್ ಚರ್ಮದಲ್ಲಿನ ಮೊಡವೆಗಳು, ಕಲೆಗಳು ಮತ್ತು ಸುಕ್ಕುಗಳನ್ನು ಕಡಿಮೆ ಮಾಡುತ್ತದೆ.

ದಿನ ಭವಿಷ್ಯ

ಮೇಷ: ಹೊಸ ಅವಕಾಶಗಳು ದೊರೆಯುತ್ತವೆ. ತೊಂದರೆಗಳಿಗೆ ಪರಿಹಾರ ಸಿಗುತ್ತದೆ. ಧೈರ್ಯದಿಂದ ಮುನ್ನಡೆಯಿರಿ, ಯಶಸ್ಸು ನಿಮಗೇ.

ವೃಷಭ: ಕುಟುಂಬದೊಂದಿಗೆ ಸಂತೋಷದ ಕ್ಷಣಗಳು. ಸಂಬಂಧಗಳು ಬಲವಾಗುತ್ತವೆ. ಹೊಸದನ್ನು ಪ್ರಾರಂಭಿಸಲು ಈ ದಿನ ಸೂಕ್ತ.

ಮಿಥುನ: ವೃತ್ತಿಯಲ್ಲಿ ಹೊಸ ಅವಕಾಶಗಳು. ಚಿಂತೆ ಕಡಿಮೆಯಾಗುತ್ತದೆ. ಆತ್ಮವಿಶ್ವಾಸದಿಂದ ಮುನ್ನಡೆಯಿರಿ, ಯಶಸ್ಸು ಸಾಧ್ಯ.

ಕಟಕ: ಆರೋಗ್ಯದ ಕಡೆ ಗಮನ ಕೊಡಿ. ಕೆಲಸದಲ್ಲಿ ಶಾಂತಿ ಮೆರೆಸುತ್ತದೆ. ಮುಕ್ತವಾಗಿ ಆಲೋಚಿಸಿ ನಿರ್ಧಾರ ಮಾಡಿ.

ಸಿಂಹ: ಹಣಕಾಸಿನಲ್ಲಿ ಚೇತರಿಕೆ. ಆತ್ಮವಿಶ್ವಾಸದಿಂದ ಕೆಲಸ ಮಾಡಿರಿ. ಹೊಸ ಯೋಜನೆ ಯಶಸ್ವಿಯಾಗಿ ಪೂರ್ಣಗೊಳ್ಳಬಹುದು.

ಕನ್ಯಾ: ಸ್ನೇಹಿತರೊಂದಿಗೆ ಸಂತೋಷದ ಸಮಯ. ಹೊಸ ಅವಕಾಶಗಳಿಗೆ ತಯಾರಾಗಿರಿ. ಸಾಧನೆಗೋಸ್ಕರ ಆದರ್ಶ ನಿರ್ಧಾರ ಮಾಡಿರಿ.

ತುಲಾ: ವ್ಯಾಪಾರದಲ್ಲಿ ಲಾಭ. ಕುಟುಂಬದಲ್ಲಿ ಶಾಂತಿ. ಹೊಸ ಚಿಂತನೆಗಳು ನಿಮ್ಮ ದಿನವನ್ನು ಮೆರುಗುಗೊಳಿಸುತ್ತವೆ.

ವೃಶ್ಚಿಕ: ಸಕಾರಾತ್ಮಕ ಬೆಳವಣಿಗೆಗಳು. ಹೊಸ ಸಂಬಂಧಗಳಿಗೆ ಸಾಧ್ಯತೆ. ಕಾರ್ಯಕ್ಷೇತ್ರದಲ್ಲಿ ಸಾಧನೆ ನಿಮ್ಮನ್ನು ಮುನ್ನಡೆಯಿಸುತ್ತದೆ.

ಧನು: ಅಧ್ಯಯನದಲ್ಲಿ ಉತ್ಸಾಹ ಹೆಚ್ಚಾಗುತ್ತದೆ. ಬುದ್ಧಿಮತ್ತೆ ನಿಮ್ಮ ಶಕ್ತಿ. ಹೊಸ ಪ್ರಯತ್ನಗಳಲ್ಲಿ ಯಶಸ್ಸು ಕಾಣಬಹುದು.

ಮಕರ: ಅನುಕೂಲಕರ ಸಮಯ. ಹೊಸ ಮಿತ್ರರನ್ನು ಭೇಟಿ ಮಾಡುವ ಅವಕಾಶ. ನಿಮ್ಮ ಯೋಚನೆ ಕಾರ್ಯರೂಪ ಪಡೆಯಬಹುದು.

ಕುಂಭ: ಪ್ರಯತ್ನಗಳಿಗೆ ಸಕಾರಾತ್ಮಕ ಫಲಿತಾಂಶ. ಆತ್ಮವಿಶ್ವಾಸ ಹೆಚ್ಚಾಗಿ, ದಿನ ಯಶಸ್ವಿಯಾಗಿ ಮುಗಿಯುತ್ತದೆ.

ಮೀನ: ಹೊಸ ಆಲೋಚನೆಗಳಿಗೆ ಚೈತನ್ಯ. ಸೃಜನಾತ್ಮಕ ಕಾರ್ಯಗಳಿಂದ ಲಾಭ. ಹಣಕಾಸಿನ ಸಮಸ್ಯೆಗಳು ನಿವಾರಣೆಯಾಗುತ್ತವೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1879: ನ್ಯೂಜೆರ್ಸಿನಲ್ಲಿ ಥಾಮಸ್ ಎಡಿಸನ್ ಅವರು ಲೈಟ್ ಬಲ್ಬ್ ಅನ್ನು ಕಂಡುಹಿಡಿದ ವಿಚಾರವನ್ನು ಜಗತ್ತಿನ ಜತೆ ಹಂಚಿಕೊಂಡರು.
- 1904: ಭಾರತದಲ್ಲಿ ಮೊದಲನೇ ಬಾರಿಗೆ ಹೊರ್ಷವನ್ನು ಆಚರಿಸುವುದನ್ನು ಶುರುಮಾಡಿದರು.
- 1999: ರಷ್ಯಾದ ಆಗಿನ ಅಧ್ಯಕ್ಷ ಬೋರಿಸ್ ಯೆಲ್ಟ್ಸಿನ್ ಅವರು ಪದವಿಗೆ ರಾಜೀನಾಮೆ ನೀಡಿದರು. ವ್ಲಾದಿಮಿರ್ ಪುಟಿನ್ ಅವರು ಅಧ್ಯಕ್ಷರಾದರು.

ಚಿತ್ರಸ್ಫೂರ್ತಿ

ಭೂಮಿಯನ್ನು ಪದಗಳಲ್ಲಿ ವರ್ಣಿಸಲಾಗಲ್ಲ, ವರ್ಣಿಸಹೊರಟರೆ ಪದಗಳೇ ಸಾಲುವುದಿಲ್ಲ!

ಚಿತ್ರ: ಸುಧಾಕರ ದೇವರಾಜ್

ಭಕ್ತಿ ಒಂದೇ ಅಲ್ಲ ದೇವರಲ್ಲಿ ನಂಬಿಕೆಯೂ ಇರಬೇಕು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಮ್ಮೆ ಶಿವ ಪಾರ್ವತಿಯರು ಹರಿದ್ವಾರದ ಆಕಾಶದಲ್ಲಿ ಸಂಚರಿಸುತ್ತಿದ್ದರು. ಕೆಳಗೆ ಪರಮ ಪಾವನೆ ಗಂಗಾ ನದಿಯಲ್ಲಿ ಮುಳುಗಿ ಸ್ನಾನ ಮಾಡಲು ಜನಸಾಗರವೇ ಹರಿದು ಬರುತ್ತಿತ್ತು. ಆಕಾಶಮಾರ್ಗದಲ್ಲಿ ವಿಹರಿಸುತ್ತಿದ್ದ ಪಾರ್ವತಿ ಇದನ್ನು ನೋಡಿದ ಅವಳಿಗೆ ಪಾಪನಾಶಿನಿ ಗಂಗೆಯಲ್ಲಿ ಸ್ನಾನ ಮಾಡಿದರೂ ಅವರು ಸಂತೋಷವಾಗಿಲ್ಲ ಏಕೆ ಹೀಗೆ ಎಂದು ಅವಳಿಗೆ ಆಶ್ಚರ್ಯವಾಯಿತು. ಅವಳು ಶಿವನಲ್ಲಿ ಕೇಳಿದಳು.

'ಸ್ವಾಮಿ, ಜನರು ಪವಿತ್ರ ಗಂಗೆಯಲ್ಲಿ ಎಷ್ಟು ಸಲ ಸ್ನಾನ ಮಾಡಿದರೂ ಈ ಜನರ ದುಃಖ ಮತ್ತು ಪಾಪ ಏಕೆ ನಾಶವಾಗುತ್ತಿಲ್ಲ. ಇವರ ಪಾಪಗಳನ್ನು ನಾಶಪಡಿಸುವ ಶಕ್ತಿ ಗಂಗೆಯಲ್ಲಿ ಇಲ್ಲವೇ' ಎಂದು ಕೇಳಿದಳು. ಶಿವನು ಪಾರ್ವತಿ ಈ ಪ್ರಶ್ನೆಗೆ ದೇವಿ, 'ಗಂಗೆಗೆ ಜನಗಳ ಪಾಪ ತೊಳೆಯುವ ಸಾಮರ್ಥ್ಯವಿದೆ. ಆದರೆ ಈ ಜನರು ಪವಿತ್ರ ಗಂಗೆಯಲ್ಲಿ ಸ್ನಾನ ಮಾಡದೆ ಬರೀ ನೀರಿನಲ್ಲಿ ಮುಳಗೇಳುತ್ತಿದ್ದಾರೆ. ಹೀಗಿರುವಾಗ ಪಾಪ ಹೇಗೆ ನಾಶವಾಗುತ್ತದೆ' ಎಂದು ಹೇಳುತ್ತಾ 'ಇದನ್ನು ನಿನಗೆ ನಾಳೆ ನಿರೂಪಿಸುತ್ತೇನೆ' ಎಂದನು.

ಮರುದಿನ ಪರಮೇಶ್ವರನು ತನ್ನ ಲೀಲೆಯಿಂದ ವೃದ್ಧ ಬ್ರಾಹ್ಮಣನಾದನು. ಮೈ ಕೈ ನಡುಗುತ್ತಿದೆ ಹಣ್ಣು ಹಣ್ಣು ಮುದುಕ, ಬಂದವನೇ ಗಂಗೆಯಲ್ಲಿ ಸ್ನಾನಕ್ಕೆ ಇಳಿದು ವಾಲಾಡುತ್ತಾ ಎದುಸಿರು ಬಿಡುತ್ತಾ ಎದ್ದು ಬಿದ್ದು ಒದ್ದಾಡುತ್ತಿದ್ದವನು ಒಮ್ಮೆ ನದಿಯ ಒಂದು ಗುಂಡಿ ಜಾಗದಲ್ಲಿ ಬಿದ್ದನು. ಆ ಗುಂಡಿಯಿಂದ ಕಾಲು ಎತ್ತಲು ಅವನಿಂದ ಆಗಲಿಲ್ಲ. ಪಾರ್ವತಿಯನ್ನು ಕೂಗಿ, ಯಾರನ್ನಾದರೂ ಸಹಾಯಕ್ಕೆ ಕರಿ ಎಂದ. ವಯಸ್ಸಾದ ಮುತ್ತೈದೆಯ ರೂಪದಲ್ಲಿದ್ದ ಪಾರ್ವತಿ ದೀನಳಾಗಿ ಅಲ್ಲಿರುವ ಜನರನ್ನು ಕೂಗಿದಳು.

ಅವಳ ಕೂಗು ಕೇಳಿ ಒಂದಷ್ಟು ಜನ ದಾವಿಸಿ ಬಂದು ಮುದುಕನನ್ನು ಎತ್ತಿ ತರಲು ಹೊರಟರು. ಆಗ ಪಾರ್ವತಿ ಅವರನ್ನು ತಡೆದು, 'ನೋಡಿ ನನ್ನ ಪತಿ ಯಾವುದೇ ಪಾಪ ಕಾರ್ಯ ಮಾಡದ ಮಹಾ ಪುಣ್ಯವಂತ ನಾಗಿದ್ದಾನೆ. ಅವರನ್ನು ಮುಟ್ಟುವವ ರು ಪಾಪರಹಿತರಾಗಿರಬೇಕು. ಇಲ್ಲದಿದ್ದರೆ ಅವರನ್ನು ಮುಟ್ಟುತ್ತಲೇ ಭಸ್ಮವಾಗುವರು' ಎಂದಾಗ ಬಂದ ಜನ ಹೆದರಿ ಹಿಂದೆ ಸರಿದರು ಏಕೆಂದರೆ ಅವರ್ಯಾರಿಗೂ ಸಾಯಲು ಇಷ್ಟವಿರಲಿಲ್ಲ.

ಶಿವ ಪಾರ್ವತಿಗೆ ಹೇಳಿದ, 'ನೋಡಿದೆಯಾ? ದೇವಿ ಯಾರೊಬ್ಬರೂ ಮೇಲೆ ಎತ್ತಲು ಬರಲಿಲ್ಲ ಅವರಲ್ಲಿ ಒಬ್ಬನಿಗಾದರೂ ''ಗಂಗೆ'' ಪಾಪನಾಶಿನಿ ಎಂಬ ನಂಬಿಕೆ ಇರಲಿಲ್ಲ,' ನಂಬಿಕೆ ಇದ್ದವರು ನನ್ನನ್ನು ಮೇಲೆತ್ತಲು ಬಂದರೆ, ಎನ್ನುತ್ತಿದ್ದಂತೆ ಒಬ್ಬ ಯುವಕ ಮುದುಕನನ್ನು ಮೇಲೆತ್ತಲು ಬಂದಾಗ, ಪಾರ್ವತಿ ಅವನನ್ನು ತಡೆದು, ಆತನಿಗೂ ನಿಬಂಧನೆ ಹೇಳಿದಳು. ಆದರೆ ಯುವಕ ದೃಢ ನಿಶ್ಚಯದಿಂದ ಪಾರ್ವತಿಗೆ ಹೇಳಿದ. 'ಅಮ್ಮಾ, ನಾನೂ ಪಾಪ ಕಾರ್ಯ ಮಾಡಿರುವೆ ಎಂಬ ಸಂದೇಹ ನಿಮಗೆ ಬಂದಿದೆ. ನಾನು ಅರಿವಿದ್ದು ಅರಿವಿಲ್ಲದೆಯೋ ಪಾಪ ಕಾರ್ಯ ಮಾಡಿದ್ದೇನೆ. ಆದರೂ ಹೇಳುತ್ತೇನೆ ನೀವೇ ನೋಡಿದಂತೆ ನಾನು ಇದೇ ಈಗ ತಾನೇ ಶುದ್ಧ ಮನಸ್ಸಿನಿಂದ ಗಂಗೆಯಲ್ಲಿ ಸ್ನಾನ ಮಾಡಿ ಮಡಿಬಟ್ಟೆ ಉಟ್ಟು ಬಂದಿದ್ದೇನೆ. ಇಂಥ ಪವಿತ್ರ ಪಾಪನಾಶಿನಿ ಗಂಗೆಯಲ್ಲಿ ಮುಳುಗಿ ಸ್ನಾನ ಮಾಡಿದ ಮೇಲೆ ಇನ್ನು ನನ್ನ ಪಾಪ ಕರ್ಮಗಳು ಉಳಿಯಲು ಹೇಗೆ ಸಾಧ್ಯ? ನೀವು ಹೆದರಬೇಡಿ ನಾನು ನೀರಿನ ಕೊಂಡದಲ್ಲಿ ಸಿಕ್ಕಿಕೊಂಡಿರುವ ನಿಮ್ಮ ಪತಿಯನ್ನು ಮೇಲಕ್ಕೆತ್ತಿ ತರುತ್ತೇನೆ' ಎಂದು ಪಾರ್ವತಿಗೆ ಹೇಳಿ ನದಿಗೆ ಇಳಿದು ಆಕೆಯ ಪತಿಯನ್ನು ಹೊಂಡದಿಂದ ಮೇಲೆತ್ತಿ ದಡಕ್ಕೆ ತಂದನು.

ಎಲ್ಲಕ್ಕಿಂತ ನಂಬಿಕೆ ಮುಖ್ಯ ಗಂಗೆಯಲ್ಲಿ ಪುಣ್ಯ ಸ್ನಾನ ಮಾಡಿದರೆ ಪಾಪ ಪರಿಹಾರವಾಗುತ್ತದೆ ಎನ್ನುವ ನಂಬಿಕೆ ಮೊದಲು ಭಕ್ತರಿಗೆ ಇರಬೇಕು. ದಾನ, ಭಗವಂತನ ನಾಮಸ್ಮರಣೆ, ಪೂಜೆ, ಭಜನೆ ಏನೇ ಮಾಡಿದರೂ ಪಾಪ ಕಳೆದು ಕಿಂಚಿತ್ ಪುಣ್ಯದ ಫಲ ಅವಶ್ಯವಾಗಿ ಸಿಗುತ್ತದೆ ಎಂದು ಈಶ್ವರ. ನಿಜವೇ ಅಲ್ಲವೇ ಈ ಮಾತು ನಮ್ಮೆಲ್ಲರಿಗೂ ಅನ್ವಯಿಸುತ್ತದೆ.

ಪದಬಂಧ



ಎಡದಿಂದಬಲಕ್ಕೆ:

3. ರಿಕ್ಷಾಬಿಡುವಾಗ ಕಂಡ ಆಕಾಶ (4)
5. ಅವನಿಗೆ ಬಂದ ಸಂದೇಹ (4)
6. ಜಮದಗ್ನಿಯ ಮಗ (5)
8. ಹೆದರಿಕೆಯಿಂದ ಉಂಟಾದ ನಡುಕ (3)
10. ಮನುಷ್ಯರ ನಡುವಿನ ಬಾಂಧವ್ಯ (3)
12. ಬೆಂದಿರುವ ಅಕ್ಕಿಯ ಕಾಳು (3)
14. ಮಂದಿಯ ಚಿತ್ತ (5)
16. ಅತಿ ಪ್ರಾಚೀನಕಾಲದ ಎಂಬರ್ಥದಲ್ಲಿ, ಶಾಶ್ವತವಾದ (4)
17. ನಿರಂತರ ಎನ್ನುವುದರಮಧ್ಯೆ ಇನ್ನೊಬ್ಬ ಸೂರ್ಯನು ತಿರುಗಿದ್ದಾನೆ (4)

ಮೇಲಿನಿಂದಕೆಳಕ್ಕೆ:

1. ಅವನು ಗಳಿಸಿದ ಸಹಾನುಭೂತಿ (4)
2. ಪ್ರಜೆಗಳಿಗಾಗಿ ಇರುವ ರಾಜ (3)
4. ಕರಾರು ಮಾಡುವಾಗ ಆಕ್ಷೇಪಣೆ (4)
7. ಸೋದರಿರಾಖಿಕಟ್ಟುವ ಹಬ್ಬ (5)
8. ರಾತ್ರಿಯಲ್ಲಿ ಇದು ಹೊರಟ ಲಾಟೀನು (3)
9. ಹಿಂತಿರುಗು ಎನ್ನುವ ಉಸುಕು (3)
11. ಕಣ್ಣನಿಗಿದ್ದಬಿರುದು (4)
13. ಮಹತ್ತರವಾದ (4)
15. ಸವಾಲಾಗಿರುವ ಮಂತ್ರಿ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: ದುರ್ಬೀನು 5. ಸಾರ 6. ಸುಗತ 7. ಬರ 8. ಕಮರಿ 10. ವಸತಿ 14. ರುದ್ರನಾಟಕ 16. ರಪಣ 17. ವಂತಿಗೆ 20. ಸ್ವಾದ 21. ಬಡಾಯಿ 23. ಲೆರತ

ಎಡದಿಂದ ಬಲಕ್ಕೆ: ದುರಭ್ಯಾಸ 2. ನುಸುಳು 3. ಹಂತಕ 4. ಗಾಬರಿ 9. ಮಧುಕರ 10. ವಲಸೆ 11. ತಿರುಪತಿ 12. ವಿನಾಶ 13. ಕಾರಣ 16. ಪರಿಣತ 17. ವಂದನೆ 18. ಗೆಬರು 19. ಕಾಯಿಲೆ

● ಸಿ. ರವಿಶಂಕರ ಶಾಸ್ತ್ರಿ, ದಂಟೆ

ದಿನಕ್ಕೊಂದು ಮಾಹಿತಿ

ಜಗತ್ತಿನ ಭೀಕರ ಯುದ್ಧಗಳು



ಜಗತ್ತಿನ ಭೀಕರ ಯುದ್ಧಗಳು ಕೃತಿಯು ಎಂ. ವೆಂಕಟಸ್ವಾಮಿ ಅವರ ಇತಿಹಾಸ ಗ್ರಂಥವಾಗಿದೆ. ಇಲ್ಲಿ ಬಡವರು ಹಾಗೂ ಕಾರ್ಮಿಕ ಕುರಿತ ಕಥನಗಳಿವೆ. ಜಗತ್ತನ್ನು ಬಡವರು ಮತ್ತು ಕೂಲಿ ಕಾರ್ಮಿಕರು ಹೇಗೆ ಕಟ್ಟಿದರು ಮತ್ತು ಕಟ್ಟುತ್ತಿದ್ದಾರೆ ಎಂಬುವುದನ್ನು ಇಲ್ಲಿ ವಿವರಿಸಲಾಗಿದೆ. ಹೊಟ್ಟೆಗೆ ಅನ್ನ, ಉಡಲು ಬಟ್ಟೆ, ಮಲಗಲು ವಸತಿ ಇಲ್ಲದೆ ದುಡಿದು ಜಗತ್ತನ್ನು ಕಟ್ಟಿದವರು ಬಡವರು ಮತ್ತು ಕಾರ್ಮಿಕರು. ಪಿರಮಿಡ್ ಳಿಂದ ಹಿಡಿದು ಯಾವುದೇ ನಾಗರಿಕ ತೊಟ್ಟಿಲುಗಳನ್ನು ಕಟ್ಟಿ ಬೆಳೆಸಿದವರು ಬಡವರು, ಕಾರ್ಮಿಕರು, ರೈತರು ಮತ್ತು ಮಹಿಳೆಯರು, ಜೊತೆಗೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಮೂಕಪ್ರಾಣಿಗಳು, ಜಗತ್ತಿನಲ್ಲಿ ಮುಂದೆಯೂ ಈ ತಾರತಮ್ಯ ಹೀಗೆ ಮುಂದುವರಿಯುತ್ತದೆ. ಅಲ್ಲೊಬ್ಬರು ಇಲ್ಲೊಬ್ಬರು ಮಹನೀಯರು ಹುಟ್ಟಿ ಬಂದು ಈ ಅಸಮಾನತೆಯ ಸಮಾಜದ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡರೆ ವಿನಹಃ ಈ ಜಗತ್ತು ಮಾತ್ರ ಬದಲಾಗಲೇ ಇಲ್ಲ ಎಂಬುವುದನ್ನು ತಿಳಿಸಿದ್ದಾರೆ.

ಪುಸ್ತಕ ಲೋಕ

ಗಾಂಧಿಗಳ ಬೀಗರು ಬಚ್ಚನ್

ಗಾಂಧಿ ಮನೆತನ ಮತ್ತು ಬಚ್ಚನ್ ಮನೆತನದ ಬಗ್ಗೆ ಭಾರತದಲ್ಲಿ ಯಾರಿಗೆ ಗೊತ್ತಿಲ್ಲ ಹೇಳಿ? ಒದು ಮನೆತನ ಭಾರತವನ್ನು ಆಳಿದ್ದರೆ, ಬಚ್ಚನ್ ಮನೆತನದ ಅಮಿತಾಭ್ ಬಚ್ಚನ್ ಹಿಂದಿ ಸಿನಿಮಾ ರಂಗವನ್ನು ಆಳಿದವರು. ಇಂದು ಗಾಂಧಿ ಮತ್ತು ಬಚ್ಚನ್ ಮನೆತನಕ್ಕೆ ಅಷ್ಟೊಂದು ಬಾಂಧವ್ಯ ಇರದಿದ್ದರೂ, ಸೋನಿಯಾ ಗಾಂಧಿ ಒಂದು ರೀತಿಯಲ್ಲಿ ಬಚ್ಚನ್ ಅವರ ಮನೆಮಗಳು. ಹೇಗೆ ಗೊತ್ತಾ? ಅಮಿತಾಭ್ ಬಚ್ಚನ್ ಮತ್ತು ರಾಜೀವ್ ಗಾಂಧಿ ಅನ್ಯೂನ್ಯ ಸ್ನೇಹಿತರು. ರಾಜೀವ್ ಗಾಂಧಿ ಅವರಿಗೆ ಸೋನಿಯಾ ಗಾಂಧಿ ಮೇಲೆ ಪ್ರೀತಿಯಾಗಿ, ಅವರನ್ನು ಇಂಗ್ಲೆಂಡ್‌ನಿಂದ ಭಾರತಕ್ಕೆ ಕರೆದುಕೊಂಡು ಬಂದಮೇಲೆ, ಸೋನಿಯಾ ಜತೆ ರಾಜೀವ್‌ರನ್ನು ವಿವಾಹ ಮಾಡಲು ಇಂದಿರಾ ಗಾಂಧಿ ಒಪ್ಪುತ್ತಾರೆ. ಆಗ, ಸೋನಿಯಾ ಅವರು ಪರ ದೇಶದವರು, ಭಾರತದಲ್ಲಿ ಮನೆಯೇನೂ ಇರಲಿಲ್ಲ. ಆದರೆ, ಹೆಣ್ಣಿನ ಮನೆಯ ಸಂಪ್ರದಾಯಗಳನ್ನು ಮಾಡಲು ಮನೆ ಬೇಕಿತ್ತಲ್ಲ. ಆ ಮನೆಯನ್ನು ಕೊಟ್ಟವರೇ ಬಚ್ಚನ್ ಕುಟುಂಬ, ಸೋನಿಯಾ ಮತ್ತವರ ಸಂಬಂಧಿಕರನ್ನು ಮನೆಯಲ್ಲಿ ಇರಿಸಿಕೊಂಡು, ಮದುವೆಯ ಎಲ್ಲ ವಿಧಿವಿಧಾನಗಳನ್ನು ಮಾಡಿ. ಬಚ್ಚನ್ ಅವರ ಮನೆಯ ಮಗಳೆ ಎನ್ನುವ ರೀತಿಯಲ್ಲಿ ಮದುವೆಗೆ ಮನೆಯನ್ನು ಸಿಂಗರಿಸಿದ್ದರು.

ಭಾರತದಲ್ಲಿ ಶೇ.73 ರಷ್ಟು ಏರಿಕೆಯಾದ ಇ-ತ್ಯಾಜ್ಯ

ತಿಳಿಯೋಣ

● ಎಲ್.ಪಿ.ಕುಲಕರ್ಣಿ

ಹಾಳಾದ, ಮುರಿದುಹೋದ ಕಂಪ್ಯೂಟರ್‌ಗಳು, ಟೆಲಿವಿಷನ್‌ಗಳು, ವಿಸಿಆರ್‌ಗಳು, ಸ್ಟೀರಿಯೋಗಳು, ಕಾಪಿಯರ್‌ಗಳು, ಫ್ಯಾಕ್ಸ್ ಯಂತ್ರಗಳು, ಮೊಬೈಲ್ ಮುಂತಾದ ಗೆಜೆಟ್ ಸಾಧನಗಳನ್ನು ಇ-ತ್ಯಾಜ್ಯಗಳು ಎನ್ನಲಾಗುತ್ತದೆ. 2019-20 ರಲ್ಲಿ ಭಾರತದಲ್ಲಿ 1.01 ಮಿಲಿಯನ್ ಮೆಟ್ರಿಕ್ ಟನ್ (ಎಮ್‌ಟಿ)ಇದ್ದ ಇ-ತ್ಯಾಜ್ಯವು, 2023-24 ರಲ್ಲಿ 1.751 ಮಿಲಿಯನ್ ಮೆಟ್ರಿಕ್ ಟನ್‌ಗೆ ಏರಿದೆ. ಇದು ಶೇ 72.54 ಬೆಳವಣಿಗೆಯನ್ನು ತೋರಿಸುತ್ತದೆ. ಹೆಚ್ಚಾಗಿ ಕೊವಿಡ್-19 ಸಾಂಕ್ರಾಮಿಕ ಸಮಯದಲ್ಲಿಂದ ಹೆಚ್ಚುತ್ತಿರುವ ಎಲೆಕ್ಟ್ರಾನಿಕ್ ಸಾಧನಗಳ ಬಳಕೆಯಿಂದಾಗಿ ಇಷ್ಟೆಲ್ಲ ಆವಾಂತರವಾಗಿದೆ ಎಂದು ವರದಿಯೊಂದು ಹೇಳುತ್ತಿದೆ.

ಇ-ತ್ಯಾಜ್ಯದ ಸಂಯೋಜನೆ:

ಇ-ತ್ಯಾಜ್ಯವು ಆರ್ಸೆನಿಕ್, ಕ್ಯಾಡ್ಮಿಯಮ್, ಸೀಸ ಮತ್ತು ಪಾದರಸದಂತಹ ಅಪಾಯಕಾರಿ ವಸ್ತುಗಳನ್ನು ಒಳಗೊಂಡಿದೆ. ಸರಿಯಾಗಿ ವಿಲೇವಾರಿ ಮಾಡದಿದ್ದರೆ, ಈ ವಸ್ತುಗಳು ಮಾನವನ ಆರೋಗ್ಯ ಮತ್ತು ಪರಿಸರಕ್ಕೆ ಅಪಾಯವನ್ನುಂಟುಮಾಡುತ್ತವೆ.

ಅನೌಪಚಾರಿಕ ವಲಯದೊಂದಿಗೆ ಸಹಯೋಗ:

ವ್ಯಾಪಕವಾದ ಇ-ತ್ಯಾಜ್ಯ ಸಂಗ್ರಹಣೆ ಜಾಲಗಳನ್ನು ಹೊಂದಿರುವ ಅನೌಪಚಾರಿಕ ವಲಯದೊಂದಿಗೆ ವರ್ಧಿತ ಸಹಯೋಗಕ್ಕಾಗಿ ತಜ್ಞರು ಪ್ರತಿಪಾದಿಸುತ್ತಾರೆ. ಅಂತಹ ಪಾಲುದಾರಿಕೆಗಳು ಮರುಬಳಕೆ ದರಗಳು ಮತ್ತು ಒಟ್ಟಾರೆ ತ್ಯಾಜ್ಯ ನಿರ್ವಹಣೆಯನ್ನು ಸುಧಾರಿಸಬಹುದು.

ಇ-ತ್ಯಾಜ್ಯ ಒಡ್ಡುತ್ತಿರುವ ಸವಾಲನ್ನು ಮತ್ತಷ್ಟು ಎದುರಿಸಲು, ತಯಾರಕರಿಗೆ ತೆರಿಗೆ ಪ್ರೋತ್ಸಾಹವನ್ನು ಪರಿಚಯಿಸಲು ತಜ್ಞರು ಶಿಫಾರಸು ಮಾಡುತ್ತಾರೆ. ಈ ಪ್ರೋತ್ಸಾಹಗಳು ಪರಿಸರ ಸ್ನೇಹಿ ಮತ್ತು ಮರುಬಳಕೆ ಮಾಡಬಹುದಾದ ಉತ್ಪನ್ನಗಳ ವಿನ್ಯಾಸವನ್ನು ಪ್ರೋತ್ಸಾಹಿಸುತ್ತದೆ.

ಹೆಚ್ಚುತ್ತಿರುವ ಇ-ತ್ಯಾಜ್ಯ ಸಮಸ್ಯೆಗೆ ಪ್ರತಿಕ್ರಿಯೆಯಾಗಿ, ಭಾರತ ಸರಕಾರವು 2022 ರಲ್ಲಿ ನವೀಕರಿಸಿದ ಇ-ತ್ಯಾಜ್ಯ (ನಿರ್ವಹಣೆ) ನಿಯಮಗಳನ್ನು ಜಾರಿಗೆ ತಂದಿತು. ಈ ನಿಯಮಗಳು ಏಪ್ರಿಲ್ 1, 2023 ರಿಂದ ಜಾರಿಗೆ ಬಂದವು. ಈ ನಿಯಮಗಳು ಇ-ತ್ಯಾಜ್ಯ ಸಂಗ್ರಹಣೆಯನ್ನು ಹೆಚ್ಚಿಸುವ ಮತ್ತು ಪರಿಚಿತ ಚೌಕಟ್ಟಿನ ಮೂಲಕ ಮರುಬಳಕೆ ಮಾಡುವತ್ತ ಗಮನಹರಿಸುತ್ತವೆ.

● ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್-ಎಕ್ಸ್ಟೆಂಡೆಡ್ ಪ್ರೊಡ್ಯೂಸರ್ ರಿಸ್ಪಾನ್ಸಿಬಿಲಿಟಿ):

ಇಪಿಆರ್ ಅಡಿಯಲ್ಲಿ, ಉತ್ಪಾದಕರಿಗೆ ಅವರ ಇ-ತ್ಯಾಜ್ಯ ಉತ್ಪಾದನೆಯ ಆಧಾರದ ಮೇಲೆ ವಾರ್ಷಿಕ ಮರುಬಳಕೆ ಗುರಿಗಳನ್ನು ನಿಗದಿಪಡಿಸಲಾಗಿದೆ. ಈ ಗುರಿಗಳನ್ನು ಪೂರೈಸಲು, ಅವರು ನೋಂದಾಯಿತ ಮರುಬಳಕೆದಾರರಿಂದ ಇಪಿಆರ್ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಬೇಕು. ಈ ಪ್ರಮಾಣ ಪತ್ರಗಳು ಇ-ತ್ಯಾಜ್ಯ ಮರುಬಳಕೆಯ ಪ್ರಮಾಣವನ್ನು ದೃಢೀಕರಿಸುತ್ತವೆ, ತಯಾರಕರಲ್ಲಿ ಹೊಣೆಗಾರಿಕೆಯನ್ನು ಉತ್ತೇಜಿಸುತ್ತವೆ.

● ಪ್ರಸ್ತುತ ಮರುಬಳಕೆ ಅಂಕಿಅಂಶಗಳು:

ಮರುಬಳಕೆಯ ಇ-ತ್ಯಾಜ್ಯದ ಶೇಕಡಾವಾರು ಪ್ರಮಾಣವು 2019-20 ರಲ್ಲಿ ಶೇ.22 ರಿಂದ 2023-24 ರಲ್ಲಿ ಶೇ.43 ಕ್ಕೆ ಏರಿದೆ. ಈ ಪ್ರಗತಿಯ ಹೊರತಾಗಿಯೂ, ಸರಿಸುಮಾರು ಶೇ.57 ಇ-ತ್ಯಾಜ್ಯವು ಸುಮಾರು 990,000 ಎಮ್‌ಟಿಗೆ ಸಮನಾಗಿರುತ್ತದೆ, ಇದು ಸಂಸ್ಕರಿಸದೆ ಉಳಿದಿದೆ.

ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್): ಇಪಿಆರ್ ಎನ್ನುವುದು ಉತ್ಪಾದಕರು ತಮ್ಮ ಉತ್ಪನ್ನಗಳ ಸಂಪೂರ್ಣ ಜೀವನಚಕ್ರಕ್ಕೆ ಜವಾಬ್ದಾರರಾಗಿರುವ ನೀತಿ ವಿಧಾನವಾಗಿದೆ. ಇದು ಮರುಬಳಕೆಯ ಗುರಿಗಳನ್ನು ಕಡ್ಡಾಯಗೊಳಿಸುತ್ತದೆ.

ಇ-ತ್ಯಾಜ್ಯ (ನಿರ್ವಹಣೆ) ನಿಯಮಗಳು, 2016: ಈ ನಿಯಮಗಳು ಭಾರತದಲ್ಲಿ ಎಲೆಕ್ಟ್ರಾನಿಕ್ ತ್ಯಾಜ್ಯವನ್ನು ನಿರ್ವಹಿಸಲು ಚೌಕಟ್ಟನ್ನು ಸ್ಥಾಪಿಸಿವೆ. ಇ-ತ್ಯಾಜ್ಯದಿಂದಾಗುವ ಪರಿಸರ ಹಾನಿಯನ್ನು ತಗ್ಗಿಸಲು ತ್ಯಾಜ್ಯದ ಸುರಕ್ಷಿತ ವಿಲೇವಾರಿ ಮತ್ತು ಮರುಬಳಕೆಯ ಮೇಲೆ ನಿಯಮಗಳು ಗಮನಹರಿಸುತ್ತವೆ.

ಆರ್ಸೆನಿಕ್: ಆರ್ಸೆನಿಕ್, ಇ-ತ್ಯಾಜ್ಯದಲ್ಲಿ ಕಂಡುಬರುವ ವಿಷಕಾರಿ ಅಂಶವಾಗಿದೆ. ಇ-ತ್ಯಾಜ್ಯಗಳ ಅಸಮರ್ಪಕ ವಿಲೇವಾರಿ ಕ್ಯಾನ್ಸರ್ ಮತ್ತು ಚರ್ಮದ ಗಾಯಗಳು ಸೇರಿದಂತೆ ಗಂಭೀರವಾದ ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡುತ್ತವೆ.

ಅನೌಪಚಾರಿಕ ವಲಯ: ಇ-ತ್ಯಾಜ್ಯ ಸಂಗ್ರಹಣೆಯಲ್ಲಿ ಅನೌಪಚಾರಿಕ ವಲಯವು ಪ್ರಮುಖ ಪಾತ್ರ ವಹಿಸುತ್ತದೆ. ಇದು ಮರುಬಳಕೆ ದರಗಳನ್ನು ವರ್ಧಿಸುವ ವ್ಯಾಪಕ ನೆಟ್ವರ್ಕ್‌ಗಳನ್ನು ಹೊಂದಿದೆ. ಆದರೆ, ಸಾಮಾನ್ಯವಾಗಿ ಔಪಚಾರಿಕ ಗುರುತಿಸುವಿಕೆ ಮತ್ತು ಬೆಂಬಲದ ಮೇಲೆ ನಿರ್ಭರವಾಗಿರುವುದಿಲ್ಲ.

ಏಕಾಂತವೂ ಹಿತ, ಅಲ್ಲವೇ?

ಅಂಜಲಿ ಶ್ರೀನಿವಾಸ

ಮನುಷ್ಯ ಸಂಘಜೀವಿ ಮನಸ್ಸು ಬದುಕಿನ ಪ್ರತಿಯೊಂದು ಹಂತದಲ್ಲೂ ಸಾಂಗತ್ಯವ ಬಯಸುವುದು ಸಹಜ ಬಾಲ್ಯದಲ್ಲಿ ತಂದೆತಾಯಿ ಆಶ್ರಯದಲ್ಲಿ ಬೆಚ್ಚಗಿನ ಅಪ್ಪುಗೆಯ ಬಯಸುವ ಮನ ಯೌವ್ವನದಲ್ಲಿ ಸ್ವಾತಂತ್ರ್ಯಕ್ಕಾಗಿ ಮುಂದೆ ಬಾಳ ಸಂಗಾತಿಯೊಂದಿಗಿರಲು ವೃದ್ಧಾಪ್ಯದಲ್ಲಿ ಮಕ್ಕಳೊಂದಿಗಿರಲು ಬಯಸುತ್ತೇವೆ.

ಮನಸ್ಸು ಸದಾ ಇತರರೊಂದಿಗೆ ಬೆರೆಯಲು ಬಯಸುವುದು.ನಮ್ಮ ನಿರೀಕ್ಷೆಯಂತೆ ನಡೆಯದಿದ್ದಲ್ಲಿ ಅನಿರೀಕ್ಷಿತ ನೋವು ಖಚಿತ ಯಾರು ಬಯಸದ ಏಕಾಂತ ನಮ್ಮನ್ನ ಆವರಿಸುವುದು ಬದುಕಿನೊಳಗೆ ಬೇಕು ಬೇಡಗಳ ಗೊಡವೆ ಅದೊಂದು ಅಂತೆ ಕಂತೆಗಳ ಸಂತೆ ಪ್ರತಿದಿನ ಸಾಯುವ ಭಾವನೆಗಳ ವೇದನೆ ಮಾತು ಮೌನದ ತಕರಾರು ಮನಸ್ಸಿಗೂ ಬೇಕು ಒಂದಿಷ್ಟು ವಿಶ್ರಾಂತಿ. ಕೆಲವೊಮ್ಮೆ ಬೇಕು ಮನಕ್ಕೂ ಏಕಾಂತದ ಆಲಿಂಗನ. ತನ್ನವರೆನಿಸಿದವರೆಲ್ಲ ತೊರೆದು ದೂರವಾದಾಗ ನಮ್ಮನ್ನಾವರಿಸುವ ಈ ಏಕಾಂತಕ್ಕೆ ಬಹುಷಃ ಬಯ್ಯುವವರೇ ಜಾಸ್ತಿ. ಆದರೆ ನಿಜವಾಗಿಯೂ ಏಕಾಂತ ಎಲ್ಲವನ್ನ ಅಥವಾ ಎಲ್ಲರನ್ನ ಕಳೆದ ಸ್ಥಿತಿಯಲ್ಲ. ಅದು ಕಳೆದ ಎಲ್ಲವನ್ನ ಮತ್ತೆ ನಮಗೆ ಮರಳಿಸುವ ಅದ್ಭುತ ರಸಾನುಭವ. ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮನ್ನು ನಮಗೆ ಮರಳಿಸುವ ಅನುಭವ. ಏಕಾಂತದ ರಾಯಭಾರಿಯಾಗಿ ಮನಸ್ಸನ್ನು ಆವರಿಸುವುದು ಮೌನ. ಈ ರಾಯಭಾರಿ ನಡೆಸುವ ಸಫಲ ಸಂಧಾನಗಳಿಗೆ ಲೆಕ್ಕವಿಲ್ಲ. ಅದೆಷ್ಟೋ ಬಗೆಹರಿಯದ ಸಮಸ್ಯೆಗಳು ಹಾಗೂ ನಿರ್ಧಾರಗಳ ನಡುವಿನ ಜಿದ್ದಾಜಿದ್ದಿಗಳ ನಡುವೆ ರಾಯಭಾರ ನಡೆಸುವ ಈ ಮೌನ ಖಂಡಿತ ಒಂದು ಧನಾತ್ಮಕ ನಿರ್ಧಾರಕ್ಕೆ ಮನಸ್ಸನ್ನು ಒಪ್ಪಿಸುತ್ತದೆ. ಕೆಲವೊಮ್ಮೆ ಯಾವ ಸ್ನೇಹಿತನಿಂದಾಗಲಿ, ಹಿತೈಷಿಗಳಿಂದಾಗಲಿ, ಕೊನೆಗೆ ಅಪ್ಪ ಅಮ್ಮನಿಂದಲೂ ಒಪ್ಪಿಸಲಾಗದೇ ಹೋದ ನಿರ್ಧಾರಗಳಿಗೆ ಈ ಮೌನಸಂಧಾನ ಮಣಿಯುವಂತೆ ಮಾಡಿಬಿಡುತ್ತದೆ. ನಮ್ಮೊಳಗೆ ನಮ್ಮೊಂದಿಗೆ ನಮಗಾಗಿ ನಡೆಯುವ ವಿಚಾರ ಸಂಕೀರ್ಣ ಈ ಏಕಾಂತ.

ನಮ್ಮ ಸಂತೋಷದಲ್ಲಿ ದೂರ ನಿಂತು ದುಃಖದಲ್ಲಿ ನಾವು ಕರೆಯದೆ ಬರುವ ಶಾಶ್ವತ ಸಂಗಾತಿ..

ನಾವು ಏಕಾಂಗಿಯಾಗಿರುವಾಗ ನಮ್ಮ ಕ್ರೀಯಾಶೀಲರಾಗತಿವಿ

ಯಾರಾದರೂ ನೀನು ಯಾರು ಎಂದಾಗ ಬಹಳ ಸುಲಭವಾಗಿ ಉತ್ತರಿಸುತ್ತೇವೆ ಅವರಿವರ ಪರಿಚಯದಿಂದ ನಮ್ಮನ್ನ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ.ಅದೇ ಪ್ರಶ್ನೆ ನಮ್ಮನ್ನ ನಾವೇ ಕೇಳಿಕೊಂಡಾಗ ಉತ್ತರ ಕಷ್ಟವಾಗುತ್ತದೆ ನಾನು ಯಾರು ಎಂಬ ಪ್ರಶ್ನೆಗೆ ಸಮಂಜಸವಾದ ಉತ್ತರ ಸಿಗುವುದು ಕಷ್ಟವೇ

ಆಗಲೇ ತಿಳಿಯಬಹುದು ನಾವು ನಮ್ಮನ್ನ ತಿಳಿಯಬೇಕಿದೆ ನಮ್ಮೊಳಗೆ ಇಳಿಯಬೇಕಿದೆ ನಾಜೂಕಿನಿಂದ ಜೀಕಬೇಕಿದೆ.ಮೌನದಿ ನನ್ನೊಳಗಿನ ನಾನನ್ನು ಅರಿಯಬೇಕಿದೆ.ನಾವೆಂದಾದರೂ ಸಿನಿಮಾ ಶಾಪಿಂಗ್ ಹೋಟೆಲ್ ಅಥವಾ ಪ್ರವಾಸಕ್ಕೆ ಒಬ್ಬಂಟಿಯಾಗಿ ಹೋಗಿದ್ದೆವಾ ಎಲ್ಲದಕ್ಕೂ ಜೊತೆಗೊಬ್ಬರಾದರೂ ಬೇಡವಾ ಯಾರಾದರೂ ಇದ್ದರೆ ಚೆನ್ನಾಗಿರುತ್ತದೆ ಮಜಾ ಇರುತ್ತದೆ ಎಂದು ಯೋಚಿಸುತ್ತೇವೆ.ನಮಗೆ ಸದಾ ಜೊತೆಗಾರರು ಬೇಕೆಬೇಕು.ಆದರೆ ಒಮ್ಮೆ ಯೋಚಿಸಿ ನಾವು ಒಬ್ಬಂಟಿಯಾಗಿದ್ದಾಗಲೆ ಪ್ರಕೃತಿಯ ಸೊಗಸನ್ನು ಹೆಚ್ಚು ಸವಿಯಬಹುದು.ನಾವು ನಮ್ಮೊಡನೆ ಸಮಯ ಕಳೆದಾಗಲೆ ಹೆಚ್ಚು ಕ್ರೀಯಾಶೀಲರಾಗಿರುತ್ತೇವೆ ಹೆಚ್ಚು ನಮ್ಮನ್ನು ತಿಳಿಯುತ್ತೇವೆ ಖಾಲಿ ಕೂತಾಗ ನಮ್ಮೊಳಗೊಬ್ಬ ಕಲೆಗಾರನಿರುವ ಅವನ ಏನಾದರೊಂದು ಗೀಚುವ ಹವ್ಯಾಸಿ ಇರುವರು ಸಂಗೀತಗಾರನಿರುನಲ್ಲವೇ....ಒಬ್ಬ ಗೃಹಿಣಿ ಮನೆಯಲ್ಲಿ ಯಾರು ಇರದಾಹ ಮನೆಯ ಎಲ್ಲ ಕೆಲಸಗಳ ಮುಗಿಸಿ ಆರಾಮವಾಗಿ ಟಿವಿ ನೋಡತಾ ಒಂದು ಕಪ್ ಕಾಫಿ ಕುಡಿಬೇಕಂತಾ ಆಸೆ ಪಡೆಯುತ್ತಾರೆ ಅಂದರೆ ಬಿಡುವಿಲ್ಲದ ಕೆಲಸಗಳು ತಮಗಾಗಿ ಒಂದಿಷ್ಟು ಸಮಯ ಬೇಕೆಂದು ಬಯಸುವುದು ಸಹಜ ಹಾಗಿದ್ದ ಮೇಲೆ ಏಕಾಂತವೂ ಹಿತವೇ ಅಲ್ಲವೇ..?

ಸಮಾಚಾರ ಸಣ್ಣದಲ್ಲ

ಈಜು ಪಂದ್ಯಾವಳಿ: ರಾಜ್ಯಕ್ಕೆ ಸಮಗ್ರ ಪ್ರಶಸ್ತಿ

ವಿಜಯವಾಡ: ಕರ್ನಾಟಕದ ಈಜುಪಟುಗಳು ವಿಜಯವಾಡದಲ್ಲಿ ಮುಕ್ತಾಯವಾದ 35ನೇ ದಕ್ಷಿಣ ವಲಯ ಈಜು ಚಾಂಪಿಯನ್‌ಶಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ರಾಜ್ಯದ ಬಾಲಕ ಮತ್ತು ಬಾಲಕಿಯರು ಒಟ್ಟು 1029 ಅಂಕಗಳನ್ನು ಸಂಪಾದಿಸಿದರು. ತಮಿಳುನಾಡು ತಂಡವು 648 ಅಂಕಗಳೊಂದಿಗೆ ರನ್ನರ್ಸ್ ಅಪ್ ಆಯಿತು. ರಾಜ್ಯದ ಸಿದ್ಧಿ ಜಿ ಶಾ, ಹಿತಾಶ್ರೀ ಮತ್ತು ಆರಾಧ್ಯಾ ಬಾಲಕಿಯರ ವೈಯಕ್ತಿಕ ವಿಭಾಗದ ಪ್ರಶಸ್ತಿ ಗೆದ್ದರು. ಕರ್ನಾಟಕದ ಪವನ್ ಕೃಷ್ಣ ಬಾಲಕರ ವಿಭಾಗದ 400 ಮೀ. ಫ್ರೀ ಸ್ಟೈಲ್ ಸ್ಪರ್ಧೆಯಲ್ಲಿ ಹೊಸ ದಾಖಲೆಯನ್ನು ಬರೆದರು.

ಪ್ರೊ ಕಬಡ್ಡಿ ಲೀಗ್: ಸ್ಟೀಲರ್ಸ್‌ಗೆ ಪ್ರಶಸ್ತಿ

ಪುಣೆ: ಪ್ರೊ ಕಬಡ್ಡಿ ಲೀಗ್-2024ರ ಫೈನಲ್ ಪಂದ್ಯದಲ್ಲಿ ಮೂರು ಭಾರಿಯ ಚಾಂಪಿಯನ್ ಪಾಟ್ನಾ ಪೈರೇಟ್ಸ್ ತಂಡವನ್ನು ಮಣಿಸಿ ಪ್ರೋ ಕಬಡ್ಡಿ ಇತಿಹಾಸದಲ್ಲಿ ತನ್ನ ಮೊದಲ ಟ್ರೋಫಿ ಗೆಲ್ಲುವಲ್ಲಿ ಹರಿಯಾಣ ಸ್ಟೀಲರ್ಸ್ ಯಶಸ್ವಿಯಾಗಿದ್ದು, ಆ ಮೂಲಕ ಕಪ್ ಗೆಲ್ಲುವ ಫೇವರೇಟ್ ತಂಡ ಎನಿಸಿಕೊಂಡಿದ್ದ ಪಾಟ್ನಾವನ್ನು ಸೋಲಿಸಿದೆ. ಪುಣೆಯ ಛತ್ರಪತಿ ಶಿವಾಜಿ ಕ್ರೀಡಾಂಗಣದಲ್ಲಿ ನಡೆದ ಪಿಕೆಎಲ್ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಪಾಟ್ನಾ ಎದುರಾಳಿ ತಂಡಕ್ಕೆ ರೈಡಿಂಗ್‌ಗೆ ಅವಕಾಶ ನೀಡಿತು. ಮೂರು ಬಾರಿಯ ಚಾಂಪಿಯನ್ ಬಲಿಷ್ಠ ಪಾಟ್ನಾ ಪೈರೇಟ್ಸ್ ತಂಡವನ್ನು ಸೋಲಿಸುವಲ್ಲಿ ಮೊಹಮ್ಮದ್ ರೆಜಾ ಶಾದ್ಲೂ ನೇತೃತ್ವದ ಹರ್ಯಾಣ ಸ್ಟೀಲರ್ಸ್ ಯಶಸ್ವಿಯಾಯಿತು. ರೈಡಿಂಗ್ ಹಾಗೂ ಡಿಫೆನ್ಸ್ ಎರಡರಲ್ಲೂ ಸಾಂಘಟಿತ ಪ್ರದರ್ಶನ ತೋರಿದ ಸ್ಟೀಲರ್ಸ್, ಮೂರು ಭಾರಿಯ ಚಾಂಪಿಯನ್ ಪಾಟ್ನಾವನ್ನು 32-23ರ ಅಂಕಗಳ ಅಂತರದಲ್ಲಿ ಸೋಲಿಸಿತು.

ಕೊಹ್ಲಿ ಬೇಡ, ರೋಹಿತ್ ವಿದಾಯ ಹೇಳಲಿ: ಶಾಸ್ತ್ರಿ

ಮೆಲ್ಬರ್ನ್: ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ನಾಲ್ಕನೇ ಹಾಗೂ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹಾಗೂ ಹಿರಿಯ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವರಿಬ್ಬರೂ ಟೆಸ್ಟ್ ಕ್ರಿಕೆಟ್ ವೃತ್ತಿ ಜೀವನಕ್ಕೆ ವಿದಾಯ ಹೇಳಬೇಕೆಂಬ ಕೂಗು ಜಾಲತಾಣದಲ್ಲಿ ಬಲವಾಗಿ ಕೇಳಿ ಬರುತ್ತಿದೆ. ಇದರ ನಡುವೆ ಟೀಮ್ ಇಂಡಿಯಾ ಮಾಜಿ ಹೆಡ್ ಕೋಚ್ ರವಿ ಶಾಸ್ತ್ರಿ ಕೂಡ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ವಿರಾಟ್ ಕೊಹ್ಲಿ ಇನ್ನೂ 3ರಿಂದ 4 ವರ್ಷಗಳ ಕಾಲ ಕ್ರಿಕೆಟ್ ಆಡಬಹುದು, ಆದರೆ ರೋಹಿತ್ ಶರ್ಮಾ ಅವರು ವಿದಾಯ ಹೇಳಲು ಇದು ಸಕಾಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸೀನಿಯರ್ಸ್ ಬ್ಯಾಟಿಂಗ್ ವೈಫಲ್ಯಕ್ಕೆ ಬೆಲೆ ತೆತ್ತ ಟೀಂ ಇಂಡಿಯಾ | ಯಶಸ್ವಿ ಜೈಸ್ವಾಲ್ ಏಕಾಂಗಿ ಹೋರಾಟ ವಿಫಲ

ಕುಸಿದ ಭಾರತ: ಆಸ್ಟ್ರೇಲಿಯಾಗೆ ಭರ್ಜರಿ ಜಯ

ಮೆಲ್ಬರ್ನ್: ಬ್ಯಾಟಿಂಗ್ ವೈಫಲ್ಯಕ್ಕೆ ಭಾರಿ ಬೆಲೆ ತೆತ್ತ ಭಾರತ ತಂಡವು ನಾಲ್ಕನೇ ಹಾಗೂ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು 184 ರನ್‌ಗಳ ಹೀನಾಯ ಸೋಲನ್ನು ಅನುಭವಿಸಿದ್ದು, ಆಸ್ಟ್ರೇಲಿಯಾ ತಂಡವು ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ 2-1 ಮುನ್ನಡೆ ಪಡೆ ದಂತಾಗಿದೆ. ಈ ಪಂದ್ಯದ ಸೋಲಿನಿಂದಾಗಿ ಟೀಮ್ ಇಂಡಿಯಾದ ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಹಾದಿ ಅತ್ಯಂತ ಕಠಿಣವಾಗಿದೆ.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಕಳೆದ ಐದು ದಿನಗಳಿಂದ ನಡೆದಿದ್ದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾರತ ಹಾಗೂ ಆಸ್ಟ್ರೇಲಿಯಾ ತಂಡಗಳ ನಡುವೆ ಗೆಲುವಿಗಾಗಿ ಭಾರಿ ಪೈಪೋಟಿ ನಡೆದಿತ್ತು. ಆದರೆ ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ತಂಡವು, ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನ ತೋರುವ ಮೂಲಕ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯವನ್ನು ತನ್ನ ತೆಕ್ಕೆಗೆ ಹಾಕಿಕೊಂಡಿತು. ಆಲ್‌ರೌಂಡರ್ ಪ್ರದರ್ಶನ ತೋರಿದ ಪ್ಯಾಟ್ ಕಮಿನ್ಸ್ ಎರಡೂ ಇನಿಂಗ್ಸ್‌ಗಳಿಂದ 90 ರನ್ ಹಾಗೂ 6 ವಿಕೆಟ್‌ಗಳನ್ನು ಕಬಳಿಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು

ಭಾರತಕ್ಕೆ 340 ರನ್ ಗುರಿ ನೀಡಿದ್ದ ಆಸ್ಟ್ರೇಲಿಯಾ: ಪಂದ್ಯದ ಅಂತಿಮ ದಿನವಾದ ಸೋಮವಾರ 9 ವಿಕೆಟ್ ಕಳೆದುಕೊಂಡು ದ್ವಿತೀಯ ಇನಿಂಗ್ಸ್ ಮುಂದುವರಿಸಿದ್ದ ಆಸ್ಟ್ರೇಲಿಯಾ ತಂಡ 83.4 ಓವರ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 234 ರನ್‌ಗಳನ್ನು ಕಲೆ ಹಾಕಿತ್ತು. ಆ ಮೂಲಕ ಪ್ರಥಮ ಇನಿಂಗ್ಸ್‌ನಲ್ಲಿನ ಮುನ್ನಡೆಯ ಸಹಾಯದಿಂದ ಆಸ್ಟ್ರೇಲಿಯಾ ತಂಡ ಪ್ರವಾಸಿ ಭಾರತ ತಂಡಕ್ಕೆ 340 ರನ್‌ಗಳ ಗುರಿಯನ್ನು ನೀಡಿತ್ತು. ಭಾರತ ತಂಡದ ಪರ ಇನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಹಾಗೂ ಯಶಸ್ವಿ ಜೈಸ್ವಾಲ್ ವಿಕೆಟ್ ನಷ್ಟವಿಲ್ಲದೆ 16 ಓವರ್‌ಗಳನ್ನು ಪೂರ್ಣಗೊಳಿಸಿತ್ತಲ್ಲದೆ, ಪಂದ್ಯವನ್ನು ಡ್ರಾ ಮಾಡಿಕೊಳ್ಳಲೂ ಪ್ರಯತ್ನ ನಡೆಸಿತ್ತು. ಆದರೆ 17ನೇ ಓವರ್‌ನಲ್ಲಿ ಆಸೀಸ್ ನಾಯಕ ಪ್ಯಾಟ್ ಕಮಿನ್ಸ್, ರೋಹಿತ್ ಶರ್ಮಾ ಮತ್ತು ಕೆ.ಎಲ್ ರಾಹುಲ್ ಅವರನ್ನು ಔಟ್ ಮಾಡುವ ಮೂಲಕ ಭಾರತಕ್ಕೆ ಆರಂಭಿಕ ಆಘಾತ ನೀಡಿತ್ತು. ಆಫ್ ಸ್ಟಂಪ್ ಹೊರಗಡೆ ಚೆಂಡನ್ನು ಹಾಕಿ ವಿರಾಟ್ ಕೊಹ್ಲಿಯನ್ನು ಮಿಚೆಲ್ ಸ್ಟಾರ್ಕ್ ಔಟ್ ಮಾಡಿದರು.

ಸ್ಕೋರ್ ವಿವರ

ಆಸ್ಟ್ರೇಲಿಯಾ: ಪ್ರಥಮ ಇನಿಂಗ್ಸ್: 122.4 ಓವರ್‌ಗಳಲ್ಲಿ 474-10 (ಸ್ಟೀವನ್ ಸ್ಮಿತ್ 140, ಮಾರ್ನಸ್ ಲಾಬುಶೇನ್ 72, ಉಸ್ಮಾನ್ ಖವಾಜ 57, ಸ್ಯಾಮ್ ಕೋನ್‌ಸ್ಟಸ್ 60, ಜಸ್‌ಪ್ರೀತ್ ಬುಮ್ರಾ 99ಕ್ಕೆ 4, ರವೀಂದ್ರ ಜಡೇಜಾ 78ಕ್ಕೆ 3)

ಭಾರತ: ಪ್ರಥಮ ಇನಿಂಗ್ಸ್: 119.3 ಓವರ್‌ಗಳಿಗೆ 369-10 (ನಿತೀಶ್ ರೆಡ್ಡಿ 114, ಯಶಸ್ವಿ ಜೈಸ್ವಾಲ್ 82, ವಾಷಿಂಗ್ಟನ್ ಸುಂದರ್ 50; ಪ್ಯಾಟ್ ಕಮಿನ್ಸ್ 89ಕ್ಕೆ 3, ಸ್ಕಾಟ್ ಬೋಲೆಂಡ್ 57ಕ್ಕೆ 3)

ಆಸ್ಟ್ರೇಲಿಯಾ: ದ್ವಿತೀಯ ಇನಿಂಗ್: 84.3 ಓವರ್‌ಗಳಿಗೆ 234-10 (ಮಾರ್ನಸ್ ಲಾಬುಶೇನ್ 70, ನೇಥನ್ ಲಯಾನ್ 41, ಪ್ಯಾಟ್ ಕಮಿನ್ಸ್ 41; ಜಸ್‌ಪ್ರೀತ್ ಬುಮ್ರಾ 57ಕ್ಕೆ 5, ಮೊಹಮ್ಮದ್ ಸಿರಾಜ್ 70ಕ್ಕೆ 3)

ಭಾರತ: ದ್ವಿತೀಯ ಇನಿಂಗ್ಸ್: 79.1 ಓವರ್‌ಗಳಿಗೆ 155-10 (ಯಶಸ್ವಿ ಜೈಸ್ವಾಲ್ 84, ರಿಷಭ್ ಪಂತ್ 30; ಪ್ಯಾಟ್ ಕಮಿನ್ಸ್ 28ಕ್ಕೆ 3, ಸ್ಕಾಟ್ ಬೋಲೆಂಡ್ 39ಕ್ಕೆ 3)

ಪಂದ್ಯ ಶ್ರೇಷ್ಠ ಪ್ರಶಸ್ತಿ: ಪ್ಯಾಟ್ ಕಮಿನ್ಸ್

ಜೈಸ್ವಾಲ್-ಪಂತ್ ಜುಗಲ್‌ಬಂದಿ: ಭಾರತ ತಂಡ 33 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದ್ದ ವೇಳೆ ಜೊತೆಯಾದ ಯಶಸ್ವಿ ಜೈಸ್ವಾಲ್ ಮತ್ತು ರಿಷಭ್ ಪಂತ್ ಜೋಡಿ ಎರಡನೇ ಸೆಷನ್ ಅನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿತು. ಈ ಜೋಡಿ ಮುರಿಯದ ನಾಲ್ಕನೇ ವಿಕೆಟ್‌ಗೆ 88 ರನ್‌ಗಳನ್ನು ಕಲೆ ಹಾಕಿ ಭಾರತದ ಕಮ್‌ಬ್ಯಾಕ್‌ಗೆ ನೆರವು ನೀಡಿತ್ತು. ತಾಳ್ಮೆಯ ಬ್ಯಾಟಿಂಗ್ ಪ್ರದರ್ಶನ ತೋರುತ್ತಿದ್ದ ರಿಷಭ್ ಪಂತ್ 104 ಎಸೆತಗಳಲ್ಲಿ 30 ರನ್ ಗಳಿಸಿದ್ದರು. ಆದರೆ ಟ್ರಾವಿಸ್ ಹೆಡ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಪ್ರಯತ್ನಿಸಿ ಬೌಂಡರಿ ಲೈನ್‌ನಲ್ಲಿ ಪಂತ್ ಕ್ಯಾಚಿತ್ತರು.

ವಿವಾದಾತ್ಮಕವಾಗಿ ವಿಕೆಟ್ ಒಪ್ಪಿಸಿದ ಜೈಸ್ವಾಲ್: ದ್ವಿತೀಯ ಇನಿಂಗ್ಸ್‌ನಲ್ಲಿಯೂ ಯಶಸ್ವಿ ಜೈಸ್ವಾಲ್ ಅವರು ಏಕಾಂಗಿ ಹೋರಾಟ ನಡೆಸಿದರು. ಅವರು ಆಡಿದ 208 ಎಸೆತಗಳಲ್ಲಿ 84 ರನ್ ಗಳಿಸಿ ಭಾರತಕ್ಕೆ ಭರವಸೆ ಮೂಡಿಸಿದ್ದರು. ಆದರೆ ನಾಯಕ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಮೂರನೇ ಅಂಪೈರ್‌ನ ವಿವಾದಾತ್ಮಕ ತೀರ್ಪಿಗೆ ವಿಕೆಟ್ ಒಪ್ಪಿಸಿದಾಗ ಭಾರತ ತಂಡದ ಡ್ರಾ ಮಾಡಿಕೊಳ್ಳುವ ಕನಸು ನುಚ್ಚುನೂರಾಯಿತು.

ಪ್ರಥಮ ಇನಿಂಗ್ಸ್‌ನಲ್ಲಿ ಚೊಚ್ಚಲ ಶತಕ ಸಿಡಿಸಿದ್ದ ನಿತೀಶ್ ರೆಡ್ಡಿ ಸೇರಿದಂತೆ ರವೀಂದ್ರ ಜಡೇಜಾ, ಆಕಾಶ್ ದೀಪ್ ಸೇರಿದಂತೆ ಕೆಳ ಕ್ರಮಾಂಕದ ಆಟಗಾರರು ಬಹುಬೇಗ ಪೆವಿಲಿಯನ್‌ಗೆ ಸೇರಿದರು. ಆದರೆ ವಾಷಿಂಗ್ಟನ್ ಸುಂದರ್ ಕೊನೆಯವರೆಗೂ ಕ್ರೀಸ್‌ನಲ್ಲಿ ಅಜೇಯರಾಗಿ ಉಳಿದರು. ಆಸ್ಟ್ರೇಲಿಯಾ ಪರ ಪ್ಯಾಟ್ ಕಮಿನ್ಸ್ ಹಾಗೂ ಮಿಚೆಲ್ ಸ್ಟಾರ್ಕ್ ತಲಾ ಮೂರು ವಿಕೆಟ್‌ಗಳನ್ನು ಪಡೆದರೆ, ನೇಥನ್ ಲಯಾನ್ 2 ವಿಕೆಟ್ ಪಡೆದರು.

2ನೇ ಟಿ20 ಪಂದ್ಯ | ನ್ಯೂಜಿಲ್ಯಾಂಡ್‌ಗೆ ಸರಣಿಯಲ್ಲಿ 2-0 ಮುನ್ನಡೆ

ಲಂಕಾ ವಿರುದ್ಧ ನ್ಯೂಜಿಲ್ಯಾಂಡ್‌ಗೆ ಗೆಲುವು

ಮೌಂಟ್ ಮೌಂಗನು: ಸೋಮವಾರ ಇಲ್ಲಿ ನಡೆದ 2ನೇ ಟಿ20 ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ತಂಡವು ಶ್ರೀಲಂಕಾವನ್ನು 45 ರನ್‌ಗಳಿಂದ ಸೋಲಿಸಿ, ಸರಣಿಯಲ್ಲಿ 2-0 ಮುನ್ನಡೆಯನ್ನು ಕಾಯ್ದುಕೊಂಡಿದೆ.

ಆರಂಭದಲ್ಲಿ ಬ್ಯಾಟ್ ಮಾಡಿದ ನ್ಯೂಜಿಲ್ಯಾಂಡ್ ತಂಡವು ನಿಗಧಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿತು. ಅದನ್ನು ಬೆನ್ನತ್ತಿದ ಪ್ರವಾಸಿ ಶ್ರೀಲಂಕಾ ತಂಡವು 19.1 ಓವರ್‌ಗಳಲ್ಲಿ 141 ರನ್‌ಗಳಿಗೆ ಆಲೌಟ್ ಆಯಿತು. ನ್ಯೂಜಿಲೆಂಡ್‌ನ ಬೌಲರ್ ಜಾಜೋಬ್ ಡಫಿಯವರ ಮಾರಕ ಬೌಲಿಂಗ್ (15 ರನ್‌ಗಳಿಗೆ 4 ವಿಕೆಟ್) ನಡುವೆಯೂ ಶ್ರೀಲಂಕಾ ತಂಡದ ಆರಂಭಿಕ ಬ್ಯಾಟರ್ ಪಾತುಮ್ ನಿಸ್ಸಾಂಕರವರು 37 ರನ್‌ಗಳನ್ನು ಬಾರಿಸಿದರು. ಕುಸಲ್ ಪೆರೇರಾ 48 ರನ್ ಗಳಿಸುವಲ್ಲಿ ಯಶಸ್ವಿಯಾದರು. 16ನೇ ಓವರ್‌ನಲ್ಲಿ ಶ್ರೀಲಂಕಾ ಕೇವಲ 4 ವಿಕೆಟ್‌ಗಳನ್ನು ಗಳಿಸಿ 127 ರನ್ ಗಳಿಸಿ ಪಂದ್ಯ ಗೆಲ್ಲುವ ಅವಕಾಶವನ್ನು ಹೊಂದಿತ್ತು. ಆದರೆ ಜಾಕೋಬ್ ಡಫಿ ವನಿಂದು ಹಸರಂಗಾ ಹಾಗೂ ಮಹೇಶ್ ತೀಕ್ಷಣರ ವಿಕೆಟ್‌ಗಳನ್ನು ಕೇವಲ 3 ಬಾಲ್‌ಗಳ ಅಂತರದಲ್ಲಿ ಪಡೆದು ಶ್ರೀಲಂಕಾ ತಂಡಕ್ಕೆ ಆಘಾತ ನೀಡಿದರು. ಡಫಿ ಹೊರತುಪಡಿಸಿ ನ್ಯೂಜಿಲ್ಯಾಂಡ್ ಪರವಾಗಿ ಮ್ಯಾಟ್ ಹೆನ್ರಿ ಎರಡು ವಿಕೆಟ್ ಪಡೆದರು.

ನ್ಯೂಜಿಲ್ಯಾಂಡ್ ತಂಡವು ಆರಂಭದಿಂದಲೇ ಭದ್ರ ಬುನಾದಿಯನ್ನು ಹಾಕಿತ್ತು. ಡ್ಯಾರಿಲ್ ಮಿಚೆಲ್ ಮತ್ತು ಮೈಕಲ್ ಬ್ರೇಸ್ವೆಲ್ ಜೋಡಿಯು ನ್ಯೂಜಿಲ್ಯಾಂಡ್‌ಗೆ ಶತಕದ ಜೊತೆಯಾಟದ ಉತ್ತಮ ಅಡಿಪಾಯವನ್ನು ಒದಗಿಸಿದರು. ಟಿಮ್ ರಾಬಿನ್ಸನ್ 34 ಬಾಲ್‌ಗಳಿಂದ 41 ರನ್‌ಗಳನ್ನು ಗಳಿಸಿದರು. ಆದರೆ ರಚಿನ್ ರವೀಂದ್ರ ಕೇವಲ 1 ರನ್‌ಗೆ ಔಟಾಗಿ ತನ್ನ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಮೂರನೇ ಕ್ರಮಾಂಕದಲ್ಲಿ ಆಡಲು ಬಂದ ಮಾರ್ಕ್ ಚಾಪ್ಮನ್ 29 ಬಾಲ್‌ಗಳಿಂದ 42 ರನ್ ಗಳಿಸುವಲ್ಲಿ ಸಫಲರಾದರು.

ರಾಷ್ಟ್ರೀಯ ಶೂಟಿಂಗ್: ಅಭಿಷೇಕ್‌ಗೆ 6 ಪದಕ

ಬೆಂಗಳೂರು: ಅಭಿಷೇಕ್ ಶೇಖರ್‌ರವರು ಭೋಪಾಲ್‌ನಲ್ಲಿ ನಡೆಯುತ್ತಿರುವ 67ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್‌ನ 10 ಮೀಟರ್ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಆರು ಪದಕಗಳನ್ನು ಗೆದ್ದ ಕರ್ನಾಟಕದ ಮೊದಲ ಶೂಟರ್ ಎನಿಸಿದರು.

ಬೆಂಗಳೂರಿನ ಅಭಿಷೇಕ್ ಮೂರು ಚಿನ್ನದ ಪದಕಗಳನ್ನು ತಂಡ ವಿಭಾಗದಲ್ಲಿ ಗೆದ್ದರು. ಜೂನಿಯರ್ ಪುರುಷರ ಫೈನಲ್‌ನಲ್ಲಿ 10 ಮೀ. ಏರ್ ರೈಫಲ್ ವಿಭಾಗದಲ್ಲಿ 251.4 ಸ್ಕೋರ್‌ನೊಂದಿಗೆ ಅವರು ಬೆಳ್ಳಿ ಗೆದ್ದರು. ತಿಲೋತ್ತಮಾ ಸೇನ್ ಅವರೊಂದಿಗೆ ಜೂನಿಯರ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಬೆಳ್ಳಿ ಮತ್ತು ಸಿವಿಲಿಯನ್ ವಿಭಾಗದಲ್ಲಿ ಕಂಚು ಗೆದ್ದರು. ಅಭಿಷೇಕ್ ಶೇಖರ್‌ರವರು ಆರ್ಟ್ ಆಫ್ ಶೂಟಿಂಗ್ ಅಕಾಡೆಮಿಯಲ್ಲಿ ರಾಮಚಂದ್ರನ್ ಪುರುಷೋತ್ತಮನ್‌ರವರಿಂದ ತರಬೇತಿ ಪಡೆದಿದ್ದಾರೆ.

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಲೆಕ್ಕಾಚಾರ | ಬಾಕ್ಸಿಂಗ್ ಡೇ ಟೆಸ್ಟ್ ಸೋಲು

ಭಾರತದ ಡಬ್ಲ್ಯೂಟಿಸಿ ಹಾದಿ ದುರ್ಗಮ

ದೆಹಲಿ: ಆಸ್ಟ್ರೇಲಿಯಾ ವಿರುದ್ಧ ನಾಲ್ಕನೇ ಹಾಗೂ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ 184 ರನ್‌ಗಳಿಂದ ಸೋಲು ಅನುಭವಿಸಿದ ಬಳಿಕ ಭಾರತ ತಂಡದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಹಾದಿ ಅತ್ಯಂತ ಕಠಿಣವಾಗಿದೆ. ಈ ಟೆಸ್ಟ್ ಪಂದ್ಯದ ಸೋಲಿನ ಬಳಿಕ ಭಾರತ ತಂಡವು ಐದು ಪಂದ್ಯಗಳ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ 1-2 ಹಿನ್ನಡೆಯನ್ನು ಅನುಭವಿಸಿದೆ. ಜನವರಿ 3ರಂದು ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಉಭಯ ತಂಡಗಳ ನಡುವೆ ಐದನೇ ಹಾಗೂ ಕೊನೆಯ ಟೆಸ್ಟ್ ಆರಂಭವಾಗಲಿದೆ.

ಸಿಡ್ನಿಯಲ್ಲಿ ನಡೆಯಲಿರುವ ಪಂದ್ಯವು 2023-24ರ ಸಾಲಿನ ವಿಶ್ವ ಟೆಸ್ಟ್ ಚಾಂಪಿಯನ್ ಋತುವಿನಲ್ಲಿ ಭಾರತ ತಂಡದ ಕೊನೆಯ ಪಂದ್ಯವಾಗಿದೆ. ದಕ್ಷಿಣ ಆಫ್ರಿಕಾ ತಂಡವು ಈಗಾಗಲೇ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್‌ಗೆ ಅಧಿಕೃತವಾಗಿ ಅರ್ಹತೆಯನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಇನ್ನುಳಿದಿರುವ ಒಂದು ಸ್ಥಾನಕ್ಕೆ ಭಾರತವು ಪೈಪೋಟಿ ನಡೆಸುತ್ತಿದೆ. ತಂಡದ ಫೈನಲ್ ಹಾದಿಯು ಆಸ್ಟ್ರೇಲಿಯಾ ಹಾಗೂ ಶ್ರೀಲಂಕಾ ತಂಡಗಳ ಟೆಸ್ಟ್ ಸರಣಿಯನ್ನು ಅವಲಂಬಿಸಿದೆ. ಭಾರತ ತಂಡದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಲೆಕ್ಕಾಚಾರ ಹೀಗಿದೆ:

ಮೊದಲನೇ ಲೆಕ್ಕಾಚಾರ: ಭಾರತ ತಂಡವು ಫೈನಲ್‌ಗೆ ಅರ್ಹತೆ ಪಡೆಯಬೇಕೆಂದರೆ ಆಸ್ಟ್ರೇಲಿಯಾ ವಿರುದ್ಧ ಸಿಡ್ನಿ ಟೆಸ್ಟ್ ಅನ್ನು ಕಡ್ಡಾಯವಾಗಿ ಗೆಲ್ಲಬೇಕಾಗುತ್ತದೆ. ಒಂದು ವೇಳೆ ಆ ಟೆಸ್ಟ್ ಡ್ರಾ ಆದರೆ ಇಲ್ಲವೇ ಭಾರತ ತಂಡ ಸೋತರೆ, ಟೆಸ್ಟ್ ಚಾಂಪಿಯನ್‌ಶಿಪ್ ಹಾದಿ ಬಹುತೇಕ ಮುಚ್ಚಲಿದೆ. ಆಗ ಆಸ್ಟ್ರೇಲಿಯಾ ಹಾಗೂ ಶ್ರೀಲಂಕಾ ನಡುವಿನ ಟೆಸ್ಟ್ ಸರಣಿಯ ಫಲಿತಾಂಶ ಲೆಕ್ಕಕ್ಕೆ ಬರುವುದಿಲ್ಲ.

ಎರಡನೇ ಲೆಕ್ಕಾಚಾರ: ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡ ಸಿಡ್ನಿ ಟೆಸ್ಟ್ ಅನ್ನು ಗೆಲ್ಲಬೇಕು ಹಾಗೂ ಆಸ್ಟ್ರೇಲಿಯಾ ವಿರುದ್ಧ ಶ್ರೀಲಂಕಾ ತಂಡ ಟೆಸ್ಟ್ ಸರಣಿಯನ್ನು 2-0 ಅಥವಾ 1-0 ಅಂತರದಲ್ಲಿ ಗೆಲ್ಲಬೇಕು. ಒಂದು ವೇಳೆ ಟೆಸ್ಟ್ ಸರಣಿ 0-0 ಅಂತರದಲ್ಲಿ ಡ್ರಾನಲ್ಲಿ ಮುಗಿದರೂ ಅಂತಹ ಸನ್ನಿವೇಶದಲ್ಲೂ ಟೀಮ್ ಇಂಡಿಯಾ ಫೈನಲ್‌ಗೆ ಅರ್ಹತೆ ಪಡೆಯಲಿದೆ.

2 ಬಾರಿ ಫೈನಲ್ ತಲುಪಿದ್ದ ಭಾರತ ತಂಡ

ಭಾರತ ಕ್ರಿಕೆಟ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್‌ಗೆ ಎರಡು ಬಾರಿ ಅರ್ಹತೆ ಪಡೆದಿದೆ. 2019 ಹಾಗೂ 2021ರ ಸಾಲಿನಲ್ಲಿ ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಭಾರತ ತಂಡ ಉದ್ಘಾಟನಾ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆದಿತ್ತು, ಆದರೆ ನ್ಯೂಜಿಲೆಂಡ್ ಎದುರು ಸೋತು ರನ್ನರ್ ಅಪ್‌ಗೆ ತೃಪ್ತಿಪಟ್ಟಿತ್ತು. ನಂತರ 2021 ಮತ್ತು 2023ರ ಆವೃತ್ತಿಯಲ್ಲಿಯೂ ಭಾರತ ಫೈನಲ್‌ಗೆ ಲಗ್ಗೆ ಇಟ್ಟರೂ, ಆಸ್ಟ್ರೇಲಿಯಾ ವಿರುದ್ಧ ಸೋತು, ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿತ್ತು.

ಮೂರನೇ ಲೆಕ್ಕಾಚಾರ: ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ಎದುರು ಎರಡು ಪಂದ್ಯಗಳ ಟೆಸ್ಟ್ ಸರಣಿಯನ್ನು 2-0 ಅಥವಾ 1-0 ಅಂತರದಲ್ಲಿ ಗೆದ್ದರೆ ಇಲ್ಲವೇ 1-1 ಅಂತರದಲ್ಲಿ ಡ್ರಾ ಮಾಡಿಕೊಂಡರೆ, ಭಾರತ ತಂಡವು ಸಿಡ್ನಿ ಟೆಸ್ಟ್ ಗೆಲುವಿನ ಹೊರತಾಗಿಯೂ ಟೆಸ್ಟ್ ಚಾಂಪಿಯನ್ ಫೈನಲ್ ರೇಸ್‌ನಿಂದ ಅಧಿಕೃತವಾಗಿ ಹೊರ ಬೀಳಲಿದೆ.

ವಿಟಾಕೀಸ್

2024 ಚಂದನವನಕ್ಕೆ ಸಿಹಿ-ಕಹಿಯ ಸವಿ

2024 ಮುಗಿಯುತ್ತಾ ಬಂದಿದ್ದು 2025ರ ಹೊಸ ವರ್ಷವನ್ನು ಸ್ವಾಗತಿಸಲು ಜಗತ್ತು ಸಜ್ಜಾಗಿದೆ. 2024 ಚಂದನವನಕ್ಕೆ ಹೇಳಿಕೊಳ್ಳುವಂತಹ ಖುಷಿಕೊಟ್ಟಿಲ್ಲ. ಚಂದನವನದ ಪಾಲಿಗೆ ಸಿಹಿಯ ಜತೆಗೆ ಕಹಿಯ ಅನುಭವೂ ಆಗಿದೆ. ತೆರೆಗೆ ಬಂದ ಸಿನಿಮಾಗಳಲ್ಲಿ ಗೆದ್ದ ಚಿತ್ರಗಳಿಗಿಂತ ಸೋತ ಸಿನಿಮಾಗಳೇ ಹೆಚ್ಚಿವೆ. ಈ ವರ್ಷ ಚಿತ್ರರಂಗದ ಒಳಿತಿಗಾಗಿ ಹೋಮ, ಹವನ ಮಾಡುವ ಪರಿಸ್ಥಿತಿಯೂ ಬಂದೊದಗಿತ್ತು. ಈ ವರ್ಷ ಕನ್ನಡ ಚಿತ್ರರಂಗ ಹೇಗಿತ್ತು ಅದರ ಹಿನ್ನೋಟ ಇಲ್ಲಿದೆ ನೋಡಿ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕಾಟೇರ ಅದ್ಭುತ ಪ್ರದರ್ಶನ ಕಾಣುವ ಮೂಲಕ ಮುಚ್ಚಿದ್ದ ಚಿತ್ರಮಂದಿರಗಳನ್ನು ತೆರೆಯುವಂತೆ ಮಾಡಿತ್ತು. ಚಂದನವಕ್ಕೆ ಹೊಸ ಹುರುಪು ನೀಡುವುದರ ಜತೆಗೆ ಹೊಸ ವರ್ಷಕ್ಕೂ ಗುಡ್ ಓಪೆನಿಂಗ್ ನೀಡಿತ್ತು. ಹಾಗಾಗಿ ಮುಂದೆ ರಿಲೀಸ್ ಆಗುವ ಸಿನಿಮಾಗಳೂ ಕೂಡ ಹೀಗೆಯೇ ಅದ್ಭುತ ಪ್ರದರ್ಶನ ಕಾಣಲಿವೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈ ವರ್ಷದ ಆರಂಭದಲ್ಲಿ ತೆರೆಗೆ ಬಂದ ಸಿನಿಮಾಗಳು ಸದ್ದು ಮಾಡಲೇ ಇಲ್ಲ.

ಜನವರಿ ಮೊದಲ ವಾರದಲ್ಲಿ ಒಂದೇ ದಿನ ಆದರ್ಶ ರೈತ, ಆನ್‌ಲೈನ್ ಮದುವೆ ಆಫ್‌ಲೈನ್ ಶೋಭನ ಮತ್ತು ಒಂಟಿ ಬಂಟಿ ಲವ್‌ಸ್ಟೋರಿ ಸಿನಿಮಾಗಳು ಬಿಡುಗಡೆಯಾದವು. ಆದರೆ ಹೀಗೆ ಅದ್ದೂರಿಯಾಗಿ ತೆರೆಕಂಡ ಸಿನಿಮಾಗಳು ಸದ್ದಿಲ್ಲದೆ ಮರೆಯಾದವು. ಇದರಲ್ಲಿ ರಿಲೀಸ್ ಆದ ಸಿನಿಮಾಗಳು ಪ್ರೇಕ್ಷಕರನ್ನು ತಲುಪಲೇ ಇಲ್ಲ. ಹಾಸ್ಯ ನಟ ಚಿಕ್ಕಣ್ಣ ನಾಯಕನಾಗಿ ನಟಿಸಿದ್ದ ಉಪಾಧ್ಯಕ್ಷ ಹೊಸ ಭರವಸೆ ಮೂಡಿಸಿತ್ತು. ಆದರೆ ಚಿಕ್ಕಣ್ಣನ ಸಿನಿಮಾ ಸಿನಿಪ್ರಿಯರಿಗೆ ಯಾಕೋ ರುಚಿಸಲಿಲ್ಲ. ಹಾಗಾಗಿ ಉಪಾಧ್ಯಕ್ಷ ಸೋತು ಕಂಗಾಲಾದ. ಇನ್ನು ಥ್ರಿಲ್ಲರ್ ಕಥೆಯ ಕೇಸ್ ಆಫ್ ಕೊಂಡಾಣ, ಬ್ಯಾಚಲರ್ ಪಾರ್ಟಿ ಸಿನಿಮಾಗಳು ನಿರೀಕ್ಷೆ ಮೂಡಿಸಿದ್ದವು. ಆದರೆ ಕಲೆಕ್ಷನ್ ವಿಚಾರದಲ್ಲಿ ಸೋತವು.

ಫೆಬ್ರವರಿಯಲ್ಲಿ ಸಿಂಪಲ್ ಸುನಿ ನಿರ್ದೇಶನದ ಒಂದು ಸರಳ ಪ್ರೇಮಕಥೆ ತೆರೆಗೆ ಬಂದು, ಸಿನಿಪ್ರಿಯರ ಮನಗೆದ್ದಿತು. ವಿನಯ್ ರಾಜ್ ಕುಮಾರ್ ನಟಿಸಿದ್ದ ಈ ಸಿನಿಮಾ ಕೌಟುಂಬಿಕ ಪ್ರೇಕ್ಷಕರ ಮನಗೆಲ್ಲುವಲ್ಲಿಯೂ ಯಶಸ್ವಿಯಾ ಯಿತು. ಈ ಚಿತ್ರದ ಬಳಿಕ ಹೊಸ ಆಸೆ ಚಿಗುರಿತು. ಮುಂದೆ ಬರುವ ಸಿನಿಮಾಗಳು ಪ್ರೇಕ್ಷಕರನ್ನು ಚಿತ್ರಮಂದಿರತ್ತ ಕರೆತರುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಈ ಹೊತ್ತಿನಲ್ಲಿಯೇ ಶಾಖಾಹಾರಿ ಚಿತ್ರ ಬಿಡುಗಡೆಯಾಗಿತ್ತು.



ಸ್ಟಾರ್ ನಟರು ಚಿತ್ರದಲ್ಲಿ ಇರದಿದ್ದರೂ, ಹಿರಿಯ ಕಲಾವಿದರೇ ಅಭಿನಯಿಸಿದ್ದ ಈ ಶಾಖಾಹಾರಿ ಅದ್ಯಾಕೋ ಚಿತ್ರಮಂದಿರದಲ್ಲಿ ರುಚಿಲಿಲ್ಲ. ಆದರೆ ಒಟಿಟಿಯಲ್ಲಿ ಕಮಾಲ್ ಮಾಡಿತು. ಅಂತೆಯೇ ಜೂನಿ ಸಿನಿಮಾ ಬಗ್ಗೆ ಉತ್ತಮ ವಿಮರ್ಶೆಗಳು ಬಂದರು ಥಿಯೇಟರ್‌ನಲ್ಲಿ ಹೆಚ್ಚು ದಿನ ಉಳಿಯಲಿಲ್ಲ.

ಮಾರ್ಚ್‌ನಲ್ಲಿ ಯೋಗರಾಜ್ ಭಟ್ ನಿರ್ದೇಶನದ ಕರಟಕ ದಮನಕ ಚಿತ್ರ ತೆರೆಗೆ ಅದ್ದೂರಿಯಾಗಿಯೇ ತೆರೆಗೆ ಬಂದಿತು. ಶಿವರಾಜ್ ಕುಮಾರ್ ಹಾಗೂ ಪ್ರಭುದೇವ ಈ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದರು. ಹಾಗಾಗಿಯೇ ಈ ಚಿತ್ರ ಆರಂಭದಿಂದಲೂ ಹೈಪ್ ಕ್ರಿಯೇಟ್ ಮಾಡಿತ್ತು. ಆದರೆ ಗಲ್ಲಾ ಪೆಟ್ಟಿಗೆಯಲ್ಲಿ ಮುಗ್ಗರಿಸಿತು. ಚಿತ್ರ ಹೀನಾಯವಾಗಿ ಸೋತಿತು. ಇದೇ ತಿಂಗಳಲ್ಲಿ ವಿಭಿನ್ನ ಕಥೆ ಹೊತ್ತ ಬ್ಲಿಂಕ್ ತೆರೆಗೆ ಬಂದಿತ್ತು. ಶಿರ್ಷಿಕೆಯಂತೆಯೇ ಕಥೆ ಕೂಡ ಭಿನ್ನವಾಗಿತ್ತು. ಸೈನ್ಸ್ ಫಿಕ್ಷನ್ ಸ್ಟೋರಿ ಒಂದಷ್ಟು ಜನರನ್ನು ಸೆಳೆಯಿತು. ಚಿತ್ರಮಂದಿರದಲ್ಲಿ ಇಪ್ಪತ್ತೈದು ದಿನ ಪೂರೈಸಿದರು ಹೇಳಿಕೊಳ್ಳವ ಮಟ್ಟದಲ್ಲಿ ಗಳಿಕೆ ಕಾಣಲು ಸಾಧ್ಯವಾಗಲಿಲ್ಲ. ಮಾರ್ಚ್ ಅಂತ್ಯದಲ್ಲಿ ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್ ಅಭಿನಯದ ಯುವ ಬಲು ಅದ್ದೂರಿಯಾಗಿ ತೆರೆಗೆ ಬಂದಿತ್ತು. ನಿರೀಕ್ಷೆಯಂತೆಯೇ ಯುವ ಉತ್ತಮ ಆರಂಭವೇನೋ ಪಡೆಯಿತು. ಆದರೆ ದೊಡ್ಡ ಮಟ್ಟದಲ್ಲಿ ಗೆಲುವು ಕಾಣಲಿಲ್ಲ.

ಬಲ ತುಂಬಿದ ಭೀಮ

ನಿರಾಸೆಯಿಂದ ಬಸವಳಿದಿದ್ದ ಚಿತ್ರರಂಗಕ್ಕೆ ಭೀಮ ಬಲತುಂಬಿದ. ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿದ್ದ ಭೀಮಾ ಆಗಸ್ಟ್‌ನಲ್ಲಿ ಭರ್ಜರಿಯಾಗಿಯೇ ತೆರೆಗೆ ಎಂಟ್ರಿಕೊಟ್ಟಿತು. ಸೂಪರ್ ಹಿಟ್ ಸಿನಿಮಾವಾಯಿತು. ಮಾಸ್ ಆಗಿ ಮೂಡಿಬಂದಿದ್ದ ಭೀಮ ಪ್ರೇಕ್ಷಕರನ್ನು ಮತ್ತೆ ಚಿತ್ರಮಂದಿರಕ್ಕೆ ಕರೆತರುವಲ್ಲಿ ಯಶಸ್ವಿಯಾಯಿತು.

ಈ ವರ್ಷದಲ್ಲಿ ಸರಿ ಸುಮಾರು 218 ಕನ್ನಡ ಚಿತ್ರಗಳು ರಿಲೀಸ್ ಆಗಿವೆ. ಅವುಗಳಲ್ಲಿ ಭೈರತಿ ರಣಗಲ್, ಮ್ಯಾಕ್ಸ್, ಯುಐ ಸೇರಿದಂತೆ ಹತ್ತು ಸಿನಿಮಾಗಳು ಸೂಪರ್ ಹಿಟ್ ಆಗಿವೆ. ಇನ್ನು ಹದಿನೈದು ಸಿನಿಮಾಗಳು ಬಾಕ್ಸ್ ಆಫೀಸ್ ಕಲೆಕ್ಷನ್‌ನಲ್ಲಿ ಗೆದ್ದಿವೆ. ಕೆಲವು ಚಿತ್ರಗಳ ಕಥೆ ಅದ್ಭುತವಾಗಿದ್ದರು, ಯಶಸ್ಸು ಪಡೆಯಲು ತಿಣುಕಾಡಿವೆ. ಉಳಿದವು ಹಾಗೆ ಬಂದು ಹೀಗೆ ಮರೆಯಾಗಿವೆ.

ಸಿಂಪಲ್ ಸುನಿ ನಿರ್ದೇಶನದ ಅವತಾರ ಪುರುಷ 2 ಗೆಲುವಿನ ಭರವಸೆ ಮೂಡಿಸಿತ್ತು. ಆದರೆ ಅದ್ಯಾಕೋ ಶರಣ್ ಸಿನಿಮಾ ಗೆಲ್ಲಲೇ ಇಲ್ಲ. ಜೂನ್‌ನಲ್ಲಿ ಅನಿರುದ್ಧ್ ಚೆಫ್ ಚಿದಂಬರನಾಗಿ ತೆರೆಗೆ ಬಂದರೂ ಥಿಯೇಟರ್‌ನಲ್ಲಿ ಪ್ರೇಕ್ಷಕರನ್ನು ಸೆಳೆಯಲಿಲ್ಲ, ಆದರೂ ಈ ಸಿನಿಮಾ ಒಟಿಟಿಯಲ್ಲಿ ಗೆದ್ದಿತು. ಕೋಟಿ ಹೊತ್ತು ಬಂದ ಡಾಲಿ ಪ್ರೇಕ್ಷಕರನ್ನು ಸೆಳೆಯುವಲ್ಲಿ ವಿಫಲವಾದರು. ಜೂನ್, ಜುಲೈನಲ್ಲಿ ಚಿತ್ರರಂಗ ಎಷ್ಟರ ಮಟ್ಟಿಗೆ ಸೊರಗಿತ್ತು ಎಂದರೆ ನಿರ್ಮಾಪರು ತಾವು ನಿರ್ಮಿಸಿದ್ದ ಸಿನಿಮಾಗಳನ್ನು ರಿಲೀಸ್ ಮಾಡಬೇಕೆ, ಬೇಡವೆ ಎಂಬ ಜಿಜ್ಞಾಸೆಯಲ್ಲಿ ಮುಳುಗಿದ್ದರು. ಆ ಬಳಿಕ ಗಣೇಶ್ ಅಭಿನಯದ ಕೃಷ್ಣಂ ಪ್ರಣಯ ಸಖಿ ಕೂಡ ಬಿಡುಗಡೆಯಾಗಿ ದೊಡ್ಡ ಮಟ್ಟದಲ್ಲಿ ಹಿಟ್ ಆಯಿತು. ಇದರ ಆಸುಪಾಸಿನಲ್ಲಿ ತೆರೆಕಂಡ ಇಬ್ಬನಿ ತಬ್ಬಿದ ಇಳೆಯಲಿ, ಲಾಫಿಂಗ್ ಬುದ್ಧ, ಗೌರಿ, ಪೆಪೆ, ಕಾಲಾಪತ್ಥರ್ ಚಿತ್ರಗಳು ನಿರೀಕ್ಷಿತ ಯಶಸ್ಸು ಕಾಣದೆ, ಹೀನಾಯವಾಗಿ ಸೋಲುಂಡವು.

ಧ್ರುವ ಸರ್ಜಾ ಅಭಿನಯದ ಮಾರ್ಟಿನ್ ಭಾರಿ ನಿರೀಕ್ಷೆ ಮೂಡಿಸಿತ್ತು. ಪ್ಯಾನ್ ವರ್ಲ್ಡ್ ಸಿನಿಮಾವಾಗಿ ನಿರ್ಮಾಣವಾಗಿದ್ದ ಮಾರ್ಟಿನ್ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆಯುವ ಮುನ್ಸೂಚನೆಯೂ ಇತ್ತು. ಆದರೆ ಯಾರೂ ಊಹಿಸಿದ ಹೀನಾಯ ಸೋಲು ಕಂಡಿತು. ಇದರ ಜತೆಗೆ ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಿದ್ದ ಬಘೀರ ಅಪಾರ ನಿರೀಕ್ಷೆ ಮೂಡಿಸಿತ್ತು. ಬಹಳ ವರ್ಷಗಳ ಬಳಿಕ ಮುರಳಿ ಮೋಡಿ ಮಾಡಲಿದ್ದಾರೆ ಎಂಬ ಭರವಸೆಯಿತ್ತು. ಬಘೀರ ತಕ್ಕಮಟ್ಟಿನ ಯಶಸ್ಸು ಕಂಡು ತಣ್ಣಗಾಯಿತು.

ನವೆಂಬರ್‌ನಲ್ಲಿ ಬೆಳ್ಳಿತೆರೆಗೆ ಬಂದ ಭೈರತಿ ರಣಗಲ್ ಚಂದನವನಕ್ಕೆ ಹೊಸ ಕಳೆತಂದಿತು. ಶಿವಣ್ಣನ ಸಿನಿಮಾ ನೋಡಿ ಪ್ರೇಕ್ಷಕರು ಮೆಚ್ಚಿ ಕೊಂಡಾಡಿದರು. ಅದ್ಭುತವಾಗಿ ಮೂಡಿಬಂದಿದ್ದ ಭೈರತಿ ರಣಗಲ್ ಹಲವೆಡೆ ಹೌಸ್ ಫುಲ್ ಪ್ರದರ್ಶನ ಕಂಡಿತು. ಉತ್ತಮ ಗಳಿಕೆಯನ್ನು ಕಂಡಿತು. ಮರ್ಯಾದೆ ಪ್ರಶ್ನೆ, ಆರಾಮ್ ಅರವಿಂದ್ ಸ್ವಾಮಿ ಕೂಡ ಕಂಟೆಂಟ್ ಮೂಲಕ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾದವು.

ಡಿಸೆಂಬರ್ ಕನ್ನಡ ಚಿತ್ರರಂಗದ ಪಾಲಿಗೆ ಲಕ್ಕಿ ತಿಂಗಳಾಗಿ ಪರಿಣಮಿಸಿತು. ಈ ತಿಂಗಳಲ್ಲಿ ತೆರೆಕಂಡ ಯುಐ ಪ್ರೇಕ್ಷಕರನ್ನು ಅಕ್ಷರಶಃ ಸೆಳೆಯಿತು. ಹೊರ ರಾಜ್ಯ, ದೇಶ, ವಿದೇಶದಲ್ಲಿಯೂ ಯುಐ ಅಬ್ಬರಿಸಿತು. ಬಹು ವರ್ಷಗಳ ಬಳಿಕ ಉಪ್ಪಿ ನಟಿಸಿ, ನಿರ್ದೇಶಿಸಿದ್ದ ಯುಐ ಚಿತ್ರವನ್ನು ನೋಡಿದ ಪ್ರೇಕ್ಷರ ಬಹುಪರಾಕ್ ಎಂದರು. ಇನ್ನು ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಸಿನಿಪ್ರಿರಯನ್ನು ಮೋಡಿ ಮಾಡಿತು. ಮ್ಯಾಕ್ಸ್ ನೋಡಲು ಪ್ರೇಕ್ಷಕರು ದಂಡು ದಂಡಾಗಿ ಚಿತ್ರಮಂದಿರಕ್ಕೆ ಆಗಮಿಸಿದರು. ಯುಐ ಹಾಗೂ ಮ್ಯಾಕ್ಸ್ ಗಲ್ಲಾ ಪೆಟ್ಟಿಗೆ ಕೊಳ್ಳೆ ಹೊಡೆದವು. ಆ ಮೂಲಕ ಕನ್ನಡ ಚಿತ್ರರಂಗಕ್ಕೆ ಹೊಸ ವರ್ಷಕ್ಕೆ ಉತ್ತಮ ಓಪೆನಿಂಗ್ ನೀಡಿವೆ.